# ಹೈಯರ್ ಸೆಕೆಂಡರಿ

# ಕನ್ನಡ

## HIGHER SECONDARY

# KANNADA

## OPTIONAL

# ತರಗತಿ

## XII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2015

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧ ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by* :

**State Council of Educational Research and Training (SCERT)**
Poojappura, Thiruvananthapuram 695012, Kerala
*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
First Edition : 2015
Typesetting : SCERT
Lay out : SCERT
Cover design : SCERT
Printed at : Centre for Advanced Printing and Training, Thiruvananthapuram-695013
© Department of Education, Government of Kerala

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಕನ್ನಡವು ಪರಂಪರೆಯಿಂದಲೂ ಸಾಹಿತ್ಯ ಸಂಪತ್ತಿನಿಂದಲೂ ಸಮೃದ್ಧವಾದ ಭಾಷೆಯಾಗಿದೆ. ಶಾಸ್ತ್ರೀಯ ಭಾಷೆಯ ಸ್ಥಾನಮಾನವು ಕನ್ನಡಕ್ಕೆ ಲಭಿಸಿದೆ. ಹೈಯರ್ ಸೆಕೆಂಡರಿ ದ್ವಿತೀಯ ವರ್ಷದಲ್ಲಿ ಐಚ್ಛಿಕ ವಿಷಯವಾಗಿ ಕನ್ನಡವನ್ನು ಕಲಿಯುತ್ತಿರುವವರಿಗಾಗಿ ಸಿದ್ಧಪಡಿಸಿದ ಈ ಪುಸ್ತಕದಲ್ಲಿ ನಾಲ್ಕು ವಿಭಾಗಗಳಲ್ಲಾಗಿ ನಿಮ್ಮ ಮನಸೂರೆಗೊಳಿಸುವಂತಹ ಹಳೆಗನ್ನಡ ಕಾವ್ಯ, ಗದ್ಯ, ನಡುಗನ್ನಡ ಕಾವ್ಯ, ಹೊಸಗನ್ನಡ ಸಾಹಿತ್ಯದ ಪ್ರವಾಸ ಕಥನ, ಆತ್ಮಕಥೆ, ತುಳುಸಾಹಿತ್ಯ, ಭಾಷಾ ವಿಜ್ಞಾನ, ನಾಟಕ ಇತ್ಯಾದಿ ಪ್ರಕಾರಗಳನ್ನು ಕೊಡಲಾಗಿದೆ. ನಿಮ್ಮ ಆಶಯಗಳನ್ನೂ ಭಾವನೆಗಳನ್ನೂ ಅನುಭವಗಳನ್ನೂ ಹಂಚಿಕೊಳ್ಳಲು ಮತ್ತು ಪ್ರಕಟಿಸಲು ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು, ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ.

ಪ್ರೀತಿಪೂರ್ವಕ ಹಾರ್ದಿಕೆಗಳೊಂದಿಗೆ,

**ಡಾ। ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXTBOOK DEVELOPMENT TEAM

## KANNADA - OPTIONAL
## STANDARD XII

### Participants

Harisha N., HSST Kannada, HHSIB Swamiji's HSS Edneer, Kasaragod.
Prakasha N. HSST (Jr) Kannada, GFHSS Bekal.
Saraswathi Prasanna P.N., HSST Kannada, SSHSS Katukukke.
Vishwanatha O., HSST (Jr) Kannada, GHSS Udma.
Latha B., HSST (Jr) Kannada, GHSS Edneer.
Prakash M., HSST (Jr) Kannada, GHSS Bangramanjeshwara.
Ganesha P.S., HSST (Jr) Kannada, Sri Annapoorneshwari HSS Agalpady.
Lalitha N.R., HSST (Jr) Kannada, Navajeevana HSS Peradala.

### Experts

Dr. M. Rama, Prof. (Rtd.) Kerala University, Thiruvananthapuram.
Dr. Srikrishna Bhat P., Prof. (Rtd.) Govt. College, Kasaragod.
Dr. Subrahmanya Bhat, Principal (Rtd.), GPM Govt. College, Manjeshwara
Dr. Kamalaksha K., Course Director, School of Indian Languages, Kannur University
Dr. Maheshwari U., Prof. (Rtd.), Kannada, Govt. College, Kasaragod.
Shreenatha A., Prof. (Rtd.), Govt. College, Kasaragod.
Dr. Radhakrishna Belluru, Asst. Prof., Govt. College, Kasaragod.
.

### Artist

Dinesh Holla, Mangaluru.

### Academic Co-ordinator

Dr. Faisal Mavulladathil, Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


ಪುಟ ಸಂಖ್ಯೆ

**1. ಹಳೆಗನ್ನಡ ನುಡಿಬೆಡಗು** 7–28

- ಸಲಿಸುವೆಂ ನೂರುವರಂ – ಪಂಪ
- ಶ್ರೀಮತಿ ಸ್ವಯಂವರ – ಮುದ್ದಣ

**2. ನಡುಗನ್ನಡ ಕಾವ್ಯಸೌರಭ** 29–66

- ಇಳೆಯಾಂಡಗುಡಿಮಾರ – ಹರಿಹರ
- ಧರೆಮೆಚ್ಚದಣ್ಣ ಸೋದರರ ಕಾಳಗಕೆ – ರತ್ನಾಕರವರ್ಣಿ
- ಉಲ್ಲಂಘಿಸುವರುಂಟೆ ವಿಧಿಕೃತವನು – ಲಕ್ಷ್ಮೀಶ

**3. ಹೊಸಗನ್ನಡ ಗದ್ಯವಿಹಾರ** 67–110

- ಕಾಡಿಗೆ ಹೊದ್ದಿಸಿದ ಮಂಜಿನ ಪರದೆ – ಜಿ.ಪಿ. ಬಸವರಾಜು
- ಹರಳುಗಟ್ಟಿದ ಬಗೆ – ಡಾ. ಅನುಪಮಾ ನಿರಂಜನ
- ಇಡ್ಲಿಯ ಇತಿಹಾಸ – ಸೇಡಿಯಾಪು ಕೃಷ್ಣಭಟ್ಟ
- ಪ್ರಾಚೀನ ತುಳು ಸಾಹಿತ್ಯ – ಡಾ. ಪಿ. ವೆಂಕಟರಾಜ ಪುಣಿಂಚತ್ತಾಯ
- ಭಾಷೆ ಮತ್ತು ಭಾಷಾ ವಿಜ್ಞಾನ – ಸಂಗ್ರಹ

**4. ನಾಟಕರಂಗ** 111–160

- ಕನ್ನಡದಲ್ಲಿ ನಾಟಕ ಸಾಹಿತ್ಯ
- ಮಂಥರಾ – ಡಾ. ಎಚ್.ಎಸ್. ವೆಂಕಟೇಶ ಮೂರ್ತಿ

# ಭಾರತದ ಸಂವಿಧಾನ

## ಭಾಗ IV(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಹಳೆಗನ್ನಡ ಮುಡಿಬೆಡಗು

ಕನ್ನಡ ಭಾಷೆಯಲ್ಲಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ನಾಲ್ಕು ಅವಸ್ಥಾಭೇದಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಆರಂಭದಿಂದ ೮ನೇ ಶತಮಾನದ ವರೆಗಿನದನ್ನು ಪೂರ್ವದ ಹಳಗನ್ನಡ ಎನ್ನಲಾಗಿದೆ. ಕ್ರಿ.ಶ. ೮ ನೇ ಶತಮಾನದಿಂದ ಕ್ರಿ.ಶ. ೧೨ನೇ ಶತಮಾನದ ವರೆಗಿನ ಕನ್ನಡಭಾಷಾ ರೂಪವನ್ನು ಹಳೆಗನ್ನಡವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಶ್ರೇಷ್ಠವಾದ ಸಾಹಿತ್ಯ ಕೃತಿಗಳು ರಚನೆಗೊಂಡಿವೆ. ೧೦ನೇ ಶತಮಾನವು ಕನ್ನಡ ಸಾಹಿತ್ಯದ ಸುವರ್ಣ ಯುಗವೆಂದು ಖ್ಯಾತಿ ಪಡೆದಿದೆ. ರತ್ನತ್ರಯರು ಎಂಬ ಹೆಸರಿಗೆ ಪಾತ್ರರಾದ ಪಂಪ, ಪೊನ್ನ, ರನ್ನ ಎಂಬಿವರು ಉತ್ತಮ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಇವರು ಲೌಕಿಕ ಹಾಗೂ ಆಗಮಿಕ ಎಂಬ ವಿಭಾಗಗಳಲ್ಲಿ ಕಾವ್ಯ ರಚನೆಮಾಡಿ ಹಳೆಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಈ ಅವಧಿಯಲ್ಲಿ ಚಂಪೂ ಕೃತಿಗಳು ಮತ್ತು ಶಾಸ್ತ್ರ ಗ್ರಂಥಗಳು ಹೆಚ್ಚಾಗಿ ಬಂದಿವೆ.

ಈ ಕಾಲದ ಇತರ ಕವಿಗಳಲ್ಲಿ ಶಿವಕೋಟ್ಯಾಚಾರ್ಯನು ಕನ್ನಡದ ಮೊದಲ ಉಪಲಬ್ಧ ಗದ್ಯಗ್ರಂಥವಾದ ವಡ್ಡಾರಾಧನೆಯನ್ನು ರಚಿಸಿದ್ದಾನೆ. ಚಾವುಂಡರಾಯ, ಇಬ್ಬರು ನಾಗವರ್ಮರು, ನಯಸೇನ ಮುಂತಾದವರು ಇತರ ಪ್ರಮುಖ ಕವಿಗಳು.

ಹತ್ತನೇ ಶತಮಾನದ ಹಳೆಗನ್ನಡ ಸಾಹಿತ್ಯವನ್ನು ಪರಿಚಯ ಮಾಡುವ ಉದ್ದೇಶದಿಂದ ಪಂಪನ 'ವಿಕ್ರಮಾರ್ಜುನ ವಿಜಯ'ದಿಂದ ಆಯ್ದ ಭಾಗವೊಂದನ್ನು ಈ ಘಟಕದಲ್ಲಿ ನೀಡಲಾಗಿದೆ. ಹಿರಿಯರಿಗೆ, ಯೋಗ್ಯರಿಗೆ ಗೌರವ ನೀಡಬೇಕು, ಅಹಂಕಾರದ ವರ್ತನೆಯು ನಮ್ಮನ್ನೇ ನಾಶಮಾಡುತ್ತದೆ ಎಂಬ ಸಂದೇಶ ಇದರಲ್ಲಿದೆ.

೧೯ನೇ ಶತಮಾನದ ಕೊನೆಗೆ ಹೊಸಗನ್ನಡ ಸಂಧಿಕಾಲದಲ್ಲಿ ಜೀವಿಸಿದ್ದವ ಕವಿ ಮುದ್ದಣ. ಆದರೂ ಈತ ಹಳೆಗನ್ನಡದಲ್ಲಿ ತನ್ನ ಗದ್ಯಕೃತಿಯನ್ನು ಬರೆದಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಆ ಕೃತಿಯ ಪರಿಚಯ ಮಾಡುವುದಕ್ಕಾಗಿ ಅವನ 'ಅದ್ಭುತ ರಾಮಾಯಣಂ' ಗದ್ಯಕೃತಿಯಿಂದ ಆರಿಸಿದ ಭಾಗವೊಂದನ್ನು ಇಲ್ಲಿ ನೀಡಲಾಗಿದೆ. ಈ ಮೂಲಕ ಎರಡು ವಿಭಿನ್ನ ಕಾಲಘಟ್ಟಗಳ ಕೃತಿಕಾರರಿಂದ ಹಳೆಗನ್ನಡ ಭಾಷೆಯಲ್ಲಿ ರಚಿತವಾಗಿರುವ ಕೃತಿಗಳ ಪರಿಚಯ ವಿದ್ಯಾರ್ಥಿಗಳಿಗೆ ದೊರೆಯುತ್ತದೆ.

## ಕಲಿಕಾ ಸಾಧನೆಗಳು

- ಹಳೆಗನ್ನಡ ಸಾಹಿತ್ಯದ ಚಂಪೂ ಹಾಗೂ ಗದ್ಯವನ್ನು ಅಧ್ಯಯನ ಮಾಡಿ, ಆಶಯಗಳನ್ನು ಸೂಕ್ತ ಸಂದರ್ಭಗಳಲ್ಲಿ ಬಳಸುವರು.
- ಹಳೆಗನ್ನಡ ಕಾವ್ಯ ಭಾಗಗಳನ್ನು ಸ್ವರಭಾರಯುಕ್ತವಾಗಿ, ಸ್ಫುಟವಾಗಿ ವಾಚನಮಾಡುವರು.
- ಹಳೆಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಆಸ್ವಾದನ ಟಿಪ್ಪಣಿ, ವಿಮರ್ಶಾ ಲೇಖನಗಳನ್ನು ಬರೆಯಲು ಸಮರ್ಥರಾಗುವರು.
- ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾಗುವ ಜೀವನ ಮೌಲ್ಯಗಳನ್ನು ಅರ್ಥೈಸಿಕೊಂಡು ಅವುಗಳನ್ನು ಸೃಜನಾತ್ಮಕ ಬರಹಗಳಲ್ಲಿ ವ್ಯಕ್ತಪಡಿಸುವರು.
- ಕಾವ್ಯಭಾಗದಲ್ಲಿ ಬಂದಿರುವ ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿಗಳನ್ನು ಗುರುತಿಸಿ ಸೂಕ್ತ ಸಂದರ್ಭಗಳಲ್ಲಿ ಅಳವಡಿಸಿಕೊಳ್ಳುವರು.
- ಗಾದೆ, ಒಗಟು, ನಾಣ್ಣುಡಿ, ನುಡಿಗಟ್ಟುಗಳ ಮೌಲ್ಯಗಳನ್ನು ತಿಳಿದುಕೊಂಡು ಸೂಕ್ತ ಸಂದರ್ಭಗಳಲ್ಲಿ ಪ್ರಯೋಗಿಸುವರು.



# ಸೈರಿಸುವೆಂ ನೂರುವರಂ

**ಪಂಪ**

ಉತ್ತಮ ಸಮಾಜದ ನಿರ್ಮಾಣದಲ್ಲಿ 'ಸಹನೆ' ಎಂಬುದು ಅನಿವಾರ್ಯ. ಹಿರಿಯರನ್ನು ಗೌರವಿಸಿ, ಅವರ ಮಾತನ್ನು ಪಾಲಿಸಿ ನಡೆಯುವುದು ಭಾರತೀಯ ಸಂಸ್ಕೃತಿಯು ಅನುಸರಿಸಿಕೊಂಡು ಬಂದ ಸಾಮಾಜಿಕ ಮೌಲ್ಯಗಳಲ್ಲಿ ಒಂದಾಗಿದೆ. 'ಅಹಂ' ಎಂಬುದು ಮಿತಿಯನ್ನು ಮೀರಿದಾಗ ವಿನಾಶಕ್ಕೆ ದಾರಿಯಾಗುತ್ತದೆ ಎಂಬುದು ಸಾರ್ವಕಾಲಿಕ ಸತ್ಯ. ಧರ್ಮವು ಅಧರ್ಮವನ್ನು ಗೆದ್ದು ಸಾರ್ವಭೌಮತ್ವವನ್ನು ಪಡೆಯುತ್ತದೆ ಎಂಬ ಮಾತು ನಮ್ಮ ಪುರಾಣಗಳ ಉದ್ದಕ್ಕೂ ಕಂಡು ಬರುತ್ತದೆ. ದೈವೀಶಕ್ತಿಯ ಎದುರು ಅಸುರಶಕ್ತಿಯು ಜಯ ಸಾಧಿಸಿದುದನ್ನು ನಮ್ಮ ಪರಂಪರೆಯಲ್ಲಿ ಎಲ್ಲೂ ಕಂಡಿಲ್ಲ. ರಾಜಸೂಯಯಾಗದ ಕೊನೆಯಲ್ಲಿ ಧರ್ಮರಾಯನು ಶ್ರೀಕೃಷ್ಣನನ್ನು ಯೋಗ್ಯ ವ್ಯಕ್ತಿಯಾಗಿ ಆರಿಸಿ ಅವನಿಗೆ ಅರ್ಘ್ಯವನ್ನು ಎತ್ತುತ್ತಾನೆ. ಆ ಸಂದರ್ಭದಲ್ಲಿ ಶಿಶುಪಾಲನು ಶ್ರೀಕೃಷ್ಣನನ್ನು ಪರಿಪರಿಯಾಗಿ ನಿಂದಿಸುತ್ತಾನೆ. ಆದರೆ ಶ್ರೀಕೃಷ್ಣನು ತನ್ನ ಸಹನೆಯನ್ನು ಕಳೆದುಕೊಳ್ಳದೆ ಶಿಶುಪಾಲನ ತಾಯಿಗೆ ತಾನು ಕೊಟ್ಟ ಮಾತಿನಂತೆ ನೂರು ತಪ್ಪುಗಳಾಗುವವರೆಗೂ ಸಹಿಸಿಕೊಳ್ಳುತ್ತಾನೆ. ಶಿಶುಪಾಲನು ಅಹಂಕಾರದಿಂದ ನಿಂದನೆಯನ್ನು ಮುಂದುವರಿಸುತ್ತಾನೆ. ಅದು ನೂರರ ಮಿತಿಯನ್ನು ಮೀರಿದಾಗ ಶ್ರೀಕೃಷ್ಣನು ಶಿಶುಪಾಲನನ್ನು ತನಗೆ ಅರ್ಘ್ಯ ನೀಡಿದ ತಟ್ಟೆಯಿಂದಲೇ ವಧಿಸುತ್ತಾನೆ.

## ಕಥಾ ಸಂದರ್ಭ

ಪಾಂಡವರು ರಾಜಸೂಯ ಯಾಗವನ್ನು ನಡೆಸುತ್ತಾರೆ. ವೈಭವದಿಂದ ನಡೆದ ಯಾಗದಲ್ಲಿ ಧರ್ಮರಾಯನು ತನ್ನ ಅಪಾರವಾದ ಸಂಪತ್ತನ್ನು ಸಕಲರಿಗೂ ದಾನಮಾಡುತ್ತಾನೆ. ಮುಂದಿನ ಪ್ರಸಂಗವು ಪ್ರಸ್ತುತ ಪದ್ಯದಲ್ಲಿ ವರ್ಣಿತವಾಗಿದೆ.

ವ|| ಅಂತು ನಿಜ ಧವಳಚ್ಛತ್ರ ಚಾಮರ ಸಿಂಹಾಸನಾದಿ ರಾಜಚಿಹ್ನಂಗಳುೞಿಯೆ ಸರ್ವಸ್ವಮೆಲ್ಲಮಂ ದಕ್ಷಿಣೆಗೊಟ್ಟು ವ್ಯಾಸ ಗಾಂಗೇಯ ವಿದುರ ಧೃತರಾಷ್ಟ್ರ ದ್ರೋಣಾಶ್ವತ್ಥಾಮ ಕೃಪ ಕುಲವೃದ್ಧರುಮಂ ದುರ್ಯೋಧನ ದುಶ್ಶಾಸನ ಕರ್ಣ ಶಲ್ಯ ಶಕುನಿಗಳುಮನವರವರ ದಾನಸನ್ಮಾನಾದಿಗಳೊಳಂ ಸಂತಸಂಬಡಿಸಿ ಧರ್ಮಪುತ್ರಂ ಪೇೞಿಮೀ ಸಭೆಯೊಳಗ್ರಪೂಜೆಗಾರ್ ತಕ್ಕರೆನೆ ಗಾಂಗೇಯನಿಂತೆಂದಂ –

ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ ।
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ ॥
ಚಲದಿಂ ಸೀಳ್ದವನಾವನಬ್ಧಿಮಥನ ಪ್ರಾರಂಭದೊಳ್ ಮಂದರಾ ।
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಱರ್ ತಕ್ಕರೇ ॥ ೧

ವ॥ ಎಂದು ತನ್ನ ಮನದೊಳಚ್ಚೊತ್ತಿದಂತೆ ನುಡಿದ ಗಾಂಗೇಯನ ಮಾತಂ ಮನದೆಗೊಂಡು ಯಮನಂದನನಾನಂದಂಬೆರಸಂತೆಗೆಯ್ವೆನೆಂದು ಪುರುಷೋತ್ತಮಂ ಗರ್ಘ್ಯಮೆತ್ತಿದಾಗಳ್ –

ಕ॥ ಮುಳಿದು ಶಿಶುಪಾಲನಾ ಸಭೆ ।
ಯೊಳಗೆ ಮಹಾಪ್ರಳಯ ಜಳಧಿನಾದದಿನಿರದು ॥
ಚ್ಚಳಿಸಿ ನುಡಿದಂ ತೆ ಕಳೆ ಕಳೆ ।
ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ ॥ ೨

ಮನದೊಲವರಮುಳ್ಳೊಡೆ ಕುಡು ।
ಮನೆಯೊಳ್ ಹರಿಗಗ್ರಪೂಜೆಯಂ ಯಜ್ಞದೊಳೀ ॥
ಮನುಜಾಧೀಶ್ವರ ಸಭೆಯೊಳ್ ।
ನೆನೆಯಲುಮಾಗದು ದುರಾತ್ಮನಂ ಬೆಸಗೊಳ್ವಾ ॥ ೩

ಅಳವಱಿಯದೆಗ್ಗು ಬಳವಳ ।
ಬಳೆವಿನೆಗಂ ಪಚ್ಚ ಪಸಿಯ ತುಱುಕಾಱಂಗ ॥
ಗ್ಗಳಿಕೆಯನೆ ಮಾಡಿ ನೀನುಂ ।
ಪಟ್ಟಿಯಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್ ॥ ೪

ದೇವರನಡಿಗೆಱಗಿಸಿ ಸಕ ।
ಳಾವನಿತಳದದಟರಂ ಪಡಲ್ವಡಿಸಿದ ಶೌ ॥
ರ್ಯಾವಷ್ಟಂಭದೊಳಾನಿರೆ ।
ಗೋವಳಿಗಂಗಗ್ರಪೂಜೆಯಂ ನೀನ್ ಕುಡುವಾ ॥ ೫

ಸಮಕಟ್ಟಱಿಯದೆ ಹರಿಗ ।
ರ್ಘ್ಯಮೆತ್ತಿನಿಂದಿರ್ದ ಯಜ್ಞಮದು ಮೊದಲೊಳ್ ತಾ ॥
ನಮರ್ದುಮಮರ್ದಿರದೆ ತಣಿಯುಂ ।
ಡಮರ್ದಂ ಗೋಮೂತ್ರದಿಂದೆ ಬಾಯ್ಪೂಸಿದವೋಲ್ ॥ ೬

ಕುಡವೇೞ್ಪಿನ ಕುಡುವನ ಕುಡೆ ।
ಪಡೆವನ ಪೆಂಪೇಂ ನೆಗೞ್ತೆವಡೆಗುಮೊ ಪೇೞ್ವಂ ॥
ಕುಡವೇೞ್ಗೆಮ ಕುಡುವಣ್ಣಂ ।
ಕುಡುಗೆಮ ಕುಡೆ ಕೊಳ್ವ ಕಲಿಯನಱಿಯಲ್ಕಕ್ಕುಂ ॥ ೭

ವ। ಎಂದನಿತಱೊಳ್ ಮಾಣದೆ ಗೀರ್ವಾಣಾರಿಯಸುರಾರಿಯನಿಂತೆಂದಂ ॥

ಮನೆ ನಿನಗೆ ನಂದಗೋಪಾ ।
ಲನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ ಪ ॥
ಚ್ಚನೆ ಪಸಿಯ ಗೋವನ್ನೈ ಕರ ।
ಮನಯದೆ ನಿನ್ನಳವಿಗಳವನಱಿಯದೆ ನೆಗೞ್ದೆ ॥ ೮

ಮುರನಡಸಿ ಪಿಡಿದು ಕಟ್ಟಿದ ।
ಪರಿಭವಮಂ ಮಱೆದೆ ನಿನ್ನ ಪೆಡಗೆಯ್ಗಟ್ಟಂ ॥
ಶರದಿಂ ಬಿಡಿಸಿದನಲ್ಲನೆ ।
ಸರಿತ್ಸುತಂ ಬನ್ನವಿನ್ನವೆಂಬುವುಮೊಳವೇ ॥ ೯

ದನುಜಾಂತಕನೆಂಬೀ ನಿ ।
ನ್ನ ನಚ್ಚುವೋದಂಕಮೆಲವೊ  ಮುನ್ನೆನ್ನನ್ನಂ ॥
ದನುಜಂ ಪುಟ್ಟದೆ ಸಂದುದು ।
ನಿನಗೀ ಪೆಸರೆನ್ನ ಮುಂದೆಯುಂ ಸಂದಪುದೇ ॥ ೧೦

ಆನಿರ್ದ ಸಭೆಯೊಳರ್ಘ್ಯಮ ।
ನಾನಲ್ಕಾಟಿಸಿದ ನಿನ್ನ ಬಿಸುನೆತ್ತರನಿಂ ॥
ತೀ ನೆರವಿ ನೋಡೆ ಕುಡಿಯದೊ ।
ಡೇನೋ ಶಿಶುಪಾಲನೆಂಬ ಪೆಸರೆಸೆದಪುದೇ॥ ೧೧

ಮೀನಾವೆ ಪಂದಿಯೆಂದೆನಿ ।
ತಾನುಂ ತೆಱನಾಗಿ ಡೊಂಬ ವಿದ್ದೆಯನಾಡಲ್ ॥
ನೀನಱಿವೆಯುಱದಿದಿರ್ಚಿದೊ ।
ಡಾನಱಿವೆಂ ನಿನ್ನನಿಲ್ಲಿ ದೆಸೆವಲಿಗೆಯ್ಯಲ್ ॥ ೧೨



ಅಱಿಯದಿದಂ ಮಾಡಿದೆನೆ ।
ನ್ನಱಿಯಮಿಕೆಗೆ ಸೈರಿಸೆಂದು ನೀನ್ ಸಭೆಯೊಳ್ ಕಾ ॥
ಲ್ಗೆಱಗೆಱಗು ಕೊಲ್ಲೆನೆಂದೆರ್ದೆ ।
ತೆಱಿವಿನೆಗಂ ಹರಿಯ ನೆಱನನಸುರಂ ನುಡಿದಂ ॥ ೧೩

ವ॥ ಆಗಳ್ ಸಭಾಸದರೆಲ್ಲಮೆವೆಮಿಡುಕದೆ ಪಂದೆಯಂ ಪಾವಡರ್ದವೊಲುಸಿರದಿರೆ ನಾರಾಯಣಂ ಶಿಶುಪಾಲನನಿಂತೆಂದಂ

ನಿನ್ನಯ ತಾಯ್ ಸಾತ್ವತಿಯುಂ ।
ನಿನ್ನಂ ತಂದೆನ್ನ ತೊಡೆಯಮೇಲಿಟ್ಟಿಪುವುದುಂ ॥
ನಿನ್ನ ಲಲಾಟದ ಕಣ್ಣದು ।
ಮುನ್ನಮೆ ಕಿಡೆ ನಿನ್ನ ಮೃತ್ಯುವೆನ್ನಯ ಕೆಯ್ಯೊಳ್ ॥ ೧೪

ನೆಱಿದುದನಱಿದೀ ಕಿಱಿಯವ ।
ನಱಿಯದೆ ಕೆಡೆ ನುಡಿದನಪ್ಪೊಡಂ ನೂಱುವರಂ ॥
ನೆಱಿ ಸಲಿಸುವುದೆಂದುದನಾಂ ।
ಮಱಿವೆನೆ ಬಯ್ ಬಯ್ಯೆ ಸಲಿಸುವೆಂ ನೂಱುವರಂ ॥ ೧೫

ಮುನಿಯಲೆನಗಾಗ ಗಾಂಗೇ ।
ಯನಿರ್ದನಿರ್ದಂ ಘಟೋದ್ಭವಂ ನೆಗಲ್ದಿ ಪೃಥಾ ॥
ತನಯರುಮಿರ್ದರ್ ದುರ್ಯೋ ।
ಧನನಿರ್ದಂ ಕೇಳೆ ಪೇಲ್ವ್ವರಾ ಬಲ್ಲವರುಂ ॥ ೧೬

ಎನೆಯೆನೆ ಬಾಯ್ಗಂ ಬಂದನಿ ।
ತನಿತುಮನಮರಾರಿ ಬಯ್ಯೆ ಸೈರಿಸಿ ನೂಱಿಂ ॥
ಬನಿತುವರಂ ಮನ್ನಿಸಿ ನಸು ।
ಕಿನಿಸದೆ ಮಿಗೆ ಕಿನಿಸಿ ದಿತಿಜಕುಳದವದಹನಂ ॥ ೧೭

ಮುಳಿದು ತನಗರ್ಘ್ಯಮೆತ್ತಿದ ।
ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್ ॥
ಕಳಕಳಿಸಿ ನಗುತುಮಿರ್ದುದು ।
ತಳಿಗೆಯ ಮೇಲಸುರನದಟಿದೇನಚ್ಚರಿಯೋ ॥ ೧೮

## ಪಂಪ

ಪಂಪ ಮಹಾಕವಿಯು 'ಕನ್ನಡದ ಆದಿಕವಿ' ಎಂಬ ಬಿರುದಿಗೆ ಪಾತ್ರನಾದವನಾಗಿದ್ದಾನೆ. ಈತ ಕ್ರಿ.ಶ. ೯೦೨ರಲ್ಲಿ ಆಂಧ್ರಪ್ರದೇಶದ ವೆಂಗಿಮಂಡಲದ ವೆಂಗಿಪಱುವಿನಲ್ಲಿ ಜನಿಸಿದನು. ಭೀಮಪಯ್ಯ ಮತ್ತು ಅಬ್ಬಣಬ್ಬೆ ಇವನ ತಂದೆ–ತಾಯಿಯರು, ದೇವೇಂದ್ರ ಮುನಿಗಳು ಗುರುಗಳು, ಚಾಲುಕ್ಯ ಸಾಮಂತ ದೊರೆ ಎರಡನೆಯ ಅರಿಕೇಸರಿ ಇವನ ಆಶ್ರಯದಾತ. ಕವಿತಾಗುಣಾರ್ಣವ, ಸಂಸಾರ–ಸಾರೋದಯ, ಸರಸ್ವತೀ ಮಣಿಹಾರ ಎಂಬಿವುಗಳು ಪಂಪನ ಬಿರುದುಗಳಾಗಿವೆ.

ಪಂಪನು ಕಲಿಯೂ ಹೌದು, ಕವಿಯೂ ಹೌದು. ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಅಥವಾ ಪಂಪಭಾರತ ಎಂಬಿವುಗಳು ಇವನು ಬರೆದ ಎರಡು ಕೃತಿಗಳಾಗಿವೆ. ಇವೆರಡೂ ಕನ್ನಡದ ಶ್ರೇಷ್ಠ ಮಹಾಕಾವ್ಯಗಳಾಗಿವೆ. ಇವುಗಳಿಗೆ ಕ್ರಮವಾಗಿ ಜಿನಸೇನಾಚಾರ್ಯರ ಮಹಾಪುರಾಣ ಮತ್ತು ವ್ಯಾಸರ ಮಹಾಭಾರತ ಕೃತಿಗಳು ಆಕರಗಳಾಗಿವೆ.

### ಪದವಿಂಗಡಣೆ

ರಾಜಚಿಹ್ನಂಗಳುಱಿಯೆ – ರಾಜಚಿಹ್ನಂಗಳ್ + ಉಱಿಯೆ
ಶಕುನಿಗಳುಮನವರವರ – ಶಕುನಿಗಳುಮನ್ + ಅವರ + ಅವರ
ಸನ್ಮಾನಾದಿಗಳೊಳಂ – ಸನ್ಮಾನ + ಆದಿಗಳೊಳಂ
ಸಭೆಯೊಳಗ್ರಪೂಜೆಗಾರ್ – ಸಭೆಯೊಳ್ + ಅಗ್ರಪೂಜೆಗೆ + ಆರ್
ರಸಾತಲದಿಂದೆತ್ತಿದನಾವನಂದು – ರಸಾತಲದಿಂದೆ + ಎತ್ತಿದನ್ + ಆವನ್+ ಅಂದು
ಸೀಳ್ದವನಾವನಬ್ಧಿಮಥನ – ಸೀಳ್ದವನ್ + ಆವನ್ + ಅಬ್ಧಿಮಥನ
ಯಮನಂದನನಾನಂದಂಬೆರಸಂತೆಗೆಯ್ವೆನ್ – ಯಮನಂದನನ್ + ಆನಂದಂ + ಬೆರಸಿ + ಅಂತೆಗೆಯ್ವೆನ್
ಹರಿಗೆತ್ತಿದನರ್ಘ್ಯದರ್ಘ್ಯಮಂ – ಹರಿಗೆ + ಎತ್ತಿದ + ಅನರ್ಘ್ಯದ + ಅರ್ಘ್ಯಮಂ
ಮನದೊಲವರಮುಳ್ಳೊಡೆ – ಮನದೆ + ಒಲವರಂ + ಉಳ್ಳೊಡೆ
ದೇವರನಡಿಗೆಱಗಿಸಿ – ದೇವರನ್ + ಅಡಿಗೆ + ಎಱಗಿಸಿ
ಸಕಳಾವನಿತಳದದಟರಂ – ಸಕಳ + ಅವನಿತಳದ + ಅದಟರಂ
ಶೌರ್ಯಾವಷ್ಟಂಭದೊಳಾನಿರೆ – ಶೌರ್ಯ + ಅವಷ್ಟಂಭದೊಳ್ + ಆನ್ + ಇರೆ
ತಾನಮರ್ದುಮಮರ್ದಿರದೆ – ತಾನ್ + ಅಮರ್ದುಂ + ಅಮರ್ದು + ಇರದೆ
ಕಲಿಯನಱಿಯಲ್ಕಕ್ಕುಂ – ಕಲಿಯನ್ + ಅಱಿಯಲ್ಕೆ + ಅಕ್ಕುಂ
ಗೀರ್ವಾಣಾರಿಯಸುರಾರಿಯನಿಂತೆಂದಂ – ಗೀರ್ವಾಣ + ಅರಿ + ಅಸುರಾರಿಯನ್ + ಇಂತು + ಎಂದಂ
ನಿನ್ನಳವಿಗಳವನಱಿಯದೆ – ನಿನ್ನ + ಅಳವಿಗೆ + ಅಳವನ್ + ಅಱಿಯದೆ

ಬನ್ನವಿನ್ನವೆಂಬುವುವೊಳವೇ – ಬನ್ನಂ + ಇನ್ನಂ + ಎಂಬುವುಂ + ಒಳವೇ
ನಚ್ಚುವೋದಂಕಮೆಲವೊ – ನಚ್ಚುವೋದ + ಅಂಕಂ + ಎಲವೊ
ಸಭೆಯೊಳರ್ಘ್ಯಮನಾನಲ್ಕಾಟಿಸಿದ – ಸಭೆಯೊಳ್ + ಅರ್ಘ್ಯಮನ್ + ಆನಲ್ಕೆ + ಆಟಿಸಿದ
ನೀನಱಿವೆಯುಱದಿದಿರ್ಚಿದೊಡಾನಱಿವೆಂ – ನೀನ್ + ಅಱಿವೆ + ಉಱದೆ + ಇದಿರ್ಚಿದೊಡೆ + ಆನ್ + ಅಱಿವೆಂ
ಪಾವಡರ್ದವೊಲುಸಿರದಿರೆ – ಪಾವು + ಅಡರ್ದವೊಲ್ + ಉಸಿರದೆ + ಇರೆ
ಬಾಯ್ಪೂಸು – ಬಾಯ್ + ಪೂಸು
ಸಲಿಸುವುದೆಂದುದನಾಂ – ಸಲಿಸುವುದು + ಎಂದುದನ್ + ಆಂ
ಬಂದನಿತನಿತುಮನಮರಾರಿ – ಬಂದ + ಅನಿತು + ಅನಿತುಮನ್ + ಅಮರಾರಿ
ಮೇಲಸುರನದಟಿದೇನಚ್ಚರಿಯೋ – ಮೇಲ್ + ಅಸುರನ + ಅದಟು + ಇದು + ಏನ್ + ಅಚ್ಚರಿಯೋ

## ಪದಗಳ ಅರ್ಥ

ಧವಳಚ್ಛತ್ರ – ಬೆಳ್ಗೊಡೆ, ರಾಜಚಿಹ್ನೆಗಳಲ್ಲಿ ಒಂದು. ತಕ್ಕರ್ – ಯೋಗ್ಯರು, ಅರ್ಹರು. ಅಗ್ರಪೂಜೆ – ಸಭೆಯಲ್ಲಿ ಶ್ರೇಷ್ಠನಾದವನಿಗೆ ಎಲ್ಲರಿಗಿಂತ ಮೊದಲು ಮಾಡುವ ಸತ್ಕಾರ, ಪ್ರಥಮ ಸನ್ಮಾನ. ವಿಕ್ರಾಂತ – ಪರಾಕ್ರಮ. ರಸಾತಲ – ಅಧೋಲೋಕಗಳಲ್ಲಿ ಒಂದು. ಅಚಲ – ಪರ್ವತ, ಚಲಿಸದೆ ಇರುವುದು. ಪೆಱರ್ – ಅನ್ಯರು, ಬೇರೆಯವರು. ಅರ್ಘ್ಯ – ದೇವತೆಗಳಿಗೂ ಪೂಜ್ಯರಿಗೂ ಕೈತೊಳೆಯಲು ಕೊಡುವ ನೀರು. ಜಳಧಿನಾದ – ಸಮುದ್ರಘೋಷ, ಸಮುದ್ರದ ಅಬ್ಬರದ ಧ್ವನಿ. ಉಚ್ಚಳಿಸಿ – ಮೇಲಕ್ಕೆ ನೆಗೆದು. ಅನರ್ಘ್ಯ – ಅಮೂಲ್ಯವಾದ. ತೆ – ಚಿಃ (ಹಳೆಗನ್ನಡದಲ್ಲಿ ತಿರಸ್ಕಾರವನ್ನು ಸೂಚಿಸುವ ವಿಶಿಷ್ಟ ಪ್ರಯೋಗ). ಕಳೆ ಕಳೆ – ತೆಗೆತೆಗೆ, ಬಿಸಾಕು. ಒಲವರ – ಪ್ರೀತಿ. ಕುಡುವ – ಕೊಡುವ. ಬೆಸಗೊಳ್ – ಕೇಳು. ಎಗ್ಗು – ದಡ್ಡತನ. ಅಳವು– ಪ್ರಮಾಣ. ಬಳವಳ – ಅತಿಶಯ, ಬಳೆವಿನಗಂ – ಬೆಳೆಯುತ್ತಿರಲು. ತುಱುಕಾರ – ದನಕಾಯುವವ, ಗೋವಳಿಗ. ಇನಿಬರು – ಇಷ್ಟು ಮಂದಿ. ಪೞಿ– ನಿಂದೆ, ಹಳಿ. ಅದಟ – ಪರಾಕ್ರಮಿ. ಪಡಲ್ವಡಿಸು – ಚೆಲ್ಲಾಪಿಲ್ಲಿಯಾಗಿ ಬೀಳಿಸು. ಅವಷ್ಟಂಭ – ನೆಲೆ, ಆಶ್ರಯ. ಸಮಕಟ್ಟು – ಸರಿಯಾದ ವ್ಯವಸ್ಥೆ. ಅಮರ್ದಂ – ಅಮೃತವನ್ನು. ತಣಿಯು – ತೃಪ್ತಿಯಾಗು. ಬಾಯ್ಪೂಸು – ಬಾಯಿಯನ್ನು ಒರಸು, ಬಾಯಿ ಮುಕ್ಕಳಿಸು. ಪೆಂಪು – ಹಿರಿಮೆ. ನೆಗೞ್ತೆ – ಕೀರ್ತಿ, ಪ್ರಸಿದ್ಧಿ. ಕುಡುಗೆಮ – ಕೊಡಲಿ. ಮಾಣು – ಬಿಡು. ಗೀರ್ವಾಣ – ದೇವತೆ. ಸರಿತ್ – ನದಿ. ಕರಂ – ವಿಶೇಷವಾಗಿ. ಅನಯದೆ – ಅನ್ಯಾಯದಿಂದ, ಮೋಸದಿಂದ. ಪರಿಭವ – ಅವಮಾನ. ಸರಿತ್ಸುತಂ – ನದಿಯ ಮಗ, ಭೀಷ್ಮ. ಬನ್ನಂ – ಭಂಗ, ಕಷ್ಟ. ನಚ್ಚು –

ನಂಬು. ಅಂಕಂ – ಹೆಸರು, ನಾಮ. ಆಟಿಸು – ಬಯಸು, ಆಶಿಸು. ಎಸೆ – ಶೋಭಿಸು, ಪ್ರಕಾಶಿಸು. ಇದಿರ್ಚು – ಎದುರಿಸು. ದೆಸೆವಲಿ – ದಿಗ್ಬಲಿ, ದಿಕ್ಕುಗಳಿಗೆ ಬಲಿ. ಅಱಿಯಮಿಕೆ – ತಿಳಿಗೇಡಿತನ, ಮೂರ್ಖತನ. ತೆಱೆವಿನೆಗಂ – ಬಿರಿಯುತ್ತಿರಲು. ನೆಱನನ್ – ಮರ್ಮವನ್ನು, ದೌರ್ಬಲ್ಯವನ್ನು. ಪಂದೆ – ಹೇಡಿ. ಲಲಾಟ – ಹಣೆ. ನೂಱುವರಂ – ನೂರರವರೆಗೆ. ಕಿನಿಸು – ಕೆರಳು, ಕೋಪಿಸು. ಇಡೆ – ಹೊಡೆಯಲು. ತಿಱಿ – ಕತ್ತರಿಸು. ಅದಟು – ಪರಾಕ್ರಮ.

## ವಿಶದೀಕರಣ

| | |
|---|---|
| ಶಿಶುಪಾಲ | : ಯದುವಂಶದ ದಮಘೋಷ ಮತ್ತು ವಸುದೇವನ ತಂಗಿ ಶ್ರುತಶ್ರವೆಯರ ಮಗ. ಪಾಂಡವರ ಜನನಿಯಾದ ಕುಂತಿಯೂ ಶಿಶುಪಾಲನ ಜನನಿಯಾದ ಶ್ರುತಶ್ರವೆಯೂ ಅಕ್ಕತಂಗಿಯರು. |
| ಮುರ | : ನರಕಾಸುರನ ಪರಿವಾರದ ಒಬ್ಬ ರಾಕ್ಷಸ. ಶ್ರೀಕೃಷ್ಣನಿಂದ ಹತನಾದವ. |
| ಈರೇಳು ಲೋಕ | : ಭಾರತೀಯ ಕಲ್ಪನೆಯಲ್ಲಿ ಒಟ್ಟು ಹದಿನಾಲ್ಕು ಲೋಕಗಳ ಪ್ರಸ್ತಾಪವಿದೆ. ಇವುಗಳಲ್ಲಿ ಎರಡು ವಿಧ :<br>ಊರ್ಧ್ವಲೋಕಗಳು : ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನಲೋಕ, ತಪೋಲೋಕ ಮತ್ತು ಸತ್ಯಲೋಕ.<br>ಅಧೋಲೋಕಗಳು : ಅತಳ, ವಿತಳ, ಸುತಳ, ರಸಾತಳ, ತಳಾತಳ, ಪಾತಾಳ, ಮಹಾತಳ |
| ದಶಾವತಾರಗಳು | : ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ. |

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಅಗ್ರಪೂಜೆಗೆ ಯೋಗ್ಯರನ್ನು ಆರಿಸುವಾಗ ಸಭೆಯಲ್ಲಿ ಯಾರೆಲ್ಲ ಉಪಸ್ಥಿತರಿದ್ದರು?
- ಶ್ರೀಕೃಷ್ಣನು ಅಗ್ರಪೂಜೆಗೆ ಅರ್ಹನೆಂದು ಭೀಷ್ಮನು ಹೇಳಲು ಕಾರಣವೇನು?
- ಶಿಶುಪಾಲನ ನೂರು ನಿಂದನೆಗಳನ್ನು ಶ್ರೀಕೃಷ್ಣನು ಸಹಿಸಲು ಕಾರಣವಾದ ಘಟನೆಯನ್ನು ವಿವರಿಸಿರಿ.
- ಶ್ರೀಕೃಷ್ಣನನ್ನು ಅಗ್ರಪೂಜೆಗೆ ಅರ್ಹನೆಂದು ಆಯ್ಕೆ ಮಾಡಿದಾಗ ಶಿಶುಪಾಲನು ವ್ಯಕ್ತಪಡಿಸಿದ ವಿರೋಧವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
- 'ನಸುಕಿನಿಸದೆ ಮಿಗೆ ಕಿನಿಸಿ' ಈ ಪ್ರಯೋಗದ ವೈಶಿಷ್ಟ್ಯದ ಕುರಿತು ಬರೆಯಿರಿ.

## ಚಟುವಟಿಕೆಗಳು

- ಈ ಪಠ್ಯಭಾಗವನ್ನು ಬಾಯ್ದೆರೆಯಾಗಿ ಓದಿರಿ.
- ಈ ಕಾವ್ಯಭಾಗವನ್ನು ಕಥಾರೂಪಕ್ಕೆ ಪರಿವರ್ತಿಸಿ ಬರೆಯಿರಿ.
- ತರಗತಿಯಲ್ಲಿ ನಡೆಸುವ ಸಾಹಿತ್ಯ ಸಭೆಯಲ್ಲಿ ಕಾವ್ಯವಾಚನವನ್ನು ಏರ್ಪಡಿಸಿರಿ.
- ತಾಳಿದವನು ಬಾಳಿಯಾನು ಎಂಬ ಮಾತು ಶಿಶುಪಾಲನ ನಡತೆಗೆ ಅನ್ವಯಿಸುತ್ತದೆಯೇ? ತಿಳಿಸಿರಿ.
- ಶಿಶುಪಾಲನ ಪಾತ್ರಚಿತ್ರಣವನ್ನು ಮಾಡಿರಿ.
- **ಕೆಳಗಿನ ಹಳೆಗನ್ನಡ ಗದ್ಯಭಾಗವನ್ನು ಓದಿ, ಅದನ್ನು ಹೊಸಗನ್ನಡಕ್ಕೆ ಪರಿವರ್ತಿಸಿರಿ.**

  ಅಂತು ನಿಜ ಧವಳಚ್ಛತ್ರ ಚಾಮರ ಸಿಂಹಾಸನಾದಿ ರಾಜಚಿಹ್ನಂಗಳುೞಿಯೆ ಸರ್ವಸ್ವಮೆಲ್ಲಮಂ ದಕ್ಷಿಣೆಗೊಟ್ಟು ವ್ಯಾಸ ಗಾಂಗೇಯ ವಿದುರ ಧೃತರಾಷ್ಟ್ರ ದ್ರೋಣಾಶ್ವತ್ಥಾಮ ಕೃಪ ಕುಲವೃದ್ಧರುಮಂ ದುರ್ಯೋಧನ ದುಶ್ಯಾಸನ ಕರ್ಣ ಶಲ್ಯ ಶಕುನಿಗಳುಮನವರವರ ದಾನ ಸನ್ಮಾನಾದಿಗಳೊಳಂ ಸಂತಸಂಬಡಿಸಿ ಧರ್ಮಪುತ್ರಂ ಪೇೞಿಮೀಸಭೆಯೊಳಗ್ರಪೂಜೆಗಾರ್ ತಕ್ಕರೆನೆ ಗಾಂಗೇಯನಿಂತೆಂದಂ–

- ಮುಳಿದು ತನಗರ್ಘ್ಯಮೆತ್ತಿದ ।  
  ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್ ॥  
  ಕಳಕಳಿಸಿ ನಗುತುಮಿರ್ದುದು ।  
  ತಳಿಗೆಯ ಮೇಲಸುರನದಟಿದೇನಚ್ಚರಿಯೋ ॥

  ಕತ್ತರಿಸಲ್ಪಟ್ಟ ಶಿಶುಪಾಲನ ರುಂಡದ ಭಾವವಿಶೇಷವು ಈ ಸಾಲುಗಳಲ್ಲಿ ಪ್ರಕಟವಾಗಿರುವ ಬಗೆಯನ್ನು ವಿವರಿಸಿರಿ.

## ಛಂದಸ್ಸು

**ಖ್ಯಾತ ಕರ್ನಾಟಕ ವೃತ್ತಗಳು :** ಖ್ಯಾತ ಕರ್ನಾಟಕ ವೃತ್ತಗಳು. ವರ್ಣಗಣ ಅಥವಾ ಅಕ್ಷರಗಣಗಳ ಆಧಾರದಲ್ಲಿ ರಚಿತವಾದುವು. ಕನ್ನಡದಲ್ಲಿ ಪ್ರಸಿದ್ಧವಾದ ಆರು ವರ್ಣ ವೃತ್ತಗಳಿವೆ. ಅವುಗಳೆಂದರೆ ೧. ಉತ್ಪಲಮಾಲೆ ೨. ಚಂಪಕಮಾಲೆ ೩. ಶಾರ್ದೂಲವಿಕ್ರೀಡಿತ ೪. ಮತ್ತೇಭವಿಕ್ರೀಡಿತ ೫. ಸ್ರಗ್ಧರೆ ೬. ಮಹಾಸ್ರಗ್ಧರೆ. ಇವುಗಳನ್ನು ಕನ್ನಡ ಛಂದೋ ಗ್ರಂಥಗಳಲ್ಲಿ ಖ್ಯಾತ ಕರ್ನಾಟಕಗಳೆಂದು ಕರೆಯಲಾಗಿದೆ.

ಚಂಪೂಸಾಹಿತ್ಯದಲ್ಲಿ ಕಂದಪದ್ಯಗಳ ಜೊತೆಯಲ್ಲಿ ವರ್ಣ ವೃತ್ತಗಳು ಧಾರಾಳವಾಗಿ ಸೇರಿಕೊಂಡಿವೆ.

### ಮತ್ತೇಭವಿಕ್ರೀಡಿತ

ವರ್ಣಗಣ ವಿನ್ಯಾಸವುಳ್ಳ ಈ ವೃತ್ತವು ಪ್ರತಿಪಾದದಲ್ಲೂ ಕ್ರಮವಾಗಿ ಸ, ಭ, ರ, ನ, ಮ, ಯ ಎಂಬ ಗಣಗಳನ್ನೂ ಕೊನೆಯಲ್ಲಿ ಒಂದು ಲಘು ಮತ್ತು ಒಂದು ಗುರುವಿನಿಂದಲೂ ಕೂಡಿರುತ್ತದೆ. ಇದರ ಪಾದವೊಂದರಲ್ಲಿ ೨೦ ಅಕ್ಷರಗಳಿರುತ್ತವೆ. ೪ ಸಾಲುಗಳೂ ಸಮಾನವಾಗಿರುವುದರಿಂದ ಇದು ಸಮವೃತ್ತವೆನಿಸಿದೆ.

ಕೆಳಗಿನ ಸಾಲಿಗೆ ಪ್ರಸ್ತಾರ ಹಾಕಿ ಗಣಗಳನ್ನು ವಿಭಜಿಸಿರಿ.

ಬಲಿಯಂ ಕಟ್ಟಿದವನಾವನೀಧರಣಿಯಂ ವಿಕ್ರಾಂತದಿಂದಂ ರಸಾ

### ಕಂದಪದ್ಯ

ಕಂದಪದ್ಯವು ನಾಲ್ಕು ಸಾಲುಗಳುಳ್ಳ ಒಂದು ಅರ್ಧಸಮವೃತ್ತವಾಗಿದೆ. ಇದರ ಒಂದು ಮತ್ತು ಮೂರನೇ ಪಾದಗಳಲ್ಲಿ ೪ ಮಾತ್ರೆಯ ಮೂರು ಮೂರು ಗಣಗಳು ಇರುತ್ತವೆ. ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ೪ ಮಾತ್ರೆಯ ಐದೈದು ಗಣಗಳು ಇರುತ್ತವೆ. ಕಂದ ಪದ್ಯದ ನಾಲ್ಕೂ ಸಾಲುಗಳ ಒಟ್ಟು ಮಾತ್ರಾ ಸಂಖ್ಯೆ ೬೪ ಆಗಿರುತ್ತದೆ. ಕಂದಪದ್ಯದ ಪೂರ್ವಾರ್ಧ ಮತ್ತು ಉತ್ತರಾರ್ಧದ ವಿಷಮ ಸ್ಥಾನಗಳಲ್ಲಿ ಮಧ್ಯ ಗುರು ಇರುವ ಗಣ ಬರಬಾರದು. ೬ ನೇ ಸ್ಥಾನದಲ್ಲಿ ನಾಲ್ಕು ಲಘುಗಳುಳ್ಳ ಗಣ ಅಥವಾ ಮಧ್ಯೆ ಗುರುವಿರುವ ಗಣ (ಜಗಣ) ಬರಲೇಬೇಕು.

- ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿರಿ.

  ದನುಜಾಂತಕನೆಂಬೀ ನಿ
  ನ್ನನಚ್ಚುವೋದಂಕಮೆಲವೊ ಮುನ್ನೆನ್ನನ್ನಂ

## ಭಾಷಾಭ್ಯಾಸ

### ಪರ್ಯಾಯ ಪದಗಳು

ಮಾದರಿಯಂತೆ ಕೆಳಗೆ ನೀಡಿದ ಪದಗಳ ಪರ್ಯಾಯ ಪದಗಳನ್ನು ಬರೆಯಿರಿ.

ಮಾದರಿ : ಭೂಮಿ – ಇಳೆ, ಪೃಥ್ವಿ, ಧರೆ, ಧರಿತ್ರಿ, ಅವನಿ, ಧರಣಿ.....

ದೈತ್ಯ, ತುಬುಕಾರ, ಶರ, ಕೃಷ್ಣ, ಆಕಾಶ

### ತದ್ಧಿತ ಪ್ರತ್ಯಯಗಳು

ಮಾದರಿಯಂತೆ ಕೆಳಗಿನ ಪ್ರತ್ಯಯಗಳು ಕೊನೆಯಲ್ಲಿ ಬರುವ ಪದಗಳನ್ನು ಸಂಗ್ರಹಿಸಿರಿ.

ಮಾದರಿ : ಮಾಲೆಗಾರ, ಹಣವಂತ, ಮಡಿವಾಳ, ಗಾಣಿಗ

ವಾಳಿ, ಗಾರ, ಇಗ, ತನ, ವಳ, ಕಾರ

## ಸಂಧಿ

### ಸವರ್ಣದೀರ್ಘ ಸಂಧಿ

ಸವರ್ಣ ಸ್ವರಗಳಾದ (ಒಂದೇ ಜಾತಿಯ ಸ್ವರಗಳು) ಅ–ಆ, ಇ–ಈ, ಉ–ಊ ಎಂಬಿವು ಪರಸ್ಪರ ಸೇರಿ ಸಂಧಿಯಾಗುವಾಗ ಅವೆಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘ ಸ್ವರವು ಆದೇಶವಾಗಿ ಬರುತ್ತದೆ. ಇದನ್ನು ಸವರ್ಣದೀರ್ಘ ಸಂಧಿ ಎನ್ನುವರು.

ಉದಾ: ಸುರ + ಅಸುರ – ಸುರಾಸುರ

ದೇವ + ಆಲಯ – ದೇವಾಲಯ

ಗಿರಿ + ಈಶ – ಗಿರೀಶ

ಲಕ್ಷ್ಮೀ + ಈಶ – ಲಕ್ಷ್ಮೀಶ

ಗುರು + ಉಪದೇಶ – ಗುರೂಪದೇಶ

ಪಠ್ಯಭಾಗದಲ್ಲಿ ಬಂದಿರುವ ಸವರ್ಣದೀರ್ಘ ಸಂಧಿ ಪದಗಳನ್ನು ಗುರುತಿಸಿ ಸಂಧಿ ವಿಂಗಡಿಸಿ ಬರೆಯಿರಿ.

### ಸಂಸ್ಕೃತ–ತದ್ಭವ

- ಕೆಳಗೆ ಕೊಡಲಾದ ಸಂಸ್ಕೃತ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

  ಸಿಂಹ, ಯಮ, ಯಶ, ಯಜ್ಞ, ಮೃತ್ಯು, ಆಕಾಶ,
  ವಸತಿ, ಕಾರ್ಯ, ಮುಖ, ಕ್ರಕಚ.

## ಹೆಚ್ಚಿನ ಓದಿಗೆ

ಪಂಪಭಾರತ ದೀಪಿಕೆ – ಡಿ.ಎಲ್. ನರಸಿಂಹಾಚಾರ್
ವಚನ ಭಾರತ – ಎ.ಆರ್. ಕೃಷ್ಣ ಶಾಸ್ತ್ರಿ
ಪಂಪಭಾರತ ಕಥಾಲೋಕ – ಕೆ.ಆರ್. ಅನಂತರಾಮಯ್ಯ
ಮಕ್ಕಳ ಮಹಾಭಾರತ

# ಶ್ರೀಮತಿ ಸ್ವಯಂವರ

ಮುದ್ದಣ

ಸೌಂದರ್ಯವನ್ನು ಆಸ್ವಾದಿಸುವುದು ಮನುಷ್ಯನ ಸಹಜಗುಣ. ಮನುಷ್ಯರೂ ದೇವತೆಗಳೂ ರಾಕ್ಷಸರೂ ಮಾತ್ರವಲ್ಲದೆ ಋಷಿಮುನಿಗಳೂ ಸ್ತ್ರೀಸೌಂದರ್ಯಕ್ಕೆ ಮಾರುಹೋದ ಘಟನೆಗಳು ಅದೆಷ್ಟೋ ಇವೆ. ಶ್ರೀಮತಿಯ ಸೌಂದರ್ಯವನ್ನು ನೋಡಿದಾಗ ನಾರದ ಮತ್ತು ಪರ್ವತರೆಂಬ ಇಬ್ಬರು ಮುನಿಗಳು ಅವಳನ್ನು ಬಯಸಿ ಒಬ್ಬರು ಮತ್ತೊಬ್ಬರನ್ನು ವಂಚಿಸಲು ಹೋಗಿ, ತಾವು ವಂಚನೆಗೊಳಗಾದ ಸಂದರ್ಭ ಇಲ್ಲಿ ಮನೋಹರವಾಗಿ ಮೂಡಿ ಬಂದಿದೆ. ನವರಸಗಳಲ್ಲಿ ಹಾಸ್ಯವೂ ಒಂದು. ಸರಸ ಸನ್ನಿವೇಶ ನಿರ್ಮಾಣದ ಮೂಲಕ ಕವಿ ಹಾಸ್ಯದ ಹೊನಲು ಹರಿಸಿದ್ದನ್ನು ಈ ಭಾಗದಲ್ಲಿ ಕಾಣಬಹುದು.

## ಕಥಾಸಂದರ್ಭ

ಅಂಬರೀಷನು ಇಕ್ಷ್ವಾಕು ವಂಶದ ಮಾಂಧಾತೃ ಚಕ್ರವರ್ತಿಯ ಮಗ. ಅಯೋಧ್ಯೆಯ ರಾಜ. ಈತನಿಗೆ ತ್ರಿಲೋಕ ಸುಂದರಿಯಾದ ಶ್ರೀಮತಿಯೆಂಬ ಮಗಳಿದ್ದಳು. ಒಮ್ಮೆ ನಾರದ ಪರ್ವತರೆಂಬ ದೇವರ್ಷಿ ಮತ್ತು ಬ್ರಹ್ಮರ್ಷಿಯರು ಅಯೋಧ್ಯೆಗೆ ಬಂದು ಶ್ರೀಮತಿಯನ್ನು ಕಂಡು ವ್ಯಾಮೋಹಕ್ಕೊಳಗಾಗಿ ಇಬ್ಬರೂ ಅವಳನ್ನು ವರಿಸಬೇಕೆಂದು ಬಯಸಿದರು. ತಮ್ಮ ಬಯಕೆಯನ್ನು ನೆರವೇರಿಸಿಕೊಳ್ಳಲು ಪರಸ್ಪರರನ್ನು ವಂಚಿಸಲು ನಿರ್ಧರಿಸಿ ವಿಷ್ಣುವಿನಿಂದ ವರಗಳನ್ನು ಪಡೆದು ಸ್ವಯಂವರಕ್ಕೆ ಬಂದರು. ಮುಂದಿನ ಭಾಗ ಇಲ್ಲಿ ವರ್ಣಿತವಾಗಿದೆ.

ಆಲಿಸೈ ಮುನಿಪುಂಗವ, ಅತ್ತ ಅಂಬರೀಷಂ ನಿಜಸುತೆಯ ಸ್ವಯಂವರಕೆಂದು ಪತ್ತನದೆಲ್ಲೆಡೆಗಳಂ ಮಂಡಪತೋರಣಧ್ವಜಪತಾಕೆಗಳಿಂ ಸಿಂಗರಿಪಂತೆಯುಂ, ಬೀದಿಗಳಂ ಗಂಧೋದಕದಿಂ ಸಾರಣೆಗೆಯ್ದು ರಂಗವಲ್ಲಿಗಳನಿಟ್ಟು ಪೂಜಲ್ಲಿಗಳಂ ಬಿಟ್ಟು ಸೊಗಯಿಸುವಂತೆಯುಂ ಅರಮನೆಯಂ ನವರತ್ನಾದಿಗಳಿನಲಂಕರಿಪಂತೆಯುಂ ಆಣೆಗೆಯ್ದು ಮಿಕ್ಕಸನ್ನಣದೊಳಿರ್ದಂ.

ಇಂತೊಪ್ಪುವ ನಾಡ ಸೊಬಗಂ ಕಾಣುತೆ ರಿಸಿಗಳಿರ್ವರ್ ಸಂತಸಗೊಂಡು ಪೇಳ್ದಿ

ಗಡುವಿಂಗೆ ತಪ್ಪದೆಯ್ತುರುವರನರಸಂ ಸನ್ಮಾನಿಸಿ ಬೞಿಯಂ ಸ್ವಯಂವರ ಮಂಟಪಕ್ಕೆ ಕರೆತಂದು, ಮಗಳ್ಗೆ – "ಎಲೌ ಬಾಲೆ, ಇವರೀರ್ವರುಂ ನಿನ–ಂ ಬಯಸಿದಪರ್. ಆದೊಡೆ ಪೆಣ್ಣೊರ್ವಳೊರ್ವಂಗಲ್ಲದೆ ಇರ್ವರ್ಗಮಾಗದುದಱಿಂ ನೀನಾರನೊಲಿವೆ, ಅವರ್ಗೀವೆಂ ನಿನ–ಂ ಆದುದಱಿನಿವರೊಳಾರಪ್ಪರವರ ಕೊರಲ್ಗೆ ಈ ಪೂಸರಮನಿಡುವುದು" ಎಂದುಸಿರ್ದಂ.

ಅಯ್ಯನಾಣತಿಯನಾಂತಣುಗಿ ಎನಸುಂ ನಾಣ್ಚಿ ಕರದೊಳ್ ಪೂಮಾಲೆಗೊಂಡು ಪಿಡಿನಡೆಯಂತೆ ಸಹಚರಿಯರ್ವೆರಸು ಮೆಲ್ಲನವರಿರ್ವರ ಸನಿಯಮಂ ಸಾರ್ದು ಕಣ್ಬೊಗರನಿರ್ವರೊಳಂ ಪಸರಿಸಿ ಇನಿಸುಂ ಜಾನಿಸಿ ಮೇಣ್ ನೆಲನಂ ನೋಡುತುಸಿಕನಿರ್ದಳ್

ಬಾಲೆಯಿಂತು ಸುಮ್ಮನೆ ನಿಲ್ತಿರೆ; ಕಂಡುರಾಯಂ – " ಏಂ ಮಗಳೆ ಮನಂಬಂದಂಗೆ ಮಾಲೆಯಿಕ್ಕನೆ ಮಾಣ್ದೌ; ಪೆಱತೇನನೆಣ್ಣದಿರ್. ಇರ್ವರುಂ ಬೇದಬಿಜ್ಜೆಗಂಗೆ ಸರಿಮಿಗಿಲೆನಿಪರ್; ಮಾದೇವನಂತೆ ಮೈಮೆಯುಳ್ಳವರ್; ಸಿರಿಯರಸನಂತೆ ಸೊಗಸುಳ್ಳವರ್; ನಾಡಾಡಿ ಕಿತ್ತಡಿಗಳಲ್ತು; ಸಂದೆಯಮಣಮಿಲ್ಲದೆ ಇವರೊಳ್ ಮನಬಂದವನ ನೊಲಿಸಿಕೊಳ್ವುದು" ಎಂದಱಿ ಪಲಾಬಾಲೆ ಬೆದರ್ದು, ಪಿತಂಗೆ – "ಬೊಪ್ಪ! ನೀನ್ನೊರೆವಂತೆ ರಿಸಿಗಳಾರುಂ ತನಗೆ ಕಾಣಿಸರ್; ಮಂಗ ಕೋಡಗ ಮುಸುಡಿನವರಾರೊ ಇರ್ವರ್ ತನಿ–ದಿರ್ಗೆ ನಿಂದಂತೆ ತೋರ್ಪುದು. ಆದೊಡಿವರ ನಡುವೆ ಸರ್ವಾಭರಣ ಸಂಯುಕ್ತನುಂ, ವಿಶಾಲಾಕ್ಷನುಮಾಜಾನುಬಾಹುವುಂ, ತುಂಗೋರಸ್ಥಲನುಮಪ್ಪ ಷೋಡಷವರ್ಷದ ವರನೊರ್ವನಂ ಕಾಣ್ಬೆಂ. ಅಂತಿರ್ಪನ ಪೀತಾಂಬರಮುಂ, ಶ್ಯಾಮಾಂಗಮುಂ, ಶುಭಗಾತ್ರಮುಂ, ಮನಂಗೊಳ್ವುದು; ಪದ್ಮಲೋಚನಂಗಳಿನೆನ–ನೆದಿಟ್ಟಿಪಂ; ಮೇಣ್ ನಗುವಂ. ಕುಂದಕುಟ್ಮಲದಂತಿರ್ಪ ಪಲ್ಗಳ್ ಸ್ಪಷ್ಟಂ ತೋರ್ಪುವು. ಮತ್ತಮಾಪುರುಷಂ ಬಲಗೈಯನೆನ– ಕರಮಂ ಪಿಡಿಯಲೆಂಬೋಲ್ ಮುಂದೆ ನೀಡಿರ್ಪಂ" ಎಂದು ಮಾರ್ನುಡಿದಳ್.


ಬೞಿಯಂ ಬಾಲೆಯ ಭಾಷಣಮಂ ಭಾವಿಸಿ ನಾರದಂ ಕಟ್ಟಚ್ಚರಿಯೊಳ್ – "ಎಲೆ ಕನ್ಯಾಮಣಿಯೆ ಅಂತು ನೀಂ ನೋಳ್ಪವಂಗೆ ತೋಳ್ಗಳೆನಿತಿರ್ಪುವು? ಕಂಡಂತುಸಿರಾ" ಎನಲ್, "ಎರಡೆ" ಎಂದಳ್. ಆಗಳ್ಮಗುೞ್ದಿಂ – "ಆತನ ವಕ್ಷಸ್ಸ್ಥಲದೊಳೇನಂ ಕಂಡಪೆ? ಮತ್ತಂ ಕರದೊಳೇನಂ ಪಿಡಿದಿರ್ಪಂ" ಎಂದು ಬೆಸಗೊಂಡೊಡೆ; –"ವಿಶಾಲವಕ್ಷಸ್ಸ್ಥಲದೊಳ್ ದಿವ್ಯಮಾಲಿಕೆಯುಂ ಶುಭಹಸ್ತಂಗಳೊಳ್ ಕಾರ್ಮುಕ ಸಾಯಕಂಗಳುಮೆಸೆದಿರ್ಪುವು" ಎಂದಱಿಪಿದಳ್.

ಶ್ರೀಮತಿಯ ನುಡಿಗಿರ್ವರುಮಚ್ಚರಿವಡುತಾತ್ಮಗತಚಿಂತೆಯೊಳ್ ಬಹುದೂರಂ ಜಾನಿಸಿ – ಮಾಯಿಕಮಿದು, ಮಾಧವನಿನಲ್ಲದೆ ಪೆಱರಿನಾಗದೆಂದು, ನಾರದಂ – ಆತನವನಲ್ಲದೊಡೆ ತನ– ಮೊಗಮಿಂತೇಕಾಕೆಗೆ ಕಾಣಲಾದುದೆನುತೆ; ಪರ್ವತಂ – ನಾರದನ ಮೊಗಮಂತಿರ್ಪುದು ತಕ್ಕುದು. ಅದೊಡೆನ–ತೇಕಿಂತು ತೋರ್ಪುದೆನುತೆ; ಇರ್ವರುಂ ನುಡಿಯುತಿರ್ದರ್.

ಇಂತಿರಲಂಬರೀಷನವರ್ಗೆಱಗುತೆ–"ಪೂಜ್ಯರೇ, ಬಗೆಯೀತೆಱದೊಳ್ ಮರುಳ್ಗೊಳಲೇಗೆಯ್ದಿರ್? ಎನ–ಯ ಕನೆ–ಯೊಳ್ ಮನಮಿಟ್ಟು ಬಂದಿರ್ಪಿರಾದೊಡೆ ಕೊಂಚಂ ಸ್ವಸ್ಥಮಿರ್ಪುದು. ಪವಣಱಿತು ಪೇೞ್ವಿಂ"? ಎಂದೊಡೆ, ನಸುಮುನಿಸಿಂ – "ಮರುಳ್ಗೊಳಿಸಿದವರಾವಲ್ತು; ನೀನೇ ಈಪೆಣ್ಣೆಮ್ಮನೊಲಿಯದೊಲೆಂತೊ ಕಪಟಮಂ ಕುವರಿಗೊರೆದೋ, ನೀನೆಯೋ ಎಸಗಿರ್ಪೆ?" ಎನುತೆ ಮಱು ಮಾತಾಡಿದರ್.

ಈ ಬಿರುನುಡಿಯಂ ಲಾಲಿಸುತಾಬಾಲೆ – ಇವರ್ ತಾತಂಗೇನಾನುಂ ಶಾಪಮಿತ್ತಪರೆಂದು ತಳಮಳಗೊಂಡು ಮುನ–ಂ ಕಾಣಿಸಿಕೊಂಡ ದಿವ್ಯಪುರುಷನಂ ಮನದೊಳ್ ಜಾನಿಸಿ, ತವಸಿಗಳೊಳೊರ್ವಂಗೆ ಸರವನಿಕ್ಕುವೆನೆಂದು ಮುಂದಡಿಯಿಟ್ಟಳ್; ದೈವಸಂಕಲ್ಪವನಾರ್ ಮೀರ್ವರ್? ಅಂತವರೊಳೊರ್ವಂಗೆ ಮಾಲೆಯಿಕ್ಕುವೆನೆನುತೆ ಪಜ್ಜೆಯಿಕ್ಕಿದ ಪೆಣ್ ಮುಗುಳ್ದುವಾ ಸುಂದರಮೂರ್ತಿಯಂ ಮೋಹಿಸುತೊಡನಾತಂಗೆಯೆ ಸರಮಂ ಹಾಯ್ಕಿದಳ್. ಅನಿತಱೊಳಚ್ಚರಿಗೆ ತಕ್ಕಂತೆ ಆ ಕನ್ಯೆಯುಂ ಮೇಣಾ ದಿವ್ಯ ಪುರುಷನುಂ ಕಾಣಿಸದಾದರ್.

ಚಿತ್ತಯಿಸ್ಯೆ, ಮುನಿಯೆ, ಆ ಬಾಲೆಯನುಯ್ದುವನಾರೆಂದು ಬಲ್ಲೈ? ಸಾಜಮಾದ ಭಗವಂತಂ, ಆತನುಂ ನಿರ್ವ್ಯಾಜಂ ಪಡೆದನಲ್ತು. ಆ ಪೆಣ್ಗೆಯೆ ಅನಿಶಂ ತಪವೆಸಗಿ ಪೂರ್ವಸಂಕಲ್ಪಾನುರೂಪಂ ಪೊಂದಿದಂ.



ಇತ್ತಲಿರ್ವರುಂ ದುಃಖಾಕುಲರ್ ವೈಕುಂಠನೊಳೆ ಇಂತೀಪರಿಯಂ ನಿರ್ಧರಿಪುದೆಂದು ಗಳ್ಕನೆ ವೈಕುಂಠಕೆಯ್ತರಲಿತ್ತಲ್ ಶ್ರೀಹರಿ ತಾಂ ಶ್ರೀಮತಿಯಂ ಕುಱಿತು – "ಎಲೆ ಮೋಹನಾಂಗಿ! ನಿನಿ–ಂ ವಂಚಿತರಾದಾತವಸಿಗಳೀಗಳಿದೆಕೊಳ್ ಬರ್ಪರಿತ್ತಲ್. ಆದುದಱಿಂ ನೀನೆನ–ಂತರಂಗದೊಳ್ಗುಪ್ತಳಾಗು" ಎನೆ; ನಸುನಗುತಂತೆಯೆ ಒಳಪೊಕ್ಕಳ್.

ಸಮನಂತರದೊಳ್ ನಾರದನುಂ ಪರ್ವತನುಂ ಪುರಾಣಪುರುಷನಂ ಕಂಡೆಱಗುತವನೊಳ್ ಮೊದಲನೆಯಂ – "ದೇವ, ಇಂದೆಮಗಿರ್ವರ್ಗುಂ ಒಳು–ಡಿಯಿನೊಪ್ಪಂಬೂಸಿದೈ! ಇಂತೆಮ್ಮನೞಿಲಿಸಿ ಬೞಿಲಿಸಲ್ಬಹುದೆ? ನಿಶ್ಚಯಂ ನೀನೆ ಆ ಪೆಣ್ಣಂ ಕಳ್ದು ತಂದವಂ. ಛಿ! ವಿಶ್ವಾಸಘಾತಕ ಮನಾರ್ಗುಮೆಸಗಬಾರದು. ಸಾಲ್ಗುಂ. ಜೀಯ! ನೀಂ ಪಿರಿಯಂ" ಎನೆ, ಕಿವಿ ಮುಚ್ಚಿ ಪುಸಿಮುನಿಸಿಂ – "ಇನೆ–ಗಂ ನೀಂ ಯೋಗ್ಯನೆಂದೆಣಿಸಿರ್ದೆಂ. ಈಗಳ್ ಸೊರ್ಕಿ ನೀನೆಂತಾನುಂ ಗೞಿಪುವುದಂ ಕಾಣುತೆ ಋಷಿಸ್ವಭಾವಮನೆನಿತುಂ ಲಕ್ಷಿಸೆಂ. ಎಲೆ ಮುನಿಪ! ನೀನುಸಿರ್ವುದು ಸಾಜಮಲ್ಲಂ; ಮೇಣಂತು ಕಾರಣಮುಮಿಲ್ಲಂ" ಎಂದು ಸಿರಿಯರಸನೊರೆದಂ. ಅದರ್ಕೆ ನಾರದಂ – "ಅಂತಾದೊಡೆನ– ಮೊಗಂ ಮಂಗಮುಸುಡಂತೇಕೆ ವಿಕಾರಮಾಯ್ತು?" ಎಂದು ಕೇಳೆ; ನಾರಾಯಣ – "ಅಃ! ಪಲವುಂ ಕಾಲಮೆನ–ಂ ಭಜಿಸುತಿರ್ದೊಡಂ ನೀನೆನ– ಮೈಮೆಯ ನೆಲೆಯಂ ಕಂಡುದಿಲ್ಲಂ. ಆಂ ಭಕ್ತಾಧೀನನಪ್ಪೆಂ ಸರ್ವರುಂ ಸಮಂ. ನೀನೆಂತು ಆ ಪೆಣ್ಣ ಕತದಿಂ ಬೇಡಿದೆ ಅಂತೆ  ಈ ಪರ್ವತನುಂ ಕೇಳ್ದಂ. ಅದಱಿನಿರ್ವರ್ಗುಮಿಂತಾದುದು. ದೂಱಿಗಾರುಮಿಲ್ಲಂ. ಆರ್ ಏಂ ಬೇೞ್ಪಿರವರ್ಗೆ ಅದಱಿನೀವುದೆನ– ಬಿರುದು ಆಂ ಸತ್ಯಸಂಧಂ. ಸತ್ಯಬಲದಿಂದೆಯೆ ಚಕ್ರಮಿದು ಕೈಸೇರ್ದುದು" ಎಂದಂ.

ನಾರಾಯಣನಾಜ್ಞೆಯಂ ನಾರದನಾಲಿಸಿ – "ನಿನ–ಪ್ಪಣೆಯನಿತುಂ ನಿಜಮಾದೊಡಂ ಸ್ವಯಂವರಮಂಡಪದೊಳ್ ಎಮ್ಮೊಳೊರ್ವನನಾರಿಸಿಕೊಳೆ ಬಂದಾಬಾಲೆಗೆ ಎಮ್ಮೆಡೆಯೊಳೊರ್ವಂ ಧನುರ್ಬಾಣಂಗಳನಿರ್ಕೆಯ್ಗಳೊಳ್ಪಿಡಿದಿರ್ದವಂ ಬಾಲಸುಂದರಂ ಗಡ! ಆರೆಂದಾರ್ಕೈದುದಿಲ್ಲ. ಅಂತುಮವನೆ ಕಳ್ದುಯ್ದುದು ದಿಟಂ.' ಎಂದು ಪೇೞ್ದಿಂ.

ಇದರ್ಕೆ ಜನಾರ್ದನಂ–"ಅಕ್ಕುಂ, ಲೋಕದೊಳ್ ಮಹಾತ್ಮರೆನಿಪರೊಳನೇಕರ್ ಮಾಯಾವಿಗಳೊಳರ್. ಅಂತಪ್ಪವರೊಳಾರೊ ಕನೆ–ಯಂ ಕಳ್ದುಯ್ದಿರವೇೞ್ಕುಮಲ್ಲದೆ ಎನಿ–ನಾದ ಕಜ್ಜಮಲ್ತು. ಏತರ್ಕೆನೆ, ಆನೇಗಳುಂ ಚತುರ್ಭುಜನುಂ. ಚಕ್ರ ಪಾಣಿಯುಂ ಮಾಗಿರ್ಪೆನಲ್ತೆ; ಪುಸಿಯುಸಿರಲ್ ಕಜ್ಜಮಿಲ್ಲ;" ಎನೆ, ರಿಸಿಗಳಿರ್ವರುಮೊಡಂಬಡುತೆ– "ನಿನೊ–ಳಾವ ತೆಱದ ಸಂದೆಯಮುಂ ಕಾಣಿಸದು. ಅವಿವೇಕಿಗಳೆಮ್ಮತಪರಾಧಮಿದಂ ಕ್ಷಮಿಸಿ ಕೂರ್ಮೆಯಿಂ ಪೊರೆವುದು" ಎಂದೆಱಗಿ ಅಂಬರೀಷನೆ ತಮ್ಮಂ ವಂಚಿಸಿರ್ಪನೆಂದು ಕಡಂಗಿ ಮರೞ್ದಿಯೋಧ್ಯೆಗೆ ತೆರಳ್ದರ್.

## ಮುದ್ದಣ (೧೮೬೯ – ೧೯೦೧)



ನಂದಳಿಕೆ ಲಕ್ಷ್ಮೀನಾರಣಪ್ಪನು ನಂದಳಿಕೆ ಗ್ರಾಮದಲ್ಲಿ ಪಾಟಾಳಿ ತಮ್ಮಯ್ಯ ಹಾಗೂ ಮಹಾಲಕ್ಷ್ಮಮ್ಮ ದಂಪತಿಯ ಹಿರಿಯ ಮಗನಾಗಿ ಜನಿಸಿದನು. ಓದು ಬರಹ, ಸಂಗೀತ, ಚಿತ್ರಕಲೆ, ಯಕ್ಷಗಾನ ಕಲೆಗಳಲ್ಲಿ ತುಂಬ ಆಸಕ್ತಿಯನು– ಹೊಂದಿದ್ದನು. ಕೇವಲ ೩೧ ವರ್ಷಗಳ ಬಾಳ್ವೆಯಲ್ಲಿ ಕನ–ಡ ಸಾಹಿತ್ಯರಂಗದ 'ಹಳೆ ಹೊಸಕಾಲದ ಮಧ್ಯಮಣಿ' ಯಂತೆ ಶೋಭಿಸಿದನು. ರಸಿಕ ಪ್ರಪಂಚದ ಹೃದಯಕ್ಕೆ ಮತ್ತೆ ಮತ್ತೆ ಲಗ್ಗೆ ಹಾಕಬಲ್ಲ 'ಕುಮಾರ ವಿಜಯ', 'ರತಾ–ವತೀ ಕಲ್ಯಾಣ' ಎಂಬ ಯಕ್ಷಗಾನ ಪ್ರಸಂಗಗಳನು–, 'ಶ್ರೀರಾಮ ಪಟ್ಟಾಭಿಷೇಕ' ಎಂಬ ಕಾವ್ಯವನು–, ಅದ್ಭುತ ರಾಮಾಯಣ, ರಾಮಾಶ್ವಮೇಧಗಳೆಂಬ ಗದ್ಯಕಾವ್ಯಗಳನು– ನೀಡಿ ಕನ–ಡ ಕಾವ್ಯಲೋಕದ ವಿಶಿಷ್ಟ ಧ್ವನಿಯಾಗಿ ಉಳಿದುಕೊಂಡಿದ್ದಾನೆ. ನಡುಗನ–ಡ, ಹೊಸಗನ–ಡಗಳ ಸಂಧಿಕಾಲದಲ್ಲಿ ಬದುಕಿದ ಕವಿಯು ಹಳೆಗನ–ಡ ಶೈಲಿಯಲ್ಲಿ ಕಾವ್ಯರಚನೆ ಮಾಡಿರುವುದು ಒಂದು ವಿಶಿಷ್ಟ ಸಾಧನೆಯಾಗಿದೆ.

### ಪದ ವಿಂಗಡಣೆ

ಪತ್ತನದೆಲ್ಲೆಡೆಗಳಂ – ಪತ್ತನದ+ಎಲ್ಲ+ಎಡೆಗಳಂ

ಗಂಧೋದಕ – ಗಂಧ+ಉದಕ

ನವರತಾ–ದಿಗಳಿನಲಂಕರಿಪಂತೆಯುಂ – ನವರತಾ–ದಿಗಳಿನ್ +ಅಲಂಕರಿಪ + ಅಂತೆಯುಂ

ಸನ–ಣದೊಳಿರ್ದಂ – ಸನ–ಣದೊಳ್+ಇರ್ದಂ

ತಪ್ಪದೆಯ್ತುರುವರನರಸಂ – ತಪ್ಪದೆ +ಎಯ್ತುರುವರನ್ +ಅರಸಂ.

ಪೆಣ್ಣೋರ್ವಳೊರ್ವಂಗಲ್ಲದೆ – ಪೆಣ್+ಒರ್ವಳ್+ಒರ್ವಂಗೆ+ಅಲ್ಲದೆ.

ಇರ್ವರ್ಗಮಾಗದುಱಿಂ – ಇರ್ವರ್ಗಂ+ಆಗದುಱಿಂ

ಆದುದಱಿನಿವರೊಳಾರಪ್ಪರವರ – ಆದುದಱಿನ್+ಇವರೊಳ್+ಆರ್+ಅಪ್ಪರ್+ಅವರ

ಅಯ್ಯನಾಣತಿಯನಾಂತಣುಗಿ – ಅಯ್ಯನ+ಆಣತಿಯನ್+ಆಂತು+ಅಣುಗಿ.

ಸಹಚರಿಯರ್ವೆರಸು – ಸಹಚರಿಯರ್+ಬೆರಸು

ಮೆಲ್ಲನವರಿರ್ವರ – ಮೆಲ್ಲನೆ+ಅವರ್+ಇರ್ವರ

ಕಣ್ಬೊಗರನಿರ್ವರೊಳಂ – ಕಣ್ + ಪೊಗರನ್ + ಇರ್ವರೊಳಂ

ನೋಡುತುಸಿಕನಿರ್ದಳ್ – ನೋಡುತೆ + ಉಸಿಕನೆ + ಇರ್ದಳ್

ಪೆಱತೇನನೆಣ್ಣದಿರ್ – ಪೆಱತು + ಏನನ್ + ಎಣ್ಣದಿರ್

ಮನಬಂದವನನೊಲಿಸಿಕೊಳ್ವುದು – ಮನಬಂದವನನ್ + ಒಲಿಸಿಕೊಳ್ವುದು

ಎಂದಜಿಪಲಾಬಾಲೆ – ಎಂದು + ಅಜಿಪಲ್ + ಆ ಬಾಲೆ
ವಿಶಾಲಾಕ್ಷನುಮಾಜಾನುಬಾಹುವುಂ – ವಿಶಾಲ+ಅಕ್ಷನುಮ್+ಆಜಾನುಬಾಹುವುಂ
ತುಂಗೋರಸ್ಥಲನುಮಪ್ಪ – ತುಂಗ+ಉರಸ್ಥಲನುಮ್+ಅಪ್ಪ
ಪದ್ಮಲೋಚನಂಗಳಿನೆನ–ನೆ – ಪದ್ಮಲೋಚನಂಗಳಿನ್ + ಎನ–ನೆ
ಪಿಡಿಯಲೆಂಬೋಲ್ – ಪಿಡಿಯಲ್ + ಎಂಬ + ಓಲ್
ಕಂಡಂತುಸಿರಾ – ಕಂಡಂತೆ + ಉಸಿರಾ
ನುಡಿಗಿರ್ವರುಮಚ್ಚರಿವಡುತಾತ್ಮಗತ ಚಿಂತೆಯೊಳ್ – ನುಡಿಗೆ + ಇರ್ವರುಂ +
ಅಚ್ಚರಿವಡುತೆ + ಆತ್ಮಗತಚಿಂತೆಯೊಳ್
ಮಾಧವನಿನಲ್ಲದೆ – ಮಾಧವನಿನ್+ಅಲ್ಲದೆ
ಆತನವನಲ್ಲದೊಡೆ – ಆತನ್+ಅವನ್+ ಅಲ್ಲದೊಡೆ
ಮೊಗಮಿಂತೇಕಾಕೆಗೆ – ಮೊಗಮ್+ಇಂತು+ಏಕೆ+ಆಕೆಗೆ
ಆದೊಡೆನ–ತೇಕಿಂತು – ಆದೊಡೆ+ಎನ–ತು+ಏಕೆ+ಇಂತು
ನುಡಿಯುತಿರ್ದರ್ – ನುಡಿಯುತೆ+ಇರ್ದರ್
ಇಂತಿರಲಂಬರೀಷನವರ್ಗೆಱಗುತೆ – ಇಂತಿರಲ್+ ಅಂಬರೀಷನ್+ಅವರ್ಗೆ+ಎಱಗುತೆ
ಮರುಳ್ಗೊಳಲೇಗೆಯ್ದಿರ್ – ಮರುಳ್ + ಕೊಳಲ್ + ಏ + ಗೆಯ್ದಿರ್
ಬಂದಿರ್ಪಿರಾದೊಡೆ – ಬಂದಿರ್ಪಿರ್+ಆದೊಡೆ
ಮರುಳ್ಗೊಳಿಸಿದವರಾವಲ್ತು – ಮರುಳ್ಗೊಳಿಸಿದವರ್+ಆವು+ಅಲ್ತು
ಪೆಣ್ಣೆಮ್ಮನೊಲಿಯದೊಲೆಂತೋ – ಪೆಣ್ + ಎಮ್ಮನ್ + ಒಲಿಯದೊಲ್+ಎಂತೊ
ಕುವರಿಗೊರೆದೋ – ಕುವರಿಗೆ+ಒರೆದೋ
ಲಾಲಿಸುತಾಬಾಲೆ – ಲಾಲಿಸುತ+ಆ ಬಾಲೆ
ತವಸಿಗಳೊಳೊರ್ವಂಗೆ – ತವಸಿಗಳೊಳ್+ಒರ್ವಂಗೆ
ಅಂತವರೊಳೊರ್ವಂಗೆ – ಅಂತು + ಅವರೊಳ್ + ಒರ್ವಂಗೆ
ಮೋಹಿಸುತೊಡನಾತಂಗೆಯೆ – ಮೋಹಿಸುತೆ+ಒಡನೆ+ಆತಂಗೆಯೆ
ಬಾಲೆಯನುಯ್ದವನಾರೆಂದು – ಬಾಲೆಯನ್+ಉಯ್ದವನ್+ಆರ್+ಎಂದು
ವೈಕುಂಠಕೆಯ್ತರಲಿತ್ತಲ್ – ವೈಕುಂಠಕೆ + ಎಯ್ತರಲ್ + ಇತ್ತಲ್
ವಂಚಿತರಾದಾತವಸಿಗಳೀಗಳಿದೆಕೊಳ್– ವಂಚಿತರ್+ಆದ+ಆ+ತವಸಿಗಳ್+ಈಗಳ್+
ಇದೆಕೊಳ್
ಒಳು–ಡಿಯಿನೊಪ್ಪಂ ಬೂಸಿದೈ – ಒಳು –ಡಿಯಿನ್+ಒಪ್ಪಂ+ಪೂಸಿದೈ

## ಪದಗಳ ಅರ್ಥ

ಗಂಧೋದಕ – ಪರಿಮಳ ಭರಿತವಾದ ನೀರು. ಆಲಿಸು – ಕೇಳು. ಪತ್ತನ – ಪಟ್ಟಣ. ಗಡು – ಅವಧಿ. ಆಣೆಗೆಯ್ಯು – ಆಜ್ಞೆಮಾಡು. ಸನ–ಣ – ಸನಾ–ಹ; ಸಿದ್ಧತೆ. ಉಸಿರು–ಹೇಳು. ಅಯ್ಯ – ತಂದೆ. ಅಣುಗಿ – ಮಗಳು. ನಾಣ್ಚಿ – ನಾಚಿ. ಮೈಮೆ – ಮಹಿಮೆ. ಒರೆಯು – ಹೇಳು. ಸಾಜ – ಸಹಜ. ಉಸಿರನಿರ್ದಳ್ – ಮಾತನಾಡದೆ ಇದ್ದಳು. ಏಳಿಸು–ಅವಮಾನಿಸು. ಕಣ್ಬೊಗರ್ – ಕಣ್ಣಿನಕಾಂತಿ. ಕುಂದ ಕುಟ್ಮಲ – ದುಂಡು ಮಲ್ಲಿಗೆಯ ಮೊಗ್ಗು. ಪಿಡಿ – ಹೆಣ್ಣಾನೆ. ಸಹಚರಿ – ಗೆಳತಿ. ಪುಂಗವ – ಶ್ರೇಷ್ಠ. ಪೂಜಲ್ಲಿ – ಗೊಂಡೆಗಳುಳ್ಳ ಹೂವಿನ ಮಾಲೆ. ಸನಿಯ – ಸಮೀಪ; ಹತ್ತಿರ. ಬೇದ – ವೇದ. ಬಿಜ್ಜೆ – ವಿದ್ಯೆ. ಬೇದಬಿಜ್ಜೆಗ – ಬ್ರಹ್ಮ. ನಾಡಾಡಿ – ಸಾಮಾನ್ಯ. ಕಿತ್ತಡಿ – ತಪಸ್ವಿ. ಆಜಾನುಬಾಹು – ಮಂಡಿಯವರೆಗೆ ನೀಳವಾದ ತೋಳುಗಳು. ತುಂಗ – ಎತ್ತರ. ಉರ – ಎದೆ. ಕತ – ಕಾರಣ. ಕಾರ್ಮುಕ – ಬಿಲ್ಲು. ಒರೆದೋ – ಹೇಳಿದೆಯಾ. ಸಾಯಕ – ಬಾಣ. ಎನ–ತು – ಎನ–ದು. ನವರತ– – ೯ ರತ–ಗಳು : ವಜ್ರ; ಮಾಣಿಕ್ಯ; ಮರಕತ; ಪುಷ್ಯರಾಗ; ನೀಲ; ಗೋಮೇಧಿಕ; ವೈಢೂರ್ಯ; ಮುತ್ತು ಮತ್ತು ಹವಳ (ವಿದ್ರುಮ).

## ವಿಶದೀಕರಣ

ಱ ೞ – ಹಳೆಗನ–ಡದಲ್ಲಿ ಬಳಕೆಯಾಗುತ್ತಿದ್ದ ಈ ಅಕ್ಷರಗಳು ಈಗ ಬಳಕೆಯಲ್ಲಿಲ್ಲ. ಉಚ್ಚಾರದಲ್ಲಿ ನಿಂತು ಹೋದ ಈ ಅಕ್ಷರಗಳು ಕೆಲವು ಕಾಲದವರೆಗೆ ಬರವಣಿಗೆಯಲ್ಲಿ ಉಳಿದುಕೊಂಡಿದ್ದವು. ಬಳಿಕ ಮರೆಯಾದುವು. 'ೞ' ಅಕ್ಷರವು 'ಳ' ದೊಂದಿಗೂ 'ಱ' ಅಕ್ಷರವು 'ರ' ದೊಂದಿಗೂ ಲೀನವಾದವು. ಉಚ್ಚಾರ ಕಳೆದುಕೊಂಡು ಬರವಣಿಗೆಯಲ್ಲಿ ಮಾತ್ರ ನಿಂತಾಗ ಅವುಗಳನು– ಗುರುತಿಸುವುದಕ್ಕೆ ಬೇರೆ ಬೇರೆ ಹೆಸರುಗಳನು– ಕೊಡುವುದು ಅಗತ್ಯವಾಯಿತು. ಹೀಗೆ 'ೞ' ಕ್ಕೆ 'ಱ ಳ' ಎಂದೂ 'ಱ' ಕ್ಕೆ ಶಕಟ ರೇಫ ಅಥವಾ ಬಂಡಿಯ ಱ ಎಂದೂ ಹೆಸರಾಯಿತು. ಇದರ ಜತೆಗೆ ಅಚ್ಚಕನ–ಡ ಶಬ್ದಗಳಲ್ಲಿರುವ 'ಳ' ಕ್ಕೆ ಕುಳವೆಂದೂ ಸಂಜ್ಞೆ ಬಂದಿತು.

ರಳ, ಕುಳ, ಕ್ಷಳ ಗಳಿಗೆ ಉದಾಹರಣೆಗಳು –

'ಱ ಳ' – ಮೞೆ (ಮಳೆ), ಕೊೞೆ (ಕೊಳೆ)

ಕುಳ – ಬೆಳೆ, ತಿಳಿ

ಕ್ಷಳ– ನಳಿನ (ಸಂ – ನಲಿನ), ಕಾಳಿದಾಸ (ಸಂ – ಕಾಲಿದಾಸ)

ಕನ–ಡ ಪದಗಳಲ್ಲಿರುವ 'ಲ' ಕಾರದ ಸ್ಥಾನದಲ್ಲಿ 'ಳ'ಕಾರವನು– ಬಳಸಿದರೆ ಅರ್ಥ ಬೇರಾಗುವುದು. ಉದಾಹರಣೆಗಳಿಂದ ಇವೆಲ್ಲವನೂ– ಸ್ಪಷ್ಟಪಡಿಸಬಹುದು.

ಱ/ರ ಅಱಿ– ತಿಳಿ : ಅರಿ– ಕತ್ತರಿಸು

ನೆಱೆ– ತುಂಬು : ನೆರೆ–ಸೇರು

ಅಱೆ –ಬಂಡೆ : ಅರೆ–ಅರ್ಧ

ೞ/ಳ ಬಾೞ್– ಜೀವನ : ಬಾಳ್– ಕತ್ತಿ

ಪೊೞೆ – ನದಿ : ಪೊಳೆ – ಪ್ರಕಾಶಿಸು

ಕೞಿ– ಸಾಯು : ಕಳಿ – ಹಣ್ಣಾಗು

ಲ/ಕ್ಷಳ ಕಮಲ – ಕಮಳ

ಬಕುಲ – ಬಕುಳ

ಸಕಲ – ಸಕಳ

ಸಂಸ್ಕೃತ ಪದಗಳ ಲ ಕಾರದ ಸ್ಥಾನದಲ್ಲಿ ಬರುವ ಳಕಾರವು ಕ್ಷಳ. ಹೀಗೆ ಕ್ಷಳ ಬಂದಾಗ ಆ ಪದದ ಅರ್ಥದಲ್ಲಿ ವ್ಯತ್ಯಾಸವಾಗುವುದಿಲ್ಲ.

ಕನ–ಡದಲ್ಲಿ ಲ/ಳ ಬಳಕೆಯಿಂದ ಅರ್ಥ ಬೇರೆಯಾಗುವುದಕ್ಕೆ ಉದಾಹರಣೆ.

ಉದಾ : ಎಲೆ – ಎಳೆ

ಮಲೆ – ಮಳೆ

ಕೊಲೆ – ಕೊಳೆ

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಅಂಬರೀಷನು ತನ– ಮಗಳ ಮದುವೆಗೆ ಪಟ್ಟಣವನು– ಹೇಗೆ ಅಲಂಕರಿಸಬೇಕೆಂದು ಆಣತಿಯಿತ್ತನು?
- ಸ್ವಯಂವರ ಮಂಟಪಕ್ಕಾಗಮಿಸಿದ ಮಗಳಿಗೆ ಅಂಬರೀಷನು ನೀಡಿದ ಸೂಚನೆಯೇನು?
- ಸ್ವಯಂವರಕ್ಕೆ ಆಗಮಿಸಿದವರ ಪ್ರಾವೀಣ್ಯವನು– ಅಂಬರೀಷನು ಪರಿಚಯಿಸಿದಾಗ ಶ್ರೀಮತಿಯ ಪ್ರತಿಕ್ರಿಯೆ ಹೇಗಿತ್ತು? ವಿವರಿಸಿರಿ.
- ಕುವರಿಯ ಮಾತಿನಿಂದ ನೊಂದ ಋಷಿಗಳನು– ಅಂಬರೀಷನು ಸಾಂತ್ವನಪಡಿಸಲು ಮುಂದಾದಾಗ ಅವರ ಪ್ರತಿಕ್ರಿಯೆ ಏನಾಗಿತ್ತು?
- ಶ್ರೀಮತಿಯು ಋಷಿಗಳಲ್ಲಿ ಒಬ್ಬನನು– ವರಿಸುವೆನೆಂದು ಆ ಕ್ಷಣದಲ್ಲಿ ತೀರ್ಮಾನಿಸಲು ಕಾರಣವೇನು?
- 'ನೀನೆನ–ಂತರಂಗದೊಳ್ ಗುಪ್ತಳಾಗು' – ಈ ಮಾತನು– ಯಾರು ಯಾರಿಗೆ ಹೇಳಿದರು? ಸಂದರ್ಭ ಸಹಿತ ವಿವರಿಸಿರಿ.
- ಸಿರಿಯರಸನ ಬಳಿಗೆ ಬಂದ ಮೊದಲನೆಯ ಮುನಿ ಏನೆಂದು ನುಡಿದನು?

## ಚಟುವಟಿಕೆಗಳು

- ಮುನಿಗಳು ಮತ್ತು ಸಿರಿಯರಸನ ನಡುವೆ ನಡೆದ ಮಾತುಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆದು ತರಗತಿಯಲ್ಲಿ ಪ್ರಸ್ತುತ ಪಡಿಸಿರಿ.
- ಗದ್ಯಭಾಗದಲ್ಲಿ ಅಡಕವಾದ ಕಥೆಯ ಸಾರಾಂಶವನ್ನು ಬರೆಯಿರಿ.
- ನಾರದ ಮತ್ತು ಪರ್ವತರೆಂಬ ಮುನಿಗಳು ಒಬ್ಬರನ್ನೊಬ್ಬರು ವಂಚಿಸಿದ ಕಥಾಭಾಗವನ್ನು ಹೊಸಗನ್ನಡದಲ್ಲಿ ಬರೆಯಿರಿ.

## ಭಾಷಾಭ್ಯಾಸ

ಮಂಡಪವೂ ತೋರಣವೂ ಧ್ವಜವೂ ಪತಾಕೆಯೂ – ಮಂಡಪತೋರಣ ಧ್ವಜ ಪತಾಕೆಗಳು. ಈ ಪದ ಸಮೂಹವನ್ನು ಗಮನಿಸಿ. ಒಂದಕ್ಕಿಂತ ಹೆಚ್ಚು ನಾಮಪದಗಳು ಸೇರಿ ಒಂದು ಸಮಸ್ತ ಪದವಾಗಿದೆ. ಇಂತಹ ಸಮಾಸವನ್ನು ದ್ವಂದ್ವ ಸಮಾಸ ಎನ್ನುವರು. ಇಲ್ಲಿ ಎಲ್ಲ ಪದಗಳೂ ಸಮಾನವಾದ ಅರ್ಥ ಪ್ರಾಶಸ್ತ್ಯವನ್ನು ಪಡೆದಿರುತ್ತವೆ.

ಈ ರೀತಿಯ ಸಮಾಸ ಪದಗಳನ್ನು ನೀವು ಓದಿದ ಪಾಠಗಳಿಂದ ಆಯ್ದು ಪಟ್ಟಿ ಮಾಡಿರಿ. ಅವುಗಳ ವಿಗ್ರಹವಾಕ್ಯ ಬರೆಯಿರಿ.

- ಮಾತಾಡಿದರ್, ಮಾತಾಡಿದಪರ್, ಮಾತಾಡುವರ್ – ಇಲ್ಲಿ ದ, ದಪ, ವ ಎಂಬ ಪ್ರತ್ಯಯಗಳನ್ನು ಕಾಣಬಹುದು. ಇವುಗಳನ್ನು ಕಾಲಸೂಚಕ ಪ್ರತ್ಯಯಗಳೆಂದು ಕರೆಯುತ್ತಾರೆ. ಇದೇ ರೀತಿಯ ಕಾಲಸೂಚಕ ಪ್ರತ್ಯಯಗಳು ಸೇರಿಕೊಂಡಿರುವ ಇತರ ಪದಗಳನ್ನು ಪಾಠಭಾಗದಿಂದ ಆಯ್ದು ಪಟ್ಟಿಮಾಡಿರಿ.
- ಸೊಗಸುಳ್ಳವರ್, ಸರಿಮಿಗಿಲೆನಿಪರ್ – ಇಲ್ಲಿ 'ಅರ್' ಬಹುವಚನ ಪ್ರತ್ಯಯವಾಗಿದೆ. ಇಂತಹ ಬಹುವಚನ ಪ್ರತ್ಯಯದಿಂದ ಕೊನೆಗೊಳ್ಳುವ ಪದಗಳನ್ನು ಪಟ್ಟಿಮಾಡಿರಿ.

## ಸಂಸ್ಕೃತ – ತದ್ಭವ

| | | |
|---|---|---|
| ಪಟ್ಟಣ | – | ಪತ್ತನ |
| ಸುಖ | – | ಸೊಗ |
| ವೀಥಿ | – | ಬೀದಿ |
| ಆಜ್ಞೆ | – | ಆಣೆ |
| ಸ್ನಾನ | – | ಸನ್ನಣ |
| ಋಷಿ | – | ರಿಸಿ |
| ಧ್ಯಾನ | – | ಜಾನ |

## ಹೆಚ್ಚಿನ ಓದಿಗೆ

ಮುದ್ದಣ ಕವಿಯ ಅದ್ಭುತ ರಾಮಾಯಣಂ –(ಸಂ) ಎಸ್.ವಿ.ಪರಮೇಶ್ವರ ಭಟ್ಟ

ಮುದ್ದಣ ನಮನ – (ಸಂ) ಜಯರಾಮ ಕಾರಂತ

## ಘಟಕ ಮೌಲ್ಯಮಾಪನ

1. ಕನ–ಡದ ಆದಿಕವಿ ಯಾರು?
2. ಅದ್ಭುತ ರಾಮಾಯಣ – ಇದು ಯಾರ ಕೃತಿ?
   (ಲಕ್ಷ್ಮೀಶ, ಮುದ್ದಣ, ಹರಿಹರ, ರತಾ–ಕರವರ್ಣಿ)
3. ವಸತಿ – ಈ ಪದದ ತದ್ಭವ ರೂಪ ಯಾವುದು?
4. ಕಾರ್ಮುಕ – ಈ ಪದದ ಅರ್ಥವೇನು?
5. ಶ್ರೀಮತಿಯ ಸ್ವಯಂವರಕ್ಕೆ ಪಟ್ಟಣವನು– ಯಾವ ರೀತಿ ಅಲಂಕರಿಸಿದ್ದರು?
6. ಶಿಶುಪಾಲನ ತಾಯಿ ಶ್ರೀಕೃಷ್ಣನಲ್ಲಿ ಏನೆಂದು ಕೇಳಿಕೊಂಡಳು?
7. ಸ್ವಯಂವರಕ್ಕೆ ಆಗಮಿಸಿದ ಋಷಿಗಳನು– ಶ್ರೀಮತಿಯು ವರಿಸದಿರಲು ಕಾರಣವೇನು?
8. ಶ್ರೀಕೃಷ್ಣನು ಅಗ್ರಪೂಜೆಗೆ ಅರ್ಹನೆಂಬುದಕ್ಕೆ ಭೀಷ್ಮರು ಯಾವೆಲ್ಲಾ ಕಾರಣಗಳನು– ನೀಡಿದರು?
9. ಕೆಳಗೆ ನೀಡಲಾದ ಸಾಲಿಗೆ ಪ್ರಸ್ತಾರ ಹಾಕಿ, ಗಣವಿಭಜನೆ ಮಾಡಿ, ಛಂದಸ್ಸನು– ಹೆಸರಿಸಿರಿ.

   ಬಲಿಯಂ ಕಟ್ಟಿದನಾವನೀಧರಣಿಯಂ ವಿಕ್ರಾಂತದಿಂದಂ ರಸಾ
10. ಶ್ರೀಕೃಷ್ಣನು ಅಗ್ರಪೂಜೆಗೆ ಆಯ್ಕೆಯಾದಾಗಿನ ಶಿಶುಪಾಲನ ಪ್ರತಿಕ್ರಿಯೆಯನು– ವಿವರಿಸಿರಿ.


# ನಡುಗನ್ನಡ ಕಾವ್ಯಸೌರಭ

ಸುಮಾರು ೧೨ನೇ ಶತಮಾನದಿಂದ ೧೯ನೇ ಶತಮಾನದ ಕೊನೆಯ ವರೆಗಿನ ವಿಸ್ತಾರವಾದ ಕಾಲಘಟ್ಟವನ್ನು ‘ನಡುಗನ್ನಡ ಯುಗ’ ಎಂದು ಕರೆಯುತ್ತೇವೆ. ವಚನ, ರಗಳೆ, ಷಟ್ಪದಿ, ಸಾಂಗತ್ಯ, ಕೀರ್ತನೆ ಇವುಗಳು ಈ ಯುಗದ ಕಾವ್ಯ ಪರಂಪರೆಯನ್ನು ವಿಪುಲಗೊಳಿಸಿವೆ. ಈ ಕಾಲಘಟ್ಟದ ಕಾವ್ಯಗಳು ದೇಸೀನಿಷ್ಠೆ ಮೆರೆದದ್ದನ್ನು ಗಮನಿಸಬಹುದು. ಧಾರ್ಮಿಕ ವಿಚಾರಗಳಿಗಿಂತಲೂ ಸಾಮಾಜಿಕ ನ್ಯಾಯದ ಕುರಿತಾದ ಹೋರಾಟವು ಹೆಚ್ಚು ಪ್ರಾಬಲ್ಯ ಪಡೆದು ಬಂದುದು. ಈ ಕಾಲಘಟ್ಟದ ವಿಶೇಷತೆಯಾಗಿದೆ.

ಈ ಕಾಲದ ಬಸವಣ್ಣ, ಹರಿಹರ, ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿ, ಲಕ್ಷ್ಮೀಶ, ತಿಮ್ಮಣ್ಣ ಕವಿ, ಷಡಕ್ಷರ ದೇವ, ಚಾಟುವಿಠಲನಾಥ, ಪುರಂದರದಾಸ, ಕನಕದಾಸ, ಸಂಚಿಯ ಹೊನ್ನಮ್ಮ ಮೊದಲಾದ ಕವಿಗಳಿಂದ ರಚಿತವಾದ ಕೃತಿಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದವು.

ನಡುಗನ್ನಡ ಕಾಲಘಟ್ಟದಲ್ಲಿ ಬಂದ, ರಗಳೆ, ಷಟ್ಪದಿ ಹಾಗೂ ಸಾಂಗತ್ಯವನ್ನು ಪರಿಚಯಿಸುವುದಕ್ಕೋಸ್ಕರ ಹರಿಹರನ ‘ಇಳೆಯಾಂಡಗುಡಿಮಾರರ ರಗಳೆ’, ಲಕ್ಷ್ಮೀಶನ ಜೈಮಿನಿ ಭಾರತದಿಂದ ಆಯ್ದ ‘ಉಲ್ಲಂಘಿಸುವರುಂಟೆ ವಿಧಿಕೃತವನು’, ರತ್ನಾಕರವರ್ಣಿಯ ‘ಭರತೇಶ ವೈಭವ’ ಕಾವ್ಯದಿಂದ ಆಯ್ದ ‘ಧರೆ ಮೆಚ್ಚದಣ್ಣ ಸೋದರರ ಕಾಳಗಕೆ’ ಎಂಬ ಭಾಗಗಳನ್ನು ಇಲ್ಲಿ ಕೊಡಲಾಗಿದೆ.

ದಾನಶೀಲತೆ, ಅತಿಥಿ ಸತ್ಕಾರ, ವೃದ್ಧರನ್ನು ಗೌರವಿಸುವುದು ಇಳೆಯಾಂಡಗುಡಿಮಾರರ ರಗಳೆಯ ಮುಖ್ಯ ಆಶಯವಾಗಿ ಮೂಡಿದರೆ, ವಂಚನೆ, ಮೋಸಗಳಿಗೆ ಯಾವುದೇ ಸತ್ಫಲ ಸಿಗಲಾರದು ಎಂಬುದನ್ನು ಕವಿ ಲಕ್ಷ್ಮೀಶ ಚಂದ್ರಹಾಸನ ಕತೆಯ ಮೂಲಕ ವ್ಯಕ್ತಪಡಿಸುತ್ತಾನೆ. ಸಹೋದರ ಪ್ರೇಮ, ಶಾಂತಿ ಮಂತ್ರಗಳು ರತ್ನಾಕರ ವರ್ಣಿಯ ಕಾವ್ಯಭಾಗದಲ್ಲಿ ಪ್ರತಿಪಾದಿತವಾಗಿವೆ.



## ಕಲಿಕಾ ಸಾಧನೆಗಳು

- ನಡುಗನ್ನಡ ಕಾಲದ ಕಾವ್ಯ ಪ್ರಕಾರಗಳಾದ ರಗಳೆ, ಸಾಂಗತ್ಯ, ಷಟ್ಪದಿ ಕೃತಿಗಳನ್ನು ಅಧ್ಯಯನ ಮಾಡಿ, ಆಶಯಗಳನ್ನು ತಿಳಿದು, ಸೂಕ್ತ ಸಂದರ್ಭಗಳಲ್ಲಿ ಬಳಸಲು ಸಮರ್ಥರಾಗುವರು.
- ನಡುಗನ್ನಡ ಕವಿಗಳ ದೃಷ್ಟಿಕೋನಗಳನ್ನು ವಿಶ್ಲೇಷಿಸಿ ಅಲ್ಲಿನ ಆಶಯವನ್ನು ಗುರುತಿಸಿ ಬರಹಗಳಲ್ಲಿ ಸೂಕ್ತವಾಗಿ ನಿರೂಪಿಸುವರು.
- ನಡುಗನ್ನಡ ಕಾವ್ಯಗಳನ್ನು ಹಾಡುವ ವಿಧಾನವನ್ನು ತಿಳಿದುಕೊಂಡು ಸ್ವರಭಾರದೊಂದಿಗೆ ಹಾಡುವರು.
- ನಡುಗನ್ನಡ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿ ಅವುಗಳಲ್ಲಿ ಮೂಡಿಬಂದಿರುವ ಸಾಮಾಜಿಕ ಜೀವನ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುವರು.
- ನಡುಗನ್ನಡ ಕಾಲದ ಸಾಮಾಜಿಕ ಬದುಕಿನ ವೈಶಿಷ್ಟ್ಯವನ್ನು ಗುರುತಿಸಿಕೊಂಡು ಸಮಕಾಲೀನ ಪರಿಸ್ಥಿತಿಯೊಂದಿಗೆ ಅನ್ವಯಿಸಿ ಲೇಖನವನ್ನು ತಯಾರಿಸುವರು.
- ಕಾವ್ಯಗಳಲ್ಲಿ ಬಳಕೆಯಾದ ಛಂದೋಪ್ರಕಾರಗಳನ್ನು ಗುರುತಿಸಿ, ಅದರ ವೈಶಿಷ್ಟ್ಯಗಳನ್ನು ತಿಳಿದುಕೊಂಡು ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ಬಳಸಲು ಸಮರ್ಥರಾಗುವರು.
- ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಹಳೆಗನ್ನಡ, ನಡುಗನ್ನಡ ಕೃತಿಗಳ ಹಿನ್ನೆಲೆಯಲ್ಲಿ ಗುರುತಿಸಿಕೊಂಡು ಆ ಬಗೆಗೆ ತಮ್ಮ ನಿಲುವುಗಳನ್ನು ಪ್ರಕಟಿಸುವರು.

# ಇಳೆಯಾಂಡಗುಡಿಮಾರ


**ಹರಿಹರ**

ಅತಿಥಿ ಸತ್ಕಾರ, ದಾನಶೀಲತೆ, ವೃದ್ಧರ ಬಗೆಗಿನ ಗೌರವ ಇವು ಭಾರತದ ಸಂಸ್ಕೃತಿಯ ರೂಢಮೂಲವಾದ ಗುಣವಾಗಿದ್ದುವು. ಅವನ್ನು ಭಕ್ತಿಯೊಂದಿಗೆ ಸಮನ್ವಯಗೊಳಿಸಿ ಹೇಳಿದ ಕ್ರಮವನ್ನು ಹರಿಹರನ ಇಳೆಯಾಂಡಗುಡಿಮಾರನ ರಗಳೆಯಲ್ಲಿ ಕಾಣಬಹುದು. ಶಿವಭಕ್ತರಿಗೆ ಶಿವಭಕ್ತಿ ಬೇರೆಯಲ್ಲ ಜಂಗಮ ಭಕ್ತಿ ಬೇರೆಯಲ್ಲ. ಕಾಯಕವನ್ನೂ ಶಿವಭಕ್ತಿಯನ್ನೂ ಅತ್ಯಂತ ಶ್ರದ್ಧೆಯಿಂದ ಭಕ್ತನಾದ ಇಳೆಯಾಂಡಗುಡಿಮಾರನು ಹೇಗೆ ನಿಭಾಯಿಸುತ್ತಾನೆಂಬುದನ್ನು ಈ ಕಾವ್ಯಭಾಗದಲ್ಲಿ ಚಿತ್ರಿಸಲಾಗಿದೆ. ಭಕ್ತಿ ನಿರ್ಭರವಾದ ಸಾಲುಗಳಲ್ಲಿ ಭಕ್ತಿ ಮತ್ತು ಕೃಷಿಯನ್ನು ಮೇಳೈಸಿಕೊಂಡು ನವಿರಾದ ಹಾಸ್ಯದೊಂದಿಗೆ ನಿರೂಪಿಸಲಾಗಿದೆ. ಹರಿಹರನ ವರ್ಣನಾ ಕೌಶಲವನ್ನು ಪ್ರಸ್ತುತ ಭಾಗದಲ್ಲಿ ಕಾಣಬಹುದಾಗಿದೆ.

ಇಂದುಧರ ನಿಮ್ಮ ಬೆರಸಿ
ರ್ದಂದಿನ ಇಳೆಯಾಂಡಗುಡಿಯಮಾರನ ಚರಿತವ
ಸಂದಣಿಪ ವಚನರಚನೆಗ
ಳಿಂದಂ ಕೇಳಯ್ಯ ಹಂಪೆಯ ವಿರೂಪಾಕ್ಷಾ

ಶ್ರೀಶಿವನ ಸೆಜ್ಜೆಯೆನಿಸಿದ ಚೋಳದೇಶದೊಳು
ಭಾಸುರಮೆನಲ್ಕೆಱೆವುದೊಂದು ಪುರವೊಪ್ಪದೊಳು
ಇಳೆಯಾಂಡಗುಡಿಯೆಂಬುದದಱೊಳನುರಾಗದಿಂ
ಇಳೆಯಾಂಡಗುಡಿಮಾರನಾರೆಂಬ ನಾಮದಿಂ
ಎಸೆದಿರ್ಪನೊರ್ವ ಭಕ್ತಂ ಶಿವನ ಒಲ್ಮೆಗಂ
ವಸುಧೆಗೊಪ್ಪುವ ಮಹಾದೇವನೊಕ್ಕಲ ಮಗಂ

ಇಂತಿರ್ದು ಶಿವನನರ್ಚಿಸಲೆಂದು ಮನದಂದು
ಸಂತತಂ ಶರಣರಿಚ್ಛೆಯನೆ ಸಲಿಸಲ್ಕೆಂದು
ಸಮಚಿತ್ತವೆಂಬ ಭೂಮಿಯನು ಹಸನಾಗಿರಿಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ ೧೦



ಅರಿಷಟ್ಕಮಂ ತಂದು ಹೂಡುವೆತ್ತಂ ಮಾಡಿ
ಹರಿವ ಮನವಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಪ್ಪಹಂಕಾರಮುಮನಚ್ಚುವಂ ಮಾಡಿ
ಸರ್ವೇಶನಿಷ್ಠೆಯಂ ತಳಿವ ಬೀಜಂ ಮಾಡಿ
ಸುರುಚಿರ ಶಿವಜ್ಞಾನ ಶಶಿಕರಂ ಸೋಂಕುತಿರೆ
ಹರನ ಪರಮಾನಂದರಸದ ಮಳೆ ಕೊಳುತಮಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿಸಸಿಗಳಂ
ಕಿತ್ತು ಕಳೆವಂ ಕ್ಷುತ್ಪಿಪಾಸಾದಿ ಕಳೆಗಳಂ

ಇಂತು ತನ್ನೊಳಗೆ ಭಕ್ತ್ಯಾರಂಬವಂ ಮಾಳ್ಪ
ನಂತೆಲ್ಲರಱಿಯೆ ಪೊಱಗಾರಂಬವಂ ಮಾಳ್ಪ
ನೆನಿತು ಭಕ್ತರ್ಬಂದೊಡನಿತು ಹೊರೆಯೇಱುವಂ
ಮನದೊಳಗೆ ಪೆರ್ಚೆ ಕಿಂಕರತೆಯಂ ತೋಱುವಂ
ಧರೆಯೆನಿತನಿತು ಭೂಮಿ ತನಗುಂಟದಱಬೆಳೆಸ
ನುರವಣಿಸಿ ಶರಣತತಿಗೀವನಿನಿತಕ್ಕೆಳಸ
ನೊಳ್ಳಿತಂ ಸೊಗಸಿತಂ ಶಿವನ ಭಕ್ತರ್ಗೀವ
ನುಳ್ಳುದಂ ನವ್ಯಮಂ ಶಿವನ ಭಕ್ತರ್ಗೀವ
ನೆಲ್ಲ ತೇಜಂಗಳಂ ಶರಣತತಿಗೀವುತಂ
ಎಲ್ಲ ಮಾನ್ಯಂಗಳಂ ಭಕ್ತರ್ಗೆ ಸಾರ್ಚುತಂ

ಇಂತು ಜಂಗಮಕೆ ಮಾಳ್ಪುದು ಕರಂ ಪಿರಿದಾಗೆ
ಸಂತತಂ ಭಕ್ತ ಕುಲವಱಿದು ಸಂತಸವಾಗೆ
ನೆರೆಯತೊಡಗಿತ್ತು ಹರಶರಣಕುಲವರ್ತಿಯಿಂ
ಬರುತಲಿರ್ದುದು ಭೂತಳದ ಭಕ್ತರೊಲ್ಮೆಯಿಂ
ಮೇರೆದಪ್ಪಿದ ವಾರ್ಧಿಯೆಂತಂತೆ ಕವಿವುತಿರೆ
ಧೀರನೋಸರಿಸಂ ಮಹಾಗಣಂ ಪೊಗಳುತಿರೆ
ತನ್ನರ್ಥಮುಂ ತೀರೆ ಭಕ್ತರ್ಗೆ ನೆಱೆ ಮಾಡಿ
ಇನ್ನುಳ್ಳುದೇನೆಂದು ನೆನೆದು ಭಕ್ತಂ ನೋಡಿ
ಮಾಱಿ ಶರಣರ್ಗೆ ತನ್ನುಳ್ಳನಿತು ಭೂಮಿಯಂ
ಬೀಱುತಿರ್ದಂ ಶರಣಜನದ ಮನದರ್ತಿಯಂ
ಎನಿತೆನಿತು ಭೂಮಿ ಕ್ರಮದಿಂ ಮಾಱಿ ಕಿಱಿದಾಗೆ

ಅನಿತನಿತು ತನ್ನಯ ಮನಂ ಹೆಚ್ಚಿ ಹಿರಿದಾಗೆ
ಇತ್ತನೆಲ್ಲಾ ಭೂಮಿಯಂ ಮಾಱಿ ಭಕ್ತರ್ಗೆ
ಚಿತ್ತದೊಳು ಹೆಚ್ಚಿ ಹಿಗ್ಗುತ್ತೆ ಶಿವನಣುಗರ್ಗೆ
ಕುಡುತಲಿರೆ ಭೂಮಿ ತೀರಲ್ ತೀರ್ದೊಡೇನೆಂದು
ಕಡುಚಾಗಿ ತೋಟವಂ ಮಾಱಿತೊಡಗಿದನಂದು
ಅದು ತೀರೆ ತನ್ನ ಮನೆಯೊಳಗರ್ಥವಂ ಮಾಱಿ
ಸದಮಳ ಶಿವಾತ್ಮರ್ಗೆ ಕೊಟ್ಟನುತ್ಸವವೇಱಿ

ಇಂತು ಕೊಡುತಿರೆ ಮಿಕ್ಕುದಂತೊಂದು ಕೋಲ್ನೆಲಂ
ಸಂತತಂ ಶಿವಭಕ್ತಿ ಬೀಜವಿಕ್ಕುವ ನೆಲಂ
ಆ ನೆಲದೊಳುಳ್ಳುದೊಮ್ಮನ ಬೀಜವಂ ತಳಿದು
ಏನಾದುದಂ ಕೊಂಡು ಬಂದು ಹರ್ಷಂದಳೆದು
ಅಲ್ಲಿ ಭಕ್ತರ್ಬಂದೊಡುಳ್ಳುದಂ ಹಂಚಿಕ್ಕಿ
ಸಲ್ಲೀಲೆವೆಚ್ಚಿ ಪರಮಾನಂದದಿಂದುಕ್ಕಿ
ಮತ್ತೆ ಶರಣರ್ ಬಂದೊಡುಟ್ಟುದಂ ಪೊದೆದುದಂ
ಉತ್ತಮ ಶಿವಾಚಾರಿ ಕೊಟ್ಟಪ್ಪನುಳ್ಳುದಂ
ಸತಿಗೊಂದು ಕಪ್ಪಡಂ ತನಗೊಂದು ಕೋವಳಂ
ಸುತನೆನಿಸಿದಂಗೆ ಮತ್ತಂತೊಂದು ಕೋವಳಂ
ಮೂವರುಂ ನಿಂದಿರ್ಪನಿತೆ ತನಗೆ ಮನೆಯುಳಿಯೆ
ಈವೊಡಂತೇನುಮಿಲ್ಲದೆ ನಿಜದ ಮನವುಳಿಯೆ

ಧನಮಿಲ್ಲದಿರ್ದೊಡೇಂ ಧಾನ್ಯಮಿಲ್ಲದೊಡೇನೊ
ಮನೆಯಿಲ್ಲದೊಡಮೇನೊ ಏನುಮಿಲ್ಲದೊಡೇನೊ
ತನುವಿರ್ದಪುದು ಇದಱೊಳರ್ಧಮಂ ಕೊಟ್ಟಪೆಂ
ಮನಮಿರ್ದಪುದು ಮನದೊಳರ್ಧಮಂ ಕೊಟ್ಟಪೆಂ
ಎರಡು ಕಣ್ಣಿವೆ ಎರಡಱೊಳಗೊಂದನಿತ್ತಪೆಂ
ಹರಣಮಿದೆ ಹರಣದೊಳಗರ್ಧಮಂ ಕೊಟ್ಟಪೆಂ
ಎಂದು ಶರಣರ್ಗೀವ ಚಿಂತೆಯಂ ಚಿಂತಿಸುತೆ
ಅಂದು ತನಗೇನಾದೊಡಂ ಕೊಡಲು ಚಿಂತಿಸುತೆ

ಇಂತು ತೊಂಬತ್ತಯ್ದು ವರುಷಂಬರಂ ಮಾಡೆ
ಚಿಂತಿಸಿದನೀಶ್ವರಂ ತನ್ನೊಳೊಂದಂ ನಾಡೆ
ಈ ಭಕ್ತನಂ ಮನವನೊರೆದು ನೋಡುವೆನೆಂದು
ವೈಭವಂ ಮಿಗೆ ನೋಡಿ ಕೊಂಡೊಯ್ವೆ ನಾನೆಂದು
ಅಳವಡಿಸಿಕೊಂಡನೊಲವಿಂದೊಂದು ಚೋಹಮಂ
ಇಳೆಗೆ ಮಿಗೆ ಪೊಸತೆನಿಪ ಶತವೃದ್ಧ ಭಾವಮಂ
ಶಿರದ ನರೆ ಮೆಯ್ಯ ತೆರೆ ಕಯ್ಯ ಕೋಲಿಂದೆಸೆಯೆ
ಸುರುಳ್ದ ತನು ನಳಿತ ಬೆನ್ ಜೋಲ್ವ ಪುರ್ವಿಂದೆಸೆಯೆ
ಇಳೆಯಾಂಡಗುಡಿಯ ಹತ್ತಿರೆ ನಟ್ಟಿರುಳು ಬಂದು
ಜಳದಂಗಳಂ ನೆನೆದನದ್ಭುತ ಮಿಗಲ್ಕಂದು
ನೆನೆಯೆ ತುಂಬಿದವು ನಭವಂ ಮೇಘ ಸಂಕುಲಂ
ತನತನಗೆ ತೀವಿ ತೀಡಿತು ಬಲಾಹಕಕುಲಂ
ಗಗನಂ ಘನೀಭೂತಮಾದುದೆಂಬಂದದಿಂ
ಮಿಗೆ ತೀವಿ ಸೂಸಿದವು ಸಲಿಲಮುತ್ಸಾಹದಿಂ
ಮಳೆ ಕಱೆದುದಾಗಸಂ ಜಳವಾದುದೆಂಬಂತೆ
ಇಳೆ ಜಲದ ಮೇಲೆ ತೇಂಕಾಡುತಿದೆಯೆಂಬಂತೆ
ಬಂದ ಮಳೆಯೊಳು ಕವಿದ ಕತ್ತಲೆ ಕರಂ ಹೆಚ್ಚೆ
ಸಂದಣಿಸಿ ದಿಗುಮುಖಂಗಿಡಿಸಿ ಜಗಮಂ ಮುಚ್ಚೆ

ಇಂತಿಡಿದ ಕತ್ತಲೆಯೊಳಭವನೂರಂ ಪೊಕ್ಕು
ತುಂತುರ್ವನಿಗಳೊಳಗೆ ನಡುಗುತ್ತೆ ಮೈವೊಕ್ಕು
ಇಳೆಯಾಂಡಗುಡಿಮಾರನವರ ಮನೆಗೆಯ್ತಂದು
ಚಳಿ ಹತ್ತಿ ಮಳೆಯೊಳಗೆ ಘಾಸಿಯಾಗುತೆ ಬಂದು
ನಡುಗಿ ಹಲುಹಱೆಗುಟ್ಟಿ ಬಾಗಿಲೊಳು ನಿಂದಿರಲು
ಕಡುಶೀತದಿಂದಳುಕಿ ಬಳುಕುತಂ ಬಂದಿರಲು
ಒಳಗೆ ಚಳಿ ಹತ್ತಿದಿಳೆಯಾಂಡಗುಡಿಮಾರರಿರೆ
ಬಳಲುತಂ ಮೂಱುಪಾಸದಿ ಮನಂಗುಂದದಿರೆ
ಹಾಸಲುಂ ಹೊದೆಯಲುಂ ಹರನಾಮವೇಯವರ್ಗೆ
ಆಸುರದ ಚಳಿಗೆ ಮಱೆಯೀಶನಾಮವೆಯವರ್ಗೆ
ಒಳಗೆ ಭಾಳೇಕ್ಷಣನ ನೆನಹು ತೀವಿರೆ ಕರಂ
ಚಳಿವೊದ್ದದವರನೆಂತಿರ್ದೊಡಂ ಭಕ್ತರಂ

ಇರಲವರ ಮನೆಯ ಬಾಗಿಲ ಹತ್ತೆ ಸಾರುತ್ತೆ
ಹರಹರ ನಮಃ ಶಿವಾಯೆಂದು ದನಿದೋಱುತ್ತೆ
ನಿಲೆ ಕೇಳುತಿಳೆಯಾಂಡಗುಡಿಮಾರನಾರೆಂದು
ಎಲೆಲೆ ಎನ್ನಾಳ್ದರು ಬಳಲ್ವ ದನಿಯಾಯ್ತೆಂದು
ಕೆಟ್ಟೆನೀ ಕಳ್ತಲೆಯೊಳೆಯಿತಪ್ಪರೇ ದೇವ
ನಟ್ಟಿರುಳು ಮಳೆಯೊಳಗೆ ನಡೆತಪ್ಪರೇ ದೇವ

ಎಂದು ಗಳಗಳನೆ ಕದಹಂ ತೆಱೆದು ಕಾಣುತಂ
ಬಂದು ಚರಣದ ಮೇಲೆ ಬಿಳ್ದು ಭಯವೇಱುತಂ
ಇರೆ ನಡನಡಂ ನಡುಗಿ ಚಳಿ ಮಗನೆ ಚಳಿ ಮಗನೆ
ಹರಣಮಂ ಹತ್ತಿತ್ತು ಶೀತವುಹುಹೆಲೆ ಮಗನೆ
ನಿಲಲಾಱೆನಿನ್ನೆಂತು ಕೈಕಾಲು ಸುರುಳ್ದಪವು
ಪಲವು ಮಾತೇನವಯವಂಗಳೆಲ್ಲಱಲ್ದಪವು
ಮನವೊಡೆದಪುದು ಚಳಿಗೆ ತನು ಸೀಳ್ದಪುದು ಮಳೆಗೆ
ಎನೆ ಕೇಳ್ದು ಭಯಭಕ್ತಿಯಿಂ ನಡುಗಿ ಬಂದೊಳಗೆ
ಇಬ್ಬರಿಪ್ಪೆಡೆಯ ಮಾಳಿಗೆಯ ಜಂತೆಯನುಚ್ಚಿ
ಒಬ್ಬನಂ ಕುಳ್ಳಿರಿಸಿಯಭವನಂ ಮೆಯ್ವೆಚ್ಚಿ
ಪಟು ಮಾಡಿದರ್ ಬೆಂಕಿಯಂ ಶಿವನ ಚಳಿಗೆಂದು
ನಟಿಯಿಸುತ್ತಿರ್ದನೀಶಂ  ಶೀತಮುಮನಂದು
ಶೀತವಿರದಂತೆ ಮೆಲ್ಲನೆ ಕಾಸಿ ಒತ್ತುತಿರೆ
ಭೂತೇಶ್ವರಂ ನೋಡಿ ಕೌತುಕಂಬಡುತಮಿರೆ

ಎನಿತೆನಿತು ಚಳಿ ಪೋಗಲನಿತನಿತು ಪಸಿವಡಸೆ
ಅನುಮಿಸುತೆ ಹಸಿದೆಂ ಹಸಿದೆಯೆನುತೆ ಲಟಲಟಿಸೆ
ಕೇಳುತಿಳೆಯಾಂಡಗುಡಿಮಾರನಾರುಮ್ಮಳಿಸಿ
ಬೇಳಾಗಿ ಮೂಱುಪಾಸದೊಳಿರ್ದು ಬೆಬ್ಬಳಿಸಿ
ಎಂತೆಂದು ತಮ್ಮರಸಿಯರ ಮೊಗಂ ನೋಡುತಿರೆ
ಚಿಂತಿಸಿದಳೊಂದು ತೆಱನಂ ಶಿವಂ ಮೆಚ್ಚುತಿರೆ
ಮೊನ್ನೆ ಬಿತ್ತಿರ್ದ ಮೊಳೆವಿತ್ತನೆತ್ತಿಯೆ ತಂದು
ಪನ್ನಗಾಭರಣನ ಪಸಿವನಾಱಿಸುವುದೆಂದು
ಅಱುಪೆ ಹರುಷಂದಳೆದು ಪರಮಭಕ್ತಂ ಮೆಚ್ಚಿ

ಪೊಱಮಟ್ಟನಲ್ಲಿ ಮಧ್ಯಮ ರಾತ್ರಿಯೊಳೆ ಹೆಚ್ಚಿ
ಮತ್ತೆ ಮಳೆ ಪಿರಿದಾಗೆ ಮತ್ತೆ ಚಳಿ ಘನವಾಗೆ
ಮತ್ತೆ ಕತ್ತಲೆ ಸುತ್ತಿ ಮುತ್ತಿಯುನ್ನತವಾಗೆ
ಬರುತಿರ್ದನಪ್ರತಿಮ ಶಿವಭಕ್ತನುರವಣಿಸಿ
ಪುರದ ಹೊನಲಂ ದಾಂಟಿ ಕಳ್ತಲೆಯನುತ್ತರಿಸಿ
ಹಳ್ಳಂಗಳಂ ತೊಱೆಗಳಂ ಕೆಱೆಗಳಂ ದಾಂಟಿ
ಕೊಳ್ಳಂಗಳಂ ಕೊಳಂಗಳನೀಸುತಂ ದಾಂಟಿ
ಹೋಗಿ ಗದ್ದೆಯೊಳಿರ್ದ ಮೊಳೆವಿತ್ತನೆತ್ತಿದಂ
ರಾಗದಿಂ ತಂದವಂ ಗೂಡೆಯೊಳಗಿಕ್ಕಿದಂ
ತಿರುಗಿ ಬರುತಿರ್ದಂ ಹರ ಹಸಿದನೆಂದೆನುತೆ
ಉರವಣಿಸಿ ಬರುತಿರ್ದ ಬಳಲ್ದನೀಶ್ವರನೆನುತೆ

ಬಂದು ತಮ್ಮರಸಿಯರ ಮುಂದಿಳುಪಿ ನಲಿನಲಿದು
ತಂದ ಮೊಳೆವಿತ್ತನಾನಂದದಿಂದಂ ಹುರಿದು
ಅಮೃತಮಯವೆನಿಸುವೋಗರವ ನಲವಿಂ ಮಾಡಿ
ಸಮೆದ ಕೀರೆಯೊಳು ಮೇಲೋಗರಮುಮಂ ಮಾಡಿ
ಅನುಮಿಸುತೆ ಭಕ್ತನಾರೋಗಣೆಗೆ ನಲಿನಲಿದು
ತನಯನಂ ಕದಳೀದಳಕ್ಕೆ ಕಳುಪಲ್ಬಂದು
ನಿಂದಿರ್ದು ಬಾಳೆಯೆಲೆಯಂ ಕೊಯ್ವುತಿರಲಲ್ಲಿ
ಇಂದುಧರನಾಜ್ಞೆಯಿಂದುರಗಂ ಪಿಡಿಯಲಲ್ಲಿ
ಮಱೆದೊಱಗಿದಂತಲ್ಲಿ ದೀರ್ಘನಿದ್ರೆಯೊಳಿರಲು

ಹೊಱಗೆ ಶಶಿಧರನಿತ್ತ ಹಸಿದೆನೆಂದೆನುತಿರಲು
ತಡೆದನೆಂದಿಳೆಯಾಂಡಗುಡಿಮಾರನಾರ್ಬಂದು
ಹಿಡಿದುರಗನಿಂ ಮಡಿದ ಮಗನನೀಕ್ಷಿಸುತಂದು
ಇದನಱಿದೊಡಭವನುಣಲೊಲ್ಲದೆಯು ಕಾಡುವಂ
ಇದನಱಿಪದುಣಲಿಕ್ಕಿ ಸಂತಸಂ ಮಾಡುವಂ
ಎಂದೆಲೆಗಳಂ ಕೊಯ್ದು ತಂದು ಭಕ್ತನ ಮುಂದೆ
ಛಂದಛಂದದೊಳೆ ಪಾಸುತ್ತೆ ಸಂತಸದಿಂದೆ
ತಿಳಿನೀರ್ಗಳಂ ತಳಿದು ತೊಳಪೋಗರಮನಿಕ್ಕಿ
ಎಳೆಯ ಕೀರೆಯ ಮಸೆದ ಮೇಲೋಗರಮನಿಕ್ಕಿ

ಆರೈಸುವುದು ಸದಾಶಿವ ಕರುಣದಿಂದೆನುತೆ
ಹಾರೈಸುತಂ ಶಂಭುವೇ ಕರುಣಿಸುವುದೆನುತೆ
ಇರೆ ಹರಂ ಕರುಣಿಸುತ್ತಾವೊಬ್ಬರುಣ್ಣೆವೆನೆ
ಹರನ ಭಕ್ತರು ಸಪಙ್ತಿಯಲುಣ್ಣವೇಳ್ಕುಮೆನೆ
ತಂದೆ ಮಕ್ಕಳ್ ಕೆಲದೆ ಕುಳ್ಳಿರ್ಪುದೆನೆ ಕೇಳ್ದು
ನೊಂದು ಶಿವನುಣಲೊಲ್ಲನಿನ್ನೇವೆನೆನುತೆಳ್ದು
ಮಗನಿಲ್ಲದುದನಱಿಪಬಾರದೇವೆಂ ಶಿವನೆ
ಮಗನಿಲ್ಲದಿರ್ದೊಡುಣಲೊಲ್ಲನೇವೆಂ ಭವನೆ
ಕರೆದು ನೋಡುವೆನೇಳದಿರ್ದೊಡಂತಭವಂಗೆ
ಶಿರವನೇಱಿಸುವೆನುಣಲೊಲ್ಲದ ಮಹೇಶಂಗೆ

ಎನುತೆ ನಡೆತಂದು ತತ್ಸುತನ ಹತ್ತಿರೆ ನಿಂದು
ತನುಜ ಏಳ್ಮಗನೆ ಹರನುಣಲೊಲ್ಲನೆನುತಂದು
ಕರೆಯಲಾಗಳೆ ನಿದ್ರೆ ತಿಳಿದೇಳ್ವರಂದದಿಂ
ಚರಿತದಿಂದೆಳ್ದ ಮಗನಂ ಕಂಡು ರಾಗದಿಂ
ಬರೆ ಜಗಜ್ಜ್ಯೋತಿರ್ಮಯಂ ಹೊಳೆವುತಿರಲೊಳಗೆ
ಪುರಹರಂ ವೃದ್ಧ ವೇಷಮನುಳಿದು ತೊಳತೊಳಗೆ
ತಾನೊಪ್ಪೆ ರವಿಕೋಟಿ ತೇಜಮಂ ಮಸುಳಿಸುತೆ
ನಾನಾ ಸುಧಾಕರ ಪ್ರಭೆಗಳಿಂ ರಂಜಿಸುತೆ

ಇರೆ ಕಾಣುತಿಳೆಯಾಂಡಗುಡಿಮಾರರೆಯ್ತಂದು
ಚರಣತಳದೊಳು ಬಿದ್ದು ನೆಱೆ ಪುಳಕಿಸುತ್ತಂದು
ದೇವಾ ಜರಾಜೀರ್ಣವೇಷಮಂ ಕೈಗೊಂಡು
ದೇವ ಚಳಿಯೊಳ್ಮಳೆಯೊಳೆನ್ನಂ ಮನಂಗೊಂಡು
ಬಪ್ಪರೇ ಇಂತಿರುಳು ಕರುಣಿ ಕರುಣಿಗಳರಸ
ಒಪ್ಪವಾಯ್ತೆನ್ನ ಮಾಟಂ ಕೇಳ್ಗಿರಿಜೆಯರಸ
ಚಳಿ ಹತ್ತಿತೇ ಹತ್ತಿತೇ ತಂದೆ ಹೇಳಯ್ಯ
ಮಳೆಯೊಳಗೆ ತನು ನೆನೆದು ಕರಗಿ ಕೊರಗಿತೆಯಯ್ಯ
ಎನುತಿರೆ ಗಣೇಶ್ವರರ್ ನಡೆತಂದರುರವಣಿಸಿ
ತನತನಗೆ ಶಿವನನಱಸುತ್ತಲ್ಲಿ ಸಂದಣಿಸಿ
ಕಂಡು ಶಿವನೆಂದನೆಲೆ ನಂದೀಶ ಕೇಳಯ್ಯ
ಕಂಡೆನಿಲ್ಲಿಂತಪ್ಪ ನೇಹಮಂ ಪೊಸತಯ್ಯ
ಈ ಮಳೆಯೊಳೀ ಚಳಿಯೊಳಿಂತು ಹೋದವರುಂಟೆ

ಏ ಮಾತೊ ಮೊಳೆವಿತ್ತನೆತ್ತಿ ತಂದವರುಂಟೆ
ಮಗನ ಸಾವಂ ನೋಡದುಣಲಿಕ್ಕಿದವರುಂಟೆ
ಜಗದೊಳಗೆ ನಿರ್ದಂಭರೆನಿಪರೇನಿಂತುಂಟೆ

ಎಂದು ಕೊಂಡಾಡುತಿರೆ ಹೂಮಳೆಗಳೆಱಗಿದುವು
ಬಂದು ಹೇಮದ ಪೊಸ ವಿಮಾನಂಗಳೊಪ್ಪಿದುವು
ಆಗಳಿಳೆಯಾಂಡಗುಡಿಮಾರನಾರಭವಂಗೆ
ಹೋಗಲೀವೆನೆ ಆರಯಿಸಿದಲ್ಲದಿಂದಿಂಗೆ
ಎನೆ ನಸುನಗುತ ಭಕ್ತನಿಚ್ಛೆಯಂ ನೆಱೆ ಸಲಿಸಿ
ವನಿತೆ ಪಾರ್ವತಿದೇವಿ ಗಣಸಂಕುಲಂ ಬೆರೆಸಿ
ಕೈಲಾಸಪುರಕೆ ಕೊಂಡೊಯ್ದುನುತ್ಸಾಹದಿಂ
ಶೈಲಜಾಪತಿ ಕರುಣಮುಬ್ಬರಿಸೆ ನೇಹದಿಂ

ಮೃಡನಿಂ ಮೆಱೆದಿಳೆಯಾಂಡರ
ಗುಡಿಮಾರರ ಕಂದನೆಂದು ಸದ್ಭಕ್ತಿಯನಿ
ತ್ತೆಡೆವಱಿಯದೆಮಗೆ ಕೊಡುಗೆ
ಕಡೆಗಣಿಸದೆ ದೇವ ಹಂಪೆಯ ವಿರೂಪಾಕ್ಷಂ

## ಹರಿಹರ

ನಡುಗನ್ನಡ ಯುಗದ'ಹರಿಕಾರ' ನೆಂದು ಪ್ರಖ್ಯಾತಿ ಹೊಂದಿದವನು ಹಂಪೆಯ ಹರಿಹರ. ಈತನ ಕಾಲ ಕ್ರಿ.ಶ. ಸುಮಾರು ೧೩ನೇ ಶತಮಾನ. ಕವಿ ರಾಘವಾಂಕ ಈತನ ಸೋದರಳಿಯ ಹಾಗೂ ಶಿಷ್ಯ.

ಈತನನ್ನು ರಗಳೆಯ ಕವಿಯೆಂದೂ ಕ್ರಾಂತಿ ಕವಿಯೆಂದೂ ಕರೆಯುತ್ತಾರೆ. ಶಿವನ ಮತ್ತು ಶಿವಭಕ್ತರ ಕತೆಗಳನ್ನೇ ಕಾವ್ಯವಾಗಿ ನಿರೂಪಿಸಲು ತನ್ನ ಪ್ರತಿಭೆಯನ್ನು ಮುಡಿಪಾಗಿಟ್ಟವನು. ಈತ ದೇಸಿ ಛಂದೋರೂಪವಾದ ರಗಳೆಯಲ್ಲಿ ಸಮಗ್ರ ಕಾವ್ಯವನ್ನು ಬರೆದು ದೇಸಿ ಕಾವ್ಯ ಪರಂಪರೆಗೆ ನಾಂದಿ ಹಾಡಿದವನು.

'ಗಿರಿಜಾ ಕಲ್ಯಾಣ'ವೆಂಬ ಚಂಪೂ ಕಾವ್ಯ, 'ಬಸವರಾಜ ದೇವರ ರಗಳೆ', 'ನಂಬಿಯಣ್ಣನ ರಗಳೆ', 'ಪ್ರಭುದೇವರ ರಗಳೆ' ಮುಂತಾದ ರಗಳೆಗಳು ಮತ್ತು 'ಪಂಪಾ

ಶತಕ', 'ರಕ್ಷಾ ಶತಕ', 'ವಿರೂಪಾಕ್ಷ ಶತಕ' ಎಂಬ ಶತಕ ಕಾವ್ಯಗಳನ್ನೂ ರಚಿಸಿದ್ದಾನೆ. ಇವನು ಹಳೆಗನ್ನಡದಲ್ಲಿ ಬಳಕೆಯಲ್ಲಿದ್ದ ಱ, ೞ, ಳ ಗಳನ್ನು ತನ್ನ ಕಾವ್ಯದಲ್ಲಿ ವ್ಯತ್ಯಾಸವಿಲ್ಲದೆ ಬಳಸಿಕೊಂಡಿದ್ದಾನೆ.

## ಪದ ವಿಂಗಡಣೆ

ಎಸೆದಿರ್ಪನೊರ್ವ – ಎಸೆದು+ಇರ್ಪನ್+ಒರ್ವ

ಬೆರಸಿರ್ದಂದಿನ – ಬೆರಸಿ+ಇರ್ದ+ಅಂದಿನ

ಭಾಸುರಮೆನಲ್ಮೆಱೆವುದೊಂದು – ಬಾಸುರಮ್+ಎನಲ್+ಮೆಱೆವುದು+ಒಂದು

ಇಳೆಯಾಂಡ ಗುಡಿಯೆಂಬುದದಱೊಳನುರಾಗದಿಂ – ಇಳೆಯಾಂಡ ಗುಡಿ + ಎಂಬುದು + ಅದಱೊಳ್+ಅನುರಾಗದಿಂ

ಶಿವನನರ್ಚಿಸಲೆಂದು – ಶಿವನನ್+ಅರ್ಚಿಸಲ್+ಎಂದು

ಗರ್ವಿಪ್ಪಹಂಕಾರಮುಮನಚ್ಚುವಂ – ಗರ್ವಿಪ್ಪ+ಅಹಂಕಾರಮುಮನ್+ಅಚ್ಚುವಂ

ಕ್ಷುತ್ಪಿಪಾಸಾದಿ – ಕ್ಷುತ್ + ಪಿಪಾಸ + ಆದಿ

ಮಾಳ್ಪನಂತೆಲ್ಲರಱಿಯೆ – ಮಾಳ್ಪನ್+ಅಂತು+ಎಲ್ಲರ್+ಅಱಿಯೆ

ಭಕ್ತರ್ಬಂದೊಡನಿತು – ಭಕ್ತರ್+ಬಂದೊಡೆ+ಅನಿತು

ಧರೆಯೆನಿತನಿತು – ಧರೆ+ಎನಿತು+ಅನಿತು

ಬೆಳೆಸನುರವಣಿಸಿ – ಬೆಳೆಸನ್+ಉರವಣಿಸಿ

ವಾರ್ಧಿಯೆಂತಂತೆ – ವಾರ್ಧಿ+ಎಂತು+ಅಂತೆ

ಕೊಟ್ಟನುತ್ಸವವೇಱಿ – ಕೊಟ್ಟನ್+ಉತ್ಸವಂ+ಏಱಿ

ಈವೊಡಂತೇನುಮಿಲ್ಲದೆ – ಈವೊಡೆ+ಅಂತು+ಏನುಂ+ಇಲ್ಲದೆ

ಅಳವಡಿಸಿಕೊಂಡನೊಲವಿಂದೊಂದು – ಅಳವಡಿಸಿಕೊಂಡನ್+ಒಲವಿಂದೆ+ಒಂದು

ಘನೀಭೂತಮಾದುದೆಂಬಂದದಿಂ – ಘನೀಭೂತಂ+ಆದುದು+ಎಂಬ+ಅಂದದಿಂ

ಕತ್ತಲೆಯೊಳಭವನೂರಂ – ಕತ್ತಲೆಯೊಳ್+ಅಭವನ್+ಊರಂ

ಮಱೆಯೀಶನಾಮವೆಯವರ್ಗೆ – ಮಱೆ+ಈಶನಾಮವೆ+ಅವರ್ಗೆ

ಚಳಿಪೊದ್ದದವರನೆಂತಿರ್ದೊಡಂ – ಚಳಿಪೊದ್ದದು+ಅವರನ್+ಎಂತು+ ಇರ್ದೊಡಂ

ಕೇಳುತಿಳೆಯಾಂಡ ಗುಡಿಮಾರನಾರೆಂದು – ಕೇಳುತ+ಇಳೆಯಾಂಡಗುಡಿಮಾರನ್+ಆರ್+ ಎಂದು

ಕತ್ತಲೆಯೊಳೆಯಿತಪ್ಪರೇ – ಕತ್ತಲೆಯೊಳ್ + ಎಯಿತಪ್ಪರೇ

ಮಾತೇನವಯವಂಗಳೆಲ್ಲೞಲ್ದಪವು – ಮಾತು + ಏನ್ + ಅವಯವಂಗಳ್ + ಎಲ್ಲ + ಅೞಲ್ದಪವು

ಕೌತುಕಂಬಡುತಮಿರೆ – ಕೌತುಕಂ + ಪಡುತಂ + ಇರೆ

ಪಸಿವನಾಱಿಸುವುದೆಂದು – ಪಸಿವನ್ + ಆಱಿಸುವುದು + ಎಂದು
ಅಮೃತಮಯವೆನಿಸುವೋಗರವ – ಅಮೃತಮಯಂ+ ಎನಿಸುವ + ಓಗರವ
ಇಂದುಧರನಾಜ್ಞೆಯಿಂದುರಗಂ – ಇಂಧುದರನ +ಆಜ್ಞೆಯಿಂದೆ +ಉರಗಂ
ತಡೆದನೆಂದಿಳೆಯಾಂಡ ಗುಡಿಮಾರನಾರ್ಬಂದು – ತಡೆದನ್ + ಎಂದು + ಇಳೆಯಾಂಡ ಗುಡಿಮಾರನಾರ್+ಬಂದು
ಇದನಱಿದೊಡಭವನುಣಲೊಲ್ಲದೆಯು – ಇದನ್+ಅಱಿದೊಡೆ + ಅಭವನ್ + ಉಣಲ್ + ಒಲ್ಲದೆಯು
ಇದನಱಿಪದುಣಲಿಕ್ಕಿ – ಇದನ್+ಅಱಿಪದೆ+ಉಣಲ್+ಇಕ್ಕಿ
ಕರುಣಿಸುತ್ತಾವೊಬ್ಬರುಣ್ಣೆವೆನೆ – ಕರುಣಿಸುತ್ತ+ಆವು+ಒಬ್ಬರ್+ಉಣ್ಣೆವು+ಎನೆ
ಸಪಙ್ತಿಯಲುಣ್ಣವೇಳ್ಕು ಮೆನೆ – ಸಪಙ್ತಿಯಲಿ + ಉಣ್ಣವೇಳ್ಕುಂ + ಎನೆ
ಶಿವನುಣಲೊಲ್ಲನಿನ್ನೇವೆನೆನುತೆಳ್ದು – ಶಿವನ್+ಉಣಲ್+ಒಲ್ಲನ್+ಇನ್ನು+ ಏವೆನ್+ ಎನುತ+ಎಳ್ದು
ಮಗನಿಲ್ಲದಿರ್ದೊಡುಣಲೊಲ್ಲನೇವೆಂ – ಮಗನ್ + ಇಲ್ಲದಿರ್ದೊಡೆ + ಉಣಲ್+ ಒಲ್ಲನ್+ಏವೆಂ
ಕರೆದುನೋಡುವೆನೇಳದಿರ್ದೊಡಂತಭವಂಗೆ – ಕರೆದು ನೋಡುವೆನ್ + ಏಳದೆ + ಇರ್ದೊಡೆ +ಅಂತು+ಅಭವಂಗೆ
ಶಿರವನೇಱಿಸುವೆನುಣಲೊಲ್ಲದ – ಶಿರವನ್+ಏಱಿಸುವೆನ್+ಉಣಲ್+ಒಲ್ಲದ
ಚಳಿಯೊಳ್ಮಳೆಯೊಳೆನ್ನಂ – ಚಳಿಯೊಳ್+ಮಳೆಯೊಳ್+ಎನ್ನಂ
ನಿರ್ದಂಭರೆನಿಪರೇನಿಂತುಂಟೆ – ನಿರ್ದಂಭರ್+ಎನಿಪರ್+ಏನ್+ ಇಂತು+ ಉಂಟೆ
ಸದ್ಭಕ್ತಿಯನಿತ್ತೆಡೆವಱಿಯದೆಮಗೆ – ಸದ್‌ಭಕ್ತಿಯನ್+ಇತ್ತು+ಎಡೆ+ಪಱಿಯದೆ+ಎಮಗೆ

## ಪದಗಳ ಅರ್ಥ

ಇಳೆಯಾಂಡಗುಡಿಮಾರನಾರ್ – ಇಳೆಯಾಂಡಗುಡಿ ಊರಿನ ಹೆಸರು, ಮಾರನ್ ವ್ಯಕ್ತಿಯ ಹೆಸರು. ಆರ್ – ದ್ರಾವಿಡ (ತಮಿಳು) ಭಾಷೆಯಲ್ಲಿ ಬಹುವಚನ ಸೂಚಕ ಪ್ರತ್ಯಯ. ಅಱಿಪದೆ–ತಿಳಿಸದೆ. ಇಂದುಧರ – ಚಂದ್ರನನ್ನು ಧರಿಸಿದವನು, ಶಿವ. ಸಂದಣಿಸು–ಒಟ್ಟಿಗೆ ಸೇರು, ಜೋಡಣೆಗೊಳ್ಳು. ಸೆಜ್ಜೆ – ಹಾಸಿಗೆ, ನೆಲೆ (ಸಂ. ಶಯ್ಯಾ). ಭಾಸುರ – ಪ್ರಕಾಶಮಾನವಾದ. ಒಪ್ಪ – ಶೋಭೆ. ಎಸೆ–ಕಂಗೊಳಿಸು. ಒಲ್ಮೆಗಂ – ಒಲುಮೆಯುಳ್ಳವನು. ಮಹಾದೇವನೊಕ್ಕಲಮಗಂ – ಶಿವನ ಬಳಗದವನು. ಒಕ್ಕಲು – ಕೃಷಿಕ. ಮನದಂದು – ಮನಸ್ಸು ಮಾಡಿ. ಅಮರ್ದ – ದಟ್ಟವಾಗಿ ಜೊತೆಗೂಡಿದ. ಅರಿಷಟ್ಕ – ಅರಿಷಡ್ವರ್ಗ (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ). ತಳಿ – ಬಿತ್ತು, ಚೆಲ್ಲು. ಸುರುಚಿರ – ಕಾಂತಿಯುಕ್ತವಾದ. ಶಶಿಕರಂ – ಚಂದ್ರಕಿರಣ.

ಮಳೆಕೊಳು – ಮಳೆಯಾಗು. ಕ್ಷುತ್ – ಹಸಿವು. ಪಿಪಾಸೆ – ಬಾಯಾರಿಕೆ. ಆರಂಬ – ಬೇಸಾಯ. ಪೊರೆಯೇಱು – ಉಬ್ಬು. ಪೆರ್ಚು – ಹೆಚ್ಚು. ಉರವಣಿಸು – ಸಡಗರಿಸು, ಸಂಭ್ರಮಿಸು. ಇನಿತಕ್ಕೆ – ಒಂದಿಷ್ಟಕ್ಕೂ. ಒಳಿತು – ಒಳ್ಳೆಯದು. ತೇಜ – ಹೊನ್ನು, ಸಿರಿ. ಮಾನ್ಯ – ಉಂಬಳಿಯಾಗಿ ಬಂದ ಜಮೀನು. ಸಾರ್ಚು – ಕೊಡು, ಸಲ್ಲಿಸು. ಕರಂ – ವಿಶೇಷವಾಗಿ. ಅರ್ತಿ – ಪ್ರೀತಿ (ಅೞ್ತಿ). ವಾರ್ಧಿ – ಸಮುದ್ರ. ಓಸರಿಸು–ಹಿಂಜರಿ. ಅಣುಗ – ಪ್ರೀತಿಪಾತ್ರನಾದ ಭಕ್ತ. ಕಡುಚಾಗಿ – ಮಹಾತ್ಯಾಗಿ (ತ್ಯಾಗಿ–ಚಾಗಿ). ಸದಮಳ – ಪರಿಶುದ್ಧ. ಉತ್ಸವ – ಉತ್ಸಾಹ. ಕೋಲ್ – ಉದ್ದಗಲಗಳನ್ನು ಅಳೆಯಲು ಬಳಸುತ್ತಿದ್ದ ಒಂದು ಗೊತ್ತಾದ ಅಳತೆ, ಒಮ್ಮನ – ಒಂದೇ ಮನಸ್ಸು, ಒಂದು ಅಳತೆಯ ಮಾನ. ಕಪ್ಪಡಂ – ಬಟ್ಟೆ (ಸಂ. ಕರ್ಪಟ). ಕೋವಳಂ – ಕೌಪೀನ. ಹರಣ – ಪ್ರಾಣ (ಸಂ). ನಾಡೆ – ಚೆನ್ನಾಗಿ. ಒರೆ – ಪರೀಕ್ಷಿಸು. ಚೋಹ – ವೇಷ. ತೆರೆ – ಸುಕ್ಕು. ಸುರುಳ್ – ಮುದುಡು, ಸುಕ್ಕುಗಟ್ಟು. ನಳಿತ – ದುರ್ಬಲವಾದ, ಬಾಗಿದ. ಜಳದ – ಮೋಡ. ಬಲಾಹಕ – ಮೋಡ. ತೀವು–ತುಂಬು. ಸಲಿಲ–ನೀರು. ಇಡಿದ – ತುಂಬಿದ. ಅಭವನ್ – ಶಿವ. ಮೆಯ್ವೊಕ್ಕು – ದೇಹವನ್ನು ಮುದುರಿಕೊಂಡು. ಹಲುಹಱಿಗುಟ್ಟು – (ಚಳಿಯಿಂದ) ಹಲ್ಲು ಕಟಕಟಿಸು (ಪಲ್ಪಱಿಗುಟ್ಟು). ಮೂಱುಪಾಸು – ಮೂರು ದಿನ ಉಪವಾಸ. ಮನಂಗುಂದು – ಧೈರ್ಯಗುಂದು, ಉತ್ಸಾಹವನ್ನು ಕಳೆದುಕೊಳ್ಳು. ಆಸುರ – ಉಗ್ರವಾದ, ಭಾಳೇಕ್ಷಣ – (ಭಾಳ+ಈಕ್ಷಣ) ಹಣೆಗಣ್ಣ, ಶಿವ. ಪೊದ್ದು – ಮುಟ್ಟು, ತಾಗು. ಹತ್ತೆ – ಹತ್ತಿರ, ಆಳ್ದ – ಒಡೆಯ. ಕದಹು – ಬಾಗಿಲು (ಕದವು). ಆಱಲ್ – ಒಣಗು, ಗಟ್ಟಿಯಾಗು, ಮರಗಟ್ಟು. ಜಂತೆ – ಮೇಲ್ಛಾವಣಿಗಳಿಗೆ ಆಧಾರವಾಗಿ, ತೊಲೆಗಳ ಮೇಲೆ ಹಾಕುವ ಸಣ್ಣ ಅಡ್ಡ. ಉಚ್ಚು–ಬಿಚ್ಚು. ಮೆಯ್ವೆಚ್ಚು–ಸಂತೋಷಗೊಳ್ಳು. ಪಟುಮಾಡು–ಬೆಂಕಿಯನ್ನು ಮತ್ತಷ್ಟು ಉರಿಸು. ಅಡಸು–ಉಂಟಾಗು. ಅನುಮಿಸುತೆ–ಹಿಂದುಮುಂದು ನೋಡುತ್ತ, ಹಿಂಜರಿಯುತ್ತ. ಲಟಲಟಿಸು–ಕೂಗಾಡು, ಉಮ್ಮಳಿಸು – ದುಃಖಿಸು. ಬೇಳಾಗು–ಬೆಂಡಾಗು. ಬೆಬ್ಬಳಿಸು–ಗಾಬರಿಗೊಳ್ಳು, ದಿಗ್ಭ್ರಮೆಗೊಳ್ಳು. ಮೊಳೆವಿತ್ತು – ಮೊಳೆತ ಬೀಜ. ಪನ್ನಗಾಭರಣ–ಹಾವನ್ನು ಆಭರಣವಾಗಿ ಧರಿಸಿದವನು, ಶಿವ. ಪೊರಮಡು – ಹೊರಹೊರಡು. ಉತ್ತರಿಸು–ದಾಟು, ಮೀರು, ಕತ್ತರಿಸು. ಗೂಡೆ – ದೊಡ್ಡ ಬುಟ್ಟಿ. ಓಗರ–ಅನ್ನ, ಆಹಾರ. ಸಮೆದ–ಸಿದ್ಧಪಡಿಸಿದ. ಕೀರೆ–ಒಂದು ಬಗೆಯ ಸೊಪ್ಪು. ಅನುಮಿಸು – ಅಣಿಮಾಡು, ಸಿದ್ಧಪಡಿಸು. ಆರೋಗಣೆ – ಊಟ. ಕದಳೀದಳ – ಬಾಳೆಯೆಲೆ. ಉರಗಂ ಪಿಡಿಯಲ್ – ಹಾವು ಕಚ್ಚಲು. ದೀರ್ಘ ನಿದ್ರೆ – ಸಾವು. ತಡೆ – ವಿಳಂಬ ಮಾಡು. ತಳಿ–ಚಿಮುಕಿಸು. ತೊಳಪೋಗರ – (ತೊಳಪ + ಓಗರ) ಪರಿಶುದ್ಧವಾದ ಅನ್ನ. ಮಸೆ–ಅರೆ, ನುಣ್ಣಗೆ ಮಾಡು. ಆರೈಸು–ಆರೋಗಿಸು, ಊಟಮಾಡು. ಸಹಪಙ್ತಿ – ಜೊತೆಯಲ್ಲಿ ಸಾಲಾಗಿ ಕುಳಿತುಕೊಳ್ಳುವುದು. ಇನ್ನೇವೆನ್ – ಇನ್ನೇನು ಮಾಡಲಿ. ಏವೆಂ – ಏನು ಮಾಡಲಿ. ಶಿರವನೇಱಿಸು – (ಶಿರವನ್ನು ಕತ್ತರಿಸಿ)

ಅರ್ಚಿಸು. ತತ್ಸುತ–ಆ ಮಗ. ಅಂದ–ರೀತಿ. ಚರಿತ – ಬೇಗ (ಸಂ. ತ್ವರಿತ). ಪುರಹರಂ– ತ್ರಿಪುರಗಳನ್ನು ನಾಶಮಾಡಿದವನು, ಶಿವ. ತೊಳಗು–ಪ್ರಕಾಶಿಸು. ಮಸುಳಿಸು– ಮಂಕುಮಾಡು, ಕಾಂತಿಹೀನವಾಗಿಸು. ಸುಧಾಕರ–ಅಮೃತಕಿರಣ (ಚಂದ್ರ). ಜರಾಜೀರ್ಣ–ಮುಪ್ಪಿನಿಂದ ಸುಕ್ಕುಗೊಂಡ. ಮನಂಗೊಳ್ಳು–ಮನಸ್ಸನ್ನು ಆಕರ್ಷಿಸು, ಇಷ್ಟವಾಗು. ಒಪ್ಪವಾಯ್ತೆ–ನೆಟ್ಟಗಾಯಿತೆ, ಸರಿಹೋಯಿತೆ. ಮಾಟ–ಕಾರ್ಯ ಮಾಡುವುದು. ಗಣೇಶ್ವರರ್–ಗಣಗಳ ಒಡೆಯರು. ಸಂದಣಿಸು–ಗುಂಪುಗೂಡು. ನೇಹ–ಸ್ನೇಹ. ನಿರ್ದಂಭ – ಕಪಟತನ – ಗರ್ವ ಇಲ್ಲದಿರುವುದು. ಹೇಮ–ಚಿನ್ನ. ಆರಯಿಸದೆ – ಸತ್ಕಾರ ಮಾಡದೆ, ಆರೈಕೆ ಮಾಡದೆ. ಉಬ್ಬರಿಸು – ಅತಿಶಯವಾಗು. ಎಡೆವಱಿಯದೆ – ಅವಿಚ್ಛಿನ್ನವಾಗಿ, ನಿರಂತರವಾಗಿ.

## ಒಂದು ವಾಕ್ಯದಲ್ಲಿ ಉತ್ತರಿಸಿರಿ

- ರಗಳೆ ಛಂದಸ್ಸಿನಲ್ಲಿ ಕಾವ್ಯಗಳನ್ನು ಬರೆದ ಮೊದಲ ಕವಿ ಯಾರು?
- 'ಹರ್ಷಂದಳೆದು' ಈ ಪದವನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.
- 'ಸುರುಳ್ದ ತನು ನಳಿತ ಬೆನ್ ಜೋಲ್ವಪುರ್ವಿಂದೆಸೆಯೆ' – ಈ ಸಾಲಿನಲ್ಲಿ ಯಾರನ್ನು ವರ್ಣಿಸಲಾಗಿದೆ?
- ಇಳೆಯಾಂಡಗುಡಿಮಾರನು ತನ್ನ ಭಕ್ತಿಯ ಕೃಷಿಗೆ ಯಾವುದನ್ನು ಎತ್ತುಗಳನ್ನಾಗಿ ಮಾಡಿದ್ದನು?
- 'ಆಗಸಂ ಜಳವಾದುದೆಂಬಂತೆ' ಎಂಬ ಮಾತಿನ ಸ್ವಾರಸ್ಯವನ್ನು ತಿಳಿಸಿರಿ.

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಇಳೆಯಾಂಡಗುಡಿಮಾರನು ಮಾಡಿದ ಭಕ್ತಿಯ ಕೃಷಿಯನ್ನು ವಿವರಿಸಿರಿ.
- ಇಳೆಯಾಂಡ ಗುಡಿಮಾರನ ಕೃಷಿಭೂಮಿ ಕಡಿಮೆಯಾಗಲು ಕಾರಣಗಳೇನು?
- ಶಿವನ ವೃದ್ಧವೇಷದ ವರ್ಣನೆ ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ?
- ವೃದ್ಧವಿಪ್ರನ ಹಸಿವೆಯನ್ನು ಹೋಗಲಾಡಿಸಲು ಇಳೆಯಾಂಡಗುಡಿಮಾರನ ಪತ್ನಿಯು ತನ್ನ ಪತಿಗೆ ನೀಡಿದ ಸಲಹೆ ಏನು?
- ಇಳೆಯಾಂಡಗುಡಿಮಾರನ ದಾನಶೀಲ ಗುಣವನ್ನು ಶಿವನು ಪರೀಕ್ಷಿಸಿದ ಸನ್ನಿವೇಶವನ್ನು ನಿರೂಪಿಸಿರಿ.
- ಇಳೆಯಾಂಡಗುಡಿಮಾರನ ಪಾತ್ರಚಿತ್ರಣವನ್ನು ಮಾಡಿರಿ.

## ಚಟುವಟಿಕೆಗಳು

- ಈ ಕಾವ್ಯಭಾಗದಲ್ಲಿ ಬರುವ ಇಳೆಯಾಂಡಗುಡಿಮಾರನ ಶಿವಭಕ್ತಿಯ ಸ್ವರೂಪದ ಕುರಿತು ಲೇಖನ ಬರೆಯಿರಿ.
- ವೃದ್ಧ ವೇಷಧಾರಿಯಾದ ಶಿವ ಹಾಗೂ ಇಳೆಯಾಂಡ ಗುಡಿಮಾರನ ನಡುವೆ ನಡೆದ ಸಂಭಾಷಣೆಯನ್ನು ಹೊಸಗನ್ನಡ ರೂಪದಲ್ಲಿ ಬರೆದು ಬ್ಲೋಗ್‌ನಲ್ಲಿ ಪ್ರಕಟಿಸಿರಿ.
- ನಿಮ್ಮ ಮನೆಗೆ ಆಗಮಿಸಿದ ವಿಶೇಷ ಅತಿಥಿಯೊಬ್ಬರನ್ನು ನೀವು ಸತ್ಕರಿಸಿದ ಬಗೆಯ ಕುರಿತು ಲೇಖನ ಬರೆದು ತರಗತಿಯಲ್ಲಿ ಮಂಡಿಸಿರಿ.
- ಹರಿಹರನು ರಚಿಸಿದ ಇತರ ಯಾವುದಾದರೂ ಎರಡು ರಗಳೆಗಳಲ್ಲಿ ಬರುವ ಕಥೆಗಳನ್ನು ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದು ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಿರಿ.
- ಇಳೆಯಾಂಡಗುಡಿಮಾರನಂತೆಯೇ ಸಂತ ಕಬೀರದಾಸನೂ ಒಬ್ಬ ಭಕ್ತ ಕವಿ. ಆತನ ಕುರಿತು ಪ್ರಕಟವಾಗಿರುವ ಪುಸ್ತಕಗಳನ್ನು ಸಂಗ್ರಹಿಸಿ ಓದಿರಿ.

## ಭಾಷಾಭ್ಯಾಸ

**ಪರ್ಯಾಯ ಪದಗಳನ್ನು ಬರೆಯಿರಿ.**

ಶಿವ, ನೀರು, ಹೇಮ, ವೃದ್ಧ.

**ಈ ಕೆಳಗಿನ ಪದಗಳ ಸಂಸ್ಕೃತ ರೂಪಗಳನ್ನು ಬರೆಯಿರಿ.**

ಬಕುತ, ಸಂತಸ, ಚಾಗಿ, ಹರುಸ, ಹರಣ, ಬರಿಸ, ಮೊಗ, ನಿದ್ದೆ, ನೇಹ.

**ಈ ಕಾವ್ಯಭಾಗದಲ್ಲಿ ಬಂದ 'ಪ' ಕಾರಯುಕ್ತ ಪದಗಳು ಹೊಸಗನ್ನಡದಲ್ಲಿ 'ಹ'ಕಾರಯುಕ್ತ ಪದಗಳಾಗಿ ಬದಲಾಗಿವೆ. ಇಂತಹ ಪದಗಳನ್ನು ಪಟ್ಟಿ ಮಾಡಿರಿ.**

ಉದಾ : ಪೆರ್ಚೆ – ಹೆಚ್ಚೆ

**ಈ ಕೆಳಗಿನ ಸಮಸ್ತ ಪದಗಳ ವಿಗ್ರಹ ವಾಕ್ಯಗಳನ್ನು ಬರೆದು ಸಮಾಸಗಳನ್ನು ಹೆಸರಿಸಿರಿ.**

ಇಂದುಧರ, ನಟ್ಟಿರುಳು, ಮೊಳೆವಿತ್ತು

## ರಗಳೆ

ಸಂಸ್ಕೃತದ 'ರಘಟಾ' ಎಂಬ ಶಬ್ದದ ತದ್ಭವ ರೂಪವೇ ರಗಳೆ. ಈ ಛಂದೋರೂಪವು ಮಾತ್ರಾಗಣ ಪ್ರಧಾನವಾಗಿದೆ. ಇದರಲ್ಲಿ ಸಾಲುಗಳ ಮಿತಿಯಿಲ್ಲ. ಎಲ್ಲ ಸಾಲುಗಳಲ್ಲಿಯೂ ಮಾತ್ರಾಗಣಗಳ ಸಂಖ್ಯೆ ಸಮಾನವಾಗಿರುತ್ತದೆ. ರಗಳೆಯಲ್ಲಿ ಉತ್ಸಾಹ, ಮಂದಾನಿಲ ಮತ್ತು

ಲಲಿತ ಎಂಬ ಮೂರು ವಿಧಗಳಿವೆ. 'ಉತ್ಸಾಹ' ದಲ್ಲಿ ಮೂರು ಮಾತ್ರೆಗಳ ನಾಲ್ಕು ನಾಲ್ಕು ಗಣಗಳೂ, ಮಂದಾನಿಲದಲ್ಲಿ ನಾಲು ಮಾತ್ರೆಗಳ ನಾಲ್ಕು ನಾಲ್ಕು ಗಣಗಳೂ ಇರುತ್ತವೆ. ಪ್ರಸ್ತುತ ಕಾವ್ಯಭಾಗವು ಲಲಿತ ರಗಳೆಯಲ್ಲಿದೆ.

(ಹರಿಹರನ ರಗಳೆಗಳಲ್ಲಿ ಆದಿಪ್ರಾಸ ಅಂತ್ಯಪ್ರಾಸಗಳು ನಿಯತವಾಗಿ ಬಂದಿವೆ)

## ಲಲಿತ ರಗಳೆ

**ಲಕ್ಷಣಗಳು**

ರಗಳೆಯ ಸಾಮಾನ್ಯ ಲಕ್ಷಣಗಳೆಲ್ಲ ಈ ರಗಳೆಗೂ ಅನ್ವಯವಾಗುತ್ತವೆ.

ಲಲಿತ ರಗಳೆಯ ಪ್ರತಿ ಪಾದದಲ್ಲೂ ಐದೈದು ಮಾತ್ರೆಗಳ ನಾಲ್ಕು ನಾಲ್ಕು ಗಣಗಳಿರುತ್ತವೆ.

– – ∪ | – | – | – |
ಇಂತಿರ್ದು | ಶಿವನನ | ರ್ಚಿಸಲೆಂದು | ಮನದಂದು |

ಇದೇ ರೀತಿ ಈ ಪದ್ಯದ ಯಾವುದಾದರೂ ನಾಲ್ಕು ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿರಿ.

## ಹೆಚ್ಚಿನ ಓದಿಗೆ

ಹರಿಹರನ ರಗಳೆಗಳು – (ಸಂ) ಎಂ.ಎಂ. ಕಲಬುರ್ಗಿ

ಹರಿಹರನ ರಗಳೆಯಲ್ಲಿ ಜೀವನ ದರ್ಶನ – ಪ್ರೊ. ಸ.ಸ. ಮಾಳವಾಡ

# ಉಲ್ಲಂಘಿಸಲಾವರರಂತೆ ವಿಧಿಕೃತವನು

**ಲಕ್ಷ್ಮೀಶ**

ಜೈಮಿನಿ ಭಾರತವು ಹಲವು ಕಥೆಗಳನ್ನು ತನ್ನ ಒಡಲಲ್ಲಿ ಸೇರಿಸಿಕೊಂಡಿರುವ ಒಂದು ಕಾವ್ಯವಾಗಿದೆ. ಬಂಧುಹತ್ಯಾ ದೋಷ ನಿವಾರಣೆಗಾಗಿ ವೇದವ್ಯಾಸರ ಮಾತಿನಂತೆ ಅಶ್ವಮೇಧ ಯಾಗವನ್ನು ಮಾಡಲು ಪಾಂಡವರು ನಿರ್ಧರಿಸಿದರು. ಅರ್ಜುನನ ಬೆಂಗಾವಲಲ್ಲಿ ಸಾಗಿದ ಯಾಗದ ಕುದುರೆಯ ಸಂಚಾರವನ್ನನುಸರಿಸಿ ಲಕ್ಷ್ಮೀಶನ ಕಾವ್ಯ ಮುಂದುವರಿಯುತ್ತಿರುವಂತೆ ಹಲವು ಕತೆಗಳು ಬಿತ್ತರಿಸಲ್ಪಡುತ್ತವೆ. ಇದರಲ್ಲಿ ಬರುವ ಹರಿಭಕ್ತ ಚಂದ್ರಹಾಸನ ಕಥೆಯು ಜೈಮಿನಿಭಾರತದ ರಸವತ್ತಾದ ಕಥೆಗಳಲ್ಲಿ ಒಂದಾಗಿದೆ.

ಒಳಿತು ಕೆಡುಕುಗಳ ಸಂಘರ್ಷದಲ್ಲಿ ಅಂತಿಮವಾಗಿ ಗೆಲ್ಲುವುದು ಒಳ್ಳೆಯದೇ ಎಂಬುದು ಸಾರ್ವಕಾಲಿಕ ಸತ್ಯ. ಚಂದ್ರಹಾಸನ ಕಥೆಯಲ್ಲಿ ಕೆಡುಕಿನ ಪ್ರತೀಕದಂತಿರುವ ದುಷ್ಟಬುದ್ಧಿಯು ಅಕೃತ್ಯಗಳನ್ನೆಲ್ಲಾ ಬುದ್ಧಿಪೂರ್ವಕವಾಗಿ ಕೈಗೊಳ್ಳುತ್ತಾನೆ. ಆದರೆ ಇದೊಂದರ ಅರಿವೂ ಇಲ್ಲದ ಮುಗ್ಧನಾದ ಚಂದ್ರಹಾಸನು ದುಷ್ಟಬುದ್ಧಿಯ ಕುತಂತ್ರಕ್ಕೆ ಸಿಲುಕಿದರೂ ಆತನ ಮಗಳಾದ ವಿಷಯೆಯ ಚಾತುರ್ಯದಿಂದ ಅನಿರೀಕ್ಷಿತವಾಗಿ ಪಾರಾಗುತ್ತಾನೆ.

## ಕಥಾಸಂದರ್ಭ

ಕುಂತಳ ನಗರದ ಮಂತ್ರಿ ದುಷ್ಟಬುದ್ಧಿಯು ತನ್ನ ಮಗನೇ ಮುಂದೆ ಆ ರಾಜ್ಯದ ರಾಜನಾಗಬೇಕೆಂದು ಬಯಸಿದ್ದನು. ಆದರೆ ಅಲ್ಲಿನ ಬೀದಿಯಲ್ಲಿ ಅನಾಥ ಬಾಲಕನೊಬ್ಬನನ್ನು ನೋಡಿದ ಬ್ರಾಹ್ಮಣೋತ್ತಮರು ಅವನ ಮುಖಲಕ್ಷಣವನ್ನು ನೋಡಿ ಮುಂದೆ ಈತನೇ ಈ ಸಾಮ್ರಾಜ್ಯದ ಚಕ್ರವರ್ತಿಯಾಗುವನು ಎಂದು ಹೇಳಿದಾಗ ದುಷ್ಟಬುದ್ಧಿಯು ಬಾಲಕನನ್ನು ಕೊಲ್ಲಲು ಕಟುಕರನ್ನು ನೇಮಿಸುತ್ತಾನೆ. ಕಾಲಾಂತರದಲ್ಲಿ ಕುಳಿಂದಕನೆಂಬ ಸಾಮಂತ ರಾಜನ ಬಳಿಯಲ್ಲಿ ಚಂದ್ರಹಾಸನು ಬೆಳೆಯುತ್ತಿರಲು ಒಮ್ಮೆ ದುಷ್ಟಬುದ್ಧಿಯ ಕಣ್ಣಿಗೆ ಬೀಳುತ್ತಾನೆ. ವಿಚಾರಿಸಲಾಗಿ, ತಾನು ಕೊಲ್ಲಲು ಉದ್ದೇಶಿಸಿದ ಬಾಲಕನು ಅವನೆಂದು ಗೊತ್ತಾಗುತ್ತದೆ. ದುಷ್ಟಬುದ್ಧಿಯ ಬುದ್ಧಿಯು ಕೆರಳುತ್ತದೆ. ಮುಂದಿನ ಪ್ರಸಂಗ ಪ್ರಸ್ತುತ ಪದ್ಯದಲ್ಲಿದೆ.



ಎತ್ತ ಬಲ್ಲರ್ ಸುಜನರೆಲೆಪಾರ್ಥ ಕಪಟಿಗಳ
ಚಿತ್ತದೊಳ್ ಪುದುಗಿರ್ದ ಮಾಟಮಂ ವೀಳಯವ
ನಿತ್ತು ಮನ್ನಿ–ಸಿ ಮಂತ್ರಿಪತಿ ಚಂದ್ರಹಾಸನಂ ಕರೆದು ಕುಳ್ಳಿರಿಸಿಕೊಂಡು
ಮತ್ತೆ ಮನದೊಳ್ ಮುನ್ನ– ಭೂಸುರರ್ ತನಗೆಂದ
ವೃತ್ತಾಂತಮಂ ನೆನೆದು ತನ್ನ– ಸುತರಾಳ್ಕೆಗಾ
ಯಿತ್ತು ಕಂಟಕಮಕಟ ಪಗೆಯಾದನಿವನೊರ್ವನೆಂದು ಚಿಂತಿಸುತಿರ್ದನು ೧
ಬಂಜೆಯಾಗದು ವಿಪ್ರರಂದೆನ್ನೊ–ಳೆಂದ ನುಡಿ

ರಂಜಿಸುವ ರಾಜಲಕ್ಷಣದೊಳೊಪ್ಪುವನಿವಂ
ಭಂಜಿಸದೊಡೀ ಧರಣಿಗೀತನರಸಾದಪಂ ಬಳಿಕ ತನ್ನಾ–ತ್ಮಜರ್ಗೆ
ಸಂಜನಿಸಲರಿಯದು ನೃಪಾಲತ್ವಮಗ್ಗಳಿಕೆ
ಗಂಜುವವನಲ್ಲ ಬಲವಂತನಹನೀತಂಗೆ
ನಂಜನೂಡಿಸಿ ಕೊಲ್ವುಪಾಯಮಂ ಮಾಳ್ಪೆನೆಂದೆಣಿಸಿದಂ ದುಷ್ಟಬುದ್ಧಿ ೨

ರಾಕಾಶಶಾಂಕನಭ್ಯುದಯಮಂ ಕೆಡಿಸಿ ತ
ನ್ನಾ–ಕಾರಮಂ ತೋರಿಸುವೆನೆಂಬ ಕತ್ತಲೆವೊ
ಲಾ ಕಮಲಲೋಚನನ ಭೃತ್ಯನಂ ಕೊಲಿಸಿ ತಾಂ ಬಾಳ್ವೆನೆಂಬುಜ್ಜುಗದೊಳು
ಆ ಕುಮತಿಯಹ ಮಂತ್ರಿ ಬಳಿಕೊಂದು ಲೇಖನವ
ನೇಕಾಂತದೊಳ್ ಬರೆಸಿ ಮೇಣದಕೆ ಮುದ್ರೆಯಂ
ಜೋಕೆಯಿಂದಳವಡಿಸಿ ಶಶಿಹಾಸನಂ ನೋಡಿ ನಸುನಗುತಲಿಂತೆಂದನು ೩
ಉರ್ವ ಮಂತ್ರದ ಕಜ್ಜಮಿದು ಚಂದ್ರಹಾಸ ನೀ

ನೊರ್ವನೆ ಹಯಾರೂಢನಾಗಿ ನಾಲ್ವರ್ ಸೇವ
ಕರ್ವೆರಸಿ ರಾಜಧಾನಿಗೆ ಪೋಗಿ ತನ್ನ– ಮಗ ಮದನಂಗೆ ಮುದ್ರೆಸಹಿತ
ಸರ್ವಜನಮರಿಯದಂತೀವುದೀ ಪತ್ರಿಕೆಯ
ನುರ್ವರೆಯೊಳಾವೆಸಗಿದತಿಶಯದ ಮಾಳ್ಕೆ ನ
ಮ್ಮಿರ್ವರೊಳ್ ಗುಪ್ತಮಾಗಿರಲೆಂದು ಕೊಟ್ಟನಾ ಮಂತ್ರಿ ತಲ್ಲೇಖನವನು ೪

ಪ್ರೀತಿಯಿಂ ಪೇಳ್ದನಂತಸ್ಥಮಂ ತನ್ನೊ–ಳೀ
ಮಾತು ನಿಶ್ಚಯವೆಂದು ನಂಬಿ ಕೈಕೊಂಡು ಹ
ರ್ಷಾತಿಶಯದಿಂದ ಮಂತ್ರಿಗೆ ಮಣಿದು ಬೀಳ್ಕೊಂಡು ವಂದಿಸಿ ಕುಳಿಂದನಡಿಗೆ
ಆತನೊಳ್ ಪರಕೆವೆತ್ತೊಡನೆ ಕಳುಹಿಸಿಕೊಂಡು
ಮಾತೆ ಮೇಧಾವಿನಿಗೆ ಬಂದು ನಿರ್ಗಮವನಾ
ಖ್ಯಾತಿಸಿ ಪದಾಂಬುಜಕೆ ಪಣೆಯಿಟ್ಟನಾ ಚಂದ್ರಹಾಸನಭ್ಯಗ್ರದಿಂದ ೫

ಆ ಸುದತಿ ಪಣೆವಿಡಿದು ನೆಗಪಿ ಸುಕುಮಾರಂಗೆ
ಸೇಸೆದಳಿದಾರತಿಯನೆತ್ತಿ ತಿಲಕವನಿಟ್ಟು
ಭಾಸುರ ಸುಲಾಜ ದಧಿ ದೂರ್ವಾಕ್ಷತೆಗಳೊಡನೆ ತಳಿಗೆದಂಬುಲವನಿತ್ತು
ಲೇಸೊದವಲಧ್ವದೊಳ್ ನಿನ–ವಯವಂಗಳಂ
ವಾಸುದೇವಂ ಕಾಯಲನುಕೂಲೆಯಾಗಿಹ ವ
ಧೂಸಮನ್ವಿತನಾಗಿ ರಾಜ್ಯಮಂ ಪಡೆಯೆಂದು ಪರಸಿ ಬೀಳ್ಕೊಟ್ಟಳಂದು ೬

ಹಯವರ ಸಮಾರೂಢನಾಗಿ ಸೇವಕ ಚತು
ಷ್ಟಯದೊಡನೆ ಸೂಚಿತ ಶುಭೋದಯದ ಶಕುನಾವ
ಳಿಯನಾಲಿಸುತ ಬಟ್ಟೆವಿಡಿದು ಕುಂತಳಪುರದ ಬಾಹ್ಯೋಪವನಕೆ ಬರಲು
ನಯಸರದ ಕೋಗಿಲೆಯ ಸಾದರದ ನುಡಿಯೊಳತಿ
ಶಯ ಫಲೋತ್ಕರದ ತರುಶಾಖೆಗಳ ಕೈಗಾಣಿ
ಕೆಯೊಳಿದಿರ್ಗೊಂಡುಪಚರಿಸುವಂತೆ ಚಂದ್ರಹಾಸನ ಮುಂದೆ ಕಣ್ಗೆಸೆದುದು ೭

ತಳಿರ್ದುರುಗಿದೆಳೆಮಾವುಗಳ ನೆಳಲ್ ಕವಿದ ನಿ
ರ್ಮಲ ಪುಳಿನತಳದಿಂ ತೊಡರ್ದಡರ್ದಲರ್ವಳ್ಳಿ
ಗಳ ಮಂಟಪಂಗಳಂ ವಿವಿಧ ಮಣಿಮಯ ಕೃತಕ ಗಿರಿ ಕಂದರಂಗಳಿಂದ
ತೊಳಪ ರನ–ದ ಪಾಸರೆಗಳಿಂದ ರಂಜಿಸುವ
ನಳಿನೋತ್ಪಲಪ್ರಕರ ಶೋಭಿತ ಸರೋವರಂ
ಗಳ ರಮ್ಯಸೋಪಾನದಿಂದ ತದ್ರಾಜಕೇಳೀವನಂ ಕಣ್ಗೆಸೆದುದು ೮

ಹೃದ್ಯಮಾಗಿಹ ಶೈತ್ಯ ಸೌರಭ್ಯಮಾಂದ್ಯದಿಂ
ದುದ್ಯಾನಮಾರುತಂ ಬೀಸಿ ಮಾರ್ಗಶ್ರಮಂ
ಸದ್ಯಂ ಪ್ರಶಮನಮಾಗಲ್ಕೆ ಹರ್ಷದೊಳಲ್ಲಿ ಕೃಷ್ಣನಂ ಪೂಜೆಗೈವ
ಉದ್ಯೋಗದಿಂದಿಳಿದು ತಣ್ಣೆಳಲ ತರುಮೂಲ
ಕುದ್ಯತ್ತುರಂಗಮಂ ನೀರ್ಗುಡಿಸಿ ಕಟ್ಟಿ ನಿರ
ವದ್ಯಗುಣನಿಧಿ ಚಂದ್ರಹಾಸನೆಳವುಲ್ಗಳಂ ತಿರಿತರಿಸಿ ಮುಂದಿಟ್ಟನು ೯

ತೇಜಿಯಂ ಕಟ್ಟಿದೆಡೆಯೊಳ್ ಸೇವಕರನಿರಿಸಿ
ರಾಜವನದೊಳ್ ಪೊಕ್ಕು ಶಶಿಹಾಸನಲ್ಲಿ ವಿ
ಭ್ರಾಜಿಸುವ ನಿರ್ಮಲಸರಸ್ತೀರದೊಳ್ ಮಿಂದು ಶುಚಿಯಾಗಿ ಸುಸ್ಥಳದೊಳು



ರಾಜೀವ ಮೊದಲಾದಲರ್ಗಳಂ ತಿರಿದು ಹರಿ
ಪೂಜೆಯಂ ಮಾಡಿ ತಾಂ ತಂದ ಪಾಥೇಯಮಂ
ಭೋಜನಂಗೈದು ವಿಶ್ರಮನಾಗಿ ತಳಿತ ಮಾಮರನ ನೆಳಲಂ ಸಾರ್ದನು ೧೦

ತಿರಿದೆಳೆದಳಿರ್ಗಳಂ ಪಾಸಿ ಕುಳ್ಳಿರ್ದೊರ್ಯ್ಯ
ನೊರಗಲ್ಕೆ ನಡುವಗಲ ಬಿಸಿಲಿಂದ ಮಾರ್ಗದೊಳ್
ನೆರೆ ಬಳಲ್ದಿಹ ಚಂದ್ರಹಾಸಂಗೆ ತಣ್ಣೆಲರ ಸೊಗಸಿಂದ ಕಣ್ಣೆವೆಗಳು
ಸೆರೆಗೊಂಡುವಾಲಿಗಳನಾತ್ಮೀಯಕೃತ್ಯಮಂ
ಮರೆದು ನಿದ್ರಾಲೋಲನಾಗಿ ಮಲಗಿದನವಂ ೧೧

ಮಿರುಗುವಹಿತಲ್ಪದೊಳ್ ದೇವಪುರನಿಲಯ ಲಕ್ಷ್ಮೀವರಂ ಪವಡಿಸುವೊಲು
ಕುಂತೀಕುಮಾರ ಕೇಳ್ ಚಂದ್ರಹಾಸಂ ಬನದೊ
ಳಿಂತು ಸುಖನಿದ್ರೆಯಿಂದಿರುತಿರ್ಪ ಸಮಯದೊಳ್
ಕುಂತಳೇಂದ್ರಂಗೆ ಚಂಪಕಮಾಲಿನೀ ನಾಮದೊರ್ವ ಮಗಳುಂಟವಳ್ಗೆ
ಸಂತತಂ ಮಂತ್ರಿಸುತೆ ವಿಷಯೆ ಸಖಿಯಾಗಿರ್ಪ
ಳಂತರಿಸದವರಿರ್ವರುಂ ಬಂದರಲ್ಲಿಗೆ ವ
ಸಂತಕಾಲಂ ಪ್ರಾಪ್ತಮಾಗಿರೆ ಜಲಕ್ರೀಡೆಗಾಳಿಯರ ಗಡಣದಿಂದ ೧೨

ಮುದದಿಂದ ವಿಷಯೆ ಚಂಪಕಮಾಲಿನಿಯರೊಡನೆ
ಸುದತಿಯರ್ ನಾನಾಪ್ರಕಾರದಿಂ ಕ್ರೀಡಿಸಿದ
ರುದಕದೊಳ್ ಬಳಿಕ ತಮ್ಮಾನನ ಸುಧಾಂಶುಮಂಡಲದ ಬೆಳುದಿಂಗಳಿಂದ
ಸದಮಲ ಸರೋವರದ ತೀರದೊಳ್ ಬಳಸಿ ಕ
ಟ್ಟಿದ ಚಂದ್ರಕಾಂತಸೋಪಾನದೊಳೊಸರ್ವ ನೀ
ರೊದವಿತೆನೆ ಮೈಗಳ್ಗೆ ತಣ್ಣಸಂ ತೋರಲಾ ಕೊಳದಿಂದ ಪೊರಮಟ್ಟರು ೧೩

ಬಳಿಕೊರ್ವರೊರ್ವರಂ ನೋಡುತ್ತ ಕೂಡುತ್ತ
ನಲವಿಂದ ನೃತ್ಯಮಂ ಮಾಡುತ್ತ ಪಾಡುತ್ತ
ಸೆಳಸಿ ಸರಸೋಕ್ತಿಗಳನಾಡುತ್ತ ತೀಡುತ್ತ ಬೆಳ–ಗೆಯ ಬೆಡಂಗುಗಳನು
ಅಲರ್ಗಳಂ ತೆಗೆತೆಗೆದು ನೀಡುತ್ತ ಸೂಡುತ್ತ
ಲಲಿತ ಮಧು ಚಷಕಮಂ ಬೇಡುತ್ತ ಕಾಡುತ್ತ
ಕಲೆಗಳ ವಿಲಾಸಮಂ ಪೂಡುತ್ತ ಕೂಡುತ್ತ ಕಣ್ಗೆಸೆದರೆಳೆವೆಣ್ಗಳು ೧೪

ಆಳಿಯರೊಳಿಂತು ಚಂಪಕಮಾಲಿನಿಗೆ ಸರಸ
ಕೇಳಿ ವೆಗ್ಗಳಿಸಿರ್ದ ಸಮಯದೊಳಲರ್ಗೊರ್ಯ್ವ
ಬೇಳಂಬದಿಂದ ಕೆಲಸಿಡಿದು ಬಂದಾ ವಿಷಯೆ ಚೂತದ್ರುಮದ ನೆಳಲೊಳು

ತೋಳ ತಲೆಗಿಂಬಿನ ತಳಿರ್ವಸೆಯ ಮೇಲೆ ತಂ
ಗಾಳಿಗೊಡ್ಡಿದ ಮೆಯ್ಯ ಸೊಗಸಿಂದ ಮರೆದು ನಿ
ದ್ರಾಲೋಲನಾಗಿ ಮಲಗಿಹ ಚಂದ್ರಹಾಸನಂ ಕಂಡು ಸೈವೆರಗಾದಳು ೧೫

ಸುತ್ತ ನೋಡುವಳೊಮ್ಮೆ ನೂಪುರವಲುಗದಂತೆ
ಹತ್ತೆ ಸಾರುವಳೊಮ್ಮೆ ಸೋಂಕಲೆಂತಹುದೆಂದು
ಮತ್ತೆ ಮುರಿದಪಳೊಮ್ಮೆ ಹಜ್ಜೆ ಹಜ್ಜೆಯ ಮೇಲೆ ಸಲ್ವಳಮ್ಮದೆ ನಿಲ್ವಳು
ಚಿತ್ತದೊಳ್ ನಿಶ್ಚೈಸಿ ನೆರೆಯಲೆಳಸುವಳೊಮ್ಮೆ
ಹೊತ್ತಲ್ಲದನುಚಿತಕೆ ಬೆದರಿ ಹಿಂಗುವಳೊಮ್ಮೆ
ತತ್ತಳದ ಬೇಟದೊಳ್ ಬೆಂಡಾಗಿ ವಿಷಯೆ ನಿಂದಿರ್ದಳಾತನ ಪೊರೆಯೊಳು ೧೬

ದಿವಿಜೇಂದ್ರತನಯ ಕೇಳೀ ತೆರದೊಳಾಗ ನವ
ಯುವತಿ ನಿಂದೀಕ್ಷಿಸುತ ಕಂಡಳವನಂಗದೊಳೆ
ಸೆವ ರುಚಿರ ಕಂಚುಕದ ತುದಿಸೆರಗಿನೊಳ್ ಕಟ್ಟಿಕೊಂಡಿರ್ದ ಪತ್ರಿಕೆಯನು
ತವಕದಿಂ ಬಿಚ್ಚಿ ಮುದ್ರೆಯನೊ–ೀಸರಿಸಿತೆಗೆದು
ವಿವರದೊಳ್ ತನ– ತಂದೆಯ ಹೆಸರ ಬರೆಹಮಿರೆ
ಲವಲವಿಕೆ ಮಿಗೆ ನೋಡಿ ಹರ್ಷಪುಳಕದೊಳಂದು ನಿಂದೋದಿಕೊಳುತಿರ್ದಳು ೧೭

ಶ್ರೀಮತ್ಸಚಿವಶಿರೋಮಣಿ ದುಷ್ಟಬುದ್ಧಿ ಸು
ಪ್ರೇಮದಿಂ ತನ– ಮಗ ಮದನಂಗೆ ಮಿಗೆ ಪರಸಿ
ನೇಮಿಸಿದ ಕಾರ್ಯಮೀ ಚಂದ್ರಹಾಸಂ ಮಹಾಹಿತನೆಮಗೆ ಮೇಲೆ ನಮ್ಮ
ಸೀಮೆಗರಸಾದಪಂ ಸಂದೇಹಮಿಲ್ಲಿದಕೆ
ಸಾಮಾನ್ಯದವನಲ್ಲ ನಮಗೆ ಮುಂದಕೆ ಸರ್ವ
ಥಾಮಿತ್ರನಹಪ್ಪನೆಂದೀತನಂ ಕಳುಹಿದೆವು ನಿನ– ಬಳಿಗಿದನರಿವುದು ೧೮

ಹೊತ್ತುಗಳೆಯದೆ ಬಂದ ಬಳಿಕಿವನ ಕುಲಶೀಲ
ವಿತ್ತ ವಿದ್ಯಾವಯೋ ವಿಕ್ರಮಂಗಳನೀಕ್ಷಿ
ಸುತ್ತಿರದೆ ವಿಷವ ಮೋಹಿಸುವಂತೆ ಕೊಡುವುದೀತಂಗೆ ನೀನಿದರೊಳೆಮಗೆ
ಉತ್ತರೋತ್ತರಮಪ್ಪುದೆಂದು ಬರೆದಿಹ ಲಿಪಿಯ
ನೆತ್ತಿ ವಾಚಿಸಿಕೊಂಡು ತರಳಾಕ್ಷಿ ತಾನದಕೆ
ಮತ್ತೊಂದಭಿಪ್ರಾಯಮಂ ತಿಳಿದಳುಲ್ಲಂಘಿಸುವರುಂಟೆ ವಿಧಿಕೃತವನು ೧೯

ಈತಂ ತಮಗೆ ಮಹಾ ಹಿತನೆಂದು ತಮ್ಮ ಧರೆ
ಗೀತನರಸಹನೆಂದು ಕುಲಶೀಲ ವಿದ್ಯೆಗಳ
ನೀತನೊಳರಸಬೇಡವೆಂದು ಮುಂದಕೆ ಸರ್ವಥಾ ಮಿತ್ರನಪ್ಪನೆಂದು

ಈತಂಗೆ ವಿಷಯೆ ಮೋಹಿಸುವಂತೆ ಕೊಡುವುದೆಂ
ದಾ ತಾತನಣ್ಣಂಗೆ ಬರೆಸಿ ಕಳುಹಿದ ಪತ್ರ
ವೇ ತಪ್ಪದಿದು ವರ್ಣಪಲ್ಲಟದ ಮೋಸವೆಂದಬಲೆ ಭಾವಿಸುತಿರ್ದಳು ೨೦

ಕಡುಚೆಲ್ವನಾದ ವರನಂ ಕಂಡು ನಿಶ್ಚೈಸಿ
ತಡೆಯದಿಂದೀತಂಗೆ ವಿಷಯೆ ಮೋಹಿಸುವಂತೆ
ಕೊಡುವುದೆಂದಲ್ಲಿಂದ ತನ– ಪಿತನೀತನಂ ಕಳುಹಿದಂ ಸುತನ ಪೊರೆಗೆ
ಒಡಗೂಡದಿರದೆನ– ಮನದೆಣಿಕೆ ಪತ್ರಿಕೆಯೊ
ಳೆಡಹಿ ಬರೆದಕ್ಕರದ ಬೀಳಿರ್ದೊಡದರಿಂದ
ಕೆಡುವುದಗ್ಗದ ಕಜ್ಜಮೆಂದಾ ತರುಣಿ ತಾನದಂ ತಿದ್ದಲನುಗೈದಳು ೨೧

ತಪ್ಪಿರ್ದ ಲಿಪಿಯೊಳ್ ವಕಾರಮಂ ತೊಡೆದಲ್ಲಿ
ಗೊಪ್ಪುವ ಯಕಾರಮಂ ಕೆಲಬಲದ ಮಾಮರದೊ
ಳಿಪ್ಪ ನಿರ್ಯಾಸಮಂ ತೆಗೆದು ಕಿರುವೆರಳುಗುರ್ಗೊನೆಯಿಂದ ತಿದ್ದಿ ಬರೆದು
ಅಪ್ಪಂತೆ ಮೊದಲಿರ್ದ ಮುದ್ರೆಯಂ ಸಂಘಟಿಸಿ
ಕುಪ್ಪಸದ ಸೆರಗಿನೊಳ್ ಕಟ್ಟಿ ಪಳೆಯವೊಲಿರಿಸಿ
ಸಪ್ಪುಳಾಗದ ತೆರದೊಳೆದ್ದು ಮೆಲ್ಲನೆ ಮಂತ್ರಿಸುತೆ ತೊಲಗಿ ಬರುತಿರ್ದಳು ೨೨

## ಲಕ್ಷ್ಮೀಶ

ಕನ್ನಡದ ಅಗ್ರಮಾನ್ಯ ಕವಿಗಳಲ್ಲಿ ಲಕ್ಷ್ಮೀಶನೂ ಒಬ್ಬ. ಈತನ ಕಾಲ ಕ್ರಿ. ಶ. ಸುಮಾರು ೧೬ನೆಯ ಶತಮಾನ. ಊರು ಕರ್ನಾಟಕದ ದೇವನೂರು / ದೇವಪುರ. ಕರ್ಣಾಟಕವಿಚೂತವನ ಚೈತ್ರ ಎಂಬುದು ಈತನ ಬಿರುದು. ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಜೈಮಿನಿ ಭಾರತವು ನಾದಮಾಧುರ್ಯಕ್ಕೆ ಹೆಸರಾಗಿದೆ. ರಸಿಕ ಸಹೃದಯರು ಈತನನ್ನು 'ನಾದಲೋಲ'ನೆಂದೂ 'ಉಪಮಾಲೋಲ'ನೆಂದೂ ಹೊಗಳಿರುವರು. ಸಂಸ್ಕೃತದಲ್ಲಿ ಜೈಮಿನಿ ಮುನಿಯು ಬರೆದ ಭಾರತ ಕಥೆಯನ್ನು ಆಧರಿಸಿ ಈತ ಕನ್ನಡದಲ್ಲಿ ಭಾರತವನ್ನು ಬರೆದಿರುವುದರಿಂದ ಈತನ ಕೃತಿಯೂ ಜೈಮಿನಿಭಾರತವೆಂದೇ ಪ್ರಸಿದ್ಧಿಯನ್ನು ಪಡೆದಿದೆ. ಪಾಂಡವಾಶ್ವಮೇಧದ ಕಥಾವಸ್ತುವನ್ನು ಮುಖ್ಯವಾಗಿರಿಸಿಕೊಂಡು ಕಾವ್ಯವನ್ನು ಹೆಣೆದಿದ್ದರೂ ಸಾಂದರ್ಭಿಕವಾಗಿ ರಾಮಾಯಣದಲ್ಲಿನ ಸೀತಾಪರಿತ್ಯಾಗದ ಭಾಗವನ್ನೂ ಅಳವಡಿಸಿಕೊಂಡಿದ್ದಾನೆ.

## ಪದವಿಂಗಡಣೆ

ಬಾಳ್ವೆನೆಂಬುಜ್ಜಗದೊಳು – ಬಾಳ್ವೆನು + ಎಂಬ + ಉಜ್ಜುಗದೊಳು
ಸರ್ವಜನಮರಿಯದಂತೀವುದೀ– ಸರ್ವಜನಂ + ಅರಿಯದಂತೆ + ಈವುದು + ಈ ತಲ್ಲೇಖನ

– ತತ್ + ಲೇಖನ

ಕೈಗಾಣಿಕೆಯೊಳಿದಿರ್ಗೊಂಡುಪಚರಿಸುವಂತೆ – ಕೈ + ಕಾಣಿಕೆಯೊಳ್ + ಇದಿರ್ + ಕೊಂಡು + ಉಪಚರಿಸುವಂತೆ

ತಳಿರ್ದುರುಗಿದೆಳೆಮಾವುಗಳ – ತಳಿರ್ + ತುರುಗಿದ + ಎಳೆಮಾವುಗಳ

ತದ್ರಾಜ – ತತ್ + ರಾಜ

ಸರಸ್ತೀರದೊಳ್ – ಸರಸ್ + ತೀರದೊಳ್

ಸುಖನಿದ್ರೆಯಿಂದಿರುತಿರ್ಪ – ಸುಖನಿದ್ರೆಯಿಂದ + ಇರುತಿರ್ಪ

ಕಿರುವೆರಳುಗುರ್ಗೊನೆಯಿಂದ – ಕಿರುವೆರಳ + ಉಗುರ + ಕೊನೆಯಿಂದ

ತಿರಿದೆಳೆದಳಿರ್ಗಳಂ – ತಿರಿದು + ಎಳೆ + ತಳಿರ್ಗಳಂ

ನೃಪಾಲತ್ವಮಗ್ಗಳಿಕೆಗಂಜುವವನಲ್ಲ – ನೃಪಾಲತ್ವಂ + ಅಗ್ಗಳಿಕೆಗೆ + ಅಂಜುವವನು + ಅಲ್ಲ

ಪತ್ರಿಕೆಯನುರ್ವರೆಯೊಳಾವೆಸಗಿದತಿಶಯದ – ಪತ್ರಿಕೆಯನು + ಉರ್ವರೆಯೊಳು + ಆವು + ಎಸಗಿದ + ಅತಿಶಯದ

ಸೇಸೆದಳಿದಾರತಿಯನೆತ್ತಿ – ಸೇಸೆ + ತಳಿದು + ಆರತಿಯನು + ಎತ್ತಿ

ಲೇಸೊದವದಲಧ್ವದೊಳ್– ಲೇಸು + ಒದವಲಿ + ಅಧ್ವದೊಳ್

ತೊಡರ್ದಡರ್ದಲರ್ವಳ್ಳಿ – ತೊಡರ್ದು + ಅಲರ್ದ + ಅಲರ್ + ಬಳ್ಳಿ

ಮಾಂದ್ಯದಿಂದುದ್ಯಾನಮಾರುತಂ – ಮಾಂದ್ಯದಿಂದ + ಉದ್ಯಾನಮಾರುತಂ

ಸೆರೆಗೊಂಡುವಾಲಿಗಳನಾತ್ಮೀಯಕೃತ್ಯಮಂ– ಸೆರೆಗೊಂಡುವು + ಆಲಿಗಳನು + ಆತ್ಮೀಯಕೃತ್ಯಮಂ.

## ವಿಶದೀಕರಣ

ಎತ್ತ ಬಲ್ಲರ್ ಸುಜನರೆಲೆ ಪಾರ್ಥ – ಇಲ್ಲಿ ದೇವರ್ಷಿ ನಾರದರು ಚಂದ್ರಹಾಸನ ಕಥೆಯನ್ನು ಅರ್ಜುನನಿಗೆ ವಿವರಿಸುವುದು.

## ಪದಗಳ ಅರ್ಥ

ಪುದುಗಿರ್ದ – ಅಡಗಿರುವ (ಪುದುಗಿ ಇರ್ದ). ಮಾಟ – ಕಪಟ, ಕೆಲಸ. ಭೂಸುರರ್ – ಬ್ರಾಹ್ಮಣರು. ವೃತ್ತಾಂತ – ವಿಚಾರ (ಅನಾಥ ಮಗು ಚಂದ್ರಹಾಸನು ಮುಂದೆ ರಾಜನಾಗುವನೆಂದು ಬ್ರಾಹ್ಮಣರು ಹೇಳಿದ ವೃತ್ತಾಂತ). ಕಂಟಕ – ಅಡ್ಡಿ, ತೊಂದರೆ. ಪಗೆ – ಹಗೆ, ಶತ್ರು. ಭಂಜಿಸು – ನಾಶಮಾಡು. ಆತ್ಮಜ – ಮಗ. ಸಂಜನಿಸು – ಪ್ರಾಪ್ತವಾಗು, ಲಭಿಸು. ನಂಜು – ವಿಷ. ರಾಕಾ – ಹುಣ್ಣಿಮೆ. ರಾಕಾಶಶಾಂಕ – ಪೂರ್ಣಚಂದ್ರ. ಹಯ – ಕುದುರೆ. ಭೃತ್ಯ – ಸೇವಕ. ಉಜ್ಜುಗ – ಉದ್ಯೋಗ, ಕೆಲಸ. ಉರ್ವ – ಶ್ರೇಷ್ಠವಾದ. ಉರ್ವರೆ – ಭೂಮಿ. ಅಂತಃಸ್ಥ – ಮನಸ್ಸು, ಅಂತರಂಗ. ಪಣೆಯಿಡು – ಹಣೆಯನ್ನು ಇಡು, ನಮಸ್ಕರಿಸು. ನಿರ್ಗಮ – ಹೋಗುವಿಕೆ. ಆಖ್ಯಾತಿಸಿ

– ಹೇಳಿ. ಪದಾಂಬುಜ – ಪಾದಕಮಲ. ಅಭ್ಯಗ್ರ – ಹತ್ತಿರ. ನೆಗಪಿ – ಮೇಲಕ್ಕೆತ್ತಿ. ಸುಲಾಜ – ಶುದ್ಧವಾದ ಅರಳು. ಸೇಸೆ – ಅಕ್ಷತೆ. ಸುದತಿ – ಸುಂದರಿ, ಸ್ತ್ರೀ, ಸುಂದರವಾದ ಹಲ್ಲುಗಳುಳ್ಳವಳು. ದಧಿ – ಮೊಸರು. ದೂರ್ವೆ – ಗರಿಕೆ. ಭಾಸುರ – ಹೊಳೆಯುವ. ಬಟ್ಟೆ – ದಾರಿ. ಫಲೋತ್ಕರ – ಫಲಗಳ ರಾಶಿ. ತಂಬುಲ – ತಾಂಬೂಲ. ಕಣ್ಗೆಸೆ – ಕಂಗೊಳಿಸು. ಬಾಹ್ಯೋಪವನ – ಪಟ್ಟಣದ ಹೊರಗಿನ ಉದ್ಯಾನ. ಪುಳಿನ – ಮರಳು ದಿನ್ನೆ. ತೊಡರ್ – ಆಶ್ರಯಿಸು. ಅಡರ್ – ಹಬ್ಬು. ಕಂದರ – ಗುಹೆ. ತಳಿರ್ದುರುಗಿದ – ಚಿಗುರುಗಳು ನಿಬಿಡವಾಗಿರುವ. ಪಾಸರೆ – ಹಾಸುಬಂಡೆ, ಹಾಸುಗಲ್ಲು. ತೊಳಪ – ತೊಳಗುವ. ಪ್ರಕರ – ಸಮೂಹ. ನಳಿನ – ತಾವರೆ. ಉತ್ಪಲ – ನೈದಿಲೆ. ಸೌರಭ್ಯ – ಸುವಾಸನೆ. ಪ್ರಶಮನಮಾಗು – ನೀಗು, ಕಡಿಮೆಯಾಗು. ತೇಜಿ – ಕುದುರೆ. ವಿಭ್ರಾಜಿಸು – ಶೋಭಿಸು. ರಾಜೀವ – ತಾವರೆ. ತಿರಿ – ಕೊಯ್ಯು, ಕೀಳು. ಸರಸ್ತೀರ – ಸರಸ್ + ತೀರ ಸರೋವರದ ತೀರ. ಪಾಥೇಯ – ಬುತ್ತಿ. ವಿಶ್ರಮ – ವಿಶ್ರಾಂತಿ. ತಣ್ಣೆಲರ್ – ತಂಪಾದಗಾಳಿ. ನೆರೆ – ಬಹಳ, ತುಂಬ. ಅಹಿತಲ್ಪ – ಹಾವಿನ ಹಾಸಿಗೆ. ಆಳಿಯರು – ಸಖಿಯರು. ತಣ್ಣಸು – ತಂಪು, ಶೈತ್ಯ. ವಿಶ್ರಮ – ವಿಶ್ರಾಂತಿ. ಸದಮಲ – ನಿರ್ಮಲ, ತಿಳಿಯಾದ. ಸುಧಾಂಶು ಮಂಡಲ – ಚಂದ್ರಮಂಡಲ. ಸರಸೋಕ್ತಿ – ರಸವತ್ತಾದ ಮಾತು. ಚಷಕ – ಮಧುವನ್ನು ಕುಡಿಯುವ ಪಾತ್ರೆ. ಬೇಳಂಬ – ವಿಚಾರ. ಚೂತದ್ರುಮ – ಮಾವಿನಮರ. ತಳಿರ್ವಸೆ – ಚಿಗುರಿನಚಾಪೆ/ಹಾಸಿಗೆ, ತಳಿರಪಾಸು > ತಳಿರ್ವಾಸು > ತಳಿರ್ವಸೆ. ಸೈವೆರಗಾಗು – ಅಚ್ಚರಿಗೊಳ್ಳು. ತತ್ತಳ – ಗಾಬರಿ. ಹಜ್ಜೆ ಹಜ್ಜೆಯ ಮೇಲೆ ಸಲ್ವಳಮ್ಮದೆ ನಿಲ್ವಳು – ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತ ಸಮೀಪಿಸಲು ಅನುವಾಗುವಳು, ಸಾಧ್ಯವಾಗದೆ ನಿಲ್ಲುವಳು. ಅಮ್ಮು – ಸಮರ್ಥವಾಗು. ಬೇಟ – ಕಾಮಾಸಕ್ತಿ. ಬೆಂಡಾಗಿ – ಕ್ಷೀಣಿಸಿ. ಕಂಚುಕ – ಎದೆಗವಚ. ಪಿಂಗು – ಹಿಂದೆಸರಿಯು. ವಿವರ – ವಿಸ್ತಾರವಾದ ಹೇಳಿಕೆ. ದಿವಿಜೇಂದ್ರ ತನಯ – ಅರ್ಜುನ, ದೇವೇಂದ್ರನ ಮಗ. ಉತ್ತರೋತ್ತರ – ಹೆಚ್ಚಾಗುವ, ಹೆಚ್ಚುತ್ತಾ ಹೋಗುವ, ಅಭಿವೃದ್ಧಿ. ವಿಧಿಕೃತ – ಹಣೆಬರೆಹ, ವಿಧಿಯು ಮಾಡಿದ. ವರ್ಣಪಲ್ಲಟ – ಅಕ್ಷರ ವ್ಯತ್ಯಾಸ. ಪೊರೆಗೆ – ಬಳಿಗೆ. ಬೀಳು – ತಪ್ಪು, ದೋಷ, ಸ್ಖಾಲಿತ್ಯ. ನಿರ್ಯಾಸ – ಅಂಟು, ರಸ.

## ಒಂದು ವಾಕ್ಯದಲ್ಲಿ ಉತ್ತರಿಸಿರಿ

- ಈ ಕಾವ್ಯಭಾಗದಲ್ಲಿ ಬಂದಿರುವ 'ಕಮಲಲೋಚನನ ಭೃತ್ಯ'ನೆಂದರೆ ಯಾರು?
- ದುಷ್ಟಬುದ್ಧಿಯು ಚಂದ್ರಹಾಸನನು– ಯಾರ ಬಳಿಗೆ ಕಳುಹಿಸಿ ಕೊಟ್ಟನು?
- ದುಷ್ಟಬುದ್ಧಿಯು ಕಳುಹಿಸಿ ಕೊಟ್ಟ ಪತ್ರದಲ್ಲಿ ವಿಷಯೆಯು ಮಾಡಿದ ಬದಲಾವಣೆಯೇನು?
- 'ಆನನ ಸುಧಾಂಶು ಮಂಡಲದ ಬೆಳದಿಂಗಳು' ಇಲ್ಲಿರುವ ಅಲಂಕಾರ ಯಾವುದು?

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಕುಂತಳ ನಗರದ ಬಾಹ್ಯೋಪವನವನ್ನು ಲಕ್ಷ್ಮೀಶನು ಹೇಗೆ ವರ್ಣಿಸಿರುವನು?
- 'ಮಹಾಹಿತ' 'ಸರ್ವಥಾಮಿತ್ರ' ಈ ಪದಗಳಲ್ಲಿರುವ ದ್ವಂದ್ವಾರ್ಥಗಳನ್ನು ಸ್ಪಷ್ಟಪಡಿಸಿರಿ.
- 'ಉಲ್ಲಂಘಿಸುವರುಂಟೆ ವಿಧಿ ಕೃತವನು' ಎಂಬ ಶೀರ್ಷಿಕೆಯು ಈ ಕಾವ್ಯಭಾಗಕ್ಕೆ ಸೂಕ್ತವಾಗಿದೆಯೇ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.
- ತಾಯಿ ಮೇಧಾವಿನಿಯು ಚಂದ್ರಹಾಸನನ್ನು ಕುಂತಳ ನಗರಕ್ಕೆ ಬೀಳ್ಕೊಟ್ಟಾಗ ಯಾವ ಮಾತುಗಳಿಂದ ಹರಸಿದಳು?
- ದುಷ್ಟಬುದ್ಧಿಯ ಸಂಚು ಯಾವುದು? ಇದು ವಿಫಲವಾದುದು ಹೇಗೆ?

## ಚಟುವಟಿಕೆಗಳು

- ವಿಷಯೆಯ ಪಾತ್ರ ಚಿತ್ರಣವನ್ನು ಮಾಡಿರಿ.
- ಅಧಿಕಾರವು ತನ್ನ ಮಗನಿಗೇ ಸಿಗಬೇಕೆಂಬ ದುಷ್ಟ ಬುದ್ಧಿಯ ಚಿಂತನೆಯನ್ನು ಈಗಿನ ರಾಜಕೀಯ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಚರ್ಚಿಸಿ ಬರೆಯಿರಿ.
- ಕಾವ್ಯಭಾಗದ ಆಶಯವನ್ನು ಸಂಕ್ಷಿಪ್ತವಾಗಿ ಬರೆಯಿರಿ.
- 'ಉಲ್ಲಂಘಿಸುವರುಂಟೆ ವಿಧಿಕೃತವನು' ಪಾಠಭಾಗವನ್ನು ಕಾವ್ಯ ವಾಚನ ಪ್ರವಚನ ಕಾರ್ಯಕ್ರಮದ ಮೂಲಕ ತರಗತಿಯಲ್ಲಿ ಪ್ರಸ್ತುತ ಪಡಿಸಿರಿ.
- ಚಂದ್ರಹಾಸನಿಗೆ ಸಂಬಂಧಿಸಿದ ಕಥೆಯನ್ನು 'ಲಕ್ಷ್ಮೀಶನ ಕಥೆಗಳು' ಕೃತಿಯಿಂದ ಸಂಗ್ರಹಿಸಿ ಬರೆಯಿರಿ.

**ಕೆಳಗಿನ ಪದ್ಯದ ಸ್ವಾರಸ್ಯವನ್ನು ಬರೆಯಿರಿ.**

ರಾಕಾಶಶಾಂಕನಭ್ಯುದಯಮಂ ಕೆಡಿಸಿ ತ
ನ್ನಾಕಾರಮಂ ತೋರಿಸುವೆನೆಂಬ ಕತ್ತಲೆವೊ
ಲಾ ಕಮಲಲೋಚನನ ಭೃತ್ಯನಂ ಕೊಲಿಸಿ ತಾಂ ಬಾಳ್ವೆನೆಂಬುಜ್ಜುಗದೊಳು
ಆ ಕುಮತಿಯಹ ಮಂತ್ರಿ ಬಳಿಕೊಂದು ಲೇಖನವ
ನೇಕಾಂತದೊಳ್ ಬರೆಸಿ ಮೇಣದಕೆ ಮುದ್ರೆಯ
ಜೋಕೆಯಿಂದಳವಡಿಸಿ ಶಶಿಹಾಸನಂ ನೋಡಿ ನಸುನಗುತಲಿಂತೆಂದನು

## ಭಾಷಾಭ್ಯಾಸ

### ವಿಗ್ರಹ ವಾಕ್ಯ ಬರೆಯಿರಿ

**ಕೆಳಗೆ ಕೊಟ್ಟಿರುವ ಸಮಸ್ತ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿರಿ.**

ಬಟ್ಟೆವಿಡಿದು, ತಣ್ಣೆಲರ್, ತರಳಾಕ್ಷಿ, ಕುಲಶೀಲ ವಿದ್ಯೆಗಳು, ಮಾಮರ, ನೀರ್ಗುಡಿಸಿ ಕಮಲಲೋಚನ

### ಸಂಧಿ ವಿಂಗಡಣೆ

**ಕೆಳಗಿನ ಪದಗಳನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.**

ಪದಾಂಬುಜ, ದೂರ್ವಾಕ್ಷತೆ , ಶುಭೋದಯ, ತಳಿಗೆದಂಬುಲ, ಬಾಹ್ಯೋಪವನ, ತದ್ರಾಜ, ಸಖಿಯಾಗಿ, ಸರಸೋಕ್ತಿ , ಕಿರುವೆರಳು, ತಳಿರ್ದುರುಗಿದ.

### ಅಲಂಕಾರಗಳು

ಅಲಂಕಾರಗಳು ಕಾವ್ಯಕ್ಕೆ ಭೂಷಣ. ಕವಿಗಳು ಕಾವ್ಯದಲ್ಲಿ ಅರ್ಥ ಚಮತ್ಕಾರದಿಂದಲೂ ಶಬ್ದ ಚಮತ್ಕಾರದಿಂದಲೂ ಸಹೃದಯರ ಮನಸ್ಸನ್ನು ಹೆಚ್ಚು ಆಕರ್ಷಿಸುವಂತೆ ಮಾಡುವರು. ಕಾವ್ಯಗಳಲ್ಲಿ ಬಳಕೆಯಾದ ಅಲಂಕಾರಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು.

1) ಶಬ್ದಚಮತ್ಕಾರಗಳಿಂದ ಕಾವ್ಯದ ಸೊಬಗನ್ನು ಹೆಚ್ಚಿಸಿದರೆ ಅವುಗಳು ಶಬ್ದಾಲಂಕಾರಗಳು.

2) ಅರ್ಥ ಚಮತ್ಕಾರಗಳಿಂದ ಕಾವ್ಯದ ಸೊಬಗನ್ನು ಹೆಚ್ಚಿಸಿದರೆ ಅವುಗಳು ಅರ್ಥಾಲಂಕಾರಗಳು.

### ಶಬ್ದಾಲಂಕಾರ – ಅನುಪ್ರಾಸ

ಅಕ್ಷರಗಳ ಆವೃತ್ತಿಯೇ ಅನುಪ್ರಾಸ. ಈ ಅಲಂಕಾರದಲ್ಲಿ ಒಂದೋ ಎರಡೋ ಮೂರೋ ಅಕ್ಷರಗಳು ಮತ್ತೆ ಮತ್ತೆ ಬರುತ್ತವೆ. ಕೆಳಗಿನ ಪದ್ಯದಲ್ಲಿ ಬಂದಿರುವ ಅನುಪ್ರಾಸವನ್ನು ಗಮನಿಸಿರಿ.

ಬಳಿಕೊರ್ವರೊರ್ವರಂ ನೋಡುತ್ತ ಕೂಡುತ್ತ
ನಲವಿಂದ ನೃತ್ಯಮಂ ಮಾಡುತ್ತ ಪಾಡುತ್ತ
ಸೆಳಸಿ ಸರಸೋಕ್ತಿಗಳನಾಡುತ್ತ ತೀಡುತ್ತ ಬೆಳ–ಗೆಯ ಬೆಡಂಗುಗಳನು
ಅಲರ್ಗಳಂ ತೆಗೆ ತೆಗೆದು ನೀಡುತ್ತ ಸೂಡುತ್ತ
ಲಲಿತ ಮಧು ಚಷಕಮಂ ಬೇಡುತ್ತ ಕಾಡುತ್ತ
ಕಲೆಗಳ ವಿಲಾಸಮಂ ಪೂಡುತ್ತ ಕೂಡುತ್ತ ಕಣ್ಗೆಸೆದರೆಳೆವೆಣ್ಗಳು

## ಅರ್ಥಾಲಂಕಾರ – ರೂಪಕ

ಉಪಮಾನ ಉಪಮೇಯ ವಸ್ತುಗಳನು– 'ಒಂದರಂತೆ ಮತ್ತೊಂದು ಇದೆ' ಎಂದು ಅವುಗಳ ಹೋಲಿಕೆಕಾಣುವಂತೆ ವರ್ಣಿಸದೆ 'ಒಂದು ಮತ್ತೊಂದೆಯೆ' ಎಂದು ವರ್ಣಿಸಿದರೆ ಅದು ರೂಪಕಾಲಂಕಾರವಾಗುತ್ತದೆ.

ಉದಾ : ಪಾದಾಂಬುಜ

ಇಲ್ಲಿ ಪಾದವು ತಾವರೆಯ ಹಾಗೆ ಇದೆ ಎಂದು ಹೇಳದೆ ಪಾದವೇ ತಾವರೆ ಎಂದು ಹೇಳಲಾಗಿದೆ. ಇಲ್ಲಿ ರೂಪಕಾಲಂಕಾರವಿದೆ. ಪದ್ಯಭಾಗದಲ್ಲಿ ರೂಪಕಾಲಂಕಾರ ಹಾಗೂ ಉಪಮಾಲಂಕಾರವಿರುವ ಸಾಲುಗಳನು– ಗುರುತಿಸಿ ಬರೆಯಿರಿ.

## ಛಂದಸ್ಸು – ವಾರ್ಧಕ ಷಟ್ಪದಿ

ಷಟ್ಪದಿಯು ಆರು ಪಾದಗಳಿರುವ ಮಾತ್ರಾಗಣ ಛಂದಸ್ಸು. ಇದರ ಒಂದು, ಎರಡು, ನಾಲ್ಕು, ಐದನೆಯ ಪಾದಗಳು ಸಮಾನವಾಗಿರುತ್ತವೆ. ಮೂರು ಮತ್ತು ಆರನೆಯ ಪಾದಗಳು ಸಮಾನವಾಗಿರುತ್ತವೆ. ಒಟ್ಟು ಆರು ವಿಧದ ಷಟ್ಪದಿಗಳಿವೆ. ಅವುಗಳು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಹಾಗೂ ವಾರ್ಧಕ. ವಾರ್ಧಕದ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ನಾಲ್ಕು ಗಣಗಳೂ ಮೂರು ಮತ್ತು ಆರನೆಯ ಪಾದಗಳಲ್ಲಿ ಐದು ಮಾತ್ರೆಯ ಆರಾರು ಗಣಗಳೂ ಕೊನೆಯಲ್ಲಿ ಒಂದೊಂದು ಗುರುವೂ ಇರುತ್ತವೆ. ಜೈಮಿನಿ ಭಾರತದಲ್ಲಿ ವಾರ್ಧಕ ಷಟ್ಪದಿಯನು– ಬಳಸಲಾಗಿದೆ.

ಉದಾ:

ಉರ್ವ ಮಂ | ತ್ರದ ಕಜ್ಜ | ಮಿದು ಚಂದ್ರ | ಹಾಸ ನೀ |

ನೊರ್ವನೆ ಹ | ಯಾರೂಢ | ನಾ ಗಿ ನಾ | ಲ್ವರ್ ಸೇವ |

ಕರ್ವೆರಸಿ | ರಾಜಧಾ | ನಿಗೆ ಪೋಗಿ | ತನ–ಮಗ | ಮದನಂಗೆ | ಮುದ್ರೆ ಸಹಿತ |

## ಹೆಚ್ಚಿನ ಓದಿಗೆ

| | | |
|---|---|---|
| ಲಕ್ಷ್ಮೀಶನ ಜೈಮಿನಿ ಭಾರತ | – | (ಸಂ) ಬಿ.ಎಸ್. ಸಣ್ಣಯ್ಯ<br>ಡಾ. ರಾಮೇಗೌಡ |
| ಚಂದ್ರಹಾಸನ ಕಥೆ | – | ಹೆಳವನಕಟ್ಟೆ ಗಿರಿಯಮ್ಮ |
| ಲಕ್ಷ್ಮೀಶನ ಕಥೆಗಳು | – | ಕಯ್ಯಾರ ಕಿಞ್ಞಣ್ಣ ರೈ |

# ಧರೆ ಮೆಚ್ಚಿದಣ್ಣ ಸೋದರರ ಕಾಳಗಕೆ

**ರತ್ನಾಕರ ವರ್ಣಿ**

*ನಡುಗನ್ನಡದ ಬಹುಮುಖ್ಯ ಸಾಹಿತ್ಯ ಪ್ರಕಾರಗಳಲ್ಲಿ ಸಾಂಗತ್ಯವೂ ಒಂದು. ರತ್ನಾಕರವರ್ಣಿ ಸಾಂಗತ್ಯದ ಸಾರ್ವಭೌಮ. ಈತ ರಚಿಸಿದ 'ಭರತೇಶ ವೈಭವ'ವು ಸಾಂಗತ್ಯದ ಮೇರು ಕೃತಿ.*

*ಭರತ ಮತ್ತು ಬಾಹುಬಲಿ ಆದಿತೀರ್ಥಂಕರನಾದ ವೃಷಭನಾಥನ ಮಕ್ಕಳು. ಭರತನು ಅಯೋಧ್ಯೆಯಲ್ಲೂ ಬಾಹುಬಲಿಯು ಪೌದನಪುರದಲ್ಲೂ ರಾಜ್ಯಭಾರ ನಡೆಸುತ್ತಾರೆ. ಹೀಗಿರುವಾಗ ಭರತನ ಶಸ್ತ್ರಾಗಾರದಲ್ಲಿ ಚಕ್ರಾಯುಧವು ಹುಟ್ಟಿಕೊಳ್ಳುತ್ತದೆ. ಚಕ್ರಾಯುಧವು ಭರತನಿಗೆ ದಿಗ್ವಿಜಯವನ್ನು ಕೈಗೊಳ್ಳುವಂತೆ ಪ್ರೇರಣೆಯನ್ನು ನೀಡುತ್ತದೆ. ಭರತನು ದಿಗ್ವಿಜಯವನ್ನು ಕೈಗೊಂಡು ಹಿಂತಿರುಗಿ ಬರುವಾಗ ಚಕ್ರವು ಪೌದನಪುರದ ಹೊರವಲಯದಲ್ಲಿ ನಿಲ್ಲುತ್ತದೆ. ಭರತನು ಲೋಕವನ್ನೇ ಗೆದ್ದರೂ ತಮ್ಮನಾದ ಬಾಹುಬಲಿಯನ್ನು ಗೆಲ್ಲುವುದು ಬಾಕಿಯಿದೆ ಎಂದು ಇದರ ಸೂಚನೆ.*

*ಹಿರಿಯರೂ ಮಂತ್ರಿಗಳೂ ಮಧ್ಯಸ್ಥಿಕೆ ವಹಿಸಿ ನಡೆದ ಮಾತುಕತೆಯ ಪರಿಣಾಮವಾಗಿ ಅಣ್ಣತಮ್ಮಂದಿರೊಳಗೆ ದ್ವಂದ್ವಯುದ್ಧದ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದೆಂಬ ತೀರ್ಮಾನವಾಗುತ್ತದೆ.*

**ಕಥಾಸಂದರ್ಭ**

ಭರತ ಮತ್ತು ಬಾಹುಬಲಿ ಒಬ್ಬರಿಗೊಬ್ಬರು ಅಭಿಮುಖವಾಗಿ ದ್ವಂದ್ವಯುದ್ಧಕ್ಕೆ ತೊಡಗುವ ಮುನ್ನ ಭ್ರಾತೃಪ್ರೇಮವನ್ನು ಮುಂದೊಡ್ಡಿ ಭರತನು ಬಾಹುಬಲಿಯನ್ನು ಮಾತನಾಡಿಸುವ ಸನ್ನಿವೇಶ ಮತ್ತು ಮುಂದಿನ ಘಟನೆಗಳು ಪ್ರಸ್ತುತ ಭಾಗದಲ್ಲಿವೆ.

ಜಗದಧಿನಾಥನ ಬಸುರಲ್ಲಿ ಬಂದು ನಾ
ಡುಗರ ಮಧ್ಯದೊಳಿಂತು ನಿಂದು ।
ಹಗರಣಕೆಳಸಿದನೆಯೆಂದು ಮೆಲ್ಲ ಮೆ
ಲ್ಲಗೆ ನೊಂದುನುಡಿವುತೆಯ್ದಿದನು ॥೧॥

ಹತ್ತಿರಕೆಯ್ತಂದು ಚಾಂಗುಭಲಾಯೆನ
ಲೆತ್ತಿದ ಶಿಬಿಕೆಯಿಂದಿಳಿದು ।
ಹತ್ತೆಂಟು ಮಾರೆನೆ ಸ್ಮರನಿದಿರೊಳುನಿಂದ
ನುತ್ತುಂಗಚರಿತನಾ ಚಕ್ರಿ ॥೨॥

ಕುಂದಣದದ್ರಿ ಪಚ್ಚೆಯ ಗಿರಿಯೆರಡೊಡ್ಡಿ
ನಿಂದುವೋ ಕಳದೊಳೆಂಬಂತೆ ।
ಸೌಂದರಾಯುತ ದೀರ್ಘದೇಹಿಗಳಣ್ಣ ತ
ಮ್ಮಂದಿರೊಪ್ಪಿದರು ನೋಳ್ಪರಿಗೆ ॥೩॥

ಮನಸಿಜ ಕೇಳಣ್ಣ ನಿನಗೆನಗಿಂದು ದು
ರ್ಮನದಿಂದ ಜಗಳವಪ್ಪುದಕೆ ।
ಘನವೇನು ಹೇಳು ನಿಷ್ಕಾರಣ ಕದನವ
ಜನಪರೆಸಗುವರೆಯೆಂದಾ ॥೪॥

ನಿನಗಾನು ಪಗೆಯೆ ನೀನೆನಗೆಪಗೆಯೆ ಹೇಳು
ಜಿನಪುತ್ರರಿದನು ನಾವಿಂದು ।
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹಶಾ
ಸನವ ಬರೆದು ಕೊಟ್ಟೆವಲ್ತೆ ॥೫॥

ಪರನೊಬ್ಬನೆನ್ನೊಡನಿದಿರಾದರಾಗಳೆ
ಬರಲೊಡನಟ್ಟಿ ಮೆಟ್ಟುವೆನು ।
ಧರೆಮೆಚ್ಚದಣ್ಣ ಸೋದರರ ಕಾಳಗಕೆ ಮುಂ
ದೊರೆಯಬೇಕಂಕ ಪದ್ಧತಿಯಾ ॥೬॥

ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ
ಸೇನೆಗೆ ಬರವೇಳ್ದೆನೈಸೆ ।
ನೀನೆನಗಗ್ರಜನಾದರೆ ನೀನಿರ್ದ
ಸ್ಥಾನಕೆಯ್ದದೆ ತಡೆದಿಹೆನೆ ॥೭॥

ಹಿರಿಯನಲ್ಲಿಗೆ ಕಿರಿಯನು ಬಂದು ಕಾಣ್ಬುದು
ಧರಣಿಯೊಳುಳ್ಳುದೇನಲ್ತೆ ।
ಪರಿಭವವೇನಣ್ಣ ನಿನಗಯ್ಯನಂದಿಂತು
ನಿರವಿಸಿದೋಜೆಯೇನುಂಟೆ ॥೮॥

ಪಾಟಿಸಿಕೇಳಣ್ಣ ನಾನು ನೀನಾಡುವ
ರಾಟಕಾರರು ನಮ್ಮ ಭಟರು ।
ನೋಟಕಾರರೆ ನೀನು ನೆನೆದ ಸಂಗ್ರಾಮ ಸ
ಘಾಟಿಕೆಯಾಯ್ತು ಕಂಜಾಸ್ತ್ರಾ ॥೯॥

ನನ್ನ ಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು
ನಿನ್ನ ಗೆಲ್ದೆನಗೊಂದು ಜಸವೆ ।
ಪನ್ನಗನರಸುರಲೋಕದುತ್ತಮರು ಛಿ
ಯೆನ್ನರೆ ಯೋಚಿಸಿನೋಡು ॥೧೦॥



ಅದಕೇನು ನೀನಿಂತು ಕದನಕೆಯ್ದಿದೆಯ್ಯೆಸೆ
ಕದನದೊಳ್ಗೆಲವ್ವೆಸೆ ಕಡೆಗೆ ।
ಬದೆಗರಂದದಿ ಹೋರಲೇತಕೆ ಗೆಲುವು ನಿ
ನ್ನದು ಸೋಲವೆನಗೆ ಹೋಗೆಂದಾ ॥೧೧॥

ನನ್ನ ತಮ್ಮನಿಗಾದ ಗೆಲವೆನ್ನ ಗೆಲವದು
ಬನ್ನವಿಲ್ಲೆನಗಿಲ್ಲ ಸೋಲ ।
ಇನ್ನೊಬ್ಬರಿದಿರಾದರೆಡಗಾಲೊಳೊದೆವೆ ನೀ
ವೆನ್ನೊಳಗರಿಯಿರ್ರೆಯೆಂದ ॥೧೨॥

ದೃಷ್ಟಿ ವಿಜಯವೆಂತು ಪಂಚವಿಂಶತಿ ಚಾಪ
ದಷ್ಟುದ್ದ ಹೆಚ್ಚು ನೀನೆನ್ನ।
ದೃಷ್ಟಿಸಬಹುದಾನು ನಿನ್ನ ನೋಳ್ಪಾಗೂರ್ಧ್ವ
ದೃಷ್ಟಿ ನೊಂದೆವೆಹೊಯ್ವುದೆಂದ ॥೧೩॥

ಜಲಯುದ್ಧದೊಳು ನಾನು ಚೆಲ್ಲೆ ನಿನ್ನೆದೆ ಮುಟ್ಟಿ
ಯಿಳಿವುದುವಾರಿ ನೀನೆನ್ನ ।
ಮುಳುಗಿಸಿ ಬಿಡಬಹುದದರಿಂದ ನನಗಾಗ
ಚಳಿಗಡ್ಡ ಮೊಗವಹುದೆಂದಾ ॥೧೪॥

ಮುಗಿಲಿಗೆ ನೀರಚೆಲ್ಲುವ ಶಕ್ತಿಯುಂಟು ರೂ
ಪುಗಳ ಹಲವು ತಾಳ್ದು ಸ್ಮರನ ।
ಅಗುಳಿಪ ಶಕ್ತಿಯುಂಟುಪಚಾರಕೆಂದನೆಂ
ದಗಣಿತನೃಪರೆಣಿಸಿದರು ॥೧೫॥

ಮಲ್ಲಗಾಳಗವೆಂತು ಭುಜಬಲಿಯೆಂದಯ್ಯ
ನಲ್ಲವೆ ಪೆಸರಿಟ್ಟನಂದು ।
ಬಲ್ಲೆನಯ್ಯನ ವಾಕ್ಯ ಹುಸಿಯದು ಭುಜಬಲ
ದಲ್ಲಿ ನೀನೆತ್ತುವೆಯೆಂದ ॥೧೬॥

ಭರತೇಶನೆಂದೆನಗಯ್ಯ ಪೆಸರನಿಡೆ
ಭರತಭೂಮಿಯನಾಳ್ದೆ ನಾನು
ಕರೆದನು ಭುಜಬಲಿಯೆಂದಂದು ನಿನ್ನ ನೀ
ನಿರದೆನ್ನನೆತ್ತುವೆಯೆಂದ ॥೧೭॥

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ
ಸ್ತ್ರಾಲಯದೊಳು ತಾನು ಹುಟ್ಟಿ ।
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ
ಆಲಿಗೆ ನೋವಾಗುವಂತೆ ॥೧೮॥

ಈ ಸಿರಿಯನು ನಾನು ಪುಣ್ಯದ ಫಲವೆಂದು
ದಾಸೀನದೊಳು ನೋಡುತಿಹೆನು ।
ಆಸೆಯಿಲ್ಲೆನಗೆ ನೀನೊಪ್ಪುಗೊಳ್ಳುಂದಣ
ಭೂಸುದತೀಶನೀನಲ್ತೆ ॥೧೯॥



ಅರಸಾಗಿ ನೀನೂರೊಳಿರ್ದೆ ನೀನಟ್ಟಿದ
ದೊರೆಯಾಗಿ ನಾನೆಯ್ದಿ ನಿನ್ನ ।
ಧರೆಯ ಸಾಧಿಸಿ ತಂದೆನೊಪ್ಪುಗೊಳ್ಳಿನ್ನ ಭೂ
ವರವೃಂದವಿದೆ ಕಟಕವಿದೆ ॥೨೦॥

ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀ
ನನುಜನೆಂಬಕ್ಕರುಂಟಪ್ಪ ।
ನನೆವಿಲ್ಲ ನಿನ್ನ ಭಾಗ್ಯವ ಕಣ್ಣು ತುಂಬ ನೋ
ಳ್ಪೆನು ರಾಜಪದವಿಗಿಂತೊಪ್ಪು ॥೨೧॥

ರಂಜನೆಗಾಡಿದ ಮಾತಲ್ಲ ನಂಬು ನಿ
ರಂಜನ ಸಿದ್ಧನೆ ಸಾಕ್ಷಿ ।
ಕಂಜಾಸ್ತ್ರ ನನಗಿದರಿಂದ ಹೆಚ್ಚಿನ ಭಾಷೆ
ಜಂಜಡದಿಚ್ಛೆಗಳಿಲ್ಲ ॥೨೨॥

ವಿರಸವ ಬಿಡು ಬಿಡೆಂದಾ ಚಕ್ರಿ ನುಡಿಯೆ ಪೂ
ಸರನು ತಗ್ಗುತ ಮನಸಿನೊಳು ।
ಮುರಿದ ಮೋರೆಯೊಳಿರೆ ಚಕ್ರರತ್ನವನಾಗ
ಕರೆದಿಂತು ನುಡಿದನಾ ಚಕ್ರಿ ॥೨೩॥

ಹೋಗು ಚಕ್ರವೆ ಭುಜಬಲಿಯ ನೀನೋಲೈಸೆ
ಹೋಗದೀತಗೆ ಪುಣ್ಯವುಂಟು ।
ಪೂಗಣೆಯಗೆ ಚಕ್ರ ಬೆಸಗೆಯ್ವ ಪುಣ್ಯ ವಿ
ಲ್ಲಾಗಿ ನಿಂದಿತು ಮುಂದೆ ಬಂದು ॥೨೪॥

ಎಲೆಲೆ ಪಿಶಾಚ ಹೋಗೆಂದರೇತಕೆ ಹೋಗೆ
ಕಲಹ ನಿನ್ನಿಂದಾದುದೆನಗೆ ।
ಜಲಜಾಸ್ತ್ರನತ್ತ ಸಾರೆಂದು ನೂಕಿದರದು
ಬಳೆಜಾರುವಂತೆ ಜಾರಿದುದು ॥೨೫॥

ಇವಗೆ ಪುಣ್ಯಕ್ಷಯವಾಯ್ತಲ್ಲ ಚಕ್ರ ಸಾ
ರುವ ಪುಣ್ಯ ಮನಸಿಜಗಿಲ್ಲ ।
ಅವನೀಶನೂಂಕಿದ ಸರಿತದೊಳಲ್ಪದೂ
ರವ ಸಾಗಿ ನಿಂದಿತಾ ಚಕ್ರ ॥೨೬॥

ಕಳೆಗುಂದಿ ಕಾಮನ ಭುಜಸರಿತದೊಳತ್ತ
ತೊಲಗಿ ನಿಂದಿತು ಚಕ್ರರತ್ನ ।
ದಳನಡುಗಿತು ಧೂಮಕೇತುವೆದ್ದುವು ಕೂಡೆ
ನೆಲಗುಡುಗಿತು ಘುಡುಘುಡನೆ ।।೨೭।।

ಗರುಡ ಮಂತ್ರಕೆ ವಿಷವಿಳಿವಂತೆ ಭರತ ಭೂ
ವರನ ವಾಕ್ಯವ ಕೇಳಲಾಗಿ ।
ಜರಿಜರಿದಂಗಜಗೆತ್ತಿದ್ದ ಕೋಪಪ್ಪೈ
ಸರಿಸಿತು ಹೃದಯ ತಂಪಾಯ್ತು ।।೨೮।।

ಏರಿದ ಹೆಡೆಯಿಳಿವಂತೆ ಮುನ್ನಿನ ಗರ್ವ
ಜಾರಿತು ಮೃದುವಾಯ್ತು ಚಿತ್ತ ।
ಗಾರಾಯ್ತು ಕಾರ್ಯ ನನ್ನಣ್ಣನಿಗಿದಿರಾಗಿ
ದೂರ ಹೊತ್ತೆನಲಾ ಹಾಯೆಂದ ।।೨೯।।

ಒಲೆದ ಮೋರೆಯ ತಿರುಹಿದನು ಸಮ್ಮುಖನಾಗಿ
ಕಳೆದನೊಯ್ಯನೆ ತೋಳ ತೊಡಕ ।
ಅಳುಕಾದುದಣ್ಣನ ಮೊಗವ ನೋಡದೆ ನಾಚಿ
ತಲೆಗುಸಿದಿರ್ದನಾ ಮದನ ।।೩೦।।

ತಂದೆಗಳಿಬ್ಬರಂಕವ ಕಾಣ್ಬ ಪಾತಕ
ಬಂದಿತೆಯೆಂದು ಚಿಂತಿಸುತ ।
ನಿಂದಿರ್ದ ಕುವರರ ಮೊಗಕಾಂತಿವಡೆದುವು
ಹೊಂದಾವರೆಯರಳ್ವಂತೆ ।।೩೧।

ನೋವುತಿರ್ದುದು ಚಿತ್ತ ಮನ್ಮಥ ತಲೆಯೆತ್ತಿ
ಭೂವರಾಗ್ರಣಿಯ ನೋಡಿದನು ।
ದೇವರು ಕ್ಷಮಿಸುವುದೆನ್ನದು ತಪ್ಪೆಂದು
ಭಾವಶುದ್ಧದೊಳು ಕೈಮುಗಿದ ।।೩೨।।

ಅಂತಾಡದಿರು ನೀನು ಬೇರೆ ನಾ ಬೇರೆಯೇ
ನಿಂತು ನೋವರೆ ಕಬ್ಬುವಿಲ್ಲ ।
ಕುಂತೆಂಬುದೆನಗಿಲ್ಲ ನೀನಿಂತುಮನದೊಳು
ಚಿಂತೆದೋರದಿರಣ್ಣಯೆಂದ ।।೩೩।।

## ರತ್ನಾಕರವರ್ಣಿ

ರತ್ನಾಕರ ವರ್ಣಿಯ ಕಾಲ ಕ್ರಿ.ಶ. ಸುಮಾರು ೧೬ನೇ ಶತಮಾನ. ಈತನು ರತ್ನಾಕರ ಸಿದ್ಧ, ರತ್ನಾಕರ ಅಣ್ಣ, ರತ್ನಾಕರ ಮುಂತಾದ ಹೆಸರುಗಳಿಂದಲೂ ಪರಿಚಿತನಾಗಿದ್ದಾನೆ. ಇವನ ಹುಟ್ಟೂರು ಕರ್ನಾಟಕದ ಮೂಡುಬಿದಿರೆ.

ರತ್ನಾಕರನ ಮುಖ್ಯ ಕೃತಿಗಳು ನಾಲ್ಕು. 'ಭರತೇಶ ವೈಭವ', 'ತ್ರಿಲೋಕ ಶತಕ', ರತ್ನಾಕರ ಶತಕ' ಮತ್ತು 'ಅಪರಾಜಿತೇಶ್ವರ ಶತಕ' ಇವಲ್ಲದೆ, ನೂರಾರು ಹಾಡುಗಳನ್ನು ರಚಿಸಿದ್ದಾನೆಂದು ತಿಳಿದು ಬರುತ್ತದೆ.

'ಭರತೇಶ ವೈಭವ' ರತ್ನಾಕರನ ಮೇರು ಕೃತಿ. ಇದು ಸಾಂಗತ್ಯ ಎಂಬ ದೇಸೀ ಛಂದಸ್ಸಿನಲ್ಲಿ ರಚಿತವಾಗಿದ್ದು ಒಂದು ಉತ್ತಮ ಹಾಡುಗಬ್ಬವಾಗಿದೆ. ಒಟ್ಟು ಕಾವ್ಯವು ಭರತೇಶನ ದಿನಚರಿಯಂತಿದ್ದು, ಅವನ ಬದುಕನ್ನು ಕಲಾತ್ಮಕವಾಗಿ ಕನ್ನಡಿಸಿದೆ. ಭರತನನ್ನು ಕಾವ್ಯದ ನಾಯಕನನ್ನಾಗಿ ಆರಿಸಿ ಜೈನ ಪುರಾಣಗಳಿಂದ ಭಿನ್ನವಾಗಿ ಇಲ್ಲಿ ಚಿತ್ರಿಸಿದ್ದಾನೆ. ಕನ್ನಡ ಕಾವ್ಯಗಳಲ್ಲಿ ರತ್ನಾಕರನ ಸಾಂಗತ್ಯವು ನಾದ, ಉಪಮೆ, ರೂಪಕಗಳಿಂದ ಚೇತೋಹಾರಿಯಾಗಿದೆ.

### ಪದವಿಂಗಡಣೆ

ಹಗರಣಕೆಳಸಿದನೆಯೆಂದು – ಹಗರಣಕೆ + ಎಳಸಿದನೆ + ಎಂದು

ನೊಂದುನುಡಿವುತೆಯ್ದಿದನು – ನೊಂದು + ನುಡಿವುತ + ಎಯ್ದಿದನು

ಸ್ಮರನಿದಿರೊಳುನಿಂದನುತ್ತುಂಗಚರಿತ – ಸ್ಮರನ + ಇದಿರೊಳುನಿಂದನು + ಉತ್ತುಂಗಚರಿತ

ಜನಪರೆಸಗುವರೆಯೆಂದ – ಜನಪರು + ಎಸಗುವರೆ + ಎಂದ

ಪರನೊಬ್ಬನೆನ್ನೊಡನಿದಿರಾದರಾಗಳೆ – ಪರನು + ಒಬ್ಬನು + ಎನ್ನೊಡನೆ + ಇದಿರು + ಆದರೆ + ಆಗಳೆ

ಧರಣಿಯೊಳುಳ್ಳುದೇನಲ್ತೆ – ಧರಣಿಯೊಳು + ಉಳ್ಳುದು + ಏನ್ + ಅಲ್ತೆ

ಕದನದೊಳ್ಗೆಲವೈಸೆ – ಕದನದೊಳ್ + ಗೆಲವು+ ಐಸೆ

ನೀವೆನ್ನೊಳಗರಿಯಿರೈ – ನೀವು + ಎನ್ನ + ಒಳಗ + ಅರಿಯಿರೈ

ನೊಂದೆವೆಹೊಯ್ದುದೆಂದ – ನೊಂದು + ಎವೆ ಹೊಯ್ದುದು + ಎಂದ

ತಂದೆನೊಪ್ಪುಗೊಳ್ಳಿನ್ನ – ತಂದೆನು + ಒಪ್ಪುಗೊಳ್ + ನಿನ್ನ

ಜಂಜಡದಿಚ್ಛೆಗಳಿಲ್ಲ – ಜಂಜಡದ + ಇಚ್ಛೆಗಳು + ಇಲ್ಲ

ಜರಿಜರಿದಂಗಜಗೆತ್ತಿದ – ಜರಿಜರಿದು + ಅಂಗಜಗೆ + ಎತ್ತಿದ

ತಲೆಗುಸಿದಿರ್ದನು – ತಲೆ + ಕುಸಿದು + ಇರ್ದನು.

## ಪದಗಳ ಅರ್ಥ

ಆದಿನಾಥ – ಮೊದಲನೆಯ ತೀರ್ಥಂಕರ, ವೃಷಭನಾಥ. ನಾಡುಗರು – ಊರವರು. ಹಗರಣ – ಜಗಳ, ಗೊಂದಲ. ಎಳಸು – ಇಚ್ಛಿಸು, ಬಯಸು. ಚಾಂಗುಭಲಾ – ಮೆಚ್ಚುಗೆಯ ಉದ್ಗಾರ ನುಡಿ, ಭಲೆ, ಬಾಪು, ಎಂಬಂತೆ. ಶಿಬಿಕೆ – ಪಲ್ಲಕ್ಕಿ. ಚಕ್ರಿ – ಚಕ್ರವನ್ನು ಹೊಂದಿದವನು (ಭರತ), ಚಕ್ರವರ್ತಿ. ಕುಂದಣ – ಅಪ್ಪಟ ಚಿನ್ನ. ಪಚ್ಚೆ – ನವರತ್ನಗಳಲ್ಲಿ ಒಂದು, ಮರಕತ. ಕಳ – ಯುದ್ಧರಂಗ. ಸೌಂದರಾಯುತ – ಸುಂದರವಾದ, ವಿಸ್ತಾರವಾದ ಶರೀರವುಳ್ಳವ. ಘನ – ಮಹತ್ವ. ಅಂಕಪದ್ಧತಿ – ಯುದ್ಧ ರೀತಿ, ಯುದ್ಧ ನಿಯಮ. ಅಯ್ಯ – ತಂದೆ, ಗೌರವ ಸೂಚಕ ಸಂಬೋಧನೆ. ಓಜೆ – ಕ್ರಮ. ಪರಿಭವ – ಸೋಲು. ನಿರವಿಸು–ಬೋಧಿಸು. ಪಾಟಿಸು – ಗೌರವಿಸು. ಪಾಟಿಸಿ ಕೇಳಣ್ಣ – ಆದರಿಸಿ ಕೇಳಣ್ಣ. ಸಘಾಟಿಕೆ – ಆಡಂಬರ, ದರ್ಪ. ಕಂಜ – ತಾವರೆ. ಕಂಜಾಸ್ತ್ರ – ಮನ್ಮಥ (ಇಲ್ಲಿ ಬಾಹುಬಲಿ). ಬದೆಗ – ಮೂರ್ಖ, ನೀಚ. ಬನ್ನ – ಅವಮಾನ, ಕಷ್ಟ. ಒಳಗು – ಅಂತರ್ಯ, ಮನಸ್ಸು. ಪಂಚವಿಂಶತಿ – ಇಪ್ಪತ್ತೈದು. ಊರ್ಧ್ವದೃಷ್ಟಿ – ಮೇಲೆ ನೋಡುವ ನೋಟ ಅಗುಳಿಪ – ಮುಳುಗಿಸುವ. ಆಲಿ – ಕಣ್ಣು, ಕಣ್ಣಾಲಿ. ಭೂಸುದತೀಶ – ರಾಜ, ಭೂಮಿ ಎಂಬ ನಾರಿಯ ಒಡೆಯ. ಒಪ್ಪುಗೊಳ್–ಸ್ವೀಕರಿಸು, ಸಮ್ಮತಿಸು. ಕಟಕ – ಸೇನೆ. ಭೂವರ – ಅರಸ. ಅಕ್ಕರ–ಪ್ರೀತಿ. ನನೆವಿಲ್ಲ – ಮನ್ಮಥ (ನನೆ–ಹೂವು). ಜಂಜಡ – ತೊಂದರೆ, ಕಾಟ. ಪೂಸರ–ಮನ್ಮಥ, ಹೂಗಳೆ ಬಾಣಗಳಾಗಿ ಉಳ್ಳವ. ಮುರಿದ ಮೋರೆ – ತಿರುಗಿ ಮೋರೆ. ನಿರಂಜನ ಸಿದ್ಧ – ರತ್ನಾಕರ ವರ್ಣಿಯ ಗುರು. ಪೂಗಣೆಯ–ಮನ್ಮಥ. ಸರಿತ–ಚಲನೆ. ಸರಿ – ಚಲಿಸು; ಹೋಗು. ಪುಣ್ಯಕ್ಷಯ–ಪುಣ್ಯನಾಶ, ಬೆಸಗೈ – ಅಪ್ಪಣೆಯಂತೆ ಮಾಡು, ಗರುಡ ಮಂತ್ರ – ವಿಷವಿಳಿಸುವ ಮಂತ್ರ. ಪೈಸರಿಸು – ಹಿಮ್ಮೆಟ್ಟು, ಗಾರಾಯ್ತು – ಕೆಟ್ಟುಹೋಯ್ತು, ಒಲೆ – ಬಾಗು. ತೊಡಕು – ಅಡಚಣೆ; ತೊಂದರೆ. ತಲೆಗುಸಿದು – ತಲೆಬಾಗಿ. ಹೊಂದಾವರೆ – ಸ್ವರ್ಣ ಕಮಲ. ಕುಂತು – ಕುಂದು, ಕೊರತೆ.

## ವಿಶದೀಕರಣ

ಪುಣ್ಯಕ್ಷಯ, ಪಾಪಕ್ಷಯ – ಜೈನ ಕಾವ್ಯಗಳಲ್ಲಿ ಬರುವ ಪಾರಿಭಾಷಿಕ ಪದಗಳು. ಭವಾವಳಿಯಲ್ಲಿ ಪುಣ್ಯವು ಕಡಿಮೆಯಾಗುತ್ತ ಹೋಗುವುದು ಪುಣ್ಯಕ್ಷಯ ಇದು ದುರ್ಗತಿ. ಅಂತೆಯೇ ಪಾಪವು ಕಡಿಮೆಯಾಗುತ್ತಾ ಹೋಗುವುದು ಪಾಪಕ್ಷಯ, ಇದು ಸದ್ಗತಿ.

## ಒಂದು ವಾಕ್ಯದಲ್ಲಿ ಉತ್ತರಿಸಿರಿ

- ಯುದ್ಧರಂಗಕ್ಕೆ ಬಂದು ನಿಂತ ಅಣ್ಣ ತಮ್ಮಂದಿರು ಹೇಗೆ ಕಾಣಿಸಿದರು?
- ಭರತನು ತಮ್ಮನನ್ನು ಬರ ಹೇಳಿದುದಕ್ಕೆ ಕೊಡುವ ಕಾರಣವೇನು?
- ಸಂಗ್ರಾಮ ಸಘಾಟಿಕೆಯಾಯಿತು ಎಂದು ಭರತನು ಹೇಳಿದುದೇಕೆ?

## ಸಂಕ್ಷಿಪ್ತವಾಗಿ ಬರೆಯಿರಿ

- ಕಾವ್ಯಭಾಗವನ್ನು ಕಥಾರೂಪದಲ್ಲಿ ಸಂಗ್ರಹಿಸಿ ಬರೆಯಿರಿ.
- ತಮ್ಮನೊಂದಿಗೆ ನಡೆಯಬೇಕಾಗಿದ್ದ ಯುದ್ಧವನ್ನು ಭರತೇಶನು ತೊಲಗಿಸಿದುದರ ಔಚಿತ್ಯವೇನು? ಬರೆಯಿರಿ.
- ಧರೆ ಮೆಚ್ಚದಣ್ಣ ಸೋದರರ ಕಾಳಗಕೆ–ಈ ಶೀರ್ಷಿಕೆಯನ್ನು ಕಾವ್ಯ ಸಂದರ್ಭದ ಆಧಾರದಲ್ಲಿ ಸಮರ್ಥಿಸಿ ಲೇಖನ ತಯಾರಿಸಿರಿ.
- ಇನ್ನೊಬ್ಬರಾದರೆ ಎಡಗಾಲೊಳೊದೆವೆ. ನೀವೆನ್ನೊಳಗರಿಯಿರ್ಕೈ– ಈ ಮಾತುಗಳ ಆಧಾರದಲ್ಲಿ ಭರತನ ಪಾತ್ರಚಿತ್ರಣ ಮಾಡಿರಿ.
- ಬಾಹುಬಲಿಗೆ ಅಣ್ಣನ ಮೊಗ ನೋಡಲು ಅಳುಕಾದುದೇಕೆ?

## ಚಟುವಟಿಕೆಗಳು

- ಕೆಳಗೆ ಕೊಟ್ಟಿರುವ ಪದ್ಯದ ಆಶಯವನ್ನು ಬರೆಯಿರಿ.

  ಕುಂದಣದದ್ರಿ ಪಚ್ಚೆಯ ಗಿರಿಯೆರಡೊಡ್ಡಿ
  ನಿಂದುವೋ ಕಳದೊಳೆಂಬಂತೆ ।
  ಸೌಂದರಾಯುತ ದೀರ್ಘದೇಹಿಗಳಣ್ಣ ತ
  ಮ್ಮಂದಿರೊಪ್ಪಿದರು ನೋಳ್ಪರಿಗೆ

- ಪಂಪನ 'ಆದಿಪುರಾಣ'ದಲ್ಲಿ ಬರುವ ಭರತನ ದಿಗ್ವಿಜಯ ಸನ್ನಿವೇಶದೊಂದಿಗೆ ಪ್ರಸ್ತುತ ಭಾಗವನ್ನು ಹೋಲಿಸಿ ತುಲನಾತ್ಮಕ ಟಿಪ್ಪಣಿ ಬರೆಯಿರಿ.
- ಸಾಂಗತ್ಯವು ಹಾಡುಗಬ್ಬ. ಹಾಡುವ ವಿಧಾನವನ್ನು ಬಲ್ಲವರಿಂದ ತಿಳಿದುಕೊಂಡು ಪಠ್ಯಭಾಗವನ್ನು ನೀವೂ ಹಾಡಲು ಪ್ರಯತ್ನಿಸಿರಿ.

## ಭಾಷಾಭ್ಯಾಸ

**ಸಂಧಿ ವಿಂಗಡಿಸಿ ಹೆಸರಿಸಿರಿ.**

ಕೆಳಗೆ ಕೊಡಲಾದ ಪದಗಳ ಸಂಧಿ ವಿಂಗಡಿಸಿ ಹೆಸರಿಸಿರಿ.

ತಲೆಗುಸಿಯು, ಭೂವರಾಗ್ರಣಿ, ಅಂತಾಡದೆ, ಚಿಂತೆದೋರು,
ಪೂಗಣೆಯ, ಕಾಂತಿವಡೆಯು, ಚಕ್ರೇಶ

**ವಿಗ್ರಹವಾಕ್ಯ ಬರೆದು ಸಮಾಸವನ್ನು ಗುರುತಿಸಿರಿ**

ಕೆಳಗೆ ಕೊಡಲಾದ ಪದಗಳ ವಿಗ್ರಹ ವಾಕ್ಯಗಳನ್ನು ಬರೆದು ಸಮಾಸವನ್ನು ಹೆಸರಿಸಿರಿ.

ಹೊಂದಾವರೆ, ಮೊಗಕಾಂತಿ, ಕಂಜಾಸ್ತ್ರ, ಕೈಮುಗಿ, ನನೆವಿಲ್ಲ.

**ಕೆಳಗೆ ಕೊಡಲಾದ ಪದ್ಯಭಾಗದಲ್ಲಿ ಬಳಕೆಯಾದ ಅಲಂಕಾರವನ್ನು ಗಮನಿಸಿರಿ. ಪಠ್ಯಭಾಗದಲ್ಲಿ ಬಂದಿರುವ ಉಪಮಾಲಂಕಾರವನ್ನು ಗುರುತಿಸಿ ಬರೆಯಿರಿ.**

ಗರುಡ ಮಂತ್ರಕೆ ವಿಷವಿಳಿವಂತೆ ಭರತ ಭೂ
ವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ್ದ ಕೋಪ ಪೈ
ಸರಿಸಿತು ಹೃದಯ ತಂಪಾಯ್ತು

ಭರತನ ಮಾತುಗಳನ್ನು ಕೇಳಿದ ಬಳಿಕ ಬಾಹುಬಲಿಯ ಕೋಪವು ಗರುಡ ಮಂತ್ರಕ್ಕೆ ವಿಷವು ಇಳಿಯುವಂತೆ ಇಳಿದು ಮಾಯವಾಗಿ ಅವನ ಹೃದಯ ತಂಪಾಯ್ತು.

ಭರತನ ಮಾತುಗಳನ್ನು ಗರುಡ ಮಂತ್ರಕ್ಕೂ ಪರಿಣಾಮವಾಗಿ ಬಾಹುಬಲಿಯ ಕೋಪವು ಇಳಿದುದನ್ನು ವಿಷವು ಇಳಿಯುವುದಕ್ಕೂ ಇಲ್ಲಿ ಹೋಲಿಸಲಾಗಿದೆ.

ಒಂದು ವಸ್ತುವನ್ನು ಬೇರೊಂದು ವಸ್ತುವಿನೊಡನೆ ಹೋಲಿಸುವುದು ಉಪಮೆ.

ಉಪಮಾಲಂಕಾರದಲ್ಲಿ ಉಪಮೇಯ, ಉಪಮಾನ, ಸಮಾನ ಧರ್ಮ ಮತ್ತು ಉಪಮಾ ವಾಚಕ ಎಂಬ ನಾಲ್ಕು ಅಂಶಗಳಿರುತ್ತವೆ. ವರ್ಣಿಸುವ ವಸ್ತು ಅಥವಾ ಪ್ರಸ್ತುತ ವಿಷಯವು ಉಪಮೇಯ. ಅದಕ್ಕೆ ನೀಡಲಾದ ಸಾದೃಶ್ಯ ಉಪಮಾನ. ಉಪಮೇಯ ಮತ್ತು ಉಪಮಾನಗಳಲ್ಲಿ ಇರುವ ಸಮಾನಾಂಶಗಳು ಸಮಾನ ಧರ್ಮ. ಅಂತೆ, ಅಂತೆವೋಲ್, ವೋಲ್, ಅಂದದಿಂ ಇತ್ಯಾದಿ ಪದಗಳು ಉಪಮಾವಾಚಕ.

ಪಠ್ಯಭಾಗದಲ್ಲಿ ಬಂದಿರುವ ಉಪಮಾಲಂಕಾರವಿರುವ ಪದ್ಯಗಳನ್ನು ಗುರುತಿಸಿ ಅದರಲ್ಲಿ ಬರುವ ಉಪಮಾನ, ಉಪಮೇಯಾದಿಗಳನ್ನು ಪಟ್ಟಿಮಾಡಿರಿ.

## ಸಾಂಗತ್ಯ

ಸಾಂಗತ್ಯವು ಅಂಶಗಣಗಳಿಂದ ರಚನೆಗೊಳ್ಳುತ್ತದೆ. ಇದರ ಮೊದಲನೆಯ ಪಾದದಲ್ಲಿ ನಾಲ್ಕು ವಿಷ್ಣುಗಣಗಳೂ ಎರಡನೆಯ ಪಾದದ ಆರಂಭದಲ್ಲಿ ಎರಡು ವಿಷ್ಣುಗಣಗಳೂ ಕೊನೆಯಲ್ಲಿ ಒಂದು ಬ್ರಹ್ಮಗಣವೂ ಬರುತ್ತವೆ. ನಾಲ್ಕು ಪಾದಗಳಲ್ಲಿ ಒಟ್ಟು ೧೪ ಗಣಗಳಿದ್ದು ೨ ಮತ್ತು ೪ನೆಯ ಪಾದಗಳ ಕೊನೆಗೆ ಬ್ರಹ್ಮಗಣವೇ ಬರಬೇಕು. ಉಳಿದೆಡೆಗಳಲ್ಲಿ ವಿಷ್ಣುಗಣಗಳ ಬದಲಿಗೆ ಬ್ರಹ್ಮಗಣವೋ ರುದ್ರಗಣವೋ ಬರಬಹುದು.

## ಗಣ ವಿನ್ಯಾಸ

| | | | | |
|---|---|---|---|---|
| | ವಿ | ವಿ | ವಿ | ವಿ |
| ಮೊದಲನೆಯ ಪಾದ – | ನಿನಗಾನು | ಪಗೆಯೆ ನೀ | ನೆನಗೆ ಪ | ಗೆಯೆ ಹೇಳು |
| | ವಿ | ವಿ | ಬ್ರ | |
| ಎರಡನೆಯ ಪಾದ – | ಜಿನಪುತ್ರ ರಿ | ದನು ನಾ | ವಿಂದು | |
| ಮೂರನೆಯ ಪಾದ – | ನೆನೆದಾಗ | ಮುಂದೆ ಸ | ಮಸ್ತರ್ಗೆ | ದ್ರೋಹಶಾ |
| ನಾಲ್ಕನೆಯ ಪಾದ – | ಸನವ ಬ | ರೆದು ಕೊಟ್ಟೆ | ವಲ್ತೆ | |

**ಕೆಳಗಿನ ಪದ್ಯದ ಗಣ ವಿಭಜನೆ ಮಾಡಿರಿ.**

ನಿನಗಾನು ಪಗೆಯೆ ನೀನೆನಗೆಪಗೆಯೆ ಹೇಳು

ಜಿನಪುತ್ರರಿದನು ನಾವಿಂದು ।

ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹಶಾ

ಸನವ ಬರೆದು ಕೊಟ್ಟೆವಲ್ತೆ

## ಹೆಚ್ಚಿನ ಓದಿಗೆ

ಭರತೇಶ ವೈಭವ ಸಂಗ್ರಹ – (ಸಂ) ತ.ಸು. ಶ್ಯಾಮರಾವ್

ಕುಮಾರರಾಮನ ಸಾಂಗತ್ಯ – ನಂಜುಂಡ ಕವಿ

## ಘಟಕ ಮೌಲ್ಯಮಾಪನ

1. ಧರೆಯೆನಿತನಿತು – ಈ ಪದವನ್ನು ವಿಂಗಡಿಸಿರಿ.
2. ಸೂರ್ಯ – ಈ ಪದದ ನಾಲ್ಕು ಪರ್ಯಾಯ ಪದಗಳನ್ನು ಬರೆಯಿರಿ.
3. ಕುಲಶೀಲವಿದ್ಯೆಗಳು – ಈ ಪದದ ವಿಗ್ರಹವಾಕ್ಯ ಬರೆದು ಸಮಾಸವನ್ನು ಹೆಸರಿಸಿರಿ.
4. ಶುಭೋದಯ – ಈ ಪದವನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.
5. ಚಂದ್ರಹಾಸನನ್ನು ಕೊಲ್ಲಲು ದುಷ್ಟಬುದ್ಧಿಯು ಹೇಗೆ ಸಂಚು ಮಾಡಿದನು?
6. ಅಣ್ಣನಾದ ಭರತನ ಮುಖ ನೋಡಲು ಬಾಹುಬಲಿಗೆ ಅಳುಕಾದುದು ಏಕೆ?
7. ಕೆಳಗಿನ ಪದ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣವನ್ನು ತಿಳಿಸಿರಿ.

   ರಾಕಾಶಶಾಂಕನಭ್ಯುದಯಮಮಂ ಕೆಡಿಸಿ ತ

   ನ್ನಾಕಾರಮಂ ತೋರಿಸುವೆನೆಂಬ ಕತ್ತಲೆವೊ

   ಲಾ ಕಮಲಲೋಚನನ ಭೃತ್ಯನಂ ಕೊಲಿಸಿ ತಾ ಬಾಳ್ವೆನೆಂಬುಜ್ಜುಗದೊಳ್

8. ಇಳೆಯಾಂಡಗುಡಿಮಾರನ ಭಕ್ತಿಯನ್ನು ಶಿವನು ಪರೀಕ್ಷಿಸಿದ ಸನ್ನಿವೇಶವನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
9. 'ಧರೆಮೆಚ್ಚದಣ್ಣಸೋದರರ ಕಾಳಗಕೆ' ಈ ಕಾವ್ಯಭಾಗದಲ್ಲಿ ಬಂದಿರುವ ಭರತನ ಪಾತ್ರಚಿತ್ರಣ ಮಾಡಿರಿ.
10. ಕೆಳಗಿನ ಪದ್ಯದ ಆಸ್ವಾದನ ಟಿಪ್ಪಣಿ ಬರೆಯಿರಿ.

    ಬಳಿಕೋರ್ವರೋರ್ವರಂ ನೋಡುತ್ತ ಕೂಡುತ್ತ
    ನಲವಿಂದೆ ನೃತ್ಯಮಂ ಮಾಡುತ್ತ ಪಾಡುತ್ತ
    ಸೆಳೆಸಿ ಸರಸೋಕ್ತಿಗಳನಾಡುತ್ತ ತೀಡುತ್ತ ಬೆಳ್ನಗೆಯ ಬೆಡಗುಗಳನು

# ಹೊಸಗನ್ನಡ ಗದ್ಯವಿಹಾರ

ಹೊಸಗನ್ನಡ ಸಾಹಿತ್ಯದ ವೈವಿಧ್ಯ, ಸತ್ವಗಳ ಪರಿಚಯವನ್ನು ಈ ಘಟಕದಲ್ಲಿನ ಪಾಠಗಳ ಮೂಲಕ ಮಾಡಿಕೊಳ್ಳಬಹುದು. ಹೊಸಗನ್ನಡ ಗದ್ಯವು ವಿವಿಧ ರೂಪಗಳಲ್ಲಿ ಶಕ್ತವಾಗಿ ಟಿಸಿಲೊಡೆದದ್ದು ಇಪ್ಪತ್ತನೇ ಶತಮಾನದಲ್ಲಿ. ಕಾವ್ಯದಲ್ಲಿ ಸಾನೆಟ್, ಪ್ರಗಾಥ, ಖಂಡಕಾವ್ಯ, ಕಥನಕವನ ಮೊದಲಾದ ಪ್ರಕಾರಗಳು ಕಾಣಿಸಿಕೊಂಡಂತೆಯೇ ಗದ್ಯದಲ್ಲೂ ಸಣ್ಣಕತೆ, ಕಾದಂಬರಿ, ಆತ್ಮಕಥೆ, ಪ್ರವಾಸಕಥನ ಮುಂತಾದ ಸೃಜನಶೀಲ ರಚನೆಗಳೂ ವೈಚಾರಿಕ ಲೇಖನ, ವಿಮರ್ಶಾ ಲೇಖನ ಮುಂತಾದ ಪ್ರಕಾರಗಳೂ ಅಸ್ತಿತ್ವಕ್ಕೆ ಬಂದವು. ಗದ್ಯವು ಯಾವ ಯಾವ ವಿಷಯಗಳ ಅಭಿವ್ಯಕ್ತಿಗೆ ಹೇಗೆ ಹೇಗೆ ಒದಗಿ ಬರುತ್ತದೆ ಎಂದು ಪ್ರಸ್ತುತ ಘಟಕದ ಪಾಠಗಳ ಮೂಲಕ ತಿಳಿಯಬಹುದು. ಸಹ್ಯಾದ್ರಿ ಶ್ರೇಣಿಗಳ ಕಣಿವೆ ಕಂದರಗಳ ಸುಂದರ ಪ್ರಕೃತಿಯ ಸೊಬಗು, ತಪ್ಪಲಲ್ಲಿ ಜೀವಿಸುವ ಜನರು, ಅವರ ಜೀವನ ಕ್ರಮ ಇವುಗಳ ದರ್ಶನವನ್ನು 'ಕಾಡಿಗೆ ಹೊದ್ದಿಸಿದ ಮಂಜಿನ ಪರದೆ' ಮಾಡಿಕೊಡುತ್ತದೆ.

ಹೊಸಗನ್ನಡ ಸಾಹಿತ್ಯದ ಇನ್ನೊಂದು ಪ್ರಕಾರ ಆತ್ಮಕಥೆ. ಇದು ವ್ಯಕ್ತಿಯೊಬ್ಬರ ಜೀವನ, ಸಾಧನೆಗಳ ಪರಿಚಯವನ್ನು ಮಾಡಿಕೊಡುತ್ತದೆ. 'ಹರಳುಗಟ್ಟಿದ ಬಗೆ'ಯು ವಿದ್ಯಾರ್ಥಿಗಳಿಗೆ ತಮ್ಮ ಜೀವನದಲ್ಲೂ ಧೈರ್ಯದಿಂದ ಮುನ್ನಡೆಯಲು, ಸಾಧನೆ ಮಾಡಲು ಪ್ರೇರಕವಾಗಿದೆ.

'ಇಡ್ಲಿಯ ಇತಿಹಾಸ' ವು ನಿತ್ಯ ಬಳಕೆಯ ಶಬ್ದವೊಂದರ ಹಿಂದಿರುವ ಕುತೂಹಲಕಾರಿಯಾದ ಇತಿಹಾಸವನ್ನು ನಮ್ಮ ಮುಂದೆ ಬಿಚ್ಚಿಡುತ್ತದೆ.

ನಮ್ಮಿಂದ ಮರೆಯಾಗಿ ಹೋಗಿದ್ದ ತುಳು ಗ್ರಂಥಗಳ ಪರಿಚಯವನ್ನು 'ಪ್ರಾಚೀನ ತುಳು ಸಾಹಿತ್ಯ' ಎಂಬ ಪಾಠಭಾಗ ಮಾಡಿಕೊಡುತ್ತದೆ. ಭಾಷೆಯ ಸ್ವರೂಪದ ಬಗೆಗಿನ ಪರಿಚಯವನ್ನು ಮಾಡಿಕೊಡುವ 'ಭಾಷೆ ಮತ್ತು ಭಾಷಾ ವಿಜ್ಞಾನ' ಎಂಬ ಇನ್ನೊಂದು ಪಾಠವನ್ನೂ ಇಲ್ಲಿ ಅಳವಡಿಸಲಾಗಿದೆ.

## ಕಲಿಕಾ ಸಾಧನೆಗಳು


- ಹೊಸಗನ್ನಡ ಗದ್ಯಮಾದರಿಗಳನ್ನು ಪರಿಚಯ ಮಾಡಿಕೊಳ್ಳುವರು. ಅಂಥ ಬರವಣಿಗೆಯನ್ನು ಅಭ್ಯಾಸ ಮಾಡುವರು. ಅವುಗಳಲ್ಲಿನ ಆಶಯವನ್ನು ತಿಳಿದು ವಿಮರ್ಶಾ ಲೇಖನಗಳನ್ನು ತಯಾರಿಸುವರು.
- ಸಾಹಿತ್ಯ ಕೃತಿಗಳನ್ನು ಭಾಷಾ ದೃಷ್ಟಿಯಿಂದಲೂ ವಸ್ತುವಿನ ದೃಷ್ಟಿಯಿಂದಲೂ ಕಂಡುಕೊಂಡು ಸ್ವಂತ ರಚನೆಯಲ್ಲಿ ತೊಡಗುವರು.
- ಪ್ರಾಚೀನ ತುಳು ಸಾಹಿತ್ಯವನ್ನು ಪರಿಚಯ ಮಾಡಿಕೊಂಡು ಭಾಷಾಪರವೂ ಆಶಯಪರವೂ ಆದ ಅಂಶಗಳನ್ನು ಅವಲೋಕಿಸಿ ಟಿಪ್ಪಣಿ ಬರೆಯುವರು.
- ಭಾಷೆಯ ಹುಟ್ಟು, ಬೆಳವಣಿಗೆಗಳ ಸ್ವರೂಪಗಳನ್ನು ತಿಳಿದುಕೊಂಡು ಆನ್ವಯಿಕವಾಗಿ ವಿಶ್ಲೇಷಿಸುವರು.
- ಭಾಷೆ ಹಾಗೂ ಸಾಹಿತ್ಯಗಳಲ್ಲಿನ ಸೌಂದರ್ಯವನ್ನು ಕಂಡುಕೊಂಡು ಲೇಖನ, ವಿಮರ್ಶೆಗಳ ಮೂಲಕ ಅದನ್ನು ಅಭಿವ್ಯಕ್ತಿಗೊಳಿಸುವರು.
- ಶಬ್ದಗಳ ವ್ಯುತ್ಪತ್ತಿ, ಸ್ಥಳನಾಮಗಳ ಹುಟ್ಟು – ಇವುಗಳ ಕುರಿತು ಅರಿವನ್ನು ಪಡೆಯುವರು.
- ಆತ್ಮಕಥೆಯನ್ನು ಓದಿ ಜೀವನವನ್ನು ಧೈರ್ಯದಿಂದ ಎದುರಿಸುವ, ಸಾಧನೆ ಮಾಡುವ ಮನೋಭಾವವನ್ನು ಬೆಳೆಸುವರು. ಅದನ್ನು ಬರವಣಿಗೆಯ ಮೂಲಕವೂ ವ್ಯಕ್ತಪಡಿಸುವರು.
- ಜೀವನಾನುಭವಗಳನ್ನು ಸೃಜನಶೀಲವಾಗಿ ಅಭಿವ್ಯಕ್ತಿಗೊಳಿಸುವರು.

# ಕಾಡಿಗೆ ಹೊದ್ದಿಸಿದ ಮಂಜಿನ ಪರದೆ

**ಜಿ.ಪಿ. ಬಸವರಾಜು**

ನಾವು ವೀಕ್ಷಿಸಿದ ಪ್ರೇಕ್ಷಣೀಯ ತಾಣಗಳು ನಮ್ಮ ಮನದಲ್ಲಿ ಆಜೀವನಾಂತ ನೆಲೆನಿಲ್ಲುತ್ತವೆ. ಬದುಕಿನ ಜಂಜಾಟಗಳಿಂದ ಒಂದಷ್ಟು ವಿಶ್ರಾಂತಿ, ಮನರಂಜನೆ ಬಯಸದ ಜನಸಮೂಹವಿರಲಾರದು. ಈ ನಿಟ್ಟಿನಲ್ಲಿ ಮನಕ್ಕೆ ಉಲ್ಲಾಸವನ್ನು ನೀಡುವವುಗಳಲ್ಲಿ ಪ್ರವಾಸವು ಒಂದಾಗಿದೆ. ಹೊಸವಾತಾವರಣ, ಅಲ್ಲಿನ ಜೀವನ ಶೈಲಿ, ಭಾಷೆ, ಸಂಸ್ಕೃತಿ ಇವೆಲ್ಲ ಬಹಳಷ್ಟು ಆಕರ್ಷಣೀಯವಾಗಿರುತ್ತವೆ. ನಿಸರ್ಗ ಪ್ರೇಮದಿಂದ, ಸಾಹಸಪ್ರಿಯತೆಯಿಂದ ಕಾಡುಮೇಡುಗಳನ್ನು, ಬೆಟ್ಟಗುಡ್ಡಗಳನ್ನು ಅರಸಿ ಹೋಗುವ 'ಚಾರಣ'ವು ನೀಡುವ ಅನುಭವವಂತೂ ವಿಶೇಷವಾದದ್ದು. ಪ್ರವಾಸಸಾಹಿತ್ಯ ಕೃತಿಗಳು ಪ್ರವಾಸ ಹೋಗದೇ ಇರುವವರಿಗೆ ಒಂದು ನಿಧಿ ಇದ್ದಂತೆ. ಮನೆಯಲ್ಲಿಯೇ ಕುಳಿತು ಪ್ರವಾಸ ಕೃತಿಗಳನ್ನು ಓದಿ, ಅದರ ವಿವರಣೆಯನ್ನು ತಮ್ಮ ಮನಸ್ಸಿನ ಕನ್ನಡಿಯಲ್ಲಿ ನೋಡಿ, ಆ ಅನುಭವ ತಮಗೂ ಆಗುವಂತೆ ಮಾಡಿಕೊಳ್ಳಬಹುದು. ಪ್ರಸ್ತುತ ಪಾಠಭಾಗವು ಗುಂಪಿನಲ್ಲಿ ಹೋದ ಚಾರಣದ ಅನುಭವವನ್ನು ಸೊಗಸಾಗಿ ನಿರೂಪಿಸುತ್ತದೆ.

ಕಡವರೈ ಶಿಬಿರವನ್ನು ಅಂತಿಮಬಾರಿಗೆ ನಾವು ತೊರೆದಾಗ ಮಧ್ಯಾಹ್ನ ಒಂದು ಗಂಟೆಯ ಸಮಯ. ಬಳ್ಳಾರಿಯಾದರೆ ಹೊರಗೆ ನಿಲ್ಲುವುದಕ್ಕೂ ಆಗದ ಹೊತ್ತು ಅದು. ಆದರೆ ಇದು ತಮಿಳ್ನಾಡಿನ ಸಹ್ಯಾದ್ರಿ ಶ್ರೇಣಿಯ ಒಂದು ತಂಗುದಾಣ. ಕಣಿವೆಯ ಹಾದಿ; ಕಾಡಿನ ಹಾದಿ. ಆ ನಡು ಮಧ್ಯಾಹ್ನದಲ್ಲೂ ಹವೆ ತಂಪಾಗಿತ್ತು. ಮೋಡಮುಸುಕಿತ್ತು. ದಾರಿಯೂ ಮಬ್ಬು ಮಬ್ಬು. ಕಾಡಿನ ಮಧ್ಯೆ ನಾವು ನಡೆಯಬೇಕಾಗಿದ್ದರೂ ಅದು ದಟ್ಟ ಕಾಡೇನಲ್ಲ. ಅಲ್ಲಲ್ಲಿ ಊರುಗಳಿದ್ದವು. ಕೃಷಿಕರು ಹಸನುಗೊಳಿಸಿದ್ದ ಭೂಮಿಗಳಿದ್ದವು. ಭೂಮಿ ಎಂದರೆ ಸಮತಟ್ಟು ನೆಲವಲ್ಲ. ಬೆಟ್ಟದ ಇಳಿಜಾರನ್ನು ಕಡಿದು



ಸೋಪಾನಗಳನ್ನು ಸೃಷ್ಟಿಸಿದಂತೆ ಕಾಣುವ ಭೂಮಿ. ತಮಿಳರ ಅಪಾರ ಪರಿಶ್ರಮ ಮತ್ತು ಭೂಮಿ ಪ್ರೀತಿ ಕಾರಣವಾಗಿ ಈ ಭೂಮಿಯಲ್ಲಿ ಹಸಿರು ನಳನಳಿಸುತ್ತಿತ್ತು. ಬಟಾಣಿ, ಗೆಜ್ಜರಿ ಇತ್ಯಾದಿ ಈ ನೆಲಕ್ಕೆ, ಹವೆಗೆ ಹೊಂದುವ ಬೆಳೆಗಳು. ಗೆಜ್ಜರಿಯ ಪ್ರಮಾಣವೇ ಹೆಚ್ಚು. ನೆಲದೊಳಗಿನ ಗೆಜ್ಜರಿಯನ್ನು ಕಿತ್ತು ನೀರಿನಲ್ಲಿ ತೊಳೆದರೆ ಅದು ನಿಗಿನಿಗಿ ಹೊಳೆಯುತ್ತದೆ. ಅದರ ಕೆಂಪು ಬಣ್ಣವಂತೂ ತುಂಬ ಆಕರ್ಷಕ. ಕೀಳದೆ ಹಾಗೆಯೇ ಈ ಬೆಳೆಯನ್ನು ನೋಡಿದರೆ ನೆಲದ ಮೇಲೆ ಕಾಣಿಸುವ ಇದರ ಹಸಿರು ಮನಸ್ಸನ್ನು ಆವರಿಸಿಬಿಡುತ್ತದೆ. ಹಾಗೆಯೇ ಆ ಹಸಿರು ಸೊಪ್ಪನ್ನು, ಅದು ರುಚಿ ಇರಲಿ, ಇಲ್ಲದಿರಲಿ, ತಿಂದುಬಿಡಬೇಕೆಂಬ ತೀರದ ಆಸೆ ಮನಸ್ಸನ್ನು ಆಕ್ರಮಿಸಿಕೊಂಡು ಬಿಡುತ್ತದೆ. ಸುಮ್ಮನೇ ನೋಡುತ್ತ ನಿಂತರೂ ಕಣ್ಣುಗಳಿಗೆ ಈ ಹಸಿರು ಮುದ ನೀಡುತ್ತದೆ.

ಈ ಬೆಟ್ಟ ಪ್ರದೇಶದಲ್ಲಿ ಕೃಷಿಯನ್ನೇನೋ ಬೆವರು ಹರಿಸಿ ಮಾಡಬಹುದು. ಆದರೆ ಬೆಳೆದ ಬೆಳೆಯನ್ನು ಹೊತ್ತು ಸಾಗಿಸುವುದು ಕಷ್ಟ. ಅದಕ್ಕಾಗಿ ತಮಿಳರು ಇಲ್ಲಿ ಕುದುರೆಗಳನ್ನು ಇಟ್ಟುಕೊಂಡಿರುತ್ತಾರೆ. ಇವೇನೂ ರೇಸ್ ಕುದುರೆಗಳಲ್ಲ. ದಷ್ಟಪುಷ್ಟವಾಗಿ ತಿಂದುಂಡು ಬಲಶಾಲಿಯಾದ ದೇಹವನ್ನು ಪ್ರದರ್ಶಿಸುವ ಕುದುರೆಗಳೂ ಅಲ್ಲ. ಸಣ್ಣ ಎತ್ತರದ ಅಷ್ಟೇ ಸಣ್ಣ ದೇಹದ, ಸಣಕಲು ಕುದುರೆಗಳು. ತಮ್ಮ ದೇಹದ ಬಗೆಗೇ ಕಾಳಜಿವಹಿಸುವಷ್ಟು ಸಮಯವಿಲ್ಲದ ಬಡ ಕೃಷಿಕರು ಈ ಕುದುರೆಗಳನ್ನು ನೋಡಿಕೊಳ್ಳುತ್ತ, ಅವುಗಳಿಗೆ ತಿನ್ನಿಸುತ್ತ, ಅವುಗಳ ದೇಹಗಳನ್ನು ಮಾಲಿಷ್‌ಮಾಡುತ್ತ ಇರುವುದು ಹೇಗೆ ಸಾಧ್ಯ?

ಈ ಕುದುರೆಗಳಿಗೆ ಗೆಜ್ಜರಿಯ ಮೂಟೆಗಳನ್ನು ಹೊರಿಸಿಬಿಟ್ಟರೆ ಅವು ಸಲೀಸಾಗಿ ನಡೆದುಬಿಡುತ್ತವೆ. ನೆಲದಿಂದ ತೆಗೆದ ಗೆಜ್ಜರಿಯನ್ನು ನೀರಿನಲ್ಲಿ ತೊಳೆದು, ಸೊಪ್ಪು ತೆಗೆದು ಗೋಣಿಚೀಲಗಳಿಗೆ ತುಂಬಿ ಕುದುರೆಗಳ ಬೆನ್ನಿಗೆ ಏರಿಸಿಬಿಟ್ಟರೆ ಮುಗಿಯಿತು. ಅವು ಸೀದಾ ಮನೆಯ ದಾರಿಯನ್ನು ಹಿಡಿದುಬಿಡುತ್ತವೆ. ದಾರಿಯಲ್ಲಿ ಅವರಿವರು ಕುದುರೆಗಳನ್ನು ನಿಲ್ಲಿಸಿ ಚೀಲದಿಂದ ಮೂರೋ ನಾಲ್ಕೊ ಗೆಜ್ಜರಿಯನ್ನು ತೆಗೆದು ತಿನ್ನುತ್ತಾ ಹೋಗುವುದೂ ಉಂಟು. ಆದರೆ ಅದಕ್ಕಿಂತ ಹೆಚ್ಚಿನ ಗೆಜ್ಜರಿಯನ್ನು ಯಾರೂ ತೆಗೆಯುವುದಿಲ್ಲ.



ನೋಡಲು ತೀರ ಸಾಧಾರಣವಾಗಿ, ಬಡಕಲು ಪ್ರಾಣಿಗಳಾಗಿ ಕಾಣಿಸಿದರೂ ಈ ಕುದುರೆಗಳು ಇಂಥ ಬೆಟ್ಟಸಾಲು ಪ್ರದೇಶಗಳಲ್ಲಿ ಎಷ್ಟೊಂದು ಉಪಯುಕ್ತ ಜೀವಿಗಳು! ಇಂಥ ಹಲವಾರು ಸಂಗತಿಗಳು ಸಹ್ಯಾದ್ರಿಯ ಈ ಮಡಿಲಲ್ಲಿ ಒಂದರೊಳಗೊಂದು ಬೆರೆತುಕೊಂಡಿರುತ್ತವೆ.



ನಮ್ಮಂಥ ಚಾರಣಿಗರಿಗೆ ಇದು ಕುತೂಹಲದ ಸಂಗತಿ. ಮೆಟ್ಟಿಲು ಮೆಟ್ಟಿಲಾಗಿ ಹರಡಿಕೊಂಡ ಅಚ್ಚ ಹಸಿರು ಹೊಲಗಳನ್ನು ನೋಡುತ್ತ, ಅವುಗಳ ಬೆನ್ನಿಗಿರುವ ಕಾಡನ್ನು, ಬೆಟ್ಟ ಶ್ರೇಣಿಯನ್ನು ಕ್ಯಾಮೆರಾಗಳಲ್ಲಿ ಹಿಡಿಯುತ್ತ, ಕೃಷಿಯ ಅಪಾರ ಸಾಧ್ಯತೆಯ ಬಗ್ಗೆ ಸೋಜಿಗಪಡುತ್ತ ಸಾಗುವ ದಾರಿಹೋಕರು ನಾವು. ನಮಗೂ ಗೆಜ್ಜರಿ ತಿನ್ನುವ ಆಶೆಯಾದರೆ ಕೃಷಿಕರು ಉತ್ಸಾಹದಿಂದಲೇ ಗೆಜ್ಜರಿಗಳನ್ನು ನಮಗೆ ಕೊಡುತ್ತಾರೆ. ಎಲ್ಲಾ ರಾಜ್ಯಗಳ ಕೃಷಿಕರ ಉದಾರತೆ ಇಷ್ಟೇ ದೊಡ್ಡದಾಗಿರುತ್ತದೆ. ನಾವು ಬೆಟ್ಟದಹಾದಿಯಲ್ಲಿ ಸಾಗಿಬರುವಾಗ ನಮ್ಮ ಗುಂಪಿನಲ್ಲಿದ್ದ ಸ್ಫೂರ್ತಿಗೆ ಗೆಜ್ಜರಿ ತಿನ್ನುವ ಆಶೆಯಾಯಿತು. ಅಲ್ಲಿಯೇ ಇದ್ದ ಕಾಲುವೆಯ ನೀರಿನಲ್ಲಿ ರೈತರು ಗೆಜ್ಜರಿಗಳನ್ನು ತೊಳೆಯುವ, ಕುದುರೆಗಳಿಗೆ ಗೆಜ್ಜರಿ ಚೀಲಗಳನ್ನು ತುಂಬುವ ಕೆಲಸದಲ್ಲಿ ಮಗ್ನರಾಗಿದ್ದರು. ಸ್ಫೂರ್ತಿ ಕೇಳಿದ ಕೂಡಲೇ ನಾಲ್ಕಾರು ಗೆಜ್ಜರಿಗಳನ್ನು ಒಬ್ಬ ರೈತ ನೀಡಿದ. ಆ ಗುಂಪಿನಲ್ಲಿಯೇ ಇದ್ದ ಬೆಂಗಳೂರಿನ ತುಳಸಿ, ಶ್ರುತಿ, ಪ್ರಗತಿ, ಐಶ್ವರ್ಯ ಸುಮ್ಮನಿರುವುದು ಹೇಗೆ ಸಾಧ್ಯ? ಅವರೂ ತಮ್ಮ ಕೈಗಳನ್ನು ಒಡ್ಡಿದರು. ಎಲ್ಲರ ಕೈಗಳನ್ನೂ ಕೃಷಿಕರು ಸಂತೋಷದಿಂದಲೇ ತುಂಬಿಸಿದರು. ಮಂಗಳೂರಿನ ರೆಡ್ಡಿಯವರೂ ಕೈ ಚಾಚಿದರು; ಆ ಕೈಗೂ ಗೆಜ್ಜರಿ ಬಂದವು. ಇಷ್ಟೊಂದು ಪ್ರಮಾಣದ ಗೆಜ್ಜರಿಯನ್ನು ಅವರು ಉಚಿತವಾಗಿ ಕೊಡುವುದು ನ್ಯಾಯವಲ್ಲ ಎಂದೆನಿಸಿ ರೆಡ್ಡಿಯವರು ಜೇಬಿಗೆ ಕೈ ಹಾಕಿ ಹಣ ನೀಡಲು ಮುಂದಾದರು. ಆ ಹಣವನ್ನು ಕಂಡ ಕೂಡಲೇ ಬೆಂಕಿಯನ್ನು ಮುಟ್ಟಿದವರಂತೆ ಹಿಂದೆ ಸರಿದರು ರೈತರು. ನಾವು ಎಷ್ಟೇ ಒತ್ತಾಯಿಸಿದರೂ ಅದನ್ನು ತೆಗೆದುಕೊಳ್ಳಲು ಅವರು ಒಪ್ಪಲೇ ಇಲ್ಲ. ಭಾರತದಲ್ಲಿ ವಿಶ್ವಾಸ, ಪ್ರೀತಿಯೊಂದಿಗೆ ಹಣವನ್ನು ಯಾವ ರೈತನೂ ಬೆರೆಸಿದ ಉದಾಹರಣೆಯೇ ಇಲ್ಲವಲ್ಲ. ಹಣವನ್ನು ಅವರು ಮುಟ್ಟುವುದಿಲ್ಲವೆಂದಲ್ಲ. ಅದು ಮಾರುಕಟ್ಟೆಯಲ್ಲಿ; ಕೊಡುವ ಕೊಳ್ಳುವ ವ್ಯವಹಾರದಲ್ಲಿ ಮಾತ್ರ. ಹೊಲದಲ್ಲಿ, ಬೆಳೆಯನ್ನು ತೆಗೆಯುವ ಕ್ಷೇತ್ರಕ್ಕೆ ಬಂದವರಿಗೆ ಅವರು ಕೊಡುವುದು ಹಣಕ್ಕಾಗಿ ಅಲ್ಲ; ಪ್ರೀತಿಗಾಗಿ, ವಿಶ್ವಾಸಕ್ಕಾಗಿ. ಇದನ್ನೆಲ್ಲಾ ನೋಡಿದಾಗ, ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದ ಪ್ರೀತಿಯನ್ನು ರೈತರು ತುಂಬಿ ತುಂಬಿ ಹರಿಸುವುದನ್ನು ಕಂಡಾಗ ಮನಸ್ಸು ತಾನೇ ತಾನಾಗಿ ಅರಳಿದರೂ, ರೈತರು ಮತ್ತು ಹಣದ ವಿಚಾರ ನೆನಪಾಗಿ ಯಾವುದೋ ಮೂಲೆಯಲ್ಲಿ ಛಳುಕು ಹೊಡೆದಂತಾಯಿತು. ಈ ಹಣ, ಈ ಸಾಲದ ಕಾರಣದಿಂದಾಗಿಯೇ ಎಷ್ಟೋ ರೈತರು ಆತ್ಮಹತ್ಯೆ ಮಾಡಿಕೊಂಡ ಸಂಗತಿಗಳು ನೆನಪಾಗಿ ಕೈಯಲ್ಲಿದ್ದ ಗೆಜ್ಜರಿ ಇನ್ನಷ್ಟು ಕೆಂಪಾಗಿ, ಕರಗಿ ಕರಗಿ ರಕ್ತವಾಗಿ ಮೈ ಕಂಪಿಸಿತು.

ಈ ಊರನ್ನು ದಾಟಿ ಹೊರಗೆ ಬಂದು ನಿಂತರೆ ಹಂತಹಂತವಾಗಿ ಕಾಣಿಸುವ ಬೆಟ್ಟ ಸಾಲು. ಹಸಿರು ಹಸಿರು ಗಿಡಮರಗಳ ನಗುವ ಕಾಡು; ಅಲ್ಲಲ್ಲಿ ಮೈ ತೆರೆದ ಹೊಲಗಳು; ದುಡಿಯುವ ರೈತರು; ಚೀಲಗಳನ್ನು ಹೊತ್ತು ಸಾಗುವ ಕುದುರೆಗಳು. ನಮ್ಮನ್ನು ಕುತೂಹಲದಿಂದ ನೋಡುತ್ತ ಹತ್ತಿರ ಬಂದ ವೃದ್ಧರೊಬ್ಬರ ಬಿಳಿಗಡ್ಡ, ಅವರ ಹಣೆಯಲ್ಲಿದ್ದ

ಅರ್ಧಚಂದ್ರಾಕಾರದ ಗಂಧದ ತಿಲಕ, ಲುಂಗಿಯನ್ನು ಎತ್ತಿಕಟ್ಟಿ ನಿಂತಿದ್ದ ಅವರ ಭಂಗಿ ಎಲ್ಲವೂ ಹಿಡಿದು ನಿಲ್ಲಿಸುವಂತಿತ್ತು. ಇಷ್ಟೊಂದು ಜನರ ದೊಡ್ಡ ಗುಂಪು; ನಮ್ಮ ಹೆಗಲ ಮೇಲಿದ್ದ ಚೀಲಗಳು, ಕೈಯಲ್ಲಿದ್ದ ಕೋಲುಗಳು ಎಲ್ಲವನ್ನೂ ಕುತೂಹಲದಿಂದ ನೋಡಿದ ಅವರು ಎಲ್ಲಿಗೆ ಹೊರಟಿದ್ದೀರಿ ಎಂದು ತಮಿಳಿನಲ್ಲಿ ಕೇಳಿದರು. ನಾವು ವಾಸ್ತವವಾಗಿ ಹೋಗಬೇಕಾದದ್ದು ಕೋವಿಲೂರಿಗೆ. ಆದರೆ ಮಾರ್ಗ ಬದಲಾಗಿ ಈಗ ಕುಂಬೂರಿಗೆ ಹೊರಟಿದ್ದೆವು. ಆ ಮುದುಕರಿಗೆ ನಾವು ಅದನ್ನು ಹೇಳಿದಾಗ ಅವರು ಕುಂಬೂರಿನ ದಿಕ್ಕನ್ನು ತೋರಿಸಿದರು. ಬಹಳ ದೂರ ಆಗುತ್ತದೆ ಎಂದರು. ಸ್ಥಳೀಯರಾದ ಅನೇಕರು ಆ ಮಾರ್ಗದಲ್ಲಿ ನಡೆದುಹೋಗುವುದು ಅಪರೂಪವೇನಲ್ಲ. ಆದರೆ ನಾವು ಅಲ್ಲಿ ಹೋಗುವುದು ಸಾಧ್ಯವೇ ಎಂಬ ಅನುಮಾನ ಆ ವೃದ್ಧರಲ್ಲಿ ತಲೆದೋರಿದಂತೆ ಕಂಡಿತು. ಅವರು ಬಸ್ಸುಗಳು, ಅವು ಬರುವ ಹೊತ್ತು ಎಲ್ಲವನ್ನೂ ಹೇಳುತ್ತ, ಬಸ್‌ನಿಲ್ದಾಣದ ದಿಕ್ಕಿನತ್ತ ಬೆರಳುಮಾಡಿ ತೋರಿಸಿದರು. ನಾವು ನಿಂತೇ ಇದ್ದದ್ದು ಅವರಿಗೆ ಬಿಡಿಸಲಾಗದ ಪ್ರಶ್ನೆಯಾಗಿತ್ತು. ನಮ್ಮ ತಂಡದಲ್ಲಿ ಹಿಂದುಳಿದಿದ್ದ ಕೆಲವರಿಗಾಗಿ ಕಾಯುತ್ತ ನಾವು ಅಲ್ಲಿ ನಿಂತಿದ್ದೆವು. ತಮ್ಮ ಭಾಷೆ ಅರ್ಥವಾಗುವುದೋ ಇಲ್ಲವೋ ಎಂಬ ಕಾರಣದಿಂದ ಚಡಪಡಿಸುತ್ತಿದ್ದ ವೃದ್ಧರು ಅನೇಕ ಬಾರಿ ಬಸ್‌ನಿಲ್ದಾಣದ ಹಾದಿಯನ್ನು ತೋರಿಸುತ್ತಲೇ ಇದ್ದರು. ನಮ್ಮ ಚಾರಣ, ಅದರ ಉದ್ದೇಶ ಇತ್ಯಾದಿ ಎಲ್ಲ ವಿವರಗಳನ್ನು ನೀಡುವಷ್ಟು ತಮಿಳು ನಮ್ಮಲ್ಲಿ ಇರಲಿಲ್ಲವಾಗಿ ನಾವು ಅಸಹಾಯಕರಾಗಿ ವೃದ್ಧರನ್ನೇ ನೋಡುತ್ತ ನಮ್ಮಲ್ಲಿನ ತಮಿಳಿನ ಪದಗಳ ಪಳೆಯುಳಿಕೆಯನ್ನೇ ಬಳಸುತ್ತ ಶ್ರಮಿಸುತ್ತಿದ್ದೆವು.

ಕಾಡ ಹಾದಿಯ ನಡಿಗೆ ಎಂದರೆ ಎಲ್ಲೂ ಕುಳಿತುಕೊಳ್ಳಬಹುದು. ಎಲ್ಲೂ ನಡೆಯಬಹುದು ; ಎಲ್ಲೂ ಉಣ್ಣಬಹುದು. ಉಣ್ಣುವುದಕ್ಕೆ ಬುತ್ತಿಯ ಗಂಟಿರಬೇಕು; ಒಂದಿಷ್ಟು ನೀರಿನ ಆಸರೆಯಿರಬೇಕು. ನಾವು ಊಟಕ್ಕೆಂದು ಕುಳಿತು ನಮ್ಮ ಬ್ಯಾಗ್‌ಗಳಲ್ಲಿದ್ದ ಬುತ್ತಿಯ ಗಂಟನ್ನು ಬಿಚ್ಚಿದ್ದು ಒಂದು ಸಣ್ಣ ಝರಿಯ ಬಳಿ. ಇದು ಬೆಟ್ಟದ ಇಳಿಜಾರಿನಿಂದ ಹರಿದು ಬರುತ್ತಿದ್ದ ಸಣ್ಣ ಪ್ರಮಾಣದ ನೀರಿನ ಹರಿವು. ಸ್ವಚ್ಛವಾಗಿ, ಕೊರೆಯುವಷ್ಟು ತಣ್ಣಗೆ ಇದ್ದ ಈ ನೀರೇ ನಮ್ಮನ್ನು ಊಟಕ್ಕೆ ಪ್ರೇರೇಪಿಸಿತು. ಬಂಡೆಗಲ್ಲುಗಳ ಮೇಲೆ ಕುಳಿತು, ಇರುವುದನ್ನೆಲ್ಲ ತಿಂದು ಖಾಲಿ ಮಾಡಿದೆವು. ಅವತ್ತು ನಮಗೆ ಪ್ಯಾಕ್ ಮಾಡಿಕೊಟ್ಟಿದ್ದ ಊಟವೂ ವಿಶೇಷವಾಗಿಯೇ ಇತ್ತು. ಬ್ರೆಡ್ಡು, ಬೆಣ್ಣೆ, ಜಾಮು, ಒಂದು ಕಿತ್ತಳೆ, ಒಂದು ಬಾಳೆಯ ಹಣ್ಣು ಮತ್ತು ಕುಡಿಯುವುದಕ್ಕೆಂದು ಹಣ್ಣಿನ ರಸ. ಇದಕ್ಕಿಂತ ಭೋಜನ ಬೇರೆ ಬೇಕೆ? ಬೊಗಸೆಯಲ್ಲಿ ನೀರು ಕುಡಿದು ಮತ್ತೆ ಚಾರಣ ಆರಂಭಿಸಿದೆವು. ಇಲ್ಲವಾದರೆ ಅಲ್ಲಿಯೇ ಮಲಗುವ ತಯಾರಿಗೆ ಹಲವರು ಮುಂದಾಗುವ ಅಪಾಯ ಇದ್ದೇ ಇತ್ತು.

ನಿಧಾನಕ್ಕೆ ಮಂಜು ನೆಲಕ್ಕಿಳಿಯತೊಡಗಿತು. ಚಳಿಗಾಳಿ ಮೈ ಕೊರೆಯುತ್ತಿತ್ತು. ಆಕಾಶದ ಬಿಳಿ ಸ್ವಚ್ಛ ಮೋಡಗಳು ನೆಲಕ್ಕಿಳಿದು ಬರುತ್ತಿರುವಂತೆ ಭಾಸವಾಗುತ್ತಿತ್ತು. ನಾವಿದ್ದ ಎತ್ತರದಿಂದ

ನೋಡಿದರೆ ಮೋಡಗಳು ನಮ್ಮ ನೇರಕ್ಕೆ ಕಾಣಿಸುತ್ತಿದ್ದವು. ಕೆಲವು ಕಣಿವೆಗಳಲ್ಲಿದ್ದ ಮೋಡಗಳು ನಮ್ಮ ಎತ್ತರದಿಂದ ಕೆಳಗಿರುವಂತೆಯೂ ತೋರುತ್ತಿದ್ದವು. ಮೋಡಗಳನ್ನು ನೋಡಲು ನಾವು ತಲೆ ಎತ್ತಬೇಕಾಗಿರಲಿಲ್ಲ. ನಿಧಾನಕ್ಕೆ ಮೋಡಗಳು ಕಾಡನ್ನು, ಕಣಿವೆಯನ್ನು ತುಂಬುತ್ತಿರುವಂತೆ ಕಾಣಿಸುತ್ತಿತ್ತು. ನಮ್ಮ ಮೈಗಳಿಗೇ ಬಂದು ಸುತ್ತಿಕೊಳ್ಳುತ್ತಿದ್ದ ಮಂಜು ನಿಧಾನಕ್ಕೆ ದಟ್ಟವಾಗುತ್ತ ಹೋಯಿತು. ತೆಳು ಪರದೆ ಹೋಗಿ ದಟ್ಟ ಹೊದಿಕೆಯಾಗುತ್ತಿರುವ ಮಂಜು. ಆಕಾಶವೆಲ್ಲ ಬಿಳಿಯಾಗಿ, ಕಾಡಿನ ಗಿಡಮರಗಳೆಲ್ಲ ಬಿಳಿಯಾಗಿ, ಕಣಿವೆಗಳೆಲ್ಲ ಮುಚ್ಚಿಹೋಗಿ ಬರಿಯ ಬಿಳಿಯೇ ಕಣ್ತುಂಬಿತು. ಎತ್ತರೆತ್ತರದ, ಸಾಲುಸಾಲಿನ ಬೆಟ್ಟಗಳೆಲ್ಲ ಕಾಣದಾಗಿ ಮಂಜಿನ ಮಾಯೆ ನಮ್ಮನ್ನು ಆವರಿಸಿತು. ಬಿಳಿಯ ಧೂಮದಂತೆ ಸುತ್ತಿಕೊಂಡ ಮಂಜು ದಟ್ಟವಾದಂತೆಲ್ಲ ನಮ್ಮ ಹಾದಿ ಮುಚ್ಚಿಕೊಂಡಿತು. ನಮ್ಮ ಗುಂಪು ಒಟ್ಟಾಗಿಯೇ ಪ್ರಯಾಣವನ್ನು ಆರಂಭಿಸಿದ್ದರೂ, ನಡಿಗೆಯ ಗತಿ ಬದಲಾದಂತೆ ಸಣ್ಣ ಸಣ್ಣ ಗುಂಪುಗಳಾಗಿ ಒಡೆದು, ಕೆಲವರು ಮುಂದೆ ಮುಂದೆ, ಕೆಲವರು ಹಿಂದೆ ಹಿಂದೆ. ಮಂಜಿನ ಮುಸುಕಿನಲ್ಲಿ ಯಾವ ಗುಂಪು ಎಲ್ಲಿಯೋ ಕಾಣದಾಯಿತು. ಹತ್ತು ಅಡಿ ದೂರದಲ್ಲಿರುವವರೂ ಕಾಣಿಸದಷ್ಟು ಮಂಜು ದಟ್ಟವಾಗಿತ್ತು.

ನಾವು ಸಾಗುತ್ತಿದ್ದಂತೆಯೇ ನಮ್ಮ ಮುಂದೆ ಹೊಸದೊಂದು ಮಂಜಿನ ಲೋಕ ಸೃಷ್ಟಿಯಾಗಿತ್ತು. ಈ ಬಿಳಿಯ ಮೋಹಕ್ಕೆ ಸಿಕ್ಕು ಎಲ್ಲರೂ ಉಲ್ಲಾಸಗೊಂಡಿದ್ದರು. ಜೆರ್‌ಕಿನ್, ಸ್ವೆಟರ್, ಉಣ್ಣೆಯ ಟೋಪಿ ಹೀಗೆ ಸಕಲ ಸಲಕರಣೆಗಳಿಂದ ತಮ್ಮ ದೇಹಗಳನ್ನು ಸುರಕ್ಷಿತವಾಗಿಟ್ಟುಕೊಂಡಿದ್ದ ಚಾರಣಿಗರು ಉತ್ಸಾಹದಿಂದಲೇ ಹೆಜ್ಜೆ ಹಾಕುತ್ತಿದ್ದರು. ಅತ್ಯುತ್ತಮ ಕ್ಯಾಮೆರಾಗಳನ್ನು ಹೊಂದಿದ್ದ ಕೆಲವರಂತೂ ತಮ್ಮ ಕೌಶಲ ಮತ್ತು ಕ್ಯಾಮರಾ ಸಾಮರ್ಥ್ಯವನ್ನು ತೋರಿಸಲು ಇದು ಒಳ್ಳೆಯ ಅವಕಾಶವೆಂಬುದನ್ನು ಅರಿತು ಚಿತ್ರಗಳನ್ನು ತೆಗೆಯುತ್ತಿದ್ದರು. ಮಂಜಿನ ದಟ್ಟ ಮುಸುಕಿನಲ್ಲಿ ಮೂಡುವ ಮನುಷ್ಯಾಕೃತಿಗಳು, ಗೆರೆಗೆರೆ ರೇಖೆಗಳು, ಸ್ಥೂಲ ಚಹರೆಗಳು, ಕಲಾತ್ಮಕ ಫೋಟೋಗ್ರಫಿಗೆ ಅದೊಂದು ಸವಾಲು; ಅತ್ಯುತ್ತಮ ಅವಕಾಶ. ಇಡೀ ಚಾರಣ ಕೆಲವೇ ಕ್ಷಣಗಳಲ್ಲಿ ಮಂಜುಮುಸುಕಿನ ತೆರೆಯಲ್ಲಿ ಕಣ್ಣುಮುಚ್ಚಾಲೆಯ ಆಟವಾಗಿ ಮಾರ್ಪಟ್ಟಿತ್ತು.

ನಡುಹಗಲಿಗೇ ಇಳಿದ ಈ ಮುಸುಕು ಬೇಗ ಕದಲುವಂತೆಯೂ ಕಾಣಲಿಲ್ಲ. ನಮ್ಮ ಮುಂದಿನ ಹಾದಿಯೇ ಕಾಣಿಸದು. ಆದರೂ ಯಾರಿಗೂ ಭೀತಿಯಾಗಲೀ, ಆತಂಕವಾಗಲೀ ಉಂಟಾದಂತೆ ಕಾಣಲಿಲ್ಲ. ಎಲ್ಲರೂ ಉಲ್ಲಾಸದಲ್ಲಿಯೇ ನಡೆಯುತ್ತಿದ್ದರು. ಹೆಗಲ ಮೇಲಿನ ಚೀಲಗಳು ತಮ್ಮ ತೂಕವನ್ನು ಕಳೆದುಕೊಂಡು ಹಗುರಾಗಿದ್ದಂತೆ ಭಾಸವಾಗುತ್ತಿತ್ತು. ವಾತಾವರಣದ ಈ ಸೊಗಸನ್ನು ಎಲ್ಲರೂ ಸವಿಯುತ್ತಲೇ ಹೆಜ್ಜೆ ಹಾಕುತ್ತಿದ್ದರು. ಗೈಡ್ ತನ್ನ ಉಲ್ಲಾಸವನ್ನು, ಜೀವಂತಿಕೆಯನ್ನು ಮತ್ತು ಸಹಜ ಸಾಮರ್ಥ್ಯವನ್ನು ಬಿಂಬಿಸುತ್ತ ಹೆಜ್ಜೆಹಾಕುತ್ತಿದ್ದ.

ನಮ್ಮ ಕಣ್ಮುಂದಿನ ಕಾಡು ಮರೆಯಾಗಿತ್ತು. ಆದರೆ ಬೃಹದಾಕಾರದ ಮರಗಳು ಬ್ರಹ್ಮರಾಕ್ಷಸರಂತೆ ಕಾಣಿಸುತ್ತಿದ್ದವು. ಈ ರಾಕ್ಷಸರು ಕಣ್ಮುಂದೆ ಸುಳಿದದ್ದೇ ಹಲವರಿಗೆ ಹುರುಪು ಹುಟ್ಟಿತು. 'ಅಲ್ಲಿ ನೋಡಿ, ಇಲ್ಲಿ ನೋಡಿ' ಎಂದು ನಿಂತು ತಮ್ಮ ತಮ್ಮ ಮಿತ್ರರಿಗೆ ತೋರಿಸುತ್ತಿದ್ದರು. ಮಸುಕು ಮಸುಕು ಆಕೃತಿಗಳ ಬ್ರಹ್ಮರಾಕ್ಷಸರು ನಮ್ಮ ಸುತ್ತುಮುತ್ತ ಅವತರಿಸಿಬಿಟ್ಟಿದ್ದರು. ಮತ್ತೂ ಸೂಕ್ಷ್ಮವಾಗಿ ಗಮನಿಸುವವರಿಗೆ ಹೆಗಲ ಮೇಲೆ ಚೀಲವನ್ನು ಹೊತ್ತು ನಡೆಯುವ ಪ್ರತಿಯೊಬ್ಬ ಚಾರಣಿಗನೂ ಬ್ರಹ್ಮರಾಕ್ಷಸನಾಗಿಯೇ ಕಂಡಿರಬೇಕು. ಆದರೆ ಯಾರೂ ಅದನ್ನು ಬಾಯಿಬಿಟ್ಟು ಹೇಳಲಿಲ್ಲ. ಹಾಗೆ ಹೇಳಿದ್ದರೆ, ಒಬ್ಬರು ಇನ್ನೊಬ್ಬರನ್ನು ಮಾತನಾಡಿಸಲು ಮುಟ್ಟಲು ಹೆದರುತ್ತಿದ್ದ ವಾತಾವರಣ ನಿರ್ಮಾಣವಾಗುವ ಸಂಭವವಿತ್ತು.

ಬ್ರಹ್ಮರಾಕ್ಷಸರ ಲೋಕ ಬಹಳ ಹೊತ್ತು ಇರಲಿಲ್ಲ. ನಿಧಾನಕ್ಕೆ ಮಂಜು ಕರಗಿತು. ಗಾಳಿ ಮಂಜಿನ ಪರದೆಯನ್ನು ಸರಿಸಿ ವಾಸ್ತವ ಲೋಕವನ್ನು ಕಣ್ಮುಂದೆ ತಂದು ನಿಲ್ಲಿಸಿತು. ಎಲ್ಲರೂ ಅವರವರ ನಿಜರೂಪಗಳಲ್ಲಿ ಕಾಣಿಸತೊಡಗಿದರು. ಹಾದಿ, ಗಿಡಮರಗಳು, ಕಾಡು, ಕಣಿವೆ, ಮೋಡ ಎಲ್ಲವೂ ಸ್ಪಷ್ಟವಾದವು.

### ಜಿ.ಪಿ. ಬಸವರಾಜು



ಜಿ.ಪಿ. ಬಸವರಾಜು ಪತ್ರಕರ್ತರಾಗಿ, ಲೇಖಕರಾಗಿ ಪ್ರಸಿದ್ಧರು. ಕವನ, ಕತೆ, ಪ್ರವಾಸ ಕಥನ, ವಿಮರ್ಶೆ, ಪ್ರಬಂಧ ಮೊದಲಾದವುಗಳನ್ನು ಬರೆದಿದ್ದಾರೆ. ನೀಲಾಚಲ ನಾಡಿನಲ್ಲಿ, ಭೂಕಂಪದ ಅಂತರಂಗ, ಪಂಚಮುಖಿ ಪಂಜಾಬ್, ಕುಲುಕಣಿವೆಯಲ್ಲಿ, ಕರೆಯಿತೋ ಕಡಲತೀರ ಇವರ ಇತರ ಪ್ರವಾಸ ಕಥನಗಳಾಗಿವೆ. 'ರಾಜ ಮತ್ತು ಹಕ್ಕಿ' ಎಂಬ ಅವರ ಕಥಾ ಸಂಕಲನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿದೆ. ಪು.ತಿ.ನ. ಪುರಸ್ಕಾರ, ಜಿ.ಎಸ್.ಎಸ್. ಕಾವ್ಯ ಪ್ರಶಸ್ತಿಗಳು ಇವರಿಗೆ ಸಂದಿವೆ. ಪ್ರಸ್ತುತ ಭಾಗವನ್ನು ಅವರ 'ಕಾಡು ಕಣಿವೆಯ ಹಾಡು' ಪ್ರವಾಸ ಕಥನದಿಂದ ಆರಿಸಲಾಗಿದೆ.

### ಪದಗಳ ಅರ್ಥ

ಹಸನುಗೊಳಿಸು – ಸಿದ್ಧಪಡಿಸು. ಸೋಪಾನ – ಮೆಟ್ಟಿಲು. ಗೆಜ್ಜರಿ – ಕ್ಯಾರೇಟಿನ ಒಂದು ಪ್ರಭೇದ, ದೇಸೀ ತಳಿ. ಚಾರಣಿಗ – ಪಾದಯಾತ್ರೆಯ ಸಂಚಾರಿ. ಛಳುಕು – ಆಘಾತ. ಭಂಗಿ – ರೀತಿ. ಪಳೆಯುಳಿಕೆ – ಅವಶೇಷ. ಧೂಮ – ಹೊಗೆ. ಜೆರ್‌ಕಿನ್ – ಕೃತಕ ನೂಲಿನ ಬಟ್ಟೆಯ ಜಾಕೆಟ್. ಬ್ರಹ್ಮರಾಕ್ಷಸ – ಧರ್ಮಭ್ರಷ್ಟನಾಗಿ ಬ್ರಾಹ್ಮಣರ ಧನವನ್ನೂ ಪರಪತ್ನಿಯರನ್ನೂ ಅಪಹರಿಸಿದ ನೀಚ ಬ್ರಾಹ್ಮಣನಿಗೆ ಮರಣಾನಂತರ ಬರುವುದೆನ್ನಲಾದ ಪಿಶಾಚ ಜನ್ಮ ಮತ್ತು ಹಾಗೆ ಜನ್ಮ ತಾಳಿದವನು.

## ಒಂದು ವಾಕ್ಯದಲ್ಲಿ ಉತ್ತರಿಸಿರಿ

- ಚಾರಣಿಗರಿಗೆ ಕೃಷಿಕರು ತೋರಿದ ಉದಾರತೆಯೇನು?
- ರೆಡ್ಡಿಯವರು ಹಣ ನೀಡಲು ಮುಂದಾದಾಗ ರೈತರು ಹೇಗೆ ಪ್ರತಿಕ್ರಿಯೆ ತೋರಿಸಿದರು?
- ವೃದ್ಧನ ಮತ್ತು ಭಾಷೆ ಗೊತ್ತಿಲ್ಲದ ಚಾರಣಿಗರ ನಡುವೆ ಸಂವಾದ ಹೇಗೆ ನಡೆಯಿತು?

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಪಠ್ಯಭಾಗದಲ್ಲಿ ತಮಿಳರ ಭೂಮಿಪ್ರೀತಿ ಹೇಗೆ ವ್ಯಕ್ತವಾಗಿದೆ?
- ಲೇಖಕರು ಊಹಿಸಿದಂತೆ ಸರಕುಗಳನ್ನು ಹೊರುವ ಕುದುರೆಗಳ ಬಗೆಗೆ ಕೃಷಿಕರು ಕಾಳಜಿ ವಹಿಸದೆ ಇರಲು ಕಾರಣಗಳು ಯಾವುವು?
- ಚಾರಣಿಗರು ಕಂಡ ಮುದುಕನ ವ್ಯಕ್ತಿತ್ವದ ವಿಶೇಷತೆಯೇನು?
- ಬ್ರಹ್ಮರಾಕ್ಷಸರ ಲೋಕ ಹೇಗೆ ಮಾಯವಾಯಿತು?
- ಪ್ರವಾಸದ ಸಂದರ್ಭದಲ್ಲಿ ಚಾರಣಿಗರಿಗೆ ಎದುರಾದ ಸವಾಲುಗಳೇನು?
- 'ಕಾಡಿಗೆ ಹೊದ್ದಿಸಿದ ಮಂಜಿನ ಪರದೆ'ಯೆಂಬ ಶೀರ್ಷಿಕೆಯ ಔಚಿತ್ಯವನ್ನು ಬರೆಯಿರಿ.
- ನೀವು ಕೈಗೊಂಡ ಪ್ರವಾಸದ ಅನುಭವಗಳ ಕುರಿತು ಪ್ರಬಂಧವನ್ನು ಬರೆಯಿರಿ. (ಅವಶ್ಯವಿದ್ದಲ್ಲಿ ಅಂತರ್ಜಾಲದಿಂದ ದೊರಕುವ ಚಿತ್ರಗಳನ್ನು ಬಳಸಿಕೊಳ್ಳಿರಿ.)
- ನಿಮ್ಮ ಊರಿನ ಕೃಷಿಭೂಮಿ ಮತ್ತು ಕೃಷಿಕರ ಸಮಸ್ಯೆಗಳ ಬಗ್ಗೆ ವಿವರಣಾತ್ಮಕ ಲೇಖನವೊಂದನ್ನು ಸಿದ್ಧಪಡಿಸಿರಿ.

## ಚಟುವಟಿಕೆಗಳು

- ನೀವು ಓರ್ವ ಪತ್ರಿಕಾ ಸಂಪಾದಕರಾಗಿ, ಪ್ರವಾಸಿತಾಣಗಳಲ್ಲಿ ಕಂಡುಬರುತ್ತಿರುವ ಪರಿಸರ ಮಾಲಿನ್ಯದ ಅತಿರೇಕವನ್ನು ತಡೆಯುವ ಅಗತ್ಯವನ್ನು ಪ್ರತಿಪಾದಿಸುವ ಸಂಪಾದಕೀಯವನ್ನು ಬರೆಯಿರಿ.
- ನಿಮ್ಮೂರಿನ ಯಾವುದಾದರೂ ಒಂದು ಪ್ರವಾಸಿ ತಾಣದ ಮಾಹಿತಿ ಕೈಪಿಡಿಯನ್ನು ತಯಾರಿಸಿರಿ.
- ಚಾರಣಕ್ಕೆ ಯೋಗ್ಯವಾದ ನಿಮ್ಮೂರಿನ ಯಾವುದಾದರೂ ಒಂದು ತಾಣದ ವಿಶೇಷತೆಗಳನ್ನು ಮತ್ತು ಅಲ್ಲಿಗೆ ತಲಪಲಿರುವ ದಾರಿ ಇತ್ಯಾದಿಗಳನ್ನೊಳಗೊಂಡ ಲೇಖನವನ್ನು ಸಿದ್ಧಪಡಿಸಿರಿ.
- 'ಪ್ರವಾಸದ ಮೂಲಕ ಭಾವೈಕ್ಯ' ಎಂಬ ವಿಷಯದ ಕುರಿತು ಪ್ರಬಂಧವನ್ನು ಬರೆಯಿರಿ.
- ಜಡಿಮಳೆ ಸುರಿದಾಗಿನ ಕಾಡಿನ / ಹಳ್ಳಿಯ ಕಾಲ್ಪನಿಕ ಚಿತ್ರಣವೊಂದನ್ನು ಮಾಡಿರಿ.
- ಲೇಖಕರು ಕಂಡ ಕೃಷಿಕರ ಸ್ವಭಾವವೈಶಿಷ್ಟ್ಯಗಳ ಕುರಿತು ಕಿರುಲೇಖನವನ್ನು ಬರೆಯಿರಿ.

## ಭಾಷಾಭ್ಯಾಸ

**ಈ ಕೆಳಗಿನ ಪದಗಳನ್ನು ಬಿಂಗಡಿಸಿ ಸಂಧಿಯನ್ನು ಹೆಸರಿಸಿರಿ.**

ಬೃಹದಾಕಾರ, ತಂಗುದಾಣ, ಪ್ರತಿಫಲಾಪೇಕ್ಷೆ, ತಲೆದೋರು, ಮನುಷ್ಯಾಕೃತಿ, ಅತ್ಯುತ್ತಮ.

**ಕೆಳಗಿನ ಪದಗಳ ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿರಿ.**

ಕಣ್ಣು ಮುಚ್ಚು, ಗಿಡಮರಗಳು

**ಕೆಳಗಿನ ಪದಗಳ ತದ್ಭವ ರೂಪ ಬರೆಯಿರಿ.**

ಘಂಟಾ, ಭೂಮಿ, ಐಶ್ವರ್ಯ, ಪ್ರಯಾಣ, ಆಶ್ರಯ, ಪ್ರಮಾಣ, ಆಕಾಶ, ವರ್ಣ.

## ನಿಷೇಧಾರ್ಥ ರೂಪ

ಮಾದರಿ :

ನೋಡು – ನೋಡನು/ಳು/ರು

ಹೋಗು – ಹೋಗನು/ಳು/ರು

ಮಾಡು – ಮಾಡನು/ಳು/ದು

ಮಾದರಿಯಂತೆ ಕೆಳಗಿನ ಧಾತುಗಳ ನಿಷೇಧಾರ್ಥ ರೂಪಗಳನ್ನು ಬರೆಯಿರಿ.

ತಿನ್ನು, ತುಂಬು, ಒಪ್ಪು, ಕೊಳ್ಳು, ಕೊಡು, ತೋರು, ಬರು, ಕುಡಿ, ಕಾಣಿಸು, ತರು ......

- ನೆಲದೊಳಗಿನ ಗೆಜ್ಜರಿಯನ್ನು ಕಿತ್ತು ನೀರಿನಲ್ಲಿ ತೊಳೆದರೆ ನಿಗಿನಿಗಿ ಹೊಳೆಯುತ್ತದೆ. ಅಡಿಗೆರೆ ಎಳೆದಂತಹ ಪದವನ್ನು ಗಮನಿಸಿರಿ.
  ಇಂಥ ಪದಗಳ ಪಟ್ಟಿಯನ್ನು ಬೆಳೆಸಿರಿ : ಫಳಫಳ, ಪಿಳಿಪಿಳಿ, ..........
- ನಿಮ್ಮೂರಿನ ಪ್ರವಾಸಿ ತಾಣಗಳ ಸ್ವಚ್ಛತೆಯ ಬಗ್ಗೆ ಜನರಲ್ಲಿ ಕಾಳಜಿಯನ್ನು ಮೂಡಿಸುವ ಸಲುವಾಗಿ ಕರಪತ್ರವೊಂದನ್ನು ತಯಾರಿಸಿರಿ.

## ಹೆಚ್ಚಿನ ಓದಿಗೆ

ಕಾಡು ಕಣಿವೆಯ ಹಾಡು – ಜಿ.ಪಿ. ಬಸವರಾಜು

ಕುಮಾರ ಪರ್ವತದ ಸುತ್ತಮುತ್ತ – ಜಿ.ಎನ್. ಅಶೋಕವರ್ಧನ

# ಹರಳುಗಟ್ಟಿದ ಬಗೆ

ಡಾ. ಅನುಪಮಾ ನಿರಂಜನ

ತಮ್ಮ ಬದುಕಿನ ಕಥೆಯನ್ನು ತಾವೇ ನಿರೂಪಿಸಿದಾಗ ಅದು ಆತ್ಮಕಥೆಯೆನಿಸಿಕೊಳ್ಳುತ್ತದೆ. ಒಬ್ಬರ ಜೀವನದ ಬಗ್ಗೆ ಇನ್ನೊಬ್ಬರು ನಿರೂಪಿಸಿದಾಗ ಅದು ಜೀವನಚರಿತ್ರೆ ಎನಿಸಿಕೊಳ್ಳುತ್ತದೆ. ಮಹಾನ್ ವ್ಯಕ್ತಿಗಳ ಆತ್ಮಕಥೆಗಳು ಅವರ ಜೀವನದ ವೈವಿಧ್ಯಮಯವಾದ ಅನುಭವಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಅವರು ಬದುಕಿನುದ್ದಕ್ಕೂ ನಡೆಸಿದ ಹೋರಾಟ, ಸೋಲೊಪ್ಪದ ಛಲ, ನೋವು ನಲಿವು ಇತ್ಯಾದಿಗಳು ಅವುಗಳಲ್ಲಿ ಪ್ರತಿಫಲಿಸುತ್ತವೆ. ಅವು ಓದುಗನಿಗೆ ಹಲವು ರೀತಿಯಲ್ಲಿ ಜೀವನಕ್ಕೆ ಮಾರ್ಗದರ್ಶಕವಾಗಬಹುದು. ಅವು ಒಳಗೊಂಡಿರುವ ರಸಮಯವಾದ ಸಂಗತಿಗಳು ಮುದವನ್ನು ನೀಡುತ್ತವೆ. ಜೀವನವನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯಲು, ಜಯ ಸಾಧಿಸಲು ಪ್ರೇರಣೆಯಾಗುತ್ತವೆ. ಶ್ರಮ ವಹಿಸಿ ದುಡಿದು, ಹೋರಾಡಿ ಜೀವನದ ಎಲ್ಲ ಸಮಸ್ಯೆಗಳನ್ನು ದಾಟಿ ಯಶಸ್ವಿಯಾದ ಲೇಖಕಿಯೊಬ್ಬರ ಆತ್ಮಕಥೆಯ ಭಾಗ ಇಲ್ಲಿದೆ.

ನಿರಂಜನ ಇದ್ದಕ್ಕಿದ್ದ ಹಾಗೆ ಪಾರ್ಶ್ವವಾಯುವಿಗೆ ಈಡಾದರು (೧೯೭೧). ನಮ್ಮ ಕುಟುಂಬ ಈ ಆಘಾತದಿಂದ ತತ್ತರಿಸಿತು. ನಾನು ಮನಃಸ್ಥೈರ್ಯ ಕಳೆದುಕೊಂಡೆ. ಆದರೆ ಯಾವ ಪರಿಸ್ಥಿತಿಯಲ್ಲೂ ಸೋಲೊಪ್ಪಿಕೊಳ್ಳುವ ಜಾಯಮಾನ ನಮ್ಮದಲ್ಲ. ಬದುಕಿನ ರೀತಿಯನ್ನು ಈಗ ಬದಲಾಯಿಸಿಕೊಳ್ಳಬೇಕಾಯಿತು. ಈಗಾಗಲೇ ಇದ್ದ ಜವಾಬ್ದಾರಿಗಳ ಜೊತೆಗೆ, ನಿರಂಜನರು ಅದುವರೆಗೆ ಮಾಡುತ್ತಿದ್ದ ಕೆಲಸಗಳನ್ನು ನಾನೇ ನಿರ್ವಹಿಸಬೇಕಾಯಿತು. ಇವುಗಳ ಒತ್ತಡದಲ್ಲಿ ಸ್ವಲ್ಪ ಕಾಲ ಬರವಣಿಗೆ ಹಿಮ್ಮೆಟ್ಟಿತು. ಆದರೆ ಒದಗಿದ ಈ ತೀವ್ರ ನೋವು ಜೀವ ಮಾಗಲು ಕಾರಣವಾಯಿತು.


ತೇಜಸ್ವಿನಿಯ ಮೊದಲ ಕಾವ್ಯ ಸಂಗ್ರಹ 'Liquid Sapphire' ೧೯೭೪ರಲ್ಲಿ ಪ್ರಕಟವಾಯಿತು. ಅವಳಿಗಾಗ ೧೬ ವರ್ಷ ಪ್ರಾಯ. ಕರುಳ ಕುಡಿಯೊಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಬುದ್ಧ ಕಾವ್ಯ ರಚಿಸಿದ್ದು ಹಿಗ್ಗು ತಂದಿತ್ತು. ಅದೇ ಸಮಯಕ್ಕೆ ಲಂಡನ್ನಿನಿಂದ ಕಾಮನ್‌ವೆಲ್ತ್ ಪೋಯಿಟ್ರಿ ಸ್ಪರ್ಧೆ ಏರ್ಪಡಿಸಿರುವ ವಿಚಾರ ತಿಳಿಯಿತು.ಈ ಸ್ಪರ್ಧೆಯಲ್ಲಿ ಕಾಮನ್ ವೆಲ್ತ್‌ನ ಯಾವ ಪ್ರಜೆಯಾದರೂ ಭಾಗವಹಿಸಬಹುದಿತ್ತು. ಆದರೆ ಕಾವ್ಯ ಸಂಕಲನ ಆತನ/ಆಕೆಯ ಮೊದಲ ಸಂಕಲನವಾಗಬೇಕು ಎಂಬುದು ನಿಯಮ.

ತೇಜಸ್ವಿನಿ : "ಆ ಪೋಯಿಟ್ರಿ ಕಾಂಟೆಸ್ಟ್‌ಗೆ ನನ್ನ ಕವಿತಾ ಸಂಕಲನ ಕಳಿಸ್ತೀನಿ" ಎಂದಾಗ ನಾವು ಸಂತೋಷದಿಂದ ಒಪ್ಪಿದೆವು. ವಿಶ್ವದಾದ್ಯಂತ ನೂರಾರು ಲೇಖಕರು ಸ್ಪರ್ಧಿಸಬಹುದಾದ ಈ ಸ್ಪರ್ಧೆಯಲ್ಲಿ ನಮ್ಮ ಮಗಳಿಗೆ ಬಹುಮಾನ ಬರುವ ನಿರೀಕ್ಷೆಯೂ ಇರಲಿಲ್ಲ.

ಆದರೆ ಮುಂದೆ ಒಂದು ದಿನ ಮದರಾಸಿನ ಪತ್ರಿಕೆಯೊಂದು ಪ್ರಕಟಿಸಿದ ವಾರ್ತೆಯನ್ನು ಸ್ನೇಹಿತರೊಬ್ಬರು ಕಳಿಸಿಕೊಟ್ಟರು.

"Teen age girl from India wins Common wealth Poetry Commendation" ಎಂದಿತ್ತು. ಅದರಲ್ಲಿ ತೀರ್ಪುಗಾರರ ಪ್ರಕಾರ "Miss Niranjana's best work of the very highest standard"

ಅಂತಾರಾಷ್ಟ್ರೀಯ ಮಟ್ಟದಲ್ಲಿ ತೇಜಸ್ವಿನಿಗೆ ಪುರಸ್ಕಾರ ಸಿಕ್ಕಿತೆಂದು ನಮಗೆ ಸಂತೋಷ ಹಾಗೂ ಹೆಮ್ಮೆ ಉಂಟಾದವು. ಈ ಘಟನೆ ನನಗೆ ಒಂದಿಷ್ಟು ಆಳವಾಗಿ ಯೋಚಿಸಲು ಪ್ರೇರಣೆಯಾಯಿತು. ಕಾಮನ್‌ವೆಲ್ತ್ ಪೋಯೆಟ್ರಿ ಕಾಂಟೆಸ್ಟ್‌ನ ತೀರ್ಪುಗಾರರಿಗೆ ತೇಜಸ್ವಿನಿ ಭಾರತೀಯಳು ಅಥವಾ ಹದಿವಯಸ್ಸಿನ ಹುಡುಗಿ ಎಂಬ ಸಂಗತಿ ಮುಖ್ಯವಾಗಿರಲಿಲ್ಲ. ಅವಳ ಕವಿತೆಯಲ್ಲಿದ್ದ ಮೌಲ್ಯವನ್ನು ಮಾತ್ರ ಅವರು ಗುರುತಿಸಿದ್ದರು. ಯಾರ ವಶೀಲಿ ಇಲ್ಲದಿದ್ದರೂ ಮೌಲ್ಯವುಳ್ಳ ಬರಹ ಯಾವತ್ತಿಗೂ ಮಿನುಗುತ್ತದೆ. ಅದು ಗಂಡಸು ಅಥವಾ ಹೆಂಗಸು ಬರೆದದ್ದು ಎಂಬುದು ಮುಖ್ಯವಾಗುವುದಿಲ್ಲ ಅನಿಸಿತು.



"Wuthering Heights" ಎಂಬ ಜಗದ್ವಿಖ್ಯಾತ ಕಾದಂಬರಿ ಬರೆದ ಎಮಿಲಿ ಬ್ರಾಂಟೆ, ಜೀವಮಾನದಲ್ಲಿ ತನ್ನ ಹಳ್ಳಿ ಬಿಟ್ಟು ಹೊರಗೆ ಹೋಗಿರಲಿಲ್ಲ. ಅವಳು ಪಂಡಿತೆಯೂ ಅಲ್ಲ. ತಾನು ಕಂಡ ಬದುಕಿಗೆ ತೀವ್ರವಾಗಿ ಸ್ಪಂದಿಸಿ ಕಾದಂಬರಿ ಬರೆದಳು. ಅವಳ ಸೋದರಿ ಚಾರ್ಲೆಟ್ ಬ್ರಾಂಟೆಯಾಗಲೀ (Jane Eyre ಕರ್ತೃ) Pride and Prejudice ಬರೆದ ಜೇನ್ ಆಸ್ಟಿನ್ ಆಗಲೀ The Years ಬರೆದ ವರ್ಜೀನಿಯಾ ವೂಲ್ಫ್ ಆಗಲೀ ಪುರುಷ ಪ್ರಧಾನ

ಸಮಾಜದಲ್ಲಿ ಅವರ ದಯೆಗಾಗಿ ಯಾಚಿಸಿದವರಲ್ಲ. ಇವರೆಲ್ಲ ತಮ್ಮ ಬುದ್ಧಿಯ ಬಲದಿಂದಲೇ ಬೆಳೆದರು. ಇವರಲ್ಲಿ ವರ್ಜೀನಿಯಾ ವೂಲ್ಫ್ ದೊಡ್ಡ ವಿದುಷಿ. ಮತ್ತು ಹೊರಜಗತ್ತಿನ ಜೊತೆಗೆ ಹೆಚ್ಚಿನ ಸಂಪರ್ಕವಿದ್ದವಳು. ಇವರ ಸಾಧನೆ ಕಂಡಾಗ ಕೃತಿರಚನೆಗೆ ಪ್ರತಿಭೆಯೇ ಮುಖ್ಯ ಅನಿಸಿತು.

A room of one's own ಎಂಬ ಪುಸ್ತಕದಲ್ಲಿ ವರ್ಜಿನಿಯಾ ವೂಲ್ಫ್ ಲೇಖಕಿಯರಿಗೆ ಸಂಬಂಧಿಸಿದ ಅನೇಕ ಮಹತ್ವದ ಪ್ರಶ್ನೆಗಳನ್ನೂ ಎತ್ತಿದ್ದಾಳೆ. "ಮಹತ್ತರವಾದ ಕೃತಿಗಳನ್ನು ರಚಿಸಲು ಲೇಖಕಿಗೆ ಏಕಾಂತ ಇರಬೇಕು. ತನ್ನದೇ ಆದ ಕೊಠಡಿಯಿರಬೇಕು ಮತ್ತು ಸ್ವತಂತ್ರವಾದ ವರಮಾನವಿರಬೇಕು" ಎಂದು ಆಕೆ ೧೯೨೯ರಲ್ಲಿ ತನ್ನ ಹೊತ್ತಗೆಯಲ್ಲಿ ಬರೆದ ಮಾತುಗಳನ್ನು ಜಗತ್ತಿನಾದ್ಯಂತ ನೂರಾರು ಸ್ತ್ರೀವಾದೀ ಪಂಡಿತೆಯರು ಎತ್ತಿ ಹಿಡಿದಿದ್ದಾರೆ.

ಸಾಮಾನ್ಯವಾಗಿ ಲೇಖಕಿಗೆ ಏಕಾಂತವಿರುವುದಿಲ್ಲ. ಇನ್ನೊಬ್ಬರಿಗಾಗಿ ಕೆಲಸ ಮಾಡುವುದರಲ್ಲೇ ದಿನ ಕಳೆಯುತ್ತದೆ. ಬರವಣಿಗೆಗೆ ಪ್ರತ್ಯೇಕ ಕೊಠಡಿಯೊಂದು ಗಗನಕುಸುಮವೇ ಸರಿ. ಅವಳು ಅಡುಗೆಮನೆಯ ದಂಡೆಯ ಮೇಲೆಯೋ ಡೈನಿಂಗ್ ಟೇಬಲಿನ ಮೇಲೆಯೋ ಮಕ್ಕಳು ಅಥವಾ ಗಂಡನ ಮೇಜಿನ ಮೇಲೆಯೋ (ಅವರಿಲ್ಲದಾಗ) ಬರೆಯಬೇಕಾಗುತ್ತದೆ. ಸ್ವತಃ ಆರ್ಥಿಕ ವರಮಾನವಂತೂ ಇರುವುದೇ ಇಲ್ಲ. ಬರೆಯಲು ಹಾಳೆ, ಪೆನ್ನುಕೊಳ್ಳಬೇಕಾದರೂ ಹಣಕ್ಕೆ ಗಂಡನ ಮುಂದೆ ಅಂಗಲಾಚಬೇಕು. ವರ್ಜೀನಿಯ ಹೇಳುವ ಹಾಗೆ ಏಕಾಂತ, ಕೊಠಡಿ, ವರಮಾನಗಳು ಮಹಿಳೆಗೆ ಹೆಚ್ಚು ಆತ್ಮವಿಶ್ವಾಸವನ್ನೂ ಧೈರ್ಯವನ್ನೂ ಕೊಡಬಲ್ಲವು. ಇವು ಅವಳ ಬರವಣಿಗೆಯಲ್ಲಿ ಪ್ರತಿಫಲಿಸುವುದು ಸಾಧ್ಯ ಎಂದು ಚಿಂತಿಸಿದೆ.

ಆದರೆ ನನ್ನ ಉದಾಹರಣೆಯನ್ನೇ ತೆಗೆದುಕೊಂಡರೆ ಬರೆಯಲು ಪ್ರತ್ಯೇಕ ಕೊಠಡಿಯಿತ್ತು, ಏಕಾಂತವಿತ್ತು, ವೃತ್ತಿಯಿಂದಾಗಿ ಸಾಕಷ್ಟು ಒಳ್ಳೆಯ ವರಮಾನವೂ ಇತ್ತು. ಆದರೂ ಬಹಳ ಒಳ್ಳೆಯ ಕೃತಿಗಳನ್ನು ಬರೆಯಲು ಏಕೆ ಸಾಧ್ಯವಾಗಲಿಲ್ಲ? ಪರಿಸರ ಅನುಕೂಲವಾಗಿತ್ತು. ಪ್ರತಿಭೆಯಿತ್ತು. ಆದರೆ ಶ್ರೇಷ್ಠಮಟ್ಟದ ಸಾಧನೆ ಆಗಲಿಲ್ಲ. ಇದಕ್ಕೆ ಕಾರಣ ಬಹುಶಃ ತೀವ್ರವಾಗಿ ಸ್ಪಂದಿಸದೆ ಇದ್ದುದಿರಬಹುದು. ವಿಷಯದ ಬಗ್ಗೆ ಸಾಕಷ್ಟು ಯೋಚನೆ ಮಾಡದಿರುವುದು ಮತ್ತು ಅಧ್ಯಯನದ ಹಿನ್ನೆಲೆಯಿಲ್ಲದಿರುವದೂ ಕಾರಣ ಅನಿಸಿತು. ತೇಜಸ್ವಿನಿಗೆ ಪರಿಸರದ ಪ್ರೋತ್ಸಾಹವಿತ್ತು. ಅವಳು ಪ್ರತಿಭಾವಂತೆ ಕೂಡ. ಬರವಣಿಗೆಯ ಹಿಂದೆ ಅಪಾರ ಅಧ್ಯಯನದ ಹಿನ್ನೆಲೆಯಿತ್ತು. ತೀವ್ರ ಸ್ಪಂದನದ ಜೊತೆಗೆ ಕಾವ್ಯದಲ್ಲಿ ಹೊಸ ಪ್ರಯೋಗ ಮಾಡಿದಳು. ಅವಳ ಯಶಸ್ಸಿಗೆ ಇವೆಲ್ಲ ಅಂಶಗಳ ಸೇರ್ಪಡೆ ಕಾರಣ ಎಂದುಕೊಂಡೆ.

ನನ್ನ ಬರವಣಿಗೆ ೧೯೭೫ರ ಹೊತ್ತಿಗೆ ಹೊಸ ತಿರುವು ಪಡೆಯಿತು. ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಲು ಶುರುಮಾಡಿದೆ. ಬರವಣಿಗೆಯ ಗುಣಮಟ್ಟ ವೃದ್ಧಿಸಿಕೊಳ್ಳಲು ಹೊರಗಿನವರ್‍ಯಾರೂ ಸಹಾಯಮಾಡಲು ಸಾಧ್ಯವಿಲ್ಲ; ಸ್ವಂತ ಪರಿಶ್ರಮದಿಂದ ಅದನ್ನು

ಸಾಧಿಸಬೇಕು ಎಂಬುದನ್ನು ಕಂಡುಕೊಂಡೆ. ಅಧ್ಯಯನ ವ್ಯಾಪಕವಾಯಿತು. ಅದರಿಂದಲೇ ಒಂದು ರೀತಿಯ ಆತ್ಮವಿಶ್ವಾಸ ಬಂತು. ಮಾರ್ಕ್ಸ್ ಎಂಗೆಲ್ಸರ ಕೃತಿಗಳನ್ನು ನಿಷ್ಠೆಯಿಂದ ಅಭ್ಯಸಿಸಿದೆ. ಮಹಿಳೆಯರ ಸ್ಥಾನಮಾನಗಳನ್ನು ನಿರ್ದೇಶಿಸುವಂಥದು ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳು ಎಂಬುದು ಮನದಟ್ಟಾಯಿತು. ಸ್ತ್ರೀ ಹೋರಾಟದ ಮಜಲುಗಳು ಸ್ಪಷ್ಟವಾದುವು. ಸ್ತ್ರೀ ವಿಮೋಚನೆಯ ದಾರಿಗಳನ್ನು ಕುರಿತು ಯೋಚಿಸಲು ಆರಂಭಿಸಿದೆ. ಅದರ ಪರಿಣಾಮವಾಗಿ 'ಮಾಧವಿ' ಕಾದಂಬರಿ ಸಿದ್ಧವಾಯಿತು. ಈ ಸಮಯದಲ್ಲಿ ಖ್ಯಾತ ಸಮಾಜಶಾಸ್ತ್ರಜ್ಞೆ ಇರಾವತಿ ಕರ್ವೆ ರಚಿಸಿದ 'ಯುಗಾಂತ' ಎಂಬ ಕೃತಿ ದೊರಕಿತು. ಅದನ್ನು ಓದಿದಾಗ ಪುರಾಣದ ವ್ಯಕ್ತಿಗಳನ್ನು ಮತ್ತು ಆಗಿನ ಸಮಾಜವನ್ನು ವೈಜ್ಞಾನಿಕವಾದ ಹೊಸ ದೃಷ್ಟಿಕೋನದಿಂದ ನೋಡುವುದು ಸಾಧ್ಯ ಅನಿಸಿತು. ಅದೇ ಹೊತ್ತಿಗೆ ಶ್ರೀಪಾದ ಅಮೃತ ಡಾಂಗೆಯವರ India from primitive communism to slavery ಎಂಬ ಹೊತ್ತಗೆ ಓದಿದೆ. ಪ್ರಾಚೀನ ಭಾರತವನ್ನು ಅರಿಯಲು ಈ ಕೃತಿಗಳೆರಡೂ ನೆರವಾದುವು.

ಪುಸ್ತಕ ಪ್ರಕಟವಾಗಿ ೬ ವರ್ಷ ಕಳೆದ ಬಳಿಕ ವಿಮರ್ಶಕಿ ಡಾ.ಎಚ್.ಎಸ್. ಸುಜಾತ ಅವರು ಲೇಖಕಿಯರ ಸಮ್ಮೇಳನದ ವಿಚಾರ ಸಂಕಿರಣದಲ್ಲಿ (೧೯೮೨) 'ಮಾಧವಿ' ಕಾದಂಬರಿಯ ಬಗ್ಗೆ ಹೀಗೆಂದರು:

"ಇಡೀ ಕಾದಂಬರಿಯಲ್ಲಿ ಅಂತರ್ಗತವಾಗಿರುವುದು ಶೋಷಣೆಯ ವಿವಿಧ ಹಂತಗಳು. ವಿಫಲ ಪ್ರತಿಭಟನೆ ಹಾಗೂ ವ್ಯಂಗ್ಯ. ತೀರಾ ಸರಳ ನಿರೂಪಣೆಯಲ್ಲಿ ಅನುಪಮಾ ಏರುದನಿಯಿಲ್ಲದೆ ತಣ್ಣನೆಯ ಕಟಕಿಯಿಂದ ಇದನ್ನು ಸಾಧಿಸಿದ್ದಾರೆ. ಪುರಾಣದ ಆದರ್ಶದ ಕವಚವನ್ನು ಕಳಚಿಹಾಕಿ ಸಾಮಾನ್ಯ ಮಾನವರ ಚಿತ್ರಣವನ್ನು ನೀಡಿದ್ದಾರೆ. ಧರ್ಮದ ಹೆಸರಿನಲ್ಲಿ ನಿರಂತರ ಶೋಷಣೆ ಮಾಡುತ್ತಿದ್ದ ಅರಮನೆ ಗುರುಮನೆಗಳ ಅಂತರಂಗವನ್ನೂ ಬಯಲಿಗೆಳೆದು ಅರಸೊತ್ತಿಗೆಯದೇ ಆದ ಎಳೆಯ ಮುಗ್ಧ ಜೀವವೊಂದು ಮುರುಟಿ ಹೋದದ್ದನ್ನು 'ಮಾಧವಿ' ಯ ವ್ಯಥೆಯ ಕತೆಯಲ್ಲಿ ಚಿತ್ರಿಸಿದ್ದಾರೆ"

ಲೇಖಕಿಯರ ಸಮ್ಮೇಳನವಿಲ್ಲದೆ ಹೋಗಿದ್ದರೆ 'ಮಾಧವಿ' ಗೆ ಇಷ್ಟು ವಿಮರ್ಶೆಯೂ ದಕ್ಕುತ್ತಿರಲಿಲ್ಲ ಎಂಬುದು ನಿಜ.

ನನಗೆ ದೇಶ ಸುತ್ತುವ ಹುಚ್ಚು ಜಾಸ್ತಿ. ನಿರಂಜನರು ಚೆನ್ನಾಗಿದ್ದಾಗ ವರ್ಷಕ್ಕೆರಡು ಬಾರಿ ಪ್ರವಾಸ ಹೋಗುತ್ತಿದ್ದೆವು. ಗಂಡ, ಮಕ್ಕಳೊಂದಿಗೆ ಕಳೆದ ಆ ಸಮಯ ಅವಿಸ್ಮರಣೀಯ. ಮುಂಬಯಿ, ಗೋವಾ, ಅಜಂತಾ, ಎಲ್ಲೋರಾ, ಹೈದರಾಬಾದ್, ಮದ್ರಾಸ್ , ಮಧುರೈ, ತಿರುವನಂತಪುರ, ಕನ್ಯಾಕುಮಾರಿ ಮುಂತಾದ ಸ್ಥಳಗಳನ್ನು ಆಗ ಸಂದರ್ಶಿಸಿದ್ದೆವು. ಪ್ರವಾಸದಿಂದ ಹಿಂತಿರುಗಿದ ಮೇಲೆ ಅದರ ಬಗ್ಗೆ 'ಕರ್ಮವೀರ' ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದೆ.

"ಸ್ವಲ್ಪ ದುಡ್ಡು ಕೂಡಿಸಿದ ಮೇಲೆ ಎಲ್ಲರೂ ಪ್ರಪಂಚ ಸುತ್ತಿ ಬರೋಣ" ಎನ್ನುತ್ತಿದ್ದರು ನಿರಂಜನ. ಅವರು ಪಾರ್ಶ್ವವಾಯುವಿಗೆ ಈಡಾದ ಬಳಿಕ ಈ ಆಸೆ ಕಮರಿಹೋಯಿತು.

ಆದರೆ ಅನೇಕ ಬಾರಿ ಅನಿಸುತ್ತಿತ್ತು, ಆರೋಗ್ಯ ಸರಿಯಿರುವಾಗ ನಾನೊಬ್ಬಳೇ ಆದರೂ ಪ್ರಪಂಚ ಪರ್ಯಟನೆ ಮಾಡಿ ಬರಬೇಕು ಎಂದು. ಇಂತಹ ಸಾಹಸಗಳು ಗಂಡಸರಿಗೇ ಸೀಮಿತ ಎನ್ನುವ ವಾದವನ್ನು ನಾನು ಒಪ್ಪುತ್ತಿರಲಿಲ್ಲ. ನಿರಂಜನರ ಅನಾರೋಗ್ಯದಿಂದಾಗಿ ನಾವಿಬ್ಬರೂ ಒಟ್ಟಿಗೆ ಹೋಗುವುದು ಸಾಧ್ಯವೇ ಇರಲಿಲ್ಲ. ಅವರು ಬಾರದೆ ನಾನು ಹೋಗುವುದು ಸರಿಯಲ್ಲ ಎಂಬ ಸಂದೇಹಗಳು ಕಾಡಲಿಲ್ಲ. ನನ್ನ ಆಸೆ ತಿಳಿಸಿದಾಗ ನಿರಂಜನ 'ಹೋಗಿಬನ್ನಿ' ಎಂದರು. ಇಂತಹ ಮನೋಭಾವ ಅಪರೂಪ. ತಾನು ಹೋಗಲಾಗುವುದಿಲ್ಲ ಎಂಬ ದುಃಖ, ಬೇಸರ ಇದ್ದರೂ ಹೆಂಡತಿಯಾದರೂ ನೋಡಿಬರಲಿ, ಎಂಬ ಔದಾರ್ಯ ತೋರಿದರು. ಹಣಕ್ಕಾಗಿ ಯಾರನ್ನೂ ಯಾಚಿಸಬೇಕಾದ ಪ್ರಸಂಗವಿರಲಿಲ್ಲ. ವೃತ್ತಿಯಿಂದ ಸಂಪಾದಿಸಿದ ಹಣವನ್ನು ಜೋಪಾನವಾಗಿರಿಸಿದ್ದೆ. ಆದರೆ ಮಹಿಳೆ ಒಬ್ಬಳೇ ಪ್ರವಾಸ ಹೊರಡುವುದು (ಗಂಡ ಅಥವಾ ಮಕ್ಕಳ ಜೊತೆಯಿಲ್ಲದೆ) ಊಹೆಗೂ ನಿಲುಕದ ಸಂಗತಿ ಆಗಿತ್ತು. ಸೀತಾ ಟ್ರಾವೆಲ್ಸ್‌ನವರು ಯೂರೋಪು ಅಮೇರಿಕ ಪ್ರವಾಸದ ವೇಳಾಪಟ್ಟಿ ಪ್ರಕಟಿಸಿದಾಗ (೧೯೮೧ ಜೂನ್) ಅದರ ಜೊತೆ ನನ್ನ ಹೆಸರನ್ನೂ ನೋಂದಾಯಿಸಿದೆ.

ಆ ಪ್ರವಾಸ ಮರೆಯಲಾಗದಂತಹುದು. ಲೇಖಕಿಯೊಬ್ಬಳಿಗೆ ಈ ಅನುಭವ ಅತ್ಯಂತ ಚೇತೋಹಾರಿಯಾಗಿತ್ತು. ಕತೆ ಕಾದಂಬರಿಗಳಲ್ಲಿ ಓದಿ ತಿಳಿದುಕೊಂಡ ಜನರನ್ನೂ ಅವರ ಸಂಸ್ಕೃತಿಯನ್ನೂ ಸಾಧನೆಗಳನ್ನು ಈಗ ಕಣ್ಣಾರೆ ಕಾಣುವ ಅವಕಾಶ ಸಿಕ್ಕಿತು. ಪ್ರವಾಸ ಮುಗಿಸಿ ಬಂದ ಬಳಿಕ, 'ಅಂಗೈಯಲ್ಲಿ ಯೂರೋ ಅಮೇರಿಕ' ಎಂಬ ಪ್ರವಾಸಕಥನ ಬರೆದೆ. ರಚನೆಗೆ ನನ್ನ ಅನುಭವವೊಂದೇ ಸಾಕಾಗಿರಲಿಲ್ಲ. ಆಯಾ ದೇಶಗಳ ರಾಜಕೀಯ, ಭೌಗೋಳಿಕ, ಸಾಂಸ್ಕೃತಿಕ ಹಿನ್ನೆಲೆಗಳೂ ಅಗತ್ಯವಾಗಿದ್ದುವು. ಇದಕ್ಕಾಗಿ National Geographica ಹೊತ್ತಗೆಗಳೂ Time Life ಮಾಲಿಕೆಯ ಪುಸ್ತಕಗಳೂ ನೆರವಾದುವು. ಈ ಸಿದ್ಧತೆ ಪುಸ್ತಕಕ್ಕೆ ಯಥಾರ್ಥತೆ ಒದಗಿಸಿತು.

ಪ್ರವಾಸಕಥನ 'ವನಿತಾ' ಮಾಸಪತ್ರಿಕೆಯಲ್ಲಿ ಪ್ರಕಟಗೊಂಡು ವಿಶೇಷ ಜನಪ್ರಿಯತೆ ಗಳಿಸಿತು (೧೯೮೪ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿತ). ಕಂಡ ಕಂಡ ಗಂಡಸರು ಹೆಂಗಸರು, "ಅಂಗೈಯಲ್ಲಿ ಯೂರೋ ಅಮೇರಿಕ ಓದುವಾಗ ನಾವೇ ನಿಮ್ಮ ಜೊತೆ ಆ ದೇಶ ಸುತ್ತುತ್ತಿದ್ದೇವೋ ಅನಿಸುತ್ತಿತ್ತು" ಎನ್ನುತ್ತಿದ್ದರು. ಅನೇಕ ಮಹಿಳೆಯರಿಗೆ ಇದು ಹೊಸ ಹುಮ್ಮಸ್ಸು ನೀಡಿತ್ತು. ಮಹಿಳೆಯಾದುದರಿಂದ ಒಬ್ಬಳೇ ಪ್ರಪಂಚ ಪರ್ಯಟನೆ ಕೈಗೊಳ್ಳಲು ಸಾಧ್ಯ ಇಲ್ಲ ಎಂಬ ನಂಬಿಕೆ ನಿರ್ನಾಮವಾಗಿತ್ತು.

ನಾನು ಕವನಗಳನ್ನು ಬರೆದ ಕತೆ ಹೇಳದಿದ್ದರೆ ಈ ಕಥಾನಕ ಪೂರ್ಣಗೊಳ್ಳುವುದಿಲ್ಲ.

ಮೊದಲ ಕವನ ಬರೆದದ್ದು ಉಡುಪಿಯಲ್ಲಿ. ೧೯೭೫ ರ ಫೆಬ್ರವರಿಯಲ್ಲಿ ನಾವು ಕುಟುಂಬ ಸಮೇತ ದಕ್ಷಿಣ  ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದೆವು. ಉಡುಪಿಯಲ್ಲಿ ಒಂದು ದಿನ ಇದ್ದೆವು. ಆ ಸಂಜೆ ಎಂ.ಜಿ.ಎಂ. ಕಾಲೇಜಿನಲ್ಲಿ ನಿರಂಜನ ಮತ್ತು ನನ್ನ ಭಾಷಣ ಕಾರ್ಯಕ್ರಮವಿತ್ತು. ತೇಜಸ್ವಿನಿ  ಮತ್ತು ಸೀಮಂತಿನಿ ತಮ್ಮ ಇಂಗ್ಲಿಷ್ ಕವನಗಳನ್ನು

ವಾಚಿಸುವವರಿದ್ದರು. ಆ ಹೊತ್ತು ಒಂದು ಕವನ ಬರೆಯಬೇಕೆಂದು ತೀವ್ರ ಬಯಕೆ ಆಯಿತು. ಅದರ ಸಾಲುಗಳು ಕೂಡ ತಾವಾಗಿಯೇ ಮನಸ್ಸಿಗೆ ಬಂದುವು. 'ಆತ್ಮಸಾಕ್ಷಿ' ನೆಪಮಾಡಿ ಗಾದಿಗೆ ಏರಿಸುವ ಇಳಿಸುವ ರಾಜಕೀಯ ದೊಂಬರಾಟ ದಿಲ್ಲಿಯಲ್ಲಿ ನಡೆದಿತ್ತು. ಅದನ್ನು ವಸ್ತುವಾಗಿಟ್ಟುಕೊಂಡು 'ಕೃಷ್ಣನ ಕಂಡಿರಾ?' ಎಂಬ ಕವನ ಬರೆದೆ. ಉಡುಪಿಯ ಕೃಷ್ಣ ಇಲ್ಲಿ 'ಆತ್ಮಸಾಕ್ಷಿ'ಯ ಸಂಕೇತವಾಗಿ ಮೂಡಿದ್ದ. ಈ ಕವನವನ್ನು ಅಂದು ಸಭೆಯಲ್ಲಿ ಓದಿದ ನೆನಪಿದೆ.

ಮುಂದೆ ನಾಲ್ಕಾರು ಕವನ ರಚಿಸಿದೆ. ಅದರಲ್ಲೊಂದಾದ 'ಯಾತ್ರಿಕ' (ಗುರುಪುರ ಹೊಳೆ ನೋಡಿ ಸ್ಫೂರ್ತಿಗೊಂಡು ರಚಿಸಿದ್ದು) 'ಪ್ರಜಾವಾಣಿ' ಯಲ್ಲಿ ಪ್ರಕಟವಾದಾಗ ಗುಣಮಟ್ಟದ ಬಗ್ಗೆ ಧೈರ್ಯ ಬಂತು. ಆದರೆ ಅನಂತರ ಕಳಿಸಿದ 'ಗೊಮ್ಮಟ' ತಿರಸ್ಕೃತವಾಗಿ ಹಿಂದೆ ಬಂತು. ಇದರಿಂದ ತುಸು ಖಿನ್ನಳಾದೆ. ನನ್ನ ಕವನಗಳನ್ನು ಓದಿದ ತೇಜಸ್ವಿನಿ :

"ಅಮ್ಮ, ಕಾವ್ಯ ನಿನ್ನ Medium ಅಲ್ಲ. ಅದನ್ನು ಬಿಟ್ಬಿಡು" ಎಂದಳು. ಕಾವ್ಯ ಬರೆಯುವುದನ್ನು ನಿಲ್ಲಿಸಿ ಗದ್ಯಕ್ಕೇ ಅಂಟಿಕೊಂಡೆ. ಆದರೆ ೧೯೮೭ ರಲ್ಲಿ ಮತ್ತೆ ಕಾವ್ಯ ಬದುಕಿಗೆ ಅಡಿಯಿರಿಸಿತು. ನಂಜನಗೂಡು ತಿರುಮಲಾಂಬಾ ಅವರ ಜನ್ಮಶತಾಬ್ದಿ ಸಂದರ್ಭದಲ್ಲಿ ಆಕೆಯ ಬಗ್ಗೆ ಒಂದು ಕವನ ಬರೆಯಬೇಕೆಂಬ ಉತ್ಕಟಾಭಿಲಾಷೆಯಾಯಿತು. 'ಹಿತೈಷಿಣಿ' ಬರೆದೆ. ಅದನ್ನು ಓದಿದ, ಕೇಳಿದ ಚಿ.ನ. ಮಂಗಳಾ ಮೆಚ್ಚಿದರು. ಆಗಿನಿಂದ ಹಲವಾರು ಪದ್ಯ ರಚಿತವಾಗಿವೆ. 'ಸೀತೆಯೊಡನೆ ಸಲ್ಲಾಪ', 'ಬಾ ಬೆಳಕಿಗೆ', 'ವಿನ್ನಿ ಮಂಡೇಲಾಗೆ' ಮುಂತಾದುವು ಖುಷಿಕೊಟ್ಟಿವೆ.

ಇದುವರೆಗೂ ಗದ್ಯಪ್ರಿಯೆಯಾಗಿದ್ದವಳು ಪದ್ಯಕ್ಕೆ ಬಂದುದು ಹೇಗೆ ಮತ್ತು ಯಾತಕ್ಕೆ?

ಗದ್ಯಕ್ಷೇತ್ರವನ್ನು ಕಾವ್ಯಕ್ಷೇತ್ರದ ಕಡೆಗೆ ಹರಿಬಿಟ್ಟದ್ದು ಸೃಜನ ಶೀಲತೆಯ ಪರಿಧಿಯನ್ನು ಹಿಗ್ಗಿಸಿಕೊಳ್ಳುವುದಕ್ಕಾಗಿಯೇ ಅನಿಸುತ್ತದೆ. ಕಾವ್ಯದ ಅನುಭವವಿದ್ದಾಗ ಗದ್ಯ ಇನ್ನಷ್ಟು ಕಲಾತ್ಮಕವಾಗಬಹುದು. ಒಂದು ಭಾವವನ್ನು ಧ್ವನಿಪೂರ್ಣವಾಗಿ, ಚುಟುಕಾಗಿ ಹೇಳಲು ಕಾವ್ಯ ಸಮರ್ಥ ಮಾಧ್ಯಮ. ವಿಡಂಬನೆಯ ಮೂಲಕ ಕಾವ್ಯದಲ್ಲಿ ಬಹಳಷ್ಟು ವಿಷಯಗಳನ್ನು ಪ್ರಭಾವಶಾಲಿಯಾಗಿ ಹೇಳಬಹುದು. ಕಾವ್ಯ ಸೃಷ್ಟಿಸಿದ ಕ್ರಿಯೆಯೇ ಚೇತೋಹಾರಿ. ಮನಸ್ಸಿನಲ್ಲಿ ಮೂಡಿದ ಭಾವಕ್ಕೆ ಆಕೃತಿ ಕೊಡಲು ಶಬ್ದಗಳು, ವಾಕ್ಯಗಳು, ಪ್ರತಿಮೆಗಳು, ಆಲೋಚನೆಗಳು ಒಂದಾಗಿ ಶ್ರಮಿಸುವಿಕೆ ಮುದಕೊಡುವಂಥದ್ದು. ವಿಷಯ ಅಂಕುರವಾದ ಬಳಿಕ ಕುಳಿತಲ್ಲಿ, ನಿಂತಲ್ಲಿ ಕಡೆಗೆ ನಿದ್ದೆಯಲ್ಲೂ ಕೂಡ ಕವನದ ಸಾಲುಗಳು ಕುಣಿಯತೊಡಗುವ ಅನುಭವ ಅಪ್ರತಿಮವಾದದ್ದು. ಎಷ್ಟೋ ಸಾರೆ ಕನಸಿನಲ್ಲಿ ಬಂದ ಸಾಲುಗಳನ್ನು ಪಠಿಸಿ ಬಾಯಿಪಾಠ ಮಾಡಿಕೊಂಡು ಬೆಳಗಾಗುತ್ತಲೆ ಗುರುತು ಮಾಡಿಕೊಂಡದ್ದೂ ಇದೆ. ಇಂಥ ಅನುಭವ ಇಷ್ಟೊಂದು ದಿನ ಹ್ಯಾಗೆ ಬಿಟ್ಟಿದ್ದೆ? ಎಂದು ಆಶ್ಚರ್ಯಪಟ್ಟಿದ್ದೇನೆ.

ಶ್ರೀಮತಿ ಶಾಂತಾದೇವಿ ಕಣವಿ ತಮ್ಮ ಲೇಖನವೊಂದರಲ್ಲಿ, "ಅನುಪಮಾ ಈಚೆಗೆ

ಕವನಗಳನ್ನು ಬರೆಯುತ್ತಿದ್ದು ಸದ್ಯದಲ್ಲಿಯೇ ಕವನ ಸಂಕಲನ ಪ್ರಕಟಿಸಿದರೆ ಆಶ್ಚರ್ಯಪಡಬೇಕಾಗಿಲ್ಲ" ಎಂದಿದ್ದಾರೆ (ಅನುಪಮಾ ಅಭಿನಂದನ ೧೯೮೮). ಒಳ್ಳೆಯ ಕವನಗಳನ್ನು ಬರೆಯಲು ಸಾಧ್ಯವಾದರೆ ಖಂಡಿತ ಅವರ ಹಾರೈಕೆ ಸಫಲವಾಗುತ್ತದೆ.

ಕ್ಯಾನ್ಸರ್‌ಗಾಗಿ ಎರಡನೆಯ ಬಾರಿ ೧೯೮೨ರಲ್ಲಿ ದೊಡ್ಡ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ನಾನು ಆರು ತಿಂಗಳಿಗಿಂತ ಹೆಚ್ಚು ಬದುಕಲಾರೆ ಎಂಬುದು ತಜ್ಞರ ಅಭಿಪ್ರಾಯ. ಸ್ವತಃ ವೈದ್ಯಳಾದ ನನಗೆ ಅದು ಸ್ಪಷ್ಟ ಆಗಿತ್ತು. ಅಂಥ ನಿರಾಸೆಯ ಕ್ಷಣದಲ್ಲಿ ಆಲೋಚನೆಯೊಂದು ಬಂತು. ವೈದ್ಯೆಯಾಗಿ, ಸಾಹಿತಿಯಾಗಿ, ಪತ್ನಿ ಹಾಗೂ ಮಾತೆಯಾಗಿ, ಕಡೆಗೆ ಒಬ್ಬ ಮಹಿಳೆಯಾಗಿ ಜೀವನದುದ್ದಕ್ಕೂ ಹೋರಾಡಿದ್ದೇನೆ. ಈ ಬದುಕಿನ ಬಗ್ಗೆ ಬರೆದರೆ ಉಪಯೋಗವಾಗಬಹುದು ಎಂದು ತೋರಿತು. ಕಾಯಿಲೆಯ ಖಿನ್ನತೆಯಿಂದ ತಪ್ಪಿಸಿಕೊಳ್ಳಲು ಬರವಣಿಗೆಯೇ ಏಕೈಕ ದಾರಿಯಾಗಿತ್ತು. ಆತ್ಮಕಥನ 'ನೆನಪು: ಸಿಹಿ ಕಹಿ' ಯನ್ನು ಬರೆದು ಮುಗಿಸುವ ಹೊತ್ತಿಗೆ ಸಾಕಷ್ಟು ಚೇತರಿಸಿಕೊಂಡಿದ್ದೆ. ಅದನ್ನು ಪ್ರಕಟಿಸಲು 'ತರಂಗ' ಸಂಪಾದಕರಾದ ಸಂತೋಷಕುಮಾರ ಗುಲ್ವಾಡಿಯವರು ಮುಂದೆ ಬಂದರು. ಸುಮಾರು ೩೭ ವಾರ ಅದು ಆ ಪತ್ರಿಕೆಯಲ್ಲಿ ಪ್ರಕಟಗೊಂಡು ಅದ್ಭುತ ಮನ್ನಣೆ ಗಳಿಸಿತು. ಆಗ ನೂರಾರು ಜನ ಓದುಗರು ಪತ್ರ ಬರೆದರು. ಅದರಲ್ಲಿ ಒಂದು ಭಾವ ಸ್ಥಾಯಿಯಾಗಿತ್ತು.

"ನಿಮ್ಮ ಆತ್ಮಕಥನ ಓದಿ ನಮಗೆ ಧೈರ್ಯ ಬಂದಿದೆ. ಕಷ್ಟ ಬಂದಾಗ, ತುಂಬ ದುಃಖವಾದಾಗ ಅದನ್ನು ಓದುತ್ತೇವೆ. ಆಗ ಅವನ್ನು ನಿಮ್ಮಂತೆಯೇ ನಾವು ಕೂಡ ಗೆಲ್ಲಬಹುದೆಂಬ ಆತ್ಮವಿಶ್ವಾಸ ಬರುತ್ತದೆ."

ಒಂದು ಗ್ರಂಥದಿಂದ ಒಂದಷ್ಟು ಜನರಿಗೆ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ಕೊಡಲು ಸಾಧ್ಯವಾಯಿತೆಂದರೆ ಬರಹಗಾರ್ತಿಗೆ ಅದಕ್ಕಿಂತ ದೊಡ್ಡ ಸಾರ್ಥಕತೆ ಯಾವುದಿದೆ? ಅನ್ನಿಸಿತು.

'ನೆನಪು: ಸಿಹಿ ಕಹಿ' ಪ್ರಕಟವಾಗುತ್ತಿರುವಾಗಲೇ ಅದನ್ನು ಓದುತ್ತಿದ್ದ ವಿಮರ್ಶಕ ಗಿರಡ್ಡಿ ಗೋವಿಂದರಾಜು ಅವರು ತಮ್ಮ ೦೪.೧೧.೧೯೮೩ ರ ಪತ್ರದಲ್ಲಿ ಹೀಗೆ ಬರೆದರು–

"ತರಂಗದಲ್ಲಿ ನೀವು ಬರೆಯುತ್ತಿರುವ ಆತ್ಮಚರಿತ್ರೆಯನ್ನು ತಪ್ಪದೆ ಓದುತ್ತಿದ್ದೇನೆ. ಇದೂ ಕೂಡ ಕೇವಲ ವರದಿಯಾಗುತ್ತದೆ. ಎಲ್ಲಿಯೂ ಆಳಕ್ಕಿಳಿಯುವ ಪ್ರಯತ್ನವನ್ನೇ ಮಾಡುವುದಿಲ್ಲ."

ಸಿಹಿ ಕಹಿಯನ್ನು ಬಹುಜನ ಸಮುದಾಯ ಸ್ವೀಕರಿಸಿದ ಬಗೆ ಬೇರೆ; ವಿಮರ್ಶಕರು ಕಂಡ ರೀತಿ ಬೇರೆ ಎಂಬುದನ್ನು ಸೂಚಿಸಲಿಕ್ಕಾಗಿ ಈ ಉಲ್ಲೇಖಗಳು.

'ನೆನಪು : ಸಿಹಿ ಕಹಿ'ಗೆ ನಂಜನಗೂಡು ತಿರುಮಲಾಂಬ ರಾಷ್ಟ್ರೀಯ ಪ್ರಶಸ್ತಿ (೧೯೮೬) ಬಂದಾಗ, ಹಾ.ಮಾ. ನಾಯಕರು ಪ್ರಜಾವಾಣಿಯ ತಮ್ಮ ಅಂಕಣ 'ಸಂಪ್ರತಿ'ಯಲ್ಲಿ ಹೀಗೆ ಬರೆದರು.

"ಅನುಪಮಾ ನಮ್ಮ ಪ್ರಮುಖ ಲೇಖಕಿಯರಲ್ಲಿ ಒಬ್ಬರು. ಲೇಖಕಿಯರ ಸಮಸ್ಯೆಗಳು ಚರ್ಚಾಸ್ಪದವೆನಿಸಿರುವ ಈ ದಿನಗಳಲ್ಲಿ ಅನುಪಮಾ ಆ ಕುರಿತಾಗಿ ಇಲ್ಲಿ ವಿಶ್ಲೇಷಿಸುವುದಿಲ್ಲ. ಆ ಬಗೆಗೆ ಅವರು ಪ್ರತ್ಯೇಕವಾದ ಪುಸ್ತಕವೊಂದನ್ನೇ ಬರೆಯಬಹುದು. ಅದಕ್ಕೆ ಇಲ್ಲೇನು ಕೆಲಸ ಎಂದು ಯಾರಾದರೂ ಕೇಳಬಹುದು. ಆದರೆ ಲೇಖಕಿಯೊಬ್ಬರು ಆತ್ಮಕಥೆ ಬರೆಯುವಾಗ ಈ ಸಮಸ್ಯೆ ಪ್ರತ್ಯೇಕಗೊಳ್ಳಲಾರದು ಎಂದು ನನ್ನ ಅಭಿಪ್ರಾಯ."

ಬಹುಶಃ ಹಾ.ಮಾ. ನಾಯಕರ ಸಲಹೆಯೇ ಈ ಪುಸ್ತಕ ಬರೆಯಲು ಪ್ರೇರಣೆ ಎಂದು ಕಾಣುತ್ತದೆ.

ಅನಾರೋಗ್ಯದಿಂದಾಗಿ ವೈದ್ಯಕೀಯ ಪ್ರಾಕ್ಟೀಸ್ ಬಿಡಬೇಕಾದ ಅನಿವಾರ್ಯ ಪ್ರಸಂಗ ಬಂದಾಗ ವ್ಯಾಕುಲಕ್ಕೀಡಾದೆ. ಆದರೆ ಬರಹವಿತ್ತಲ್ಲ, ಹಸಿಗಾಯಗಳನ್ನು ಮಾಯಿಸಲು ಮತ್ತು ಜೀವಕ್ಕೆ ಶಕ್ತಿ ತುಂಬಲು. ಅದನ್ನೇ ಅಪ್ಪಿಕೊಂಡೆ.

ಇಷ್ಟು ದೂರದಲ್ಲಿ ನಿಂತು, ನಡೆದು ಬಂದ ದಾರಿಯ ಅವಲೋಕನ ಮಾಡಿದಾಗ ಬರಹಕ್ಕೆ ಕುಟುಂಬ ನೀಡಿದ ಒತ್ತಾಸೆ ಅಪೂರ್ವವಾದುದು ಅನಿಸುತ್ತದೆ.

## ಡಾ. ಅನುಪಮಾ ನಿರಂಜನ (೧೯೩೪ – ೧೯೯೧)



ಡಾ. ಅನುಪಮಾ ನಿರಂಜನರು ತೀರ್ಥಹಳ್ಳಿಯವರು. ಇವರು ವೈದ್ಯಕೀಯ ವೃತ್ತಿಯವರಾದರೂ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಹೊರ ಹೊಮ್ಮಿದವರು. ಇವರ ಪತಿ ಪ್ರಸಿದ್ಧ ಸಾಹಿತಿ ನಿರಂಜನ.

ಆರೋಗ್ಯದರ್ಶನ, ತಾಯಿ ಮಗು, ದಾಂಪತ್ಯ ದೀಪಿಕೆ, ಕೇಳು ಕಿಶೋರಿ ಇವರು ಬರೆದ ಪ್ರಮುಖ ವೈದ್ಯಕೀಯ ಗ್ರಂಥಗಳು.

ಶ್ವೇತಾಂಬರಿ, ಹಿಮದ ಹೂವು, ಹೃದಯ ವಲ್ಲಭ, ಆಕಾಶಗಂಗೆ, ಆಳ, ಋಣ, ಪರೀಕ್ಷೆ, ನಟಿ, ಕಲ್ಲೋಲ, ಮೂಡಣ ಪಡುವಣ ಇವರ ಪ್ರಮುಖ ಕಾದಂಬರಿಗಳು. ಗಿರಿಧಾಮ, ಒಡಲು ಇವರ ಕಥಾಸಂಕಲನಗಳು. ಎಳೆಯ ಮಕ್ಕಳಿಗಾಗಿ 'ದಿನಕ್ಕೊಂದು ಕಥೆ'ಗಳ ಹನ್ನೆರಡು ಸಂಪುಟಗಳನ್ನು ತಯಾರಿಸಿದ್ದಾರೆ. 'ಸ್ನೇಹ ಯಾತ್ರೆ' ಇವರ ಪ್ರವಾಸ ಕಥನ. 'ಕೃತಿ' ಅವರಿಗೆ ಸಲ್ಲಿಸಿದ ಅಭಿನಂದನ ಗ್ರಂಥ. 'ನೆನಪು ಸಿಹಿ ಕಹಿ' 'ಬರಹಗಾರ್ತಿಯ ಬದುಕು' ಆತ್ಮಕಥೆಗಳು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ನೆಹರೂ ಪುರಸ್ಕಾರ, ನಂಜನಗೂಡು ತಿರುಮಲಾಂಬಾ ಪ್ರಶಸ್ತಿಗಳು ಲಭಿಸಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಇವರನ್ನು ಅರಸಿ ಬಂದಿದೆ. ಪ್ರಸ್ತುತ ಗದ್ಯಭಾಗವನ್ನು ಇವರ 'ಬರಹಗಾರ್ತಿಯ ಬದುಕು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

### ಪದಗಳ ಅರ್ಥ

ಆಘಾತ – ಹೊಡೆತ. ಜಾಯಮಾನ – ಸ್ವಭಾವ. ಹಿಮ್ಮೆಟ್ಟು – ಹಿಂಜರಿಯು. ಮಾಗು – ಪಕ್ವವಾಗು. ಪ್ರಬುದ್ಧ – ಪರಿಣಾಮಕಾರಿ, ಪಾಂಡಿತ್ಯಪೂರ್ಣ. ಹಿಗ್ಗು – ಸಂತೋಷ. ಪುರಸ್ಕಾರ – ಸನ್ಮಾನ. ಸ್ಪಂದಿಸು – ಪ್ರತಿಕ್ರಿಯಿಸು. ಮಜಲು – ಹಂತ. ವಿಮೋಚನೆ – ಬಿಡುಗಡೆ. ಪ್ರಚಲಿತ – ಜಾರಿಯಲ್ಲಿರುವ. ಹೇಯಕರ – ನಿಂದಾರ್ಹ, ತಿರಸ್ಕರಿಸತಕ್ಕ, ತ್ಯಾಜ್ಯ. ಉದ್ವೇಗ – ಆತಂಕ. ಅಂತರ್ಗತ – ಒಳಗೊಂಡ. ಕಟಕಿ – ಚುಚ್ಚು ಮಾತು.

### ಸಂಕ್ಷಿಪ್ತವಾಗಿ ಉತ್ತರಿಸಿರಿ

- ಅಂಗೈಯಲ್ಲಿ ಯುರೋಅಮೆರಿಕಾ ಕೃತಿಗೆ ಓದುಗರ ಪ್ರತಿಕ್ರಿಯೆ ಹೇಗಿತ್ತು?
- ಲೇಖಕಿಯ ಅಭಿಪ್ರಾಯದಂತೆ ಒಳ್ಳೆಯ ಸಾಹಿತ್ಯ ರಚನೆ ಹೇಗೆ ಸಾಧ್ಯ?
- ಲೇಖಕಿಯ ಬರವಣಿಗೆಗೆ ಸಂಬಂಧಿಸಿ ವರ್ಜೀನಿಯಾ ವೂಲ್ಫ್ ಎತ್ತಿದ ಮಹತ್ವದ ಪ್ರಶ್ನೆ ಏನು?
- ಡಾ। ಅನುಪಮಾ ನಿರಂಜನರು ಒಮ್ಮೆ ಕಾವ್ಯ ರಚನೆಯನ್ನು ಕೈಬಿಡಲು ಕಾರಣವೇನು?
- ಅನುಪಮಾ ನಿರಂಜನ ತಮ್ಮ ಆತ್ಮಕಥೆಯಲ್ಲಿ ತೇಜಸ್ವಿನಿಯ ಬಗ್ಗೆ ಹೇಳಿದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.
- ಲೇಖಕಿಯ ಅಭಿಪ್ರಾಯದಂತೆ ಕೃತಿ ರಚನೆಗೆ ಪ್ರತಿಭೆಯೇ ಮುಖ್ಯವೆಂದು ಅನಿಸಿದ ಸಂದರ್ಭ ಯಾವುದು?
- ಲೇಖಕಿಯ ಬರವಣಿಗೆ ಹೊಸ ತಿರುವು ಪಡೆದುದರ ಕುರಿತು ತಿಳಿಸಿರಿ.
- ಅಭಿವ್ಯಕ್ತಿ ಮಾಧ್ಯಮವಾಗಿ ಕಾವ್ಯದ ವಿಶೇಷತೆ ಏನು?

### ಚಟುವಟಿಕೆಗಳು

- ಪ್ರಸ್ತುತ ಪಾಠದಲ್ಲಿ ಡಾ. ಎಚ್.ಎಸ್. ಸುಜಾತರವರು 'ಮಾಧವಿ' ಕಾದಂಬರಿಯ ಬಗ್ಗೆ ಸಣ್ಣ ವಿಮರ್ಶೆ ನೀಡಿದ್ದಾರೆ. ನೀವು 'ಮಾಧವಿ' ಕಾದಂಬರಿಯನ್ನು ಓದಿ ವಿಮರ್ಶಾ ಲೇಖನವನ್ನು ತಯಾರಿಸಿರಿ.
- ನಿಮ್ಮ ಬದುಕಿನ ಸಿಹಿ–ಕಹಿಗಳನ್ನು ಬರಹರೂಪದಲ್ಲಿ ಸಿದ್ಧಪಡಿಸಿರಿ. ಸಿದ್ಧವಾದ ಎಲ್ಲ ಬರಹಗಳ ಸಂಚಿಕೆಯೊಂದು ತರಗತಿಯಲ್ಲಿ ಬಿಡುಗಡೆಗೊಳ್ಳಲಿ.
- ಪ್ರಸ್ತುತ ಆತ್ಮಕಥೆಯ ಭಾಗವನ್ನು ಜೀವನ ಚರಿತ್ರೆಯನ್ನಾಗಿ ಪರಿವರ್ತಿಸಿರಿ.
- 'ಇಂದಿನ ಮಹಿಳೆಯರು, ಉದ್ಯೋಗ ಕ್ಷೇತ್ರದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳು' ಈ ವಿಷಯದಲ್ಲಿ ಕ್ಷೇತ್ರಕಾರ್ಯವನ್ನು ನಡೆಸಿರಿ.

## ಭಾಷಾಭ್ಯಾಸ

### ವಾಕ್ಯರಚನೆ

- ಈ ವಾಕ್ಯವನ್ನು ಗಮನಿಸಿ.

  ಹಳ್ಳಿಗೆ ದಾಳಿಯಿಟ್ಟ ಉಗ್ರರು ತಮ್ಮನ್ನು ಕ್ಷಮಿಸುವಂತೆ ಆರಕ್ಷಕರಲ್ಲಿ ಅಂಗಲಾಚಿದರು

  ಕೆಳಗೆ ನೀಡಿರುವ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ.

  ಹಿಮ್ಮೆಟ್ಟು, ಗಗನ ಕುಸುಮ, ಮನದಟ್ಟಾಗು, ಪ್ರತಿಬಿಂಬಿಸು, ಕೀಳರಿಮೆ

### ಅನ್ಯದೇಶೀಯ ಪದಗಳು

ಕಾಮನ್‌ವೆಲ್ತ್, ಪೊಯಿಟ್ರಿ, ಕಾಂಟೆಸ್ಟ್

ಇದೇ ರೀತಿಯಲ್ಲಿ ಪಠ್ಯಭಾಗದಲ್ಲಿ ಬಂದಿರುವ ಇಂಗ್ಲೀಷ್ ಭಾಷೆಯಲ್ಲಿನ ಪದಗಳನ್ನು / ಸಾಲುಗಳನ್ನು ಕನ್ನಡಕ್ಕೆ ಲಿಪ್ಯಂತರಗೊಳಿಸಿರಿ.

### ಸರ್ವನಾಮಗಳು

ನಿಮ್ಮ ಆತ್ಮಕಥನ ಓದಿ ನಮಗೆ ಧೈರ್ಯ ಬಂದಿದೆ. ಕಷ್ಟಬಂದಾಗ, ತುಂಬ ದುಃಖವಾದಾಗ ಅದನ್ನು ಓದುತ್ತೇವೆ. ಆಗ ಅವನ್ನು ನಿಮ್ಮಂತೆ ನಾವು ಕೂಡಾ ಗೆಲ್ಲಬಹುದೆಂಬ ಆತ್ಮವಿಶ್ವಾಸ ಬರುತ್ತದೆ.

ಮೇಲಿನ ವಾಕ್ಯದಲ್ಲಿ ಬಂದಿರುವ ಸರ್ವನಾಮ ರೂಪಗಳನ್ನು ಕೆಳಗೆ ನೀಡಿರುವ ಪಟ್ಟಿಯಲ್ಲಿ ಬರೆಯಿರಿ. ಇತರ ಸರ್ವನಾಮಗಳನ್ನು ಸೇರಿಸಿರಿ.

| ಪ್ರಥಮ ಪುರುಷ | ಮಧ್ಯಮ ಪುರುಷ | ಉತ್ತಮ ಪುರುಷ |
|---|---|---|
| | | |

## ಹೆಚ್ಚಿನ ಓದಿಗೆ

ಬರಹಗಾರ್ತಿಯ ಬದುಕು – ಡಾ. ಅನುಪಮಾ ನಿರಂಜನ

ನೆನಪಿನ ದೋಣಿಯಲ್ಲಿ – ಕುವೆಂಪು

ಭಾವ ೧, ೨, ೩ – ಮಾಸ್ತಿ ವೆಂಕಟೇಶ ಅಯ್ಯಂಗಾರ್

# ಇಡ್ಲಿಯ ಇತಿಹಾಸ

**ಸೇಡಿಯಾಪು ಕೃಷ್ಣ ಭಟ್ಟ**

> ನಾವು ದಿನನಿತ್ಯದ ವ್ಯವಹಾರದಲ್ಲಿ ಎಷ್ಟೊಂದು ಶಬ್ದಗಳನ್ನು ಬಳಸುತ್ತೇವೆ! ಈ ಶಬ್ದಗಳ ಹಿಂದೆ ಎಂತೆಂತಹ ಇತಿಹಾಸ ಅಡಗಿದೆಯೆಂದು ನಿಮಗೆ ಗೊತ್ತೆ? ನಮ್ಮ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿರುವ ಆಹಾರ ವಿಹಾರ, ಉಡುಪು ತೊಡುಪು, ಪಾತ್ರೆ ಪಡಗಗಳು ಒಂದೊಂದಕ್ಕೆ ಒಂದೊಂದು ಹೆಸರು. ಆ ಹೆಸರುಗಳ ಹುಟ್ಟನ್ನು ಕುರಿತು ಶೋಧಿಸುತ್ತ ಹೋದರೆ ಸ್ವಾರಸ್ಯಕರ ವಿಚಾರಗಳು ಬೆಳಕಿಗೆ ಬರುತ್ತವೆ. ಪ್ರತಿಯೊಂದು ಭಾಷೆಯಲ್ಲಿಯೂ ಪದಗಳ ವ್ಯುತ್ಪತ್ತಿ ಬಗ್ಗೆ ಸ್ವಾರಸ್ಯಕರವಾದ ನಿರೂಪಣೆಗಳಿರುತ್ತವೆ. ಪದಗಳ ಕುರಿತಾದ ಶಾಸ್ತ್ರೀಯವಾದ ಅಧ್ಯಯನವು ಆಸಕ್ತಿದಾಯಕವಾದ ವಿಚಾರವಾಗಿದೆ ಎಂಬ ನಿಟ್ಟಿನಲ್ಲಿ 'ಇಡ್ಲಿ' ಪದದ ಕುರಿತಾದ ಸ್ವಾರಸ್ಯಕರ ಲೇಖನವನ್ನು ಇಲ್ಲಿ ಕೊಡಲಾಗಿದೆ.

ಇಡ್ಲಿಯ ಪರಿಚಯವಿಲ್ಲದವರು ಪ್ರಾಯಶಃ ಇಂದು ಯಾರೂ ಇಲ್ಲ. ಇದು ಇಲ್ಲದ ಉಪಾಹಾರಗೃಹ (ಹೋಟೆಲು) ಒಂದೂ ಇಲ್ಲ. ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ದೇಶದ ಜನರು ನಡೆಯಿಸುವ ಉಪಾಹಾರಗೃಹಗಳಲ್ಲಿ ಸಹ ಈಗ ಇದು ದೊರೆಯುತ್ತದಂತೆ. ನಮ್ಮ ದೇಶದ ತಿಂಡಿಗಳೊಳಗೆ ಬೇರಾವ ತಿಂಡಿಯೂ ಇದು ವ್ಯಾಪಿಸಿರುವಷ್ಟು ಭೂಭಾಗವನ್ನು ಆಕ್ರಮಿಸಿರುವುದಿಲ್ಲ. ಆದರೆ ಇಂದಿಗೆ ಸುಮಾರು ಒಂದು ಶತಮಾನಕ್ಕೆ ಮೊದಲು ಇದು ದಕ್ಷಿಣಭಾರತದಲ್ಲಿ ಮಾತ್ರ ದೊರೆಯಬಹುದಾಗಿದ್ದ ವಸ್ತುವಾಗಿತ್ತು ಮತ್ತು ಅದು ತಮಿಳರ ಉಪಾಹಾರಗೃಹಗಳಲ್ಲಿ ಮಾತ್ರ ದೊರೆಯುತ್ತಿತ್ತೆಂದು ತಿಳಿದುಬರುತ್ತದೆ. ಇದನ್ನು ತಯಾರಿಸುವ ವಸ್ತುಗಳಿಂದಲೇ ಮಾಡಲ್ಪಡುವ 'ಕಡುಬು' (ಉದ್ದಿನ ಕಡುಬು) ಎಂಬುದು ಕರ್ಣಾಟಕದಲ್ಲೆಲ್ಲಾ ಪುರಾತನ ಕಾಲದಿಂದಲೂ ಪ್ರಸಿದ್ಧವಾಗಿತ್ತು. ಕಡುಬಿಗೂ ಇಡ್ಲಿಗೂ ಇರುವ ವ್ಯತ್ಯಾಸವು ಮುಖ್ಯವಾಗಿ ಅದರ ಆಕೃತಿಯಲ್ಲಿರುವುದಾಗಿದೆ. ಇಡ್ಲಿ ಎಂಬುದನ್ನು ಲೋಕದಲ್ಲೆಲ್ಲ ಹಬ್ಬಿಸಿದ ಕೀರ್ತಿ ತಮಿಳರದೇ ಆಗಿರುವುದರಿಂದ, ಇದೊಂದು ತಮಿಳಿಗೆ ಮೀಸಲಾದ ಭಕ್ಷ್ಯವೆಂದು ಅವರು ಹೆಮ್ಮೆ ಪಡುವುದುಂಟು. ಆದರೆ 'ಇಡ್ಲಿ' ಎಂಬ ಶಬ್ದ ಸ್ವರೂಪವನ್ನು ಪರೀಕ್ಷಿಸಿದಾಗ, ಇದು ತಮಿಳರ ಸೃಷ್ಟಿ ಎಂಬ ವಿಷಯದಲ್ಲಿ ಸಂದೇಹವು ಮೂಡುತ್ತದೆ. ಇಡ್ಲಿ ಎಂಬುದರಲ್ಲಿರುವ 'ಡ'ಕಾರ 'ಲ'ಕಾರಗಳ ಸಂಯೋಗವು ತಮಿಳಿನ ವರ್ಣೋಚ್ಚಾರವಿಧಾನಕ್ಕೆ ಬಹಿರ್ಭೂತವಾದುದಾಗಿದೆ. ತಮಿಳರಲ್ಲಿ ಕೆಲವರು ಇದನ್ನು 'ಇಟ್ಲಿ' ಎಂದು ಉಚ್ಚರಿಸುವುದೂ ಉಂಟು. ಹೀಗೆ ಉಚ್ಚರಿಸಿದರೂ ಇದು ತಮಿಳು ಶಬ್ದವೆಂದಾಗುವಂತಿಲ್ಲ. ಏಕೆಂದರೆ 'ಟ' ಕಾರ 'ಲ'ಕಾರಗಳ ಸಂಯೋಗವು ಸಹ ತಮಿಳಿನಲ್ಲಿರುವುದಿಲ್ಲ.

'ಇಡ್ಲಿ' ಎಂಬೀ ಹೆಸರು ಈಗ ಸರ್ವದೇಶವ್ಯಾಪಿಯಾಗಿರುವುದು. ಈ ಶತಮಾನದಲ್ಲಾದರೂ ಅದೇನೂ ಹೊಸ ಶಬ್ದವಲ್ಲ. ಹಳಗನ್ನಡದ ಕೆಲವು ಗ್ರಂಥಗಳಲ್ಲಿ 'ಇಡ್ಡಲಿ' (ಅಥವಾ 'ಇಡ್ಡಲಿಗೆ') ಎಂಬ ಭಕ್ಷ್ಯದ ಹೆಸರು ಬರುತ್ತದೆ. ಆ ಶಬ್ದವೇ ಶೀಘ್ರೋಚ್ಚಾರದಲ್ಲಿ 'ಇಡ್ಲಿ' ಎಂದಾಗುವುದು ಅಸಂಭವವೇನೂ ಅಲ್ಲ. ಆದುದರಿಂದ ಇದು ಕರ್ನಾಟಕದ ಭಕ್ಷ್ಯವೇ? ಕರ್ನಾಟಕದ್ದೆಂದಾಗಿದ್ದರೆ ಈ ಶತಮಾನದ ಆದಿಭಾಗದಲ್ಲಿ ಇದರ ಹೆಸರು ಮೊತ್ತ ಮೊದಲಾಗಿ ತಮಿಳುನಾಡಿನಲ್ಲಿಯೇ ಏಕೆ ರೂಢವಾಯಿತು? ಮತ್ತು ಕನ್ನಡನಾಡಿನ ಉಪಾಹಾರ ಗೃಹಗಳಲ್ಲಿ ಈ ಭಕ್ಷ್ಯವು ತಲೆ ಎತ್ತುವುದಕ್ಕಿಂತ ಎಷ್ಟೋ ಮೊದಲೇ ತಮಿಳುನಾಡಿನಲ್ಲಿ ಏಕೆ ಹಬ್ಬಿತು? ಎಂಬ ಸಂದೇಹಗಳಿಗೆ ಉತ್ತರ ಹುಟ್ಟುವುದಿಲ್ಲ.

ದಕ್ಷಿಣ ಕನ್ನಡದಲ್ಲಿ ವಾಸಿಸುವ ಗೌಡಸಾರಸ್ವತ ಬ್ರಾಹ್ಮಣರ ಒಂದು ಭಕ್ಷ್ಯಕ್ಕೆ 'ಇಂಡ್ರಿ' ಎಂಬ ಹೆಸರಿದೆ. ಇಡ್ಲಿಯನ್ನು ತಯಾರಿಸುವ ತಟ್ಟೆಗಳಲ್ಲಿಯೇ ಇದು ಸಹ ತಯಾರಿಸಲ್ಪಡುತ್ತದೆ. ಆದರೆ ಇದೊಂದು ಸಿಹಿ ತಿಂಡಿ. ಆಕೃತಿಯಲ್ಲಿ ಮಾತ್ರ ಇಡ್ಲಿಗೂ ಇಂಡ್ರಿಗೂ ಸಾಮ್ಯವಿರುವುದಾಗಿದೆ. ಇಂಡ್ರಿ ಎಂಬ ಹೆಸರನ್ನೂ ಇಡ್ಲಿ ಎಂಬ ಹೆಸರನ್ನೂ ಹೋಲಿಸಿ ನೋಡಿದಾಗ ಇವೆರಡರ ಮೂಲವೂ ಒಂದೇ ಆಗಿರಬಹುದೋ ಎಂಬ ಶಂಕೆ ಮೂಡುವುದು ಮಾತ್ರವಲ್ಲ ಆ ಹೆಸರು ಅದರ ಆಕೃತಿಗೆ ಸಂಬಂಧಪಟ್ಟದಾಗಿ ರಬೇಕೆಂಬ ಊಹೆಯೂ ಹುಟ್ಟುತ್ತದೆ. ಈ 'ಇಂಡ್ರಿ' ಎಂಬ ಹೆಸರು ಸಂಸ್ಕೃತಜನ್ಯವಾದ ಕೊಂಕಣಿ ಭಾಷೆಯದಾಗಿರುವುದರಿಂದ ಇದರ ಮೂಲವು ಸಂಸ್ಕೃತದಲ್ಲೇನಾದರೂ ಇದೆಯೋ ಎಂದು ಹುಡುಕಿ ನೋಡೋಣ. ಕ್ರಿ.ಶ, ೧೦ನೇ ಶತಮಾನದ್ದೆಂದು ತಿಳಿಯಲ್ಪಟ್ಟಿರುವ 'ಚಕ್ರದತ್ತ ಸಂಹಿತಾ' ಎಂಬ ಉತ್ತರಭಾರತದ ಆಯುರ್ವೇದ ಗ್ರಂಥದಲ್ಲಿ ಶ್ಲೀಪದ (ಆನೆಕಾಲು – Elephantiasis, filaria) ಚಿಕಿತ್ಸಾ ಪ್ರಕರಣದಲ್ಲಿ ಈ ಕೆಳಗಿನ ಒಂದು ಶ್ಲೋಕವಿದೆ.




ಗೋಧಾಪದೀಮೂಲಯುಕ್ತಾಂ ಖಾದೇತ್ ಮಾಷೇಂಡರೀಂ ನರಃ।
ಜಯೇತ್ ಶ್ಲೀಪದ ರೋಗೋತ್ಥಂ ಜ್ವರಂ ಘೋರಂ ನ ಸಂಶಯಃ॥

ಈ ಶ್ಲೋಕದ ಅರ್ಥ ಹೀಗೆ–ಗೋಧಾಪದೀ ಎಂಬ ಗಿಡದ ಬೇರನ್ನು ಉದ್ದಿನೊಡನೆ ಅರೆದು ತಯಾರಿಸಿದ 'ಇಂಡರಿ'ಯನ್ನು ಸೇವಿಸಿದರೆ ಶ್ಲೀಪದ ರೋಗದಿಂದ ಹುಟ್ಟಿದ ಘೋರವಾದ ಜ್ವರವು

ಪರಿಹಾರವಾಗುತ್ತದೆ”. ಈ ಶ್ಲೋಕದ ಅಭಿಪ್ರಾಯವನ್ನು ಪರಿಭಾವಿಸಿದರೆ ‘ಇಂಡರೀ’ ಎಂಬುದು ಒಂದು ಬಗೆಯ ಭಕ್ಷ್ಯದ ಹೆಸರೆಂಬುದು ಸ್ಪಷ್ಟವಾಗುತ್ತದೆ. ‘ಮಾಷೇಂಡರೀ’ ಎಂದರೆ ‘ಉದ್ದಿನ ಇಂಡರಿ’ ಎಂದಿಲ್ಲಿ ಹೇಳಿರುವುದರಿಂದ ‘ಇಂಡರಿ’ ಎಂಬುದು ಉದ್ದು ಮೊದಲಾದ ಧಾನ್ಯಗಳಿಂದ ತಯಾರಿಸಲ್ಪಡುವ ಭಕ್ಷ್ಯ ವಿಶೇಷವೆಂದು ಗೊತ್ತಾಗುತ್ತದೆ. ‘ಇಂಡ್ರಿ’ ಎಂದು ಮೇಲೆ ಹೆಸರಿಸಿದ್ದು ಒಂದು ಬಗೆಯ ಭಕ್ಷ್ಯವನ್ನು ‘ಇಂಡರೀ’ ಎಂಬುದೂ ಒಂದು ಬಗೆಯ ‘ಭಕ್ಷ್ಯ’. ಈ ಎರಡು ಭಕ್ಷ್ಯಗಳ ಹೆಸರುಗಳನ್ನು ಹೋಲಿಸಿದಾಗ ಇವೆರಡರ ಮೂಲವೂ ಒಂದೇ ಆಗಿದ್ದಿರಬೇಕೆಂದು ಯಾರಿಗಾದರೂ ತೋರದಿರದು.

ಹಾಗಾದರೆ ‘ಇಂಡ್ರಿ’ ಮತ್ತು ‘ಇಂಡರಿ’ ಈ ಎರಡು ಹೆಸರುಗಳೊಳಗೆ ಯಾವುದು ಆ ಭಕ್ಷ್ಯದ ಮೂಲನಾಮಧೇಯವಾಗಿದ್ದಿರಬಹುದು? ಸುಪ್ರಸಿದ್ಧವಾದ ಅಪಟೆಯವರ ಸಂಸ್ಕೃತ–ಇಂಗ್ಲೀಷ್ ಶಬ್ದಕೋಶ (Sanskrit-English Dictionary)ದಲ್ಲಿ ಇಂಡ್ರ ಎಂಬ ಶಬ್ದದ ಅರ್ಥ ವಿವರಣೆ ಈ ಕೆಳಗಿನಂತಿದೆ:

ಇಂಡ್ರಃ ಇಂಡ್ರಂ (ಇಂಡ್ರವಂ) (Dual) Two round small plates used as coverings for the hands in taking the fire-pan from the fire; ಅಥೈನಮಿಂಡ್ರಾಭ್ಯಾಂ ಪರಿಗೃಹ್ಣಾತಿ

ಅಪಟೆಯವರು ಕೊಟ್ಟ ವಿವರಣೆಯಿಂದ, ‘ಇಂಡ್ರ’ ಎಂದರೆ ಉರುಟಾದ ಸಣ್ಣ ಬಟ್ಟಲು ಎಂದು ತಿಳಿದು ಬರುತ್ತದೆ. ‘ಇಂಡ್ರಿ’ ಎಂಬ ಭಕ್ಷ್ಯವನ್ನು (ಇಡ್ಲಿಯನ್ನು ಹೇಗೋ ಹಾಗೆ) ಉರುಟಾದ ಸಣ್ಣ ಬಟ್ಟಲುಗಳಿಂದಲೇ ತಯಾರಿಸುವುದಾಗಿದೆ. ‘ಇಂಡರಿ’ ಎಂಬ ಶಬ್ದರೂಪಕ್ಕಿಂತ ‘ಇಂಡ್ರೀ’ ಎಂಬ ಶಬ್ದವು ‘ಇಂಡ್ರ’ ಎಂಬುದಕ್ಕೆ ಸಮೀಪತರವಾಗಿ ರುವುದರಿಂದ, ಆ ರೀತಿ ತಯಾರಿಸುವ ಭಕ್ಷ್ಯದ ಹೆಸರಿನ ಮೂಲ ರೂಪವು ‘ಇಂಡ್ರೀ’ ಎಂಬುದೇ ಆಗಿದ್ದಿರಬೇಕೆಂದು ಸಿದ್ಧವಾಗುತ್ತದೆ. ‘ಇಡ್ಲಿ’ ಎಂದು ಈಗ ಪ್ರಸಿದ್ಧವಾಗಿರುವ ಭಕ್ಯದ ಹೆಸರು ಕನ್ನಡದಲ್ಲಿ ‘ಇಡ್ಡಲಿ’ ಎಂದಾಗಿತ್ತೆಂಬುದನ್ನು ಈ ಮೊದಲೇ ತಿಳಿಸಲಾಗಿದೆಯಷ್ಟೇ. ‘ಡ್ರೀ’ ಎಂಬ ವರ್ಣ ಸಂಯೋಗವು ಕನ್ನಡನುಡಿಗೆ ಒಗ್ಗದ ರೂಪವಾಗಿರುವುದರಿಂದ ‘ಇಂಡ್ರೀ’ ಎಂಬ ಶಬ್ದವೇ ತದ್ಭವವಾಗಿ ‘ಇಡ್ಡಲಿ’ ಎಂದು ಬಳಕೆಯಾಗಿದ್ದಿರಬೇಕೆಂಬುದರಲ್ಲಿ ಸಂದೇಹ ತೋರುವುದಿಲ್ಲ. (ಸಂಸ್ಕೃತದಲ್ಲಿಯೇ ರಕಾರವು ಲಕಾರವಾಗಿ ರೂಪುಗೊಂಡುದಕ್ಕೆ ನಿರ್ದಶನಗಳು ಇವೆ. ಉದಾ: ಅಶ್ರೀಲ–ಅಶ್ಲೀಲ. ನಮ್ಮ ಜಿಲ್ಲೆಯಲ್ಲಂತೂ ‘ಪುಂಡರೀಕ’ ಎಂಬ ಹೆಸರನ್ನು ‘ಪುಂಡಲೀಕ’ ಎಂದು ಉಚ್ಚರಿಸುವುದು ಸರ್ವತ್ರ ರೂಢವಾಗಿದೆ. ಇದರಂತೆಯೇ ‘ಇಂಡ್ರಿ’ ಅಥವಾ ‘ಇಂಡರೀ’ ಎಂಬುದು ಸಹ ‘ಇಡ್ಡಲಿ’, ‘ಇಡ್ಲಿ’ ಎಂದಾಯಿತೆಂದು ತಿಳಿಯಬಹುದಾಗಿದೆ.


ಈ ವರೆಗೆ ನಾವು ಮಾಡಿದ ವಿಚಾರದಿಂದ, ‘ಇಂಡ್ರ’ ಎಂಬ ಹೆಸರಿನ ಸಣ್ಣ ಸಣ್ಣ ಬಟ್ಟಲುಗಳಿಂದ ತಯಾರಿಸಿದ ಭಕ್ಷ್ಯಕ್ಕೆ ‘ಇಂಡ್ರಿ’, ‘ಇಂಡರಿ’, ‘ಇಡ್ಡಲಿ’ , ‘ಇಡ್ಲಿ’ ಎಂಬ ಹೆಸರುಗಳು ಬಂದುವು. ಆದರೂ ‘ಇಡ್ಲಿ’ಯು ಬೇರೆಲ್ಲಿಯೂ ಪ್ರಸಿದ್ಧಿಯನ್ನು ಪಡೆಯದೆ

ತಮಿಳುನಾಡಿನಲ್ಲಿಯೇ ಮೊದಲು ಪ್ರಸಿದ್ಧಿ ಪಡೆದುದಕ್ಕೆ ಕಾರಣವೇನೆಂಬ ಶಂಕೆ ಉಳಿಯದಿರುವುದಿಲ್ಲ. ಈ ಶಂಕೆ ತೊಲಗಬೇಕೆಂದಾದರೆ, ಈ ಶತಮಾನದ ಆರಂಭದಲ್ಲಿ ಆದ 'ಇಡ್ಲಿ'ಯ ಪ್ರಚಾರದ ಚರಿತ್ರೆಯನ್ನು ಪರಿಶೀಲಿಸಬೇಕಾಗುತ್ತದೆ.

### ವಿಶದೀಕರಣ

- 'ಉದ್ದಿನ ಕಡುಬು' ಎಂದು ಕರ್ನಾಟಕದ ಇತರ ಭಾಗಗಳಲ್ಲಿ ರೂಢವಾಗಿರುವ ಭಕ್ಷ್ಯವನ್ನು ದಕ್ಷಿಣ ಕನ್ನಡಿಗರು 'ಕೊಟ್ಟಿಗೆ' ಎಂದು ಕರೆಯುತ್ತಾರೆ. ಕೊಟ್ಟೆ ಎಂದರೆ ಬಾಳೆಯೆಲೆ, ಹಲಸಿನ ಎಲೆ ಇತ್ಯಾದಿ ಯಾವುದಾದರೂ ಎಲೆಗಳಿಂದ ತಯಾರಿಸುವ ಚೀಲದಂತಹ ವಸ್ತು. ಕೊಟ್ಟೆಯಲ್ಲಿ ಹಿಟ್ಟನ್ನು ಹೊಯ್ದು ಆವಿಯಲ್ಲಿ ಬೇಯಿಸುವ ಮೂಲಕ ತಯಾರಿಸಲ್ಪಡುವ ಭಕ್ಷ್ಯವಾದುದರಿಂದ ಕೊಟ್ಟಿಗೆಯೆಂಬ ಹೆಸರು ಬಂದುದಾಗಿದೆ. (ಕೊಟ್ಟೆ + ಇಗೆ = ಕೊಟ್ಟಿಗೆ)
- ಕನ್ನಡದ ಹಳೆಯ ಗ್ರಂಥಗಳಲ್ಲಿ 'ಇಡ್ಡಲಿ' ಮತ್ತು 'ಇಡ್ಡಲಿಗೆ' ಎಂಬ ಎರಡು ರೂಪಗಳಲ್ಲಿ ಆ ಭಕ್ಷ್ಯವು ಹೆಸರಿಸಲ್ಪಟ್ಟಿರುತ್ತದೆ. ಇಡ್ಡಲಿ ಎಂಬುದರ ನಿಷ್ಪತ್ತಿಯನ್ನು ಈ ಮೇಲೆ ತಿಳಿಸಲಾಯಿತಷ್ಟೆ. ಇಡ್ಡಲಿಗೆ ಎಂಬುದರಲ್ಲಿ ಕಾಣುವ ಇಗೆ ಎಂಬ ಪ್ರತ್ಯಯವು, ಇಡ್ಡಲಿ ಎಂಬ ಶಬ್ದರೂಪಕ್ಕೆ ವಿನಾಕಾರಣವಾಗಿ ಸೇರಿಕೊಂಡಿತೆಂದು ಭಾವಿಸಬೇಕಾಗಿಲ್ಲ. 'ಇಡ್ಡಲಿಗೆ' ಎಂಬುದರ ನಿಷ್ಪತ್ತಿಯನ್ನು ಸ್ವತಂತ್ರವಾಗಿ ಈ ಕೆಳಗಿನಂತೆ ವಿವರಿಸಬಹುದು
- ಇಂಡ್ರ>ಇಂಡರ>ಇಂಡಲ>ಇಡ್ಡಲ+ಇಗೆ. 'ಕೊಟ್ಟೆ' ಎಂಬ ಶಬ್ದಕ್ಕೆ 'ಇಗೆ' ಎಂಬ ಪ್ರತ್ಯಯವು ಯಾವ ಕಾರಣದಿಂದ ಸೇರಿಕೊಂಡಿತೋ ಅದೇ ಕಾರಣದಿಂದ 'ಇಡ್ಡಲ' ಎಂಬ ಶಬ್ದಕ್ಕೆ 'ಇಗೆ' ಎಂಬ ಪ್ರತ್ಯಯವು ಸೇರಿ ಇಡ್ಡಲಿಗೆ ಎಂಬ ರೂಪವು ಸಿದ್ಧಿಸಿದುದಾಗಿದೆ. ತಾತ್ಪರ್ಯ: ಇಡ್ಡಲ (=ಇಂಡ್ರ) ಎಂಬ ಹೆಸರಿನ ಬಟ್ಟಲಿನಲ್ಲಿ ತಯಾರಿಸುವ ಭಕ್ಷ್ಯ ಎಂಬರ್ಥವನ್ನು ಇಡ್ಡಲಿಗೆ ಎಂಬುದು ಸೂಚಿಸುವುದಾಗಿದೆ.

## ಸೇಡಿಯಾಪು ಕೃಷ್ಣಭಟ್ಟರು (೧೯೦೨ – ೧೯೯೬)



ನವೋದಯ ಕಾಲಘಟ್ಟದ ಹಿರಿಯ ಕವಿಗಳಲ್ಲಿ ಸೇಡಿಯಾಪು ಕೃಷ್ಣಭಟ್ಟರು ಒಬ್ಬರು. ಅವರು ಸಂಶೋಧಕರೂ ವಿದ್ವಾಂಸರೂ ಆಗಿದ್ದರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡನ್ನೂ ಆಳವಾಗಿ ಅಭ್ಯಸಿಸಿದ್ದರು. 'ಶ್ವಮೇಧ', 'ಕೃಷ್ಣ ಕುಮಾರಿ' ರಾಮಾಯಣದ ಹೃದಯಸ್ಪರ್ಶಿ ಪ್ರಸಂಗವೊಂದನ್ನು ಚಿತ್ರಿಸುವ 'ಪುಣ್ಯ ಲಹರಿ ಅಥವಾ ಶಬರಿ', ಮುಂತಾದವು ಅವರು ರಚಿಸಿದ ಕಥನಗೀತೆಗಳು. 'ಕನ್ನಡ ವರ್ಣಗಳು', 'ಕನ್ನಡ ಛಂದಸ್ಸು', 'ಕೆಲವು ದೇಶ

ನಾಮಗಳು', 'ಛಂದೋಗತಿ' ಮುಂತಾದ ಕೃತಿಗಳು ಇವರು ಕನ್ನಡ ಶಾಸ್ತ್ರಸಾಹಿತ್ಯಕ್ಕೆ ಕೊಟ್ಟ ಅಮೂಲ್ಯ ಕೊಡುಗೆಗಳಾಗಿವೆ. ಸೇಡಿಯಾಪು ಕೃಷ್ಣಭಟ್ಟರು 'ಅತ್ತಿಗೆ', 'ಥಾಲಿ', 'ಪಾಂಡಿ' ಮುಂತಾದ ಶಬ್ದಗಳ ಹುಟ್ಟಿನ ಬಗೆಗೂ ಸ್ವಾರಸ್ಯಕರ ಹಾಗೂ ವಿಚಾರಪೂರ್ಣ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಭಾಗವನ್ನು ಇವರ 'ವಿಚಾರ ಪ್ರಪಂಚ' ಎಂಬ ಲೇಖನಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಭಕ್ಷ್ಯ – ತಿನ್ನಲು-ಉಣ್ಣಲು ಯೋಗ್ಯವಾದ ಆಹಾರ. ಸಂಯೋಗ – ಸೇರಿಕೆ, ಕೂಟ. ಬಹಿರ್ಭೂತ – ಹೊರಗಿನದು. ಅಸಂಭವ – ಸಂಭವಿಸಲಾರದ, ಆಗಲಾರದ. ರೂಢವಾಗು – ಬಳಕೆಯಲ್ಲಿ ಬರು. ಸಂಸ್ಕೃತ ಜನ್ಯ – ಸಂಸ್ಕೃತ ಭಾಷೆಯಿಂದ ಹುಟ್ಟಿಕೊಂಡ

## ಒಂದು ವಾಕ್ಯದಲ್ಲಿ ಉತ್ತರಿಸಿರಿ

- ಇಡ್ಲಿಯ ಜನಪ್ರಿಯತೆ ಹೇಗಿದೆ?
- ಇಡ್ಲಿಯನ್ನು ಲೋಕದಲ್ಲೆಲ್ಲಾ ಹಬ್ಬಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಕಡುಬು ಹಾಗೂ ಇಡ್ಲಿಯ ನಡುವಿನ ಸಾಮ್ಯಗಳನ್ನು ಗುರುತಿಸಿರಿ.
- ಗೌಡ ಸಾರಸ್ವತ ಬ್ರಾಹ್ಮಣರ ತಿಂಡಿಯಾದ ಇಂಡ್ರಿಯದ ಬಗ್ಗೆ ಟಿಪ್ಪಣಿ ಬರೆಯಿರಿ.

## ಚಟುವಟಿಕೆಗಳು

- 'ಇಡ್ಲಿ' ಪದ ವ್ಯುತ್ಪತ್ತಿ ಹಾಗೂ ವಿಕಾಸದ ಬಗ್ಗೆ ಈ ಪಾಠಭಾಗದ ಆಧಾರದಲ್ಲಿ ಬರೆಯಿರಿ.
- ಪ್ರತಿಯೊಂದು ಸ್ಥಳನಾಮಕ್ಕೂ ಕುತೂಹಲಕರ ಹಿನ್ನೆಲೆ ಇರುತ್ತದೆ. ನಿಮ್ಮ ಪರಿಸರದ ಸ್ಥಳ ನಾಮಗಳ ವಿಶೇಷತೆಗಳನ್ನು ಗಮನಿಸಿರಿ. ಆಯ್ದ ಹತ್ತು ಸ್ಥಳ ನಾಮಗಳ ಕುರಿತು ಮಾಹಿತಿ ಸಂಗ್ರಹಿಸಿ ಲೇಖನವನ್ನು ಸಿದ್ಧಪಡಿಸಿರಿ.
- 'ಅಡ್ಕ' ಮತ್ತು 'ಪಾಡಿ' – ಪದಗಳಿಂದ ಕೊನೆಗೊಳ್ಳುವ ಸ್ಥಳನಾಮಗಳನ್ನು ಗುಂಪುಗಳಾಗಿ ವಿಂಗಡಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಿರಿ.
- ನಿಮ್ಮ ಮನೆಗಳಲ್ಲಿ ತಯಾರಿಸುವ ಯಾವುದಾದರೂ ಮೂರು ಪಾರಂಪರಿಕ ತಿಂಡಿ ತಿನಸುಗಳ ಕುರಿತು ವಿವರಣಾತ್ಮಕ ಟಿಪ್ಪಣಿ ತಯಾರಿಸಿರಿ.
- ಕನ್ನಡ, ತುಳು, ಮಲಯಾಳಂ ಭಾಷೆಗಳಲ್ಲಿ ಬಳಕೆಯಲ್ಲಿರುವ ತಿಂಡಿತಿನಸುಗಳ ಒಂದು ತೌಲನಿಕ ಪಟ್ಟಿಯನ್ನು ತಯಾರಿಸಿರಿ. ಪದರೂಪವು ಒಂದೇ ಆಗಿದ್ದು ವಸ್ತುವಿನಲ್ಲಿ ವ್ಯತ್ಯಾಸವಿದ್ದರೆ ಗುರುತಿಸಬೇಕು. ಉದಾ : ಅಪ್ಪ (ಕ.) ಅಪ್ಪೊ (ತು) ಅಪ್ಪಂ (ಮ.)
ಸೂ : ಮಲಯಾಳದ ಅಪ್ಪಂ ಸಿಹಿ ತಿಂಡಿಯಲ್ಲ.

## ನಿಘಂಟು ರಚನೆ

ನಿಘಂಟು ರಚನೆ ಎನ್ನುವುದು ಶಾಸ್ತ್ರ. ಶಬ್ದಗಳನ್ನು ಅವುಗಳ ಪದಜಾತಿಯನ್ನು (ವ್ಯಾಕರಣಾಂಶ, ನಾಮಪದ, ಕ್ರಿಯಾಪದ...... ಇತ್ಯಾದಿ) ಗುರುತಿಸಿ ಅರ್ಥಗಳನ್ನು ಕಂಡುಕೊಂಡು ಅಕಾರಾದಿಯಾಗಿ ಪಟ್ಟಿಮಾಡುವುದು ನಿಘಂಟಿನ ಮುಖ್ಯವಾದ ಕಾರ್ಯ. ಕನ್ನಡದ ಪ್ರಸಿದ್ಧ ನಿಘಂಟುಗಳನ್ನು ಪರಾಮರ್ಶಿಸಿಕೊಂಡು ಕೆಳಗೆ ಕೊಡಲಾದ ಶಬ್ದಗಳ ಒಂದು ಮಾದರಿ ನಿಘಂಟನ್ನು ರಚಿಸಿರಿ.

ಕೊಠಡಿ, ಹೆಸರು, ಕೂಡಿಸು, ಗಳಿಸು, ತುಡಿತ, ಮಾತು, ಪುಟ್ಟ, ಚಿಕ್ಕ, ಹಂತ, ಬಿದಿರು, ಮೂಲಭೂತ, ಜೋಪಡಿ, ಇದು, ಟಗರು, ಯಾರು, ನಾವು, ಡಮರು, ರಟ್ಟೆ, ವಿದ್ಯೆ, ಅನಂತರ, ವಾರಿಸು, ಒಟ್ಟಿಗೆ, ಗರಡಿ, ಪಾತ್ರೆ, ಮೊದಲು, ಮುನಿಸು, ಹಾವಾಡಿಗ.

## ಭಾಷಾಭ್ಯಾಸ

- ಕೆಳಗೆ ನೀಡಲಾದ ಗದ್ಯಭಾಗದ ಪ್ರಧಾನ ಆಶಯವು ಉತ್ತರವಾಗಿ ಬರುವಂತೆ ಸಾಧ್ಯವಾದಷ್ಟು ಪ್ರಶ್ನೆಗಳನ್ನು ತಯಾರಿಸಿರಿ.

  ಇಂದಿನ ಮಕ್ಕಳೇ ನಾಳೆಯ ಪ್ರಜೆಗಳು ಎಂಬ ಮಾತು ಕ್ಲೀಷೆಯಾಗಿ ಪರಿಣಮಿಸಿದ್ದರೂ ಅದರ ಸತ್ಯವನ್ನು ಯಾರೂ ಪ್ರಶ್ನಿಸುವಂತಿಲ್ಲ. ಈ ಸತ್ಯವನ್ನು ಗಂಭೀರವಾಗಿ ತೆಗೆದುಕೊಂಡುದರ ಫಲವಾಗಿ ಇಂದು ಮಕ್ಕಳಿಗಾಗಿಯೇ ಬರೆದ ಕವಿತೆ, ಕಥನಗೀತೆ, ಕಥೆ, ನಾಟಕ, ಕಾದಂಬರಿಗಳು ತಕ್ಕಮಟ್ಟಿನ ಪ್ರಮಾಣದಲ್ಲಿ ಬೆಳೆದು ನಿಂತಿವೆ. ಮನೆಯ ಪ್ರಪಂಚವನ್ನು ದಾಟಿ ಹೊರಗಿನ ಜಗತ್ತನ್ನು ನೋಡತೊಡಗುವ ಮೊದಲೇ ಮಕ್ಕಳ ಕಲ್ಪನೆ ಗರಿಗೆದರಲು ಆರಂಭವಾಗುತ್ತದೆ. ತಾನು ಕಂಡದ್ದನ್ನು ತನ್ನ ಪರಿಮಿತ ಪದಗಳ ಪರಿಧಿಯಲ್ಲೇ ಮಗು ಅರಿಯಲು ಯತ್ನಿಸುತ್ತದೆ. ಅದರ ಕುತೂಹಲವನ್ನು ಬೆಳೆಸಿ ತಣಿಸುವ ಜವಾಬ್ದಾರಿ ಸಾಹಿತಿಗೂ ಇದೆ. ಮಕ್ಕಳ ಮಟ್ಟಕ್ಕೇ ಇಳಿದು, ಅವರಿಗೆ ಎಟುಕುವ ಭಾಷೆಯಲ್ಲೇ ಅವರಿಗೆ ಸಂತೋಷ ನೀಡಬಲ್ಲ ಶಕ್ತಿ ಇರುವ ಸಾಹಿತಿಗಳು ಮಾತ್ರ ಈ ಕೆಲಸ ಮಾಡುವುದು ಸಾಧ್ಯ.

- ಸಂಧಿ ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.

  ಉಪಾಹಾರ , ಹಳಗನ್ನಡ , ರೂಪುಗೊಂಡು , ವರ್ಣೋಚ್ಚಾರ, ಶೀಘ್ರೋಚ್ಚಾರ

## ಹೆಚ್ಚಿನ ಓದಿಗೆ

| | | |
|---|---|---|
| ವಿಚಾರ ಪ್ರಪಂಚ | – | (ಸಂಗ್ರಹ) ಡಾ. ಪಾದೇಕಲ್ಲು ವಿಷ್ಣು ಭಟ್ಟ |
| ಪದಾರ್ಥ ಚಿಂತಾಮಣಿ | – | ಪಾ.ವೆಂ. ಆಚಾರ್ಯ |
| ಇಗೋ ಕನ್ನಡ (ಸಂಪುಟಗಳು) | – | ಜಿ. ವೆಂಕಟಸುಬ್ಬಯ್ಯ |

# ಪ್ರಾಚೀನ ತುಳು ಸಾಹಿತ್ಯ

**ಡಾ. ಪಿ. ವೆಂಕಟರಾಜ ಪುಣಿಂಚತ್ತಾಯ**

ತುಳು ಭಾಷೆಯನ್ನು ಮಾತನಾಡುವ, ತುಳು ಸಂಸ್ಕೃತಿಯನ್ನು ಉಸಿರಾಡುವ ಲಕ್ಷಾಂತರ ಮಂದಿ ಕಾಸರಗೋಡು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿದ್ದಾರೆ. ಈ ಪ್ರದೇಶವನ್ನು ಹಿಂದಿನಿಂದಲೇ 'ತುಳುನಾಡು' ಎಂದೇ ಕರೆಯುತ್ತಿದ್ದರು. ತುಳುವಿನಲ್ಲಿ ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳು ಸಮೃದ್ಧವಾಗಿದ್ದರೂ ಶಿಷ್ಟ ಸಾಹಿತ್ಯವು ಇಲ್ಲವೆಂದೇ ಇತ್ತೀಚಿಗಿನ ವರೆಗೆ ಎಲ್ಲರೂ ತಿಳಿದಿದ್ದರು. ಆದರೆ ವಿದ್ವಾಂಸರಾದ ವೆಂಕಟರಾಜ ಪುಣಿಂಚತ್ತಾಯರು ತಮ್ಮ ದೀರ್ಘಕಾಲದ ಸಂಶೋಧನೆಯ ಫಲವಾಗಿ ತುಳುವಿನಲ್ಲಿ ರಚನೆಯಾದ ಪ್ರಾಚೀನ ಕೃತಿಗಳನ್ನು ಬೆಳಕಿಗೆ ತಂದರು. ಪ್ರಸ್ತುತ ಬರಹದಲ್ಲಿ ಪ್ರಾಚೀನ ತುಳು ಸಾಹಿತ್ಯದ ಕಿರು ಪರಿಚಯವನ್ನು ನೀಡಲಾಗಿದೆ.

ದಕ್ಷಿಣ ಭಾರತದ ಪಂಚ ದ್ರಾವಿಡ ಭಾಷೆಗಳಲ್ಲಿ ಒಂದು ತುಳುಭಾಷೆ. ಸುಮಾರು ಹದಿನೈದು ಲಕ್ಷ ಜನರ ಮನೆ ಮಾತಾಗಿರುವ ತುಳುಭಾಷೆ–ಇತರ ಭಾಷೆಗಳಿಗಿಂತ ಕಡಿಮೆಯೇನೂ ಅಲ್ಲ. ತುಳುಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆಯೆಂದು ಈಗಾಗಲೇ ಸಂಶೋಧಕರು ಕಂಡು ಹಿಡಿದಿದ್ದಾರೆ. ತುಳುವರು ಮಹಾ ಸಾಹಸಿಗಳು; ಪರಾಕ್ರಮಿಗಳು. ಕೋಟಿ ಚೆನ್ನಯರಂಥ ವೀರರು ತುಳುನಾಡಿನಲ್ಲಿ ತಮ್ಮ ಸಾಹಸವನ್ನು ಮೆರೆದು, ಇಂದಿಗೂ ತುಳುಜನರ ಆರಾಧ್ಯ ಪುರುಷರಾಗಿದ್ದಾರೆ. ತುಳು ನಾಡಿನಲ್ಲಿ ಅಲ್ಲಲ್ಲಿರುವ ಗರಡಿಗಳೇ ಇದಕ್ಕೆ ಸಾಕ್ಷಿ. 'ಗರಡಿ' ಎಂದರೆ ವ್ಯಾಯಾಮ ಶಾಲೆ. ಕೇರಳದಲ್ಲಿ ಗರಡಿಯನ್ನು 'ಕಳರಿ' ಎಂದು ಹೇಳುತ್ತಾರೆ.



ಕಳರಿಗಳಲ್ಲಿ ಅಥವಾ ಗರಡಿಯಲ್ಲಿ ಯುದ್ಧವಿದ್ಯೆಯನ್ನು ಕಲಿಸಲಾಗುತ್ತಿತ್ತು. ಕೇರಳದ ಕಳರಿಗಳಲ್ಲಿ ಯುದ್ಧ ವಿದ್ಯೆಯನ್ನು ಕಲಿಸಲು ತುಳುನಾಡಿನಿಂದ ಗರಡಿ ಸಾಧಕರನ್ನು ಕರೆಸಿಕೊಳ್ಳುವ ಸಂಪ್ರದಾಯವಿತ್ತು. ಇವತ್ತಿಗೂ ಗರಡಿ ಸಾಧನೆಯನ್ನು ಮಲೆಯಾಳ ಭಾಷೆಯಲ್ಲಿ 'ತುಳುವಿದ್ಯೆ' ಎಂದೇ ಕರೆಯುತ್ತಿದ್ದಾರೆ. ಉತ್ತರ ಮಲಬಾರಿನಲ್ಲಿರುವ ಅನೇಕ ಜನಪದಗೀತೆಗಳಲ್ಲಿ 'ತುಳು ವಿದ್ಯೆ'ಯ ಬಗ್ಗೆ ಅಥವಾ ಗರಡಿ ವಿದ್ಯೆಯ ಬಗ್ಗೆ ಸಾಕಷ್ಟು ಪ್ರಸ್ತಾಪಗಳಿವೆ.

ತುಳುವರ ಗರಡಿವಿದ್ಯೆ ಎಷ್ಟು ವಿಶಿಷ್ಟವಾದುದು ಎಂದರೆ ಅದರಲ್ಲಿ ಸುಮಾರು ಹದಿನೆಂಟು ವಿಧದ ಅಭ್ಯಾಸಗಳಿವೆ. ಹಿಂದಿನ ಕಾಲದಲ್ಲಿ ಗರಡಿ ವಿದ್ಯೆಯಲ್ಲಿ ಹೆಚ್ಚಿನ ಅಧ್ಯಯನ ಮಾಡಲು ಕೇರಳೀಯರು ತುಳುನಾಡಿಗೆ ಬರುತ್ತಿದ್ದರೆಂದೂ ಕೇರಳದ ಜನಪದ ಹಾಡುಗಳಿಂದ ತಿಳಿದುಬರುತ್ತದೆ. ಸುಮಾರು ಏಳೆಂಟು ಹಾಡುಗಳಲ್ಲಿ ತುಳು ವಿದ್ಯೆಯ ಪ್ರಸ್ತಾಪವಿರುವುದನ್ನು ನಾವು ಗುರುತಿಸಿದ್ದೇವೆ. ಇಂತಹ ಒಂದು ವಿಶಿಷ್ಟ ಯುದ್ಧ ಕಲೆಯನ್ನು ಬಲ್ಲ ತುಳುವರು ನಿಜಕ್ಕೂ ವೀರರೇ ಆಗಿದ್ದರು. ಅವರು ವೀರರು ಹೌದು; ಆದರೆ ಕ್ರೂರರಲ್ಲ. ಅವರ ಹೃದಯ ಅತ್ಯಂತ ಮೃದುವಾದುದು. ತುಳು ಎಂಬ ಪದದ ಅರ್ಥವೇ ಹಾಗೆ. ತುಳು ಎಂದರೆ 'ಮೃದು' ಎಂದರ್ಥ. ತುಳುವ ಹಲಸಿನ ಹಣ್ಣಿನ ಹಾಗೆ ತುಂಬ ಮೃದು ಸ್ವಭಾವದವರು ತುಳುವರು.

ತುಳುನಾಡಿನಲ್ಲಿ ಅನೇಕ ತುಳುವರಸರು ರಾಜ್ಯವಾಳಿದ್ದರು. ಬಂಗಾಡಿಯ ಬಂಗರು, ಪುತ್ತಿಗೆಯ ಚೌಟರು, ಮಂಗಳೂರು – ಉದ್ಯಾವರಗಳಿಂದ ಆಳಿದ ಆಳುಪರು, ಬೇರೆ ಬೇರೆಡೆಗಳಿಂದ ಆಳಿದ ಬಲ್ಲಾಳರು ಮತ್ತು ಹೆಗ್ಡೆಯವರು, ಸುರಾಲಿನ ತೋಳಹಾರರು, ಕಾರ್ಕಳದ ಭೈರರಸರು, ಹೊಸಂಗಡಿಯ ಹೊನ್ನೆಯ ಕಂಬಳಿಯವರು, ವಿಟ್ಲದ ಡೊಂಬ ಹೆಗ್ಡೆಯವರು, ವೇಣೂರಿನ ಅಜಿಲರು, ಮಾಯಿಪ್ಪಾಡಿಯ ರಾಮಂತರಸುಗಳು – ಹೀಗೆ ತುಳುನಾಡಿನ ತುಂಡರಸರ ಪಟ್ಟಿ ಉದ್ದಕ್ಕೆ ಬೆಳೆಯುತ್ತದೆ. ಹೆಚ್ಚಿನವರು ತುಳು ಮನೆಮಾತಿನ ತುಂಡರಸರು. ಆದರೆ ಅವರು ಕನ್ನಡ ಅರಸರ ಕೈಕೆಳಗೆ ರಾಜ್ಯವಾಳಿದವರು. ಹಾಗಾಗಿ ತುಳುಜನರ ಬಳಕೆಯ ಭಾಷೆ ತುಳುವೇ ಆಗಿದ್ದರೂ ನಾಡಿನ ವ್ಯವಹಾರ ಭಾಷೆ ಕನ್ನಡವಾಗಿಯೇ ಬೆಳೆದು ಬಂತು.

ಇದರಿಂದಾಗಿ ತುಳುವಿನಲ್ಲಿ ಶಿಷ್ಟ ಸಾಹಿತ್ಯ ರಚನೆ ವಿಪುಲವಾಗಿ ಬೆಳೆಯಲು ಅವಕಾಶವಾಗಲಿಲ್ಲ. ಮೊನ್ನೆ ಮೊನ್ನೆಯವರೆಗೆ ತುಳುವಿನಲ್ಲಿ ಶಿಷ್ಟ ಸಾಹಿತ್ಯ ಇದ್ದಿರಲಿಲ್ಲವೆಂದೇ ವಿದ್ವಾಂಸರ ಮತ್ತು ಜನಸಾಮಾನ್ಯರ ಊಹೆಯಾಗಿತ್ತು. ಆದರೆ 'ಶ್ರೀಭಾಗವತೋ' ಎಂಬ

ತುಳುಕಾವ್ಯ – ಬೆಳಕಿಗೆ ಬಂದೊಡನೆ ತುಳು ಸಾಹಿತ್ಯ ಚರಿತ್ರೆಯಲ್ಲಿಯೇ ಒಂದು ಹೊಸ ಅಧ್ಯಾಯ ಮೂಡಿದಂತಾಯಿತು. ವಿಷ್ಣು ತುಂಗ ಕವಿಯ 'ತುಳುಭಾಗವತ' ಬೆಳಕಿಗೆ ಬಂದ ಮೇಲೆ ತುಳು ಸಾಹಿತ್ಯಕ್ಕೆ ಒಂದು 'ಅಭಿಜಾತ ಸಾಹಿತ್ಯ ಗೌರವ' (ಕ್ಲಾಸಿಕಲ್ ಡಿಗ್ನಿಟಿ) ಬಂದ ಹಾಗಾಯಿತು.

ತುಳುಭಾಗವತದಲ್ಲಿ ಸುಮಾರು ಮೂರುಸಾವಿರ ವೃತ್ತಗಳಿವೆ. ಇದು ನಾವು ಈಗ ಮಾತನಾಡುವ ತುಳುಭಾಷೆಯಲ್ಲಿಲ್ಲ. ಕನ್ನಡದಲ್ಲಿ ಹಳಗನ್ನಡವಿದ್ದಂತೆ, ತುಳುವಿನಲ್ಲಿಯೂ ಹಳೆಯ ತುಳು ಎಂಬ ಒಂದು ಹಂತ ಇತ್ತೆಂದು ನಾವು ಈ ಗ್ರಂಥದಿಂದ ಊಹಿಸಬಹುದಾಗಿದೆ. ಪಂಪನ ಕಾಲದ ಕನ್ನಡ ಹೇಗೆ ಹೊಸಗನ್ನಡ ಮಾತ್ರ ಬಲ್ಲವರಿಗೆ ಅರ್ಥವಾಗುವುದಿಲ್ಲವೋ ಹಾಗೆಯೇ ವಿಷ್ಣು ತುಂಗನ ತುಳುಭಾಗವತವೂ ನಮಗೆ ಸುಲಭದಲ್ಲಿ ಅರ್ಥವಾಗುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಭಾಗವತದ ತುಳು ೪೦೦ ವರ್ಷಗಳ ಹಿಂದಿನ ತುಳು. ವಿಷ್ಣುತುಂಗನ ಕಾಲದ ತುಳುವಿಗೂ ನಮ್ಮ ಕಾಲದ ತುಳುವಿಗೂ ಮಧ್ಯದಲ್ಲಿ ೪೦೦ ವರ್ಷಗಳ ಅಂತರ ಇದೆ. ಈ ಅಂತರದಿಂದಾಗಿ ಭಾಗವತದ ತುಳು ನಮಗೆ ಪಂಪನ ಕನ್ನಡಕ್ಕೆ ಸಮವಾಗಿ ಕಾಣುತ್ತದೆ.

ಅಂತೂ ಈಗ ನಾವು ತುಳುವಿನಲ್ಲಿ ಪ್ರಾಚೀನ ಸಾಹಿತ್ಯ ಇರಲಿಲ್ಲ– ತುಳುಭಾಷೆಗೆ ಪ್ರಾಚೀನ ಇತಿಹಾಸವಿಲ್ಲ ಎಂದು ಹೇಳುವಂತಿಲ್ಲ. 'ಶ್ರೀಭಾಗವತೋ' ತುಳು ತಾಡವಾಲೆ ಸಿಕ್ಕಿದಾಗ ಕೆಲವರಿಗೆ ಅನ್ನಿಸಿತ್ತು; ಇದೇನೋ ಅಪರೂಪವಾಗಿ ಯಾವನೋ ಒಬ್ಬ ಒಂದು ಕೃತಿಯನ್ನು ಬರೆದುದಿರಬೇಕು ಎಂದು. ಆದರೆ ಅನಂತರ 'ಕಾವೇರಿ' ಎಂಬ ಇನ್ನೊಂದು ಪ್ರಾಚೀನ ಕಾವ್ಯ ಬೇರೊಬ್ಬ ಕವಿಯದ್ದು– ಅದೇ ರೀತಿ ತಾಡವಾಲೆಗಳಲ್ಲಿ ದೊರೆಯಿತು. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಿಂದ ಅದು ಪ್ರಕಟವಾಯಿತು. ಈಗ ತುಳುವಿನಲ್ಲಿ ಎರಡು ಪ್ರಾಚೀನ ಕಾವ್ಯ ದೊರೆತಂತಾಯಿತು. ಇವೆರಡು ಪ್ರಕಟವಾದ ಅನಂತರ ಒಂದು ಗದ್ಯ ಕಾವ್ಯ ನನ್ನ ಅವಗಾಹನೆಗೆ ಬಂತು. ಅದೂ ಗೋವಿಂದ ಪೈ ಸಂಶೋಧನಾ ಕೇಂದ್ರದಿಂದಲೇ ಪ್ರಕಟವಾಯಿತು. ನಾನ್ನೂರು – ಐನ್ನೂರು ವರ್ಷಗಳ ಹಿಂದಿನ ಈ ಕೃತಿಗಳು ಪ್ರಾಚೀನ ತುಳುವಿನಲ್ಲಿ ಸಾಕಷ್ಟು ಕೃಷಿ ನಡೆದಿತ್ತು ಎಂದು ಸಾಕ್ಷಿ ನುಡಿಯುತ್ತದೆ. ತುಳುವಿಗೆ ಒಂದು ಶಿಷ್ಟ ಸಾಹಿತ್ಯ ಪರಂಪರೆ ಇತ್ತು ಎಂದು ದೃಢಪಡಿಸುತ್ತವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಹಾಗೂ ಕಾಸರಗೋಡಿನ ಕೆಲವು ಹಳೆಯ ಕಾಲದ ಮನೆಗಳನ್ನು ಶೋಧಿಸಿದರೆ ಇಂತಹ ಇನ್ನೂ ಕೆಲವು ತುಳು ಪ್ರಾಚೀನ ಕಾವ್ಯಗಳು ಸಿಗಬಲ್ಲವು ಎಂದು ನನಗೆ ಅನ್ನಿಸುತ್ತದೆ.

## ತುಳುವಿನ ಜನಪದ ವೈಭವ

ತುಳುವಿನಲ್ಲಿ ಈಗಾಗಲೇ ಸುಮಾರು ೨೫ ಸಾವಿರದಷ್ಟು ಸಾಲುಗಳ ಪಾಡ್ದನವನ್ನು ಉಡುಪಿಯ ತುಳು ನಿಘಂಟು ಯೋಜನೆಯ ಆಶ್ರಯದಲ್ಲಿ ಸಂಗ್ರಹಿಸಲಾಗಿದೆ. ಹಾಗೆಯೇ ತುಳುನಿಘಂಟು ಯೋಜನೆಗಾಗಿ ಸುಮಾರು ಮೂರು ಸಾವಿರದಷ್ಟು ಗಾದೆ ಮತ್ತು ಒಗಟುಗಳು ಸಂಗ್ರಹವಾಗಿವೆ. ಈ ಜನಪದ ಸಾಹಿತ್ಯದ ಗಾತ್ರ ಸಾಮಾನ್ಯವಾದುದಲ್ಲ. ಅನ್ವೇಷಣೆ ಮಾಡಿದರೆ ಇನ್ನೂ ಅಷ್ಟೇ ಜನಪದ ಸಾಹಿತ್ಯರಾಶಿ ನಮಗೆ ದೊರೆಯಬಹುದು. ಅಷ್ಟು ವಿಪುಲವಾಗಿದೆ ನಮ್ಮ ಪಾಡ್ದನಸಂಪತ್ತು. ಪಾಡ್ದನ ಸಾಹಿತ್ಯವು ನಮ್ಮ ಕನ್ನಡ ಜನಪದ ಸಾಹಿತ್ಯಕ್ಕಿಂತ ಎಷ್ಟೋ ಪ್ರಾಚೀನವಾದುದು ಎಂದು ಅದರ ಛಂದಸ್ಸನ್ನು ಪರಿಶೀಲಿಸಿದಾಗ ವೇದ್ಯವಾಗುತ್ತದೆ. ಪಾಡ್ದನದ ಛಂದಸ್ಸನ್ನು ಇನ್ನೂ ಒಂದು ಲಕ್ಷಣಕ್ಕೆ ಅಳವಡಿಸಿ ಹೇಳಲು ಯಾರಿಂದಲೂ ಸಾಧ್ಯವಾಗಿಲ್ಲ ನನ್ನ ಅನುಭವದಂತೆ ಈ ರಾಗತಾಳಗಳು ನಮ್ಮ ತಮಿಳು, ತೆಲುಗು, ಕನ್ನಡ, ಮಲೆಯಾಳ ಎಂಬ ಇತರ ನಾಲ್ಕು ಭಾಷೆಗಳ ಸಾಹಿತ್ಯದ ರಚನೆಗಿಂತಲೂ ಭಿನ್ನವಾದವುಗಳು. ಈ ವೈಲಕ್ಷಣ್ಯವೇ ಪಾಡ್ದನಗಳ ಪ್ರಾಚೀನತೆಯನ್ನು ಹಾಗೂ ತುಳು ಛಂದಸ್ಸಿನ ಪ್ರಾಚೀನತೆಯನ್ನು ಸಾರುತ್ತವೆ.

### ಡಾ। ಪಿ. ವೆಂಕಟರಾಜ ಪುಣಿಂಚತ್ತಾಯ (೧೯೩೬ – ೨೦೧೨)



ವೆಂಕಟರಾಜ ಪುಣಿಂಚತ್ತಾಯರು ಕಾಸರಗೋಡು ಸಮೀಪದ ಪುಂಡೂರಿನವರು. ಎಡನೀರು ಶ್ರೀ ಸ್ವಾಮೀಜಿ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು ಕವಿ, ಲೇಖಕ, ನಾಟಕಕಾರ, ಅನುವಾದಕ, ಸಂಶೋಧಕ – ಹೀಗೆ ಹಲವು ನೆಲೆಗಳಲ್ಲಿ ಸಾಧನೆ ಮಾಡಿದವರು. ಸಂಸ್ಕೃತ, ಕನ್ನಡ, ತುಳು ಹಾಗೂ ಮಲೆಯಾಳ ಭಾಷೆಗಳನ್ನು ಬಲ್ಲ ವಿದ್ವಾಂಸರಾಗಿದ್ದ ಇವರು ತುಳುವಿನ ಪ್ರಾಚೀನ ಕಾವ್ಯ ಗ್ರಂಥಗಳನ್ನು ಸಂಶೋಧಿಸಿ ಹೊರ ತಂದರು. ಶ್ರೇಷ್ಠ ಅಧ್ಯಾಪಕರಿಗೆ ನೀಡಲಾಗುವ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದರು. ಮಂಗಳೂರು ವಿಶ್ವವಿದ್ಯಾಲಯವು ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತ್ತು. ಶ್ರೀ ಭಾಗವತೊ, ಕಾವೇರಿ, ತುಳು ದೇವೀ ಮಹಾತ್ಮೆ, ತುಳು ಮಹಾಭಾರತೊ, ತುಳು ಕರ್ಣ ಪರ್ವೊ ಇವರು ಸಂಪಾದಿಸಿದ ತುಳು ಕೃತಿಗಳಾಗಿವೆ. ಪ್ರಸ್ತುತ ಭಾಗವನ್ನು ಅವರ ಸಮಗ್ರ ಲೇಖನ ಸಂಪುಟ ‘ಮಹಾಜನಪದ’ ದಿಂದ ಆರಿಸಲಾಗಿದೆ.

### ಪದಗಳ ಅರ್ಥ

ಅಭಿಜಾತ – ಶ್ರೇಷ್ಠ. ಅವಗಾಹನೆ – ಗಮನ. ಆರಾಧ್ಯ – ಪೂಜಿಸಲು ಯೋಗ್ಯ. ವೈಲಕ್ಷಣ್ಯ – ವಿಶೇಷವಾದ ಗುಣಗಳು.

### ಒಂದು ವಾಕ್ಯದಲ್ಲಿ ಉತ್ತರಿಸಿರಿ

- ಪಂಚ ದ್ರಾವಿಡ ಭಾಷೆಗಳು ಯಾವುವು?
- 'ಗರಡಿ' ಎಂದರೇನು?
- 'ತುಳು ' ಪದದ ಅರ್ಥವೇನು?
- ಈ ಪಾಠಭಾಗದಲ್ಲಿ ಹೆಸರಿಸಲಾದ ತುಳು ಕೃತಿಗಳು ಯಾವುವು?

### ಸಂಕ್ಷಿಪ್ತವಾಗಿ ಉತ್ತರಿಸಿರಿ

- ತುಳು ಭಾಷೆಯ ಪ್ರಾಚೀನತೆಯನ್ನು ಲೇಖಕರು ಹೇಗೆ ಗುರುತಿಸಿದ್ದಾರೆ?
- 'ಗರಡಿ'ಮತ್ತು 'ಕಳರಿ'ಗಳೊಳಗಿನ ವ್ಯತ್ಯಾಸಗಳೇನು?
- ತುಳು ಭಾಷೆಯಲ್ಲಿ ಶಿಷ್ಟ ಸಾಹಿತ್ಯ ರಚನೆ ವಿಪುಲವಾಗಿ ಮೂಡಿಬರದೇ ಇರುವುದಕ್ಕೆ ಲೇಖಕರು ನೀಡುವ ಕಾರಣವೇನು?
- ತುಳುವಿಗೆ ಶಿಷ್ಟ ಸಾಹಿತ್ಯ ಪರಂಪರೆ ಇತ್ತು ಎಂಬುದನ್ನು ಹೇಗೆ ದೃಢ ಪಡಿಸಿಕೊಳ್ಳಬಹುದು?
- ತುಳು ಪಾಡ್ದನಗಳ ಪ್ರಾಚೀನತೆಯನ್ನು ಹೇಗೆ ಅರಿಯಬಹುದು?

### ಚಟುವಟಿಕೆಗಳು

- ತುಳು ಭಾಷೆಯ ಕೃತಿಗಳನ್ನು ಓದಲು ಪ್ರಯತ್ನಿಸಿರಿ.
- ತುಳು ಪಾಡ್ದನಗಳಲ್ಲಿ ಬಂದಿರುವ ಕೋಟಿ ಚೆನ್ನಯರ ಕತೆಯನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಿರಿ.
- ತುಳು ಗಾದೆ ಮಾತುಗಳನ್ನು ಸಂಗ್ರಹಿಸಿರಿ. ಅವನ್ನು ಕನ್ನಡ ಗಾದೆಗಳೊಂದಿಗೆ ಹೋಲಿಸಿರಿ.
- ತುಳು ನಾಡಿನ ಆಚರಣೆಗಳ ಕುರಿತು ಸಂಕ್ಷಿಪ್ತ ವಿವರಣೆಯಿಂದೊಡಗೂಡಿದ ಕಿರು ಲೇಖನಗಳನ್ನು ತಯಾರಿಸಿರಿ.
- ಪ್ರಸ್ತುತ ಲೇಖನದಲ್ಲಿ ಪ್ರಸ್ತಾಪಿಸದೆ ಇರುವ ಪ್ರಾಚೀನ ತುಳು ಕೃತಿಗಳ ಕುರಿತು ಒಂದು ಪರಿಚಯಾತ್ಮಕ ಲೇಖನ ಬರೆಯಿರಿ.

## ಭಾಷಾಭ್ಯಾಸ

### ಸರಳ ವಾಕ್ಯ

ಒಂದು ಪೂರ್ಣ ಕ್ರಿಯಾಪದ ಇರುವ ಸ್ವತಂತ್ರ ರೂಪದ ವಾಕ್ಯವನ್ನು ಸಾಮಾನ್ಯ / ಸರಳ ವಾಕ್ಯ ಎನ್ನುತ್ತಾರೆ.

ಉದಾ:– ಹಕ್ಕಿಗಳು ಆಗಸದಲ್ಲಿ ಸ್ವಚ್ಛಂದವಾಗಿ ಹಾರಾಡುತ್ತಿವೆ.

### ಮಿಶ್ರವಾಕ್ಯ

ಇದರಲ್ಲಿ ಒಂದು ಮುಖ್ಯ ವಾಕ್ಯವಿದ್ದು, ಅದಕ್ಕೆ ಸಂಬಂಧಿಸಿದಂತೆ ಅಪೂರ್ಣ ಕ್ರಿಯೆಗಳಿರುವ ಅಧೀನ ವಾಕ್ಯಗಳಿರುತ್ತವೆ. ಅಧೀನ ವಾಕ್ಯಗಳು ಸದಾಕಾಲ ಮುಖ್ಯ ವಾಕ್ಯವನ್ನು ಅವಲಂಬಿಸಿರುತ್ತವೆ. ಇಂತಹ ವಾಕ್ಯಗಳನ್ನು ಮಿಶ್ರ ವಾಕ್ಯ ಎನ್ನುತ್ತಾರೆ.

ಉದಾ:

ಪೌಷ್ಟಿಕ ಆಹಾರದ ಕೊರತೆ ಇಂದಿಗೂ ಜನರನ್ನು ಕಾಡುತ್ತಿದ್ದು, ಹಲವು ವಿಧದ ರೋಗ ರುಜಿನಗಳಿಗೆ ತುತ್ತಾಗುತ್ತಿರುವರು.

ಕೆಳಗಿನ ಸರಳ ವಾಕ್ಯಗಳನ್ನು ಮಿಶ್ರ ವಾಕ್ಯವಾಗಿ ಮಾದರಿಯಂತೆ ಪರಿವರ್ತಿಸಿರಿ.

**ಮಾದರಿ :** ತುಳುವರ ಗರಡಿ ವಿದ್ಯೆ ವಿಶಿಷ್ಟವಾದುದು. ಅದರಲ್ಲಿ ಸುಮಾರು ಹದಿನೆಂಟು ವಿಧದ ಅಭ್ಯಾಸಗಳಿವೆ. (ಸರಳ ವಾಕ್ಯಗಳು)

ತುಳುವರ ಗರಡಿ ವಿದ್ಯೆ ವಿಶಿಷ್ಟವಾಗಿದ್ದು ಅದರಲ್ಲಿ ಸುಮಾರು ಹದಿನೆಂಟು ವಿಧದ ಅಭ್ಯಾಸಗಳಿವೆ. (ಮಿಶ್ರವಾಕ್ಯ)

- ಕಳರಿ ಅಥವಾ ಗರಡಿಗಳಲ್ಲಿ ಯುದ್ಧ ವಿದ್ಯೆಯನ್ನು ಕಲಿಸಲಾಗುತ್ತಿತ್ತು. ಕೇರಳದ ಕಳರಿಗಳಲ್ಲಿ ಯುದ್ಧ ವಿದ್ಯೆಯನ್ನು ಕಲಿಸಲು ತುಳುನಾಡಿನಿಂದ ಗರಡಿ ಸಾಧಕರನ್ನು ಕರೆಸಿಕೊಳ್ಳುವ ಸಂಪ್ರದಾಯವಿತ್ತು.
- ತುಳು ಜನರ ಬಳಕೆಯ ಭಾಷೆ ತುಳು ಆಗಿದೆ. ನಾಡಿನ ವ್ಯವಹಾರ ಭಾಷೆ ಕನ್ನಡವಾಗಿ ಬೆಳೆದು ಬಂದಿದೆ.

## ಹೆಚ್ಚಿನ ಓದಿಗೆ

ಮಹಾಜನಪದ – (ಸಂ) ಡಾ. ಪಾದೇಕಲ್ಲು ವಿಷ್ಣು ಭಟ್ಟ.

ತುಳು ಸಾಹಿತ್ಯ ಚರಿತ್ರೆ – ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ಭಾಷೆ ಮತ್ತು ಭಾಷಾವಿಜ್ಞಾನ

ಭಾಷೆ ಮನುಷ್ಯನ ದಿನ ನಿತ್ಯದ ವ್ಯವಹಾರಕ್ಕಾಗಿ ಇರುವ ಸಮರ್ಥವಾದ ಸಂವಹನ ಮಾಧ್ಯಮವಾಗಿದೆ. ಮಾನವನು ತನ್ನ ಅನಿಸಿಕೆಗಳ ಅಭಿವ್ಯಕ್ತಿಗಾಗಿ ಮತ್ತು ಇನ್ನೊಬ್ಬರ ಅನಿಸಿಕೆ, ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಮಾಧ್ಯಮ ಎಂಬ ನೆಲೆಯಲ್ಲಿ ಕಂಡುಕೊಂಡ ಭಾಷೆಯು ಆತನು ನಡೆಸಿದ ಸಂಶೋಧನೆಗಳಲ್ಲೆಲ್ಲ ಶಿಖರಪ್ರಾಯವೆನಿಸಿದೆ. ದೈನಂದಿನ ವ್ಯವಹಾರಕ್ಕಷ್ಟೇ ಸೀಮಿತವಾಗದೆ, ಜಗತ್ತಿನ ನಾಗರಿಕತೆ, ಸಂಸ್ಕೃತಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಭಾಷೆ ವಹಿಸುತ್ತಿರುವ ಪಾತ್ರ ಅತ್ಯಂತ ಹಿರಿದಾದುದು. ಭಾಷೆ ಎಂದರೆ ಬೆಳಕು. ಅದು ಜ್ಞಾನದ ಸಂಕೇತ. ಭಾಷೆ ಇಲ್ಲದಿದ್ದರೆ ಮೂಕಪ್ರಾಣಿಗಳಿಗೂ ಮನುಷ್ಯನಿಗೂ ಅಂತರವೇ ಇರುತ್ತಿರಲಿಲ್ಲ. ಮನುಷ್ಯನನ್ನು ಮನುಷ್ಯನನ್ನಾಗಿಸುವಲ್ಲಿ, ನಾಗರಿಕತೆಯ ವೇಗದ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ಮಹತ್ವದ್ದು. ಒಟ್ಟಿನಲ್ಲಿ ಮಾನವನ ಜೀವನದ ಪ್ರಮುಖ ಆವಶ್ಯಕತೆಯಾಗಿ ಭಾಷೆ ಬೆಳೆದುಬಂದಿದೆಯೆನ್ನಬಹುದು.



ಮನುಷ್ಯನ ಜೀವನದಲ್ಲಿ ಅನಿವಾರ್ಯವೂ ಬಹೂಪಯೋಗಿಯೂ ಆದ ಭಾಷೆಯ ಸ್ವರೂಪದ ಬಗ್ಗೆ ವಿದ್ವಾಂಸರು ಚಿಂತಿಸಿದ್ದಾರೆ. "ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ" ಎಂಬುದು ಭಾಷೆಯ ಕುರಿತಾದ ಒಂದು ಸ್ವೀಕೃತ ವ್ಯಾಖ್ಯೆ. ಭಾಷೆ ಎಂಬುದು ಒಂದು ವ್ಯವಸ್ಥೆ, ಅದು ಸಂಕೇತಗಳ ವ್ಯವಸ್ಥೆ, ಅದು ಮೌಖಿಕ ಧ್ವನಿ ಸಂಕೇತಗಳ ವ್ಯವಸ್ಥೆ. ಈ ಸಂಕೇತಗಳ ವ್ಯವಸ್ಥೆ ಯಾದೃಚ್ಛಿಕವಾದುದು ಅರ್ಥಾತ್ ಬದಲಾವಣೆಗೆ ಒಳಗೊಳ್ಳುವಂತಹುದು. ಭಾಷೆ ಸಮಾಜದ ವ್ಯಕ್ತಿಗಳ ಪರಸ್ಪರ ಸಂಪರ್ಕಕ್ಕಾಗಿಯೇ ಮೀಸಲಾದುದು ಎಂಬುದು ಈ ವ್ಯಾಖ್ಯೆಯ ಒಟ್ಟು ಆಶಯ.

ಭಾಷೆಯ ಕುರಿತು ಕೆಳಗಿನ ಮಾಹಿತಿಗಳು ಮನನ ಮಾಡಲು ಯೋಗ್ಯವಾಗಿವೆ.

1. ಭಾಷೆ ಒಂದು ಸಾಮಾಜಿಕ ಕ್ರಿಯೆ
2. ಭಾಷೆ ದೈವದತ್ತವಲ್ಲ; ಅದು ಕಲಿಕೆಯಿಂದ ಬರುತ್ತದೆ.
3. ಭಾಷೆಯನ್ನು ಮನುಷ್ಯನು ಅನುಕರಣೆಯಿಂದ ಕಲಿಯುತ್ತಾನೆ.
4. ಭಾಷೆ ನಿರಂತರ ಪರಿವರ್ತನಶೀಲವಾದುದು.
5. ಭಾಷೆಗೆ ಅಂತಿಮ ಸ್ವರೂಪ ಎಂಬುದಿಲ್ಲ.
6. ಭಾಷೆಗೆ ತನ್ನದೇ ಆದ ಇತಿಹಾಸವಿರುತ್ತದೆ.
7. ಭಾಷೆಯಲ್ಲಿ ಒಂದು ವಿಶಿಷ್ಟ ಕ್ರಮವಿರುತ್ತದೆ.
8. ಭಾಷೆ ಯಾವಾಗಲೂ ಕಠಿಣತೆಯಿಂದ ಸರಳತೆಯೆಡೆಗೆ ಸಾಗುತ್ತದೆ.
9. ಭಾಷೆಯಲ್ಲಿ ಮೇಲು ಕೀಳು ಎಂಬುದಿಲ್ಲ.
10. ಒಂದು ಭಾಷೆಗೂ ಅದರ ಲಿಪಿಗೂ ಮೂಲಭೂತವಾದ ಸಂಬಂಧವಿಲ್ಲ.

ಭಾಷೆಯ ಕುರಿತಾಗಿ ವೈಜ್ಞಾನಿಕವಾಗಿ ಚಿಂತಿಸುವ ಕೆಲಸವನ್ನು ಭಾಷಾ ವಿಜ್ಞಾನ ಮಾಡುತ್ತದೆ. ಭಾಷಾ ಸ್ವರೂಪ, ಭಾಷೆಯ ಬೆಳವಣಿಗೆ, ಭಾಷಾ ವ್ಯತ್ಯಾಸಗಳು, ಭಾಷಾಪ್ರಭೇದಗಳು, ಭಾಷಾ ಸ್ವೀಕರಣ, ಲಿಪಿ ವ್ಯವಸ್ಥೆ ಮೊದಲಾದ ಬಾಹ್ಯ ವಿಚಾರಗಳನ್ನೂ ಭಾಷೆಯ ಧ್ವನಿ, ಧ್ವನಿಮಾ, ಪದ, ಆಕೃತಿಮಾ, ವಾಕ್ಯ, ಪದಪುಂಜ ಮೊದಲಾದ ಆಂತರಿಕ ವಿಚಾರಗಳನ್ನೂ ಭಾಷಾ ವಿಜ್ಞಾನ ವಿವೇಚಿಸುತ್ತದೆ. ಈ ವಿವೇಚನೆ ವಿವರಣಾತ್ಮಕವಾಗಿ, ಐತಿಹಾಸಿಕವಾಗಿ ಇಲ್ಲವೆ ತೌಲನಿಕವಾಗಿ ನಡೆಯಬಹುದಾಗಿದೆ. ಭಾಷಾ ವಿಜ್ಞಾನವನ್ನು ಬಲ್ಲವ, ಭಾಷೆಯನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸುವ ವಿದ್ವಾಂಸನೇ ಭಾಷಾ ವಿಜ್ಞಾನಿ. ಹಲವಾರು ಭಾಷೆಗಳನ್ನು ತಿಳಿದ ಮಾತ್ರಕ್ಕೆ ಒಬ್ಬನು ಭಾಷಾವಿಜ್ಞಾನಿ ಎನಿಸಲಾರ. ಆತನನ್ನು ಬಹುಭಾಷಾಜ್ಞಾನಿ ಎಂದು ಮಾತ್ರ ಗುರುತಿಸಲಾಗುತ್ತದೆ.

ಭಾಷಾ ವಿಜ್ಞಾನದಲ್ಲಿ ಮೂರು ಮುಖ್ಯವಾದ ಶಾಖೆಗಳನ್ನು ಗುರುತಿಸಲಾಗಿದೆ.

1. ವರ್ಣನಾತ್ಮಕ ಅಥವಾ ವಿವರಣಾತ್ಮಕ ಭಾಷಾ ವಿಜ್ಞಾನ.
2. ಐತಿಹಾಸಿಕ ಭಾಷಾ ವಿಜ್ಞಾನ.
3. ತೌಲನಿಕ ಭಾಷಾ ವಿಜ್ಞಾನ.

ಒಂದು ಭಾಷೆಯನ್ನು ರೂಢಿಯಲ್ಲಿರುವಂತೆ, ಬಳಕೆಯ ವಸ್ತುವಾಗಿ, ತದ್ವತ್ತಾಗಿ ವಿವರಿಸುವುದು ವರ್ಣನಾತ್ಮಕ ಭಾಷಾ ವಿಜ್ಞಾನ. ಒಂದು ಭಾಷೆ ಕಾಲದಿಂದ ಕಾಲಕ್ಕೆ

ಹೇಗೆ ಬೆಳೆದು ಬಂದಿದೆ ಎಂದು ಇತಿಹಾಸದ ದೃಷ್ಟಿಯಿಂದ ನಿರೂಪಿಸುವುದು ಐತಿಹಾಸಿಕ ಭಾಷಾ ವಿಜ್ಞಾನ. ಯಾವುದಾದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆ ಅಥವಾ ಉಪಭಾಷೆಗಳನ್ನು ತುಲನಾತ್ಮಕವಾಗಿ ವಿವೇಚಿಸುವುದು ತೌಲನಿಕ ಭಾಷಾ ವಿಜ್ಞಾನವೆನಿಸುತ್ತದೆ.

ಭಾಷಾ ವಿಜ್ಞಾನವು ಭಾಷೆಯನ್ನೇ ಆಧರಿಸಿರುವುದರಿಂದ ಭಾಷಾ ವೈಜ್ಞಾನಿಕ ವಿಷಯಗಳ ವಿವೇಚನೆಯಲ್ಲಿ ಒಂದು ಯಾ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಕನ್ನಡ ಭಾಷೆಯನ್ನು ಅನುಲಕ್ಷಿಸಿ ಕೆಲವು ಭಾಷಾವೈಜ್ಞಾನಿಕ ವಿಷಯಗಳನ್ನು ನಿರೂಪಿಸಲಾಗಿದೆ.

ಭಾರತ ಬಹುಭಾಷೆಗಳ ದೇಶ. ಇದರಲ್ಲಿ ಸುಮಾರು ಒಂದು ಸಾವಿರದ ಎಂಟುನೂರಕ್ಕೂ ಹೆಚ್ಚು ಭಾಷೆ ಮತ್ತು ಉಪಭಾಷೆಗಳು ಬಳಕೆಯಲ್ಲಿರಬಹುದೆಂದು ಅಂದಾಜು ಮಾಡಲಾಗಿದೆ. ಈ ಭಾಷೆಗಳೆಲ್ಲ ಒಂದೇ ಭಾಷಾ ಪರಿವಾರಕ್ಕೆ ಸೇರಿದವುಗಳಲ್ಲ. ಇಂಡೋ ಆರ್ಯನ್ ಭಾಷಾ ಪರಿವಾರವೇ ಭಾರತದ ಬಹುದೊಡ್ಡ ಭಾಷಾಕುಟುಂಬ. ಸಂಸ್ಕೃತ, ಪ್ರಾಕೃತ, ಹಿಂದಿ, ಬಂಗಾಲಿ, ಪಂಜಾಬಿ, ಮೈಥಿಲಿ, ಮರಾಠಿ, ಕೊಂಕಣಿ ಮೊದಲಾದ ಭಾಷೆಗಳೆಲ್ಲ ಈ ಭಾಷಾ ಪರಿವಾರದಲ್ಲಿ ಒಳಗೊಳ್ಳುತ್ತವೆ. ಭಾರತದ ಎರಡನೇ ದೊಡ್ಡ ಭಾಷಾ ಪರಿವಾರವೇ ‘ದ್ರಾವಿಡ’. ಕನ್ನಡ, ತಮಿಳು, ಮಲಯಾಳ, ತೆಲುಗು, ತುಳು, ಕೊಡಗು, ಬಡಗ ಮೊದಲಾದವು ದ್ರಾವಿಡ ಭಾಷಾ ವರ್ಗದ ಪ್ರಮುಖ ಭಾಷೆಗಳು.

ಭಾರತೀಯ ಭಾಷೆಗಳಲ್ಲಿ ಹಳಮೆಯ ದೃಷ್ಟಿಯಿಂದ ಕನ್ನಡಕ್ಕೆ ಮೂರನೇ ಸ್ಥಾನ. ಸಂಸ್ಕೃತಕ್ಕೆ ಮೊದಲನೆಯದಾದರೆ ತಮಿಳಿಗೆ ಎರಡನೆಯದು. ಕನ್ನಡ ಭಾಷೆಗೆ ಒಂದು ದೊಡ್ಡ ಇತಿಹಾಸವಿದೆ. ಈ ಭಾಷೆ ವರ್ತಮಾನದ ವಸ್ತುವಷ್ಟೇ ಅಲ್ಲದೆ ಭೂತಕಾಲದ ವಸ್ತುವೂ ಆಗಿದೆ. ಭೂತಕಾಲದ ಲಿಖಿತ ದಾಖಲೆಗಳೂ ಇದರಲ್ಲಿ ವಿಪುಲವಾಗಿವೆ.

## ಕನ್ನಡ ಭಾಷೆಯ ಹಂತಗಳು

ರೂಪಾಂತರ ಹೊಂದುತ್ತಾ ಹೋಗುವುದು ಜೀವಂತ ಭಾಷೆಯ ಲಕ್ಷಣ. ಭಾಷೆಯ ಧ್ವನಿವ್ಯವಸ್ಥೆ, ಪದರಚನೆ ವಾಕ್ಯರಚನೆ ಕೋಶ ಮುಂತಾದವುಗಳ ಬದಲಾವಣೆಗಳು ನಿರಂತರವಾಗಿ ನಡೆಯುತ್ತವೆ. ಈ ಬದಲಾವಣೆಯಿಂದಾಗಿ ಕಾಲಾನುಕ್ರಮದಲ್ಲಿ ಮೊದಲ ರೂಪಕ್ಕಿಂತ ತುಂಬ ಭಿನ್ನವೆನಿಸಿದ ರೂಪಗಳು ಮುಂದಿನ ಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಭಾಷೆಯ ವಿಕಾಸದಲ್ಲಿ ಅಂಥ ಬದಲಾವಣೆಗೊಂಡ ರೂಪಗಳನ್ನು ಹೊಂದಿರುವ ಅವಸ್ಥೆಗಳನ್ನು

ಆ ಭಾಷೆಯ ಹಂತಗಳಿಂದು (Stages) ಗುರುತಿಸಲಾಗುತ್ತದೆ. ಸುಮಾರು ೧೬೦೦ ವರ್ಷಗಳ ದೀರ್ಘಕಾಲದ ಬೆಳವಣಿಗೆ ಇರುವ ಕನ್ನಡದಲ್ಲಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ಮಧ್ಯಕಾಲದ ಕನ್ನಡ (ನಡುಗನ್ನಡ) ಹೊಸಗನ್ನಡ ಎಂಬ ನಾಲ್ಕು ಹಂತಗಳನ್ನು ಹೇಳಲಾಗುತ್ತದೆ. ಅಲ್ಲಿ ತಲೆದೋರಿರುವ ವ್ಯತ್ಯಾಸಗಳನ್ನು ಕೆಲವು ಉದಾಹರಣೆಗಳಿಂದ ಪುಷ್ಟೀಕರಿಸಬಹುದು.

- ಪೂರ್ವದ ಹಳೆಗನ್ನಡದ ಪದಾದಿಯ ವಕಾರ ಹಳೆಗನ್ನಡದಲ್ಲಿ ಬಕಾರವಾಯಿತು.
  ವೆಟ್ಟ – ಬೆಟ್ಟ; ವಿತ್ತು – ಬಿತ್ತು; ವೆಳೆ – ಬೆಳೆ
- ಪೂರ್ವದ ಹಳೆಗನ್ನಡದ ಪದಾದಿಯ ಎ, ಒ ಕಾರಗಳು ಹಳೆಗನ್ನಡದಲ್ಲಿ ಇಕಾರ ಉಕಾರಗಳಾದುವು.
  ಎಱ – ಇಱ; ಕೆಸು – ಕಿಸು; ಕೊಡು – ಕುಡು; ಪೊಗು – ಪುಗು
- ಪೂರ್ವದ ಹಳೆಗನ್ನಡದಲ್ಲಿ ದ್ವಿತೀಯಾ ವಿಭಕ್ತಿ ಆನ್; ಹಳೆಗನ್ನಡದಲ್ಲಿ ಅನ್.
  ಅದಾನ್ – ಅದನ್; ಇದಾನ್ – ಇದನ್; ಕೋಟೆಯಾನ್ – ಕೋಟೆಯನ್
- ಪೂರ್ವದ ಹಳೆಗನ್ನಡದಲ್ಲಿ ಷಷ್ಠೀ ವಿಭಕ್ತಿ ಆ; ಹಳೆಗನ್ನಡದಲ್ಲಿ ಅ. ನರಕದಾ – ನರಕದ ; ಏೞಿನೆಯಾ – ಏೞಿನೆಯ; ಭಟಾರರಾ – ಭಟಾರರ
- ಪೂರ್ವದ ಹಳೆಗನ್ನಡದಲ್ಲಿ ಆಖ್ಯಾತ ವಿಭಕ್ತಿ ಆನ್, ಆರ್, ಓರ್; ಹಳೆಗನ್ನಡದಲ್ಲಿ ಅನ್, ಅರ್
  ಸಂದಾನ್ – ಸಂದನ್; ಕೊಟ್ಟೋರ್ – ಕೊಟ್ಟರ್; ಏಱದಾರ್ – ಏಱದರ್
- ಹಳೆಗನ್ನಡದಲ್ಲಿ ವ್ಯಂಜನಾಂತವಾಗಿದ್ದ ಪದಗಳು ನಡುಗನ್ನಡದಲ್ಲಿ ಸ್ವರಾಂತವಾದುವು.
  ಬಾಳ್ – ಬಾಳು; ಕೇಳ್ –ಕೇಳು; ಅವನ್ – ಅವನು ; ತಾಯ್ – ತಾಯಿ;
- ಹಳೆಗನ್ನಡದ ಸಬಿಂದುಕಪದಗಳಲ್ಲಿ ಕೆಲವು ನಡುಗನ್ನಡದಲ್ಲಿ ಅಬಿಂದುಕಗಳಾದುವು.
  ತೋಂಟ – ತೋಟ; ಬೇಂಟೆ – ಬೇಟೆ; ನೂಂಕು – ನೂಕು; ದಾಂಟು – ದಾಟು
- ಹಳೆಗನ್ನಡದ ಕೆಲವು ವಿಜಾತೀಯ ಸಂಯುಕ್ತಾಕ್ಷರಗಳು ನಡುಗನ್ನಡದಲ್ಲಿ ಸಜಾತೀಯ ಸಂಯುಕ್ತಾಕ್ಷರಗಳಾದುವು.
  ಸೊರ್ಕು – ಸೊಕ್ಕು; ಅರ್ದು – ಅದ್ದು, ಬಿರ್ದು – ಬಿದ್ದು, ಕರ್ಪು – ಕಪ್ಪು
- ಹಳೆಗನ್ನಡದ ವಿಜಾತೀಯ ಒತ್ತಕ್ಷರಗಳಲ್ಲಿನ ಒತ್ತು ನಡುಗನ್ನಡದಲ್ಲಿ ಕೆಲವೆಡೆ ಲೋಪಹೊಂದಿತು.
  ನಾಣ್ಚು – ನಾಚು; ಸೋಲ್ತು – ಸೋತು; ಬರ್ದುಂಕು – ಬದುಕು

- ಹಳೆಗನ್ನಡದಲ್ಲಿ ಬಳಕೆಗೊಳ್ಳುತ್ತಿದ್ದ ಱ, ೞ ಕಾರಗಳು ನಡುಗನ್ನಡದಲ್ಲಿ ಬಿದ್ದು ಹೋದುವು.

  ಅಱಿ – ಅರಿ; ಪೊಱೆ – ಪೊರೆ; ಬಾೞೆ – ಬಾಳೆ ; ಪೊೞೆ – ಹೊಳೆ

- ಹಳಗನ್ನಡದಲ್ಲಿ ಅಚ್ಚಕನ್ನಡ ಪದಗಳ ಆದಿಯಲ್ಲಿದ್ದ ಪಕಾರವು ಹಕಾರವಾಯಿತು.

  ಪೊನ್ – ಹೊನ್ನು; ಪೊಡೆ – ಹೊಡೆ. ಪಗಲ್ – ಹಗಲು . ಪಲವು – ಹಲವು.

- ಹೊಸಗನ್ನಡದಲ್ಲಿ ವಿಭಕ್ತಿ ಪ್ರತ್ಯಯ, ಸಮುಚ್ಚಯ, ಕಾಲಸೂಚಕ ಪ್ರತ್ಯಯ ಮುಂತಾದವುಗಳಿಗೆ ಸಂಬಂಧಿಸಿದಂತೆ ಹಲವಾರು ಬದಲಾವಣೆಗಳಾದುವು.

  ಆನೆ, ಆಳೆ, ಆರೆ, ಈರಿ, ಅದೆ, ಏನೆ, ಏವೆ ಮೊದಲಾದುವು ಹೊಸಗನ್ನಡದಲ್ಲಿ ಹೊಸತಾಗಿ ಕಾಣಿಸಿಕೊಂಡ ಆಖ್ಯಾತ ವಿಭಕ್ತಿಗಳು. ಕೆಲವು ಸರ್ವನಾಮಗಳ ಮತ್ತು ಆಖ್ಯಾತ ವಿಭಕ್ತಿಗಳ ಕೊನೆಗೆ ಲೋಪ ಬಂದಿತು.

  ಹೇಳಿದೆನು – ಹೇಳಿದೆ, ನೋಡಿದನು – ನೋಡಿದ. ಅವನು – ಅವ; ಇವನು – ಇವ

- ಆರಂಭಕಾಲದ ನಡುಗನ್ನಡದಲ್ಲಿಲ್ಲದ ಅರಬಿ, ಫಾರಸಿ, ಆಂಗ್ಲಭಾಷಾ ಶಬ್ದಗಳು ಹೊಸಗನ್ನಡದಲ್ಲಿ ಬಳಕೆಯಾದುವು.

  ಶಿಫಾರಸು; ಫಾಯಿದೆ, ಫೀಜು ; ಆಸ್ಪತ್ರೆ, ಬಸ್ಸು.......

## ಭಾಷಿಕ ವ್ಯತ್ಯಾಸಗಳು

ಭಾಷೆಯು ನದಿಯ ಪ್ರವಾಹದಂತೆ ನಿರಂತರ ಹರಿಯುತ್ತ ಏರಿಳಿತಗಳಿಗೆ ಒಳಗಾಗಿ ಕಾಲದೇಶಗಳ ವ್ಯತ್ಯಾಸದಿಂದ ರೂಪ ಬದಲಾಯಿಸುತ್ತ ಸಾಗುತ್ತದೆ. ಭಾಷೆಯಲ್ಲಿ ಹಾಗೆ ತಲೆದೋರುವ ವ್ಯತ್ಯಾಸಗಳನ್ನು ಭಾಷಿಕ ವ್ಯತ್ಯಾಸಗಳು ಎಂದು ಕರೆಯುತ್ತಾರೆ. ಧ್ವನಿ ವ್ಯತ್ಯಾಸ, ಅರ್ಥ ವ್ಯತ್ಯಾಸ, ಸಾಮ್ಯಮೂಲ ವ್ಯತ್ಯಾಸ ಮತ್ತು ಸ್ವೀಕರಣ ಎಂಬಿವು ಭಾಷಿಕ ವ್ಯತ್ಯಾಸಗಳಲ್ಲಿ ಮುಖ್ಯವಾದುವು. ಉಚ್ಚಾರದಲ್ಲಿ ಸಹಜವಾಗಿ ಕಾಣುವ ಮಿತವ್ಯಯಾಸಕ್ತಿ, ಸೌಲಭ್ಯಾಕಾಂಕ್ಷೆ, ತಪ್ಪು ಸಾಹಚರ್ಯ, ಅನ್ಯಭಾಷಾ ಸಂಸರ್ಗ ಮುಂತಾದವು ಭಾಷಿಕ ವ್ಯತ್ಯಾಸಗಳಿಗೆ ಮೂಲಕಾರಣಗಳು.

## ಧ್ವನಿ ವ್ಯತ್ಯಾಸ

ಒಂದು ಭಾಷೆಯ ಧ್ವನಿಗಳಲ್ಲಿ ಒಂದು ಬಿದ್ದು ಹೋಗಬಹುದು, ಒಂದು ಧ್ವನಿ ಮತ್ತೊಂದು ಧ್ವನಿಯಾಗಿ ಪರಿವರ್ತನೆಗೊಳ್ಳಬಹುದು. ಹೊಸತೊಂದು ಧ್ವನಿ ಬಂದು ಸೇರಿಕೊಳ್ಳಬಹುದು. ಇವೆಲ್ಲವನ್ನೂ ಒಟ್ಟಾಗಿ ಧ್ವನಿ ವ್ಯತ್ಯಾಸಗಳೆಂದು ಗುರುತಿಸಲಾಗುತ್ತದೆ.

ಕೆಲವು ಉದಾಹರಣೆಗಳು :

- **ಅನುಸ್ವಾರ ಲೋಪ**
  ಕಡಂಗು – ಕಡಗು
  ದಾಂಟು – ದಾಟು
  ತೋಂಟ – ತೋಟ

- **ಅಕ್ಷರಪಲ್ಲಟ**
  ಅಸಗ – ಅಗಸ
  ಅಲರು – ಅರಳು
  ಅಹುದು – ಹೌದು

- **ಸ್ವರ ಸಮರೂಪಧಾರಣೆ**
  ಹಸಿರು – ಹಸುರು
  ಬಿರಿಕು – ಬಿರುಕು
  ಅಡಕೆ – ಅಡಿಕೆ
  ಮಡಕೆ – ಮಡಿಕೆ
  ಕರಳು – ಕರುಳು

- **ವ್ಯಂಜನ ಸಮರೂಪಧಾರಣೆ**
  (ಗಱ್ದೆ) ಗರ್ದೆ – ಗದ್ದೆ
  (ಉಱ್ದು) ಉರ್ದು – ಉದ್ದು
  (ಕಱ್ತೆ) ಕರ್ತೆ – ಕತ್ತೆ

- **ಧ್ವನಿ ಪರಿವರ್ತನೆ**
  ಪಲಸು – ಹಲಸು
  ಪಳ್ಳಿ – ಹಳ್ಳಿ
  ಪೊರ್ತು – ಹೊತ್ತು
  ಪೋಗು – ಹೋಗು

## ಅರ್ಥವ್ಯತ್ಯಾಸ

ಒಂದು ಶಬ್ದದ ಅರ್ಥದಲ್ಲಾಗುವ ಬದಲಾವಣೆಯನ್ನು ಅರ್ಥವ್ಯತ್ಯಾಸವೆನ್ನುತ್ತಾರೆ. ಒಂದು ಶಬ್ದವು ಒಂದು ಸನ್ನಿವೇಶದಲ್ಲಿ ಒಂದು ಅರ್ಥದಲ್ಲಿ ಬಳಕೆಯಾಗುತ್ತಿದ್ದು, ಕಾಲಾಂತರದಲ್ಲಿ ಇನ್ನೊಂದು ಸನ್ನಿವೇಶದಲ್ಲಿ ಬೇರೊಂದು ಅರ್ಥದಲ್ಲಿ ಬಳಕೆಯಾದರೆ ಅದು ಅರ್ಥವ್ಯತ್ಯಾಸವೆನ್ನಿಸಿಕೊಳ್ಳುತ್ತದೆ. ಅರ್ಥವಿಸ್ತಾರ, ಅರ್ಥಸಂಕೋಚ, ಉತ್ತಮಾರ್ಥ ಪ್ರಾಪ್ತಿ, ಹೀನಾರ್ಥ ಪ್ರಾಪ್ತಿ ಮತ್ತು ಅರ್ಥಾಂತರ ಎಂದು ಅರ್ಥವ್ಯತ್ಯಾಸವು ಐದು ಪ್ರಕಾರವಾಗಿದೆ.

- **ಅರ್ಥ ವಿಸ್ತಾರ**

ಅರ್ಥದ ವ್ಯಾಪ್ತಿಯು ವಿಸ್ತಾರವಾದರೆ ಅದು ಅರ್ಥವಿಸ್ತಾರವೆನ್ನಿಸಿಕೊಳ್ಳುತ್ತದೆ.

| ಶಬ್ದ | ಹಿಂದಿನ ಅರ್ಥ | ಬದಲಾವಣೆಗೊಂಡ ಅರ್ಥ |
|---|---|---|
| ಎಣ್ಣೆ | ಎಳ್ಳಿನ ಜಿಡ್ಡು | ಎಲ್ಲ ತರದ ಜಿಡ್ಡು |
| ಓಲೆ | ಎಲೆಯಿಂದ ಮಾಡಿದ ಸುರುಳಿ ಸುತ್ತಿದ ಕಿವಿಯ ಆಭರಣ | ಕಿವಿಯ ಆಭರಣ ಬೆಂಡೋಲೆ, ಚಿನ್ನದೋಲೆ, ವಜ್ರದೋಲೆ |
| ಚೆಂಬು | ತಾಮ್ರದಿಂದ ತಯಾರಿಸಿದ ವಿಶಿಷ್ಟ ಆಕಾರದ ಪಾತ್ರೆ | ಆ ಆಕಾರದ ಪಾತ್ರೆಗಳಿಗೆಲ್ಲ ಅನ್ವಯಿಸುತ್ತದೆ. ಬೆಳ್ಳಿ ಚೆಂಬು, ಹಿತ್ತಾಳೆ ಚೆಂಬು. |

- **ಅರ್ಥ ಸಂಕೋಚ**

ವಿಸ್ತಾರವಾದ ಅರ್ಥದ ವ್ಯಾಪ್ತಿಯು ಸೀಮಿತವಾಗುವುದು.

| | | |
|---|---|---|
| ನೆಯ್ | ಎಲ್ಲ ಜಿಡ್ಡುಗಳು | ತುಪ್ಪ |
| ಪೊನ್ | ಎಲ್ಲ ಲೋಹಗಳು | ಚಿನ್ನ |
| ಸೀರೆ | ಎಲ್ಲ ಉಡುವ ವಸ್ತ್ರಗಳು | ಹೆಂಗುಸರು ಉಡುವ ವಸ್ತ್ರ |
| ಶ್ರಾದ್ಧ | ಶ್ರದ್ಧೆಯಿಂದ ಮಾಡುವ ಕೆಲಸ | ತಿಥಿ |

- **ಉತ್ತಮಾರ್ಥ ಪ್ರಾಪ್ತಿ**

ಒಂದು ಕಾಲಕ್ಕೆ ಹೀನ ಅಥವಾ ಕೀಳು ಅರ್ಥ ಪಡೆದಿದ್ದ ಶಬ್ದಗಳು ಉತ್ತಮಾರ್ಥ ಪಡೆಯುವುದು.

| | | |
|---|---|---|
| ಹೊಂದು | ಸಾಯು | ಪಡೆಯು |
| ಸಭಿಕ | ಕುಡುಕ | ಸಭಾಸದ |
| ಸಭ್ಯ | ಸಭೆಯಲ್ಲಿರುವವನು | ಯೋಗ್ಯ |

- **ಹೀನಾರ್ಥ ಪ್ರಾಪ್ತಿ**

ಒಂದು ಕಾಲಕ್ಕೆ ಉತ್ತಮ, ಶ್ರೇಷ್ಠ ಅರ್ಥ ಕೊಡುತ್ತಿದ್ದ ಶಬ್ದಗಳು ಹೀನ, ಕೀಳು ಅರ್ಥವನ್ನು ಕೊಡುವುದು

| | | |
|---|---|---|
| ಗಮಾರ | ಹಳ್ಳಿಯವನು | ದಡ್ಡ |
| ಆಳ್ | ಮನುಷ್ಯ | ಸೇವಕ |
| ನಾರು | ಸುವಾಸನೆ ಬೀರು | ದುರ್ಗಂಧ ಬೀರು |

- **ಅರ್ಥಾಂತರ**

ಒಂದು ಶಬ್ದದ ಅರ್ಥವು ಹಿಗ್ಗದೆ, ಕುಗ್ಗದೆ, ಹೀನ ಯಾ ಉತ್ತಮವಾಗದೆ ಬೇರೆಯೇ ಆಗಿದ್ದರೆ ಅರ್ಥಾಂತರವೆನಿಸುವುದು.

| | | |
|---|---|---|
| ಅಮ್ಮ | ತಂದೆ | ತಾಯಿ |
| ಸಂಭ್ರಮ | ಗೊಂದಲ | ಸಡಗರ |
| ಭದ್ರ | ಮಂಗಳ | ದೃಢ |

ಇತರ ಭಾಷೆಗಳಿಂದ ಎರವಲು ಪಡೆದ ಶಬ್ದಗಳಲ್ಲಿ ಹೆಚ್ಚಾಗಿ ಅರ್ಥಾಂತರ ಕಾಣಿಸಿಕೊಳ್ಳುತ್ತದೆ.

## ಅನ್ಯಭಾಷಾ ಸ್ವೀಕರಣ

ಜೀವಂತ ಭಾಷೆಗೆ ಹೊಸ ಹೊಸ ಶಬ್ದಗಳು ಸೇರ್ಪಡೆಯಾಗುತ್ತಲೇ ಇರುತ್ತವೆ. ಆ ಶಬ್ದಗಳು ಹೊಸ ಸೃಷ್ಟಿಯಾಗಿರಬಹುದು. ಇಲ್ಲವೆ, ಅನ್ಯಭಾಷೆಯಿಂದ ಸ್ವೀಕರಿಸಿದವುಗಳಾಗಿರಬಹುದು. ಪರಭಾಷೆಗಳ ಪ್ರಭಾವದಿಂದ ಸೇರ್ಪಡೆಗೊಳ್ಳುವ ಪದಗಳೆ 'ಸ್ವೀಕರಣಗಳು' ಅಥವಾ ಎರವಲು ಪದಗಳು. ಸಾಮಾಜಿಕ, ರಾಜಕೀಯ, ಶೈಕ್ಷಣಿಕ,ವ್ಯಾಪಾರ ವ್ಯವಹಾರ, ಪ್ರವಾಸ ಸಂಬಂಧವಾದ ಸಂಪರ್ಕಗಳ ಪರಿಣಾಮವಾಗಿ ಒಂದು ಭಾಷೆಗೆ ಪರಭಾಷೆಗಳಿಂದ ಶಬ್ದಗಳು ಬಂದು ಸೇರುತ್ತವೆ. ಆಗ ಎಷ್ಟೋ ವೇಳೆ ತಮ್ಮಲ್ಲಿರುವ ಶಬ್ದಗಳನ್ನು ಬಿಟ್ಟು ಪರಭಾಷಾ ಶಬ್ದಗಳನ್ನೇ ಬಳಸುವುದುಂಟು. ಅಂಥ ಸಂದರ್ಭಗಳಲ್ಲಿ ದೇಶೀ ಶಬ್ದಗಳು ಕಣ್ಮರೆಯಾಗುತ್ತವೆ. ಕನ್ನಡದ ಅಱಿಲ್ (ನಕ್ಷತ್ರ), ನೇಸಱ್ (ಸೂರ್ಯ) ತಿಂಗಳ್ (ಚಂದ್ರ) ಅಳೆ (ಮಜ್ಜಿಗೆ) ಮುಂತಾದ ಶಬ್ದಗಳು ಬಳಕೆಯಿಂದ ಜಾರಿರುವುದು ಇದಕ್ಕೆ ನಿದರ್ಶನ.

ಕನ್ನಡ ಭಾಷೆಗೆ ಸಂಸ್ಕೃತ, ಪ್ರಾಕೃತ, ತಮಿಳು, ತೆಲುಗು, ತುಳು, ಮಲಯಾಳ, ಮರಾಠಿ, ಹಿಂದಿ ಮೊದಲಾದ ಭಾರತೀಯ ಭಾಷೆಗಳಿಂದಲೂ ಪೋರ್ಚುಗೀಸ್, ಅರೇಬಿಕ್, ಫಾರಸಿ ಮೊದಲಾದ ವಿದೇಶೀ ಭಾಷೆಗಳಂದಲೂ ಎರವಲು ಪದಗಳು ಬಂದಿವೆ.

ಉದಾ :

| | | |
|---|---|---|
| ಸಂಸ್ಕೃತ | : | ಸ್ನೇಹ, ಸ್ಥಾನ, ಕಾರ್ಯ, ವಿದ್ಯೆ, ಸೂರ್ಯ, ಗ್ರಹ ಇತ್ಯಾದಿ |
| ಪ್ರಾಕೃತ | : | ಕಜ್ಜ, ಠಾಣ, ವಂಕ, ಪಡಿ ಮೊದಲಾದುವು |
| ಫಾರಸಿ | : | ವಕೀಲ, ಕಮಾನು, ಸಿಪಾಯಿ, ಜವಾನ, ಶಿಸ್ತು ಇತ್ಯಾದಿ |
| ಅರೇಬಿಕ್ | : | ಕಸಬು, ಗಲೀಜು, ದಾವೆ, ಪಾವತಿ, ಜಾಮೀನು ಇತ್ಯಾದಿ |
| ಪೋರ್ಚುಗೀಸ್ | : | ಬಟಾಟೆ, ಪಪಾಯಿ, ಅನನಾಸು, ಪಿಪಾಯಿ ಇತ್ಯಾದಿ |
| ಇಂಗ್ಲೀಷ್ | : | ಕಾರು, ಡ್ರೈವರ್, ಬ್ರೇಕ್‌ಫಾಸ್ಟ್, ಆಸ್ಪತ್ರೆ, ಡಾಕ್ಟರು ಇತ್ಯಾದಿ |

ಪರಭಾಷೆಗಳಿಂದ ನೇರವಾಗಿ ಇಲ್ಲವೆ ತದ್ಭವಗಳನ್ನಾಗಿ ಮಾಡಿ ಶಬ್ದಗಳನ್ನು ಎರವಲು ಪಡೆದು ಕೊಳ್ಳಲಾಗುತ್ತದೆ. ಇದಲ್ಲದೆ ಭಾಷಾಂತರದ ಮೂಲಕವೂ ಸ್ವೀಕರಣ ಕಾರ್ಯ ನಡೆಯುತ್ತದೆ. ಹಲ್ಲುಪುಡಿ (Tooth Powder), ಸುತ್ತೋಲೆ (Circular), ವಾರ್ತಾಪತ್ರಿಕೆ (News Paper) ಒತ್ತು ಕಾಗದ (Blotting Paper) ಮೊದಲಾದುವು ಭಾಷಾಂತರ ಸ್ವೀಕರಣಕ್ಕೆ ನಿದರ್ಶನಗಳು

## ಭಾಷಾ ಪ್ರಭೇದಗಳು

ನಿರಂತರವಾಗಿ ಬೆಳವಣಿಗೆಯ ಲಕ್ಷಣಗಳನ್ನು ತೋರುವ ಯಾವುದೇ ಜೀವಂತ ಭಾಷೆ ಸದಾಕಾಲವೂ ಒಂದೇ ತೆರನಾಗಿರುವುದು ಅಸಾಧ್ಯ. ಭಾಷೆ ತನ್ನ ರಚನೆಯ ನಿಯಮಗಳ ಚೌಕಟ್ಟಿನೊಳಗೇ ಬೆಳವಣಿಗೆ ಹೊಂದುತ್ತಾ ಹೋಗುತ್ತದೆ. ಒಂದು ಭಾಷೆಯ ಬೆಳವಣಿಗೆಯು ಆ ಭಾಷೆ ಬಳಕೆಯಲ್ಲಿರುವ ಪ್ರದೇಶಗಳ ವೈಶಾಲ್ಯ, ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳು ಹಾಗೂ ಅನ್ಯಭಾಷೆಗಳ ಸಂಪರ್ಕ ಮೊದಲಾದ ಹಲವು ಅಂಶಗಳ ಮೇಲೆ ನಿಂತಿದೆ. ಭಾಷಾ ಪ್ರದೇಶ ವಿಸ್ತಾರವಾಗಿದ್ದಾಗ ಒಂದೆಡೆ ತಲೆದೋರಿದ ವ್ಯತ್ಯಾಸಗಳು ಮತ್ತೊಂದೆಡೆಗೆ ಪಸರಿಸದೆ ಭಿನ್ನರೂಪಗಳಿಗೆ ಕಾರಣವಾಗುತ್ತವೆ. ಇದರ ಪರಿಣಾಮವಾಗಿ ಆಡುನುಡಿ ರೂಪದಲ್ಲಿ ವಿಭಿನ್ನ ಪ್ರಾದೇಶಿಕ ಪ್ರಭೇದಗಳು ಕಾಣಿಸಿಕೊಳ್ಳುತ್ತವೆ. ಅಂಥ ಪ್ರಬೇಧಗಳನ್ನು ಪ್ರಾದೇಶಿಕ ಉಪಭಾಷೆಗಳೆಂದು ಕರೆಯಲಾಗುತ್ತದೆ. ಪ್ರಾದೇಶಿಕ ಉಪಭಾಷೆಗಳ ನಿರ್ಮಾಣದಲ್ಲಿ ಪರಭಾಷೆಗಳ ಪಾತ್ರವೂ ಹಿರಿದಾಗಿದೆ. ಗುಲ್ಬರ್ಗ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ ಮತ್ತು ಮೈಸೂರು ಕನ್ನಡ ಎಂಬಿವು ಕನ್ನಡದ ಪ್ರಧಾನ ಪ್ರಾದೇಶಿಕ ಉಪಭಾಷೆಗಳು. ಈ ಉಪಭಾಷೆಗಳ ಮೇಲೆ ಅನುಕ್ರಮವಾಗಿ ಉರ್ದು, ಮರಾಠಿ, ತುಳುಮಲಯಾಳ ಮತ್ತು ತಮಿಳುಮಲಯಾಳಗಳ ಪ್ರಭಾವವನ್ನು ಗುರುತಿಸಬಹುದಾಗಿದೆ.

ಈ ಉಪಭಾಷೆಗಳ ಕೆಲವು ಪ್ರಯೋಗಗಳನ್ನು ಗಮನಿಸಬಹುದು:

ಮಂಗಳೂರು ಕನ್ನಡದಲ್ಲಿ 'ಹೂ ಕೊಯ್' ಎಂಬಲ್ಲಿ ಗುಲ್ಬರ್ಗ ಕನ್ನಡದಲ್ಲಿ 'ಹೂ ಹರಿ' ಎನ್ನುತ್ತಾರೆ. ಮೈಸೂರು ಕನ್ನಡದಲ್ಲಿ 'ಜೋರಾಗಿ ಕಿರಿಚುತ್ತಾನೆ' ಎಂದರೆ ಗುಲ್ಬರ್ಗ ಕನ್ನಡದಲ್ಲಿ 'ಜಗ್ಗಿ ಒದರ್ಲಕ್ಕ ಹತ್ಯಾನ' ಎನ್ನುತ್ತಾರೆ. ಮಂಗಳೂರು ಕನ್ನಡದಲ್ಲಿ 'ಊಟಕ್ಕೆ ಬನ್ನಿ' ಎಂದರೆ ಗುಲ್ಬರ್ಗ ಕನ್ನಡದಲ್ಲಿ 'ಅನ್ನ ತಿನ್ಲಕ್ಕ ಬರ್ರಿ' ಎನ್ನುತ್ತಾರೆ.

ಉರ್ದುವಿನ ಪ್ರಭಾವ ಗುಲ್ಬರ್ಗ ಕನ್ನಡದ ಮೇಲಾಗಿರುವುದಕ್ಕೆ ಒಂದು ಒಳ್ಳೆಯ ಉದಾಹರಣೆ :

ಅಂವ ಅಂದಾಕಿ ನಾಭೀ ನಿಮ್ ಸರಿ ಬರ್‍ತೆ

(ಅವನು ಅಂದನಲ್ಲಾ ಏನೆಂದರೆ ನಾನು ಕೂಡಾ ನಿಮ್ಮೊಡನೆ ಬರುತ್ತೇನೆ)

ಕೆಲವು ಶಬ್ದಗಳು ರೂಢಿಯ ಕಾರಣ ಒಂದೊಂದು ಪ್ರದೇಶದಲ್ಲಿ ಒಂದೊಂದು ಅರ್ಥದಲ್ಲಿ ಪ್ರಯೋಗವಾಗುತ್ತಿವೆ. ಮೈಸೂರಿನಲ್ಲಿ 'ತಿಂಡಿ' ಎಂದರೆ ಆಹಾರ / ತಿನಿಸು ಎಂದರ್ಥ; ಧಾರವಾಡದ ಕಡೆ ತುರಿಕೆ ಎಂದರ್ಥ; ತಿನಿಸು ಎಂದರೆ ಮೈಸೂರು ಕಡೆ ತೀಟೆ ಎಂದರ್ಥ; ಧಾರವಾಡ ಕನ್ನಡದಲ್ಲಿ ತಿಂಡಿ ಎಂದರ್ಥ. ಮೈಸೂರು ಕನ್ನಡದಲ್ಲಿ ಬಚ್ಚಲು ಎಂದರೆ ಚರಂಡಿ, ಧಾರವಾಡದಲ್ಲಿ ಸ್ನಾನದ ಮನೆ. ಅದೇ ಬಚ್ಚಲು ಮನೆ ಎಂದರೆ ಮೈಸೂರು ಕನ್ನಡದಲ್ಲಿ ಸ್ನಾನದ ಮನೆ ಎಂದರ್ಥ. ಅಮ್ಮ ಎಂಬುದು ಮೈಸೂರು, ಮಂಗಳೂರು ಕಡೆ ತಾಯಿ ಎಂಬರ್ಥಕೊಡುವ ಗೌರವ ಸಂಬೋಧನೆ, ಅವ್ವ ಎಂಬುದು ಗ್ರಾಮ್ಯ ಬಳಕೆ. ಆದರೆ ಧಾರವಾಡದ ಕಡೆ ಅಮ್ಮ ಎಂದರೆ ವಿಧವೆ; ಅವ್ವ ಎಂಬುದು ತಾಯಿಯನ್ನೂ ಇತರ ಸ್ತ್ರೀಯರನ್ನೂ ಗೌರವದಿಂದ ಕರೆಯುವ ಶಬ್ದ.

ಒಂದು ಸಮಾಜದ ಭಾಷೆಗೂ ಇನ್ನೊಂದು ಸಮಾಜದ ಭಾಷೆಗೂ ಅಂತರವಿರುವುದರಿಂದ ಸಾಮಾಜಿಕ ಉಪಭಾಷೆಗಳು ನಿರ್ಮಾಣವಾಗುತ್ತವೆ. ಬೈರಕನ್ನಡ, ಕೋಟಕನ್ನಡ, ಹವ್ಯಕ ಕನ್ನಡ, ಸೋಲಿಗರ ಕನ್ನಡ ಮೊದಲಾದುವು ಸಾಮಾಜಿಕ ಉಪಭಾಷೆಗಳು.

ಒಂದು ಭಾಷಾ ಪ್ರದೇಶದಲ್ಲಿರುವ ಎಲ್ಲ ಜನರೂ ಅರ್ಥ ಮಾಡಿಕೊಳ್ಳುವಂಥ ಭಾಷಾರೂಪವನ್ನೆ ಪ್ರಮಾಣ ಭಾಷೆ ಅಥವಾ ಶಿಷ್ಟಭಾಷೆ (Standard Language) ಎನ್ನುತ್ತಾರೆ. ಆಡಳಿತ, ಶಿಕ್ಷಣ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಶಿಷ್ಟಕನ್ನಡ ರೂಪವನ್ನೇ ಬಳಸಲಾಗುತ್ತದೆ.

(ಸಂಗ್ರಹ)

### ಪದಗಳ ಅರ್ಥ

ಶಿಖರ ಪ್ರಾಯ – ಶ್ರೇಷ್ಠ
ಸರ್ವಾಂಗೀಣ – ಸರ್ವಾಂಗಕ್ಕೂ ಆವರಿಸಿದ, ಸಮಗ್ರ
ಸಂಕೇತ – ಸಂಜ್ಞೆ, ಸೂಚಕ ಗುರುತು
ಅನುಲಕ್ಷಿಸು – ಗಮನಿಸು, ಗಮನವಿಟ್ಟು ನೋಡು

### ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ

- ಭಾಷೆಯ ಪ್ರಯೋಜನವೇನು?
- ಪ್ರಮಾಣ ಭಾಷೆ ಎಂದರೇನು?
- ಕನ್ನಡದಲ್ಲಿ ಮರೆಯಾಗಿರುವ ಕೆಲವು ದೇಶೀಪದಗಳು ಯಾವುವು?
- ದ್ರಾವಿಡ ಭಾಷೆಗಳು ಯಾವುವು?

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಮನುಷ್ಯ ಜೀವನದಲ್ಲಿ ಭಾಷೆಯ ಪಾತ್ರವೇನು?
- ಭಾಷೆಯ ಕುರಿತಾಗಿರುವ ವ್ಯಾಖ್ಯೆಯನ್ನು ಸ್ಪಷ್ಟಪಡಿಸಿರಿ.
- ಪೂರ್ವದ ಹಳಗನ್ನಡವು ಹಳಗನ್ನಡವಾಗುವಾಗ ಕಂಡುಬರುವ ಐದು ಭಾಷಿಕ ಬದಲಾವಣೆಗಳನ್ನು ತಿಳಿಸಿರಿ.
- ಧ್ವನಿವ್ಯತ್ಯಾಸ ಹೊಂದಿರುವ ಯಾವುದಾದರೂ ಹತ್ತು ಪದಗಳನ್ನು ವಿವರಿಸಿರಿ.

## ಚಟುವಟಿಕೆಗಳು

ಕಾಸರಗೋಡು ಕನ್ನಡದಲ್ಲಿ ಕಾಣುವ ಯಾವುದಾದರೂ ಹತ್ತು ಮಲಯಾಳ ಸ್ವೀಕರಣಗಳನ್ನು ಗುರುತಿಸಿ ವಿವರಿಸಿರಿ.

## ಚರ್ಚಿಸಿರಿ

ಒಂದು ಭಾಷೆಯಲ್ಲಿ ಪರಭಾಷಾ ಸ್ವೀಕರಣಗಳು ಅನಿವಾರ್ಯವೇ? ಎಂಬುದರ ಬಗ್ಗೆ ಚರ್ಚಾಗೋಷ್ಠಿಯಲ್ಲಿ ಮಂಡಿಸಲು ಒಂದು ಟಿಪ್ಪಣಿಯನ್ನು ತಯಾರಿಸಿರಿ.

## ಭಾಷಾಭ್ಯಾಸ

ಧ್ವನಿ ವ್ಯತ್ಯಾಸ

ಕೆಳಗಿನ ಪದಗಳಲ್ಲಿರುವ ಧ್ವನಿ ವ್ಯತ್ಯಾಸಗಳನ್ನು ಗಮನಿಸಿರಿ.

ಆಣೆ – ಆಣಿ, ಮನೆ – ಮನಿ, ಕಥೆ – ಕಥಿ, ತಲೆ– ತೆಲಿ, ಮದುವೆ – ಮದಿವಿ

ಮೇಲಿನಂತೆ ಧ್ವನಿ ವ್ಯತ್ಯಾಸಗೊಂಡಿರುವ ಪದಗಳನ್ನು ಪಠ್ಯಪುಸ್ತಕದಿಂದ ಸಂಗ್ರಹಿಸಿರಿ.

## ಹೆಚ್ಚಿನ ಓದಿಗೆ

ಕನ್ನಡ ಭಾಷಾ ಶಾಸ್ತ್ರ – ರಾ.ಯ. ಧಾರವಾಡಕರ

ಭಾಷೆ ಮತ್ತು ಭಾಷಾವಿಜ್ಞಾನ – ಡಾ. ಕೆಂಪೇಗೌಡ

ಕನ್ನಡ ಭಾಷೆಯ ಚರಿತ್ರೆ – ಎಂ.ಎಚ್. ಕೃಷ್ಣಯ್ಯ

ಕನ್ನಡ ಭಾಷೆ – ಪ್ರಾದೇಶಿಕ ವೈವಿಧ್ಯ – ಬಿ. ರಾಮಚಂದ್ರರಾವ್

## ಘಟಕ ಮೌಲ್ಯಮಾಪನ

1. ಪಂಚದ್ರಾವಿಡ ಭಾಷೆಗಳು ಯಾವುವು?
2. 'ತುಳು' ಎಂಬ ಪದಕ್ಕೆ ಲೇಖಕರು ನೀಡಿದ ಅರ್ಥವೇನು?
3. 'ಒಪ್ಪು' ಇದರ ನಿಷೇಧಾರ್ಥವನ್ನು ಬರೆಯಿರಿ.
4. ಚಾರಣಿಗರಿಗೆ ಕೃಷಿಕರು ತೋರಿದ ಉದಾರತೆಯೇನು?
5. ಅನುಪಮ ನಿರಂಜನರು ಒಮ್ಮೆ ಕಾವ್ಯ ರಚನೆಯನ್ನು ಕೈಬಿಡಲು ಕಾರಣವೇನು?
6. ಅನ್ಯಭಾಷಾ ಸಂಪರ್ಕದಿಂದ ಭಾಷೆಗೆ ಆಗುವ ಒಳಿತು-ಕೆಡುಕುಗಳೇನು?
7. ತುಳುವರ ಗರಡಿಯ ವೈಶಿಷ್ಟ್ಯಗಳನ್ನು ತಿಳಿಸಿರಿ.
8. 'ಪಾಡಿ' ಪದದಿಂದ ಕೊನೆಗೊಳ್ಳುವ ಆರು ಸ್ಥಳನಾಮಗಳನ್ನು ಬರೆದು ಅವುಗಳ ಸ್ವಾರಸ್ಯವನ್ನು ಸೂಚಿಸಿರಿ.
9. ನಿಮ್ಮ ಬದುಕಿನಲ್ಲಿ ಬಂದಿರುವ ಯಾವುದಾದರೂ ಸಿಹಿ-ಕಹಿ ಅನುಭವಗಳನ್ನು ಬರೆಯಿರಿ.
10. ನಿಮ್ಮ ಪ್ರವಾಸದ ಅನುಭವವನ್ನು ವಿವರಿಸಿ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ.
11. ಡಾ. ಅನುಪಮಾ ನಿರಂಜನರು ಬಿಡುವಿಲ್ಲದ ವೈದ್ಯಕೀಯ ಚಟುವಟಿಕೆಗಳ ಮಧ್ಯೆಯೂ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು?
12. ಪ್ರವಾಸಿ ತಾಣಗಳ ಸ್ವಚ್ಛತೆಯನ್ನು ಕಾಪಾಡುವ ಕುರಿತು ಜಾಗೃತಿ ಮೂಡಿಸಲು ಸಹಾಯಕವಾದ ಎರಡು ಘೋಷವಾಕ್ಯಗಳನ್ನು ಬರೆಯಿರಿ.

# ನಾಟಕ ರಂಗ

ಸಾಹಿತ್ಯ ಪ್ರಕಾರಗಳಲ್ಲಿ ನಾಟಕಕ್ಕೆ ತನ್ನದೇ ಆದ ಸ್ಥಾನವಿದೆ. ಅದು ಹಲವು ಕಲೆಗಳ ಸಂಗಮವಾಗಿದೆ. ನಮ್ಮ ಭಾವನೆಗಳನ್ನು ಅಭಿನಯದ ಮೂಲಕ ವ್ಯಕ್ತಪಡಿಸಲು ನಾಟಕವು ಸಮರ್ಥ ಮಾಧ್ಯಮವಾಗಿದೆ. 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಸೂಕ್ತಿ ನಾಟಕದ ಮಹತ್ವವನ್ನು ಸಾರುತ್ತದೆ. ಭಾರತೀಯ ಸಾಹಿತ್ಯ ಲೋಕದಲ್ಲಿ ಕಾಳಿದಾಸ, ಶೂದ್ರಕ, ಭಾಸ, ಭವಭೂತಿ ಮುಂತಾದ ಸಂಸ್ಕೃತ ನಾಟಕಕಾರರು ಭವ್ಯವಾದ ಸ್ಥಾನವನ್ನು ಪಡೆದಿದ್ದಾರೆ.

ಕನ್ನಡದಲ್ಲಿ ಸಂಸ್ಕೃತ ನಾಟಕಗಳ ಭಾಷಾಂತರದ ಮೂಲಕ ನಾಟಕ ಸಾಹಿತ್ಯ ಆರಂಭವಾಯಿತು. ಬಳಿಕ ಸ್ವತಂತ್ರ ನಾಟಕಗಳು ಬಂದುವು. ಕುವೆಂಪು, ಕೈಲಾಸಂ, ಶ್ರೀರಂಗ, ಲಂಕೇಶ್, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್ ಮೊದಲಾದವರು ಈ ಕ್ಷೇತ್ರದಲ್ಲಿ ಪ್ರಸಿದ್ಧರು. ಕನ್ನಡದಲ್ಲಿ ನಾಟಕ ಸಾಹಿತ್ಯವು ಬೆಳೆದುಬಂದುದನ್ನು ಪರಿಚಯಿಸುವ ಭಾಗವೊಂದನ್ನು ಇಲ್ಲಿ ನೀಡಲಾಗಿದೆ.

ನಾಟಕವು ಓದಿನ ಮೂಲಕ ಹಾಗೂ ರಂಗ ಪ್ರಯೋಗದ ಮೂಲಕ ಆಸ್ವಾದನೆಯನ್ನು ನೀಡಬಲ್ಲುದು. ವಿದ್ಯಾರ್ಥಿಗಳು ಅಭಿನಯ ಕೌಶಲ್ಯವನ್ನು ಮತ್ತು ರಂಗ ಪರಿಣತಿಯನ್ನು ಪಡೆಯುವುದರ ಮೂಲಕ ಅವರ ಬಹುಮುಖ ಪ್ರತಿಭೆಯನ್ನು ಬೆಳಗಿಸಲು ನಾಟಕ ಕಲಿಕೆಯಲ್ಲಿ ಅವಕಾಶವಿದೆ.



ಪುರಾಣದ ಕಥಾವಸ್ತುವನ್ನು ಭಿನ್ನಪರಿವೇಷದಲ್ಲಿ ನೋಡುವ ಬಗೆಯ ನಾಟಕಗಳ ಒಂದು ಪರಂಪರೆಯನ್ನು ಕನ್ನಡ ನಾಟಕರಂಗದಲ್ಲಿ ನಾವು ಕಾಣುತ್ತೇವೆ. ಗಿರೀಶ ಕಾರ್ನಾಡರ 'ಯಯಾತಿ', ಚದುರಂಗರ 'ಬಿಂಬ' ಮೊದಲಾದ ನಾಟಕಗಳನ್ನು ಇಲ್ಲಿ ಹೆಸರಿಸಬಹುದು.

ಪ್ರಸ್ತುತ ಘಟಕದಲ್ಲಿ ಅಳವಡಿಸಲಾದ 'ಮಂಥರಾ' ನಾಟಕವು ರಾಮಾಯಣದ ಕಥೆಯಾದರೂ ಅಲ್ಲಿ ವ್ಯಕ್ತವಾಗುವುದು ಆಧುನಿಕ ಸಂವೇದನೆ. ಈ ನಾಟಕದಲ್ಲಿ ಹೆಣ್ಣಿನ ಅಂತರಂಗದ ಇನ್ನೊಂದು ಚಿತ್ರವನ್ನು, ಮಾನವೀಯ ಮಿಡಿತಗಳನ್ನು ಕಾಣಬಹುದು.

## ಕಲಿಕಾ ಸಾಧನೆಗಳು

- ಅಭಿನಯಕಲೆಯ ಸಾಮರ್ಥ್ಯವನು– ಬೆಳೆಸಿಕೊಳ್ಳುವರು, ಅಭಿನಯಿಸುವರು.
- ಕಥೆಯನು– ನಾಟಕ ರೂಪಕ್ಕೆ ಬದಲಾಯಿಸುವ ಕೌಶಲವನು– ಪಡೆದುಕೊಂಡು ಪ್ರಯೋಗಿಸುವರು.
- ನಾಟಕ ರಚನಾ ತಂತ್ರಗಳನು– ಅರಿತುಕೊಳ್ಳುವರು, ನಾಟಕ ರಚಿಸುವರು.
- ಸಾಮಾಜಿಕ ಜೀವನದಲ್ಲಿ ದೃಶ್ಯಮಾಧ್ಯಮಗಳ ಪ್ರಭಾವವನು– ಸೂಕ್ಷ್ಮವಾಗಿ ಗಮನಿಸಿ ವಿಮರ್ಶೆಯನು– ಬರೆಯುವರು.
- ಮಾಹಿತಿತಂತ್ರಜ್ಞಾನವನು– ಉಪಯೋಗಿಸಿ ದೃಶ್ಯಮಾಧ್ಯಮಗಳನು– ಪರಿಣಾಮಕಾರಿಯಾಗಿ ಉಪಯೋಗಿಸುವರು.
- ಕನ–ಡ ನಾಟಕ ಸಾಹಿತ್ಯದ ಹುಟ್ಟು ಬೆಳವಣಿಗೆಯ ಪರಿಚಯವನು– ಮಾಡಿಕೊಳ್ಳುವರು. ಲೇಖನ ಬರೆಯುವರು.
- ನಾಟಕವನು– ಓದಿ ಆಸ್ವಾದಿಸಿ ಆಸ್ವಾದನಾ ಟಿಪ್ಪಣಿಯನು– ಬರೆಯುವರು.
- ಪುರಾಣ ಕಥೆಗಳಲ್ಲಿಯೂ ಹುದುಗಿರುವ ಸಮಕಾಲೀನ ಅಂಶಗಳನು– ತಿಳಿದುಕೊಳ್ಳುವರು. ವಿಮರ್ಶಾಲೇಖನವನು– ಬರೆಯುವರು.

# ಕನ್ನಡದಲ್ಲಿ ನಾಟಕ ಸಾಹಿತ್ಯ

ಸಾಹಿತ್ಯದ ಪ್ರಕಾರಗಳಲ್ಲಿ ನಾಟಕವು ಎಲ್ಲಕ್ಕಿಂತ ಭಿನ್ನವೂ ವಿಶಿಷ್ಟವೂ ಆದದ್ದು. ಉಳಿದ ಸಾಹಿತ್ಯ ಕೃತಿಗಳಂತೆ ಇದನ್ನು ಓದಿ ಸಂತೋಷಿಸಬಹುದು ಮಾತ್ರವಲ್ಲ, ಸಮರ್ಥ ನಿರ್ದೇಶಕನೊಬ್ಬ ಸಮರ್ಥ ನಟನಟಿಯರ ಮೂಲಕ ರಂಗಸ್ಥಳದ ಮೇಲೆ ಪ್ರದರ್ಶಿಸಿದಾಗ ಅದನ್ನು ಪ್ರತ್ಯಕ್ಷ ಕಂಡು ಆಸ್ವಾದಿಸಬಹುದು. ಕನ್ನಡದಲ್ಲಿ ನಾಟಕವು ಬೆಳೆದು ಬಂದುದರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡಲಾಗಿದೆ.

ಕನ–ಡದಲ್ಲಿ ನಾಟಕ ಸಾಹಿತ್ಯ ಪರಂಪರೆಯು ೧೬೮೦ ರ ಸುಮಾರಿಗೆ ರಚಿತವಾದ ಸಿಂಗರಾರ್ಯನ ಮಿತ್ರವಿಂದಾ ಗೋವಿಂದ ಎಂಬ ಅನುವಾದಿತ ನಾಟಕದಿಂದ ಆರಂಭವಾಗುತ್ತದೆ. ಅದಕ್ಕೂ ಮೊದಲು ಕನ–ಡದಲ್ಲಿ ನಾಟಕಗಳು ರಚನೆಗೊಂಡಿರಬಹುದಾದರೂ ಅವು ಉಪಲಬ್ಧವಿಲ್ಲ. ನಾಟಕದ ಬಗ್ಗೆ ಪ್ರಾಚೀನ ಸಾಹಿತ್ಯದಲ್ಲಿ ಕೆಲವೊಂದು ಉಲ್ಲೇಖಗಳು ಮಾತ್ರ ದೊರೆಯುತ್ತವೆ. ಕನ–ಡದಲ್ಲಿ ನಾಟಕ ಸಾಹಿತ್ಯದ ಹೆಚ್ಚಿನ ರಚನೆ ಆರಂಭಗೊಂಡುದು ೧೯ನೇ ಶತಮಾನದ ಕೊನೆಯ ಭಾಗದಲ್ಲಿ. ಪಾರಸಿ ಕಂಪೆನಿಯೊಂದು ಬಂದು ನಾಟಕಗಳನು– ಪ್ರಯೋಗಿಸಿದಾಗ ಅದುವರೆಗೆ ಜನಪದ ರಂಗಭೂಮಿಯ ಪರಿಚಯಮಾತ್ರವಿದ್ದ ಜನರಿಗೆ ಹೊಸದೊಂದು ಲೋಕವು ತೆರೆದುಕೊಂಡಿತು. ಪಾರಸಿ ನಾಟಕಗಳ ಅಭಿನಯ ವೈಶಿಷ್ಟ್ಯ, ರಂಗಸಾಧ್ಯತೆ, ರಂಗಪರಿಕರ ಇತ್ಯಾದಿಗಳು ಮೈಸೂರು ಅರಸರಾಗಿದ್ದ ಜಯಚಾಮರಾಜಒಡೆಯರನು– ವಿಶೇಷವಾಗಿ ಆಕರ್ಷಿಸಿದವು. ಇದರ ಪ್ರೇರಣೆಯಿಂದ ಮೈಸೂರು ಅರಮನೆಯಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಎಂಬ ನಾಟಕ ಸಂಸ್ಥೆ ಆರಂಭವಾಯಿತು. ಈ ಸಂಸ್ಥೆಯ ಆಶ್ರಯದಲ್ಲಿ ಪ್ರದರ್ಶನಗೊಳ್ಳುವುದಕ್ಕಾಗಿಯೇ ಅಭಿಜ್ಞಾನ ಶಾಕುಂತಲ, ಉತ್ತರರಾಮಚರಿತೆ, ಚಂಡ ಕೌಶಿಕ ಮೊದಲಾದ ಸಂಸ್ಕೃತ ನಾಟಕಗಳು ಕನ–ಡಕ್ಕೆ ಅನುವಾದಗೊಂಡವು. ಅನುವಾದಗಳ ಮೂಲಕ ಸಂಸ್ಕೃತದ ಶ್ರೇಷ್ಠ ನಾಟಕಕಾರರಾದ ಕಾಳಿದಾಸ, ಭವಭೂತಿ, ಶೂದ್ರಕ, ಭಾಸ ಮೊದಲಾದವರ ನಾಟಕಗಳು ಕನ–ಡಿಗರಿಗೆ ಸುಪರಿಚಿತವಾದವು. ಅಲ್ಲದೆ ಶೇಕ್ಸ್‌ಪಿಯರನ ಕೆಲವು ಇಂಗ್ಲಿಷ್ ನಾಟಕಗಳು ರೂಪಾಂತರಗೊಂಡು ಕನ–ಡಕ್ಕೆ ಒದಗಿದವು. ಪೌರಾಣಿಕ



ಕಥಾವಸ್ತುಗಳನು– ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ಅನಾವರಣಗೊಳಿಸುವ ನಾಟಕಗಳಿಗಿಂತ ತುಸು ಭಿನ–ವಾಗಿ ಅವನು– ಸಮಕಾಲೀನ ವಿದ್ಯಮಾನಗಳಿಗೆ ಹೊಂದಿಸಿಕೊಳ್ಳುವ, ಪುನರ್‌ರಚಿಸುವ ಸಂಪ್ರದಾಯವು ಬೆಳೆದು ಬಂತು. ಪೌರಾಣಿಕ ನಾಟಕಗಳನು– ಮಾತ್ರವಲ್ಲದೆ ಐತಿಹಾಸಿಕ ನಾಟಕಗಳನೂ– ಬರೆದವರು ಬಿ. ಪುಟ್ಟಸ್ವಾಮಯ್ಯನವರು. ರಂಗಭೂಮಿಗಾಗಿಯೇ ಅವರು ರಚಿಸಿದ ಅಕ್ಕಮಹಾದೇವಿ, ಕುರುಕ್ಷೇತ್ರ, ಗೌತಮಬುದ್ಧ, ಷಹಜಹಾನ್ ಮುಂತಾದವು ಇದಕ್ಕೆ ಕೆಲವು ಉದಾಹರಣೆಗಳು.

ಬಿ.ಎಂ.ಶ್ರೀ.ಯವರು ಗ್ರೀಕ್ ದುರಂತ ನಾಟಕದ ಮಾದರಿಯಲ್ಲಿ ಪಾರಸಿಕರು, ಅಶ್ವತ್ಥಾಮನ್ – ಈ ನಾಟಕಗಳನು– ಕನ–ಡಕ್ಕೆ ನೀಡಿದಾಗ ಕನ–ಡ ನಾಟಕ ಸಾಹಿತ್ಯದಲ್ಲಿ ಹೊಸ ಶಕೆಯೊಂದು ಆರಂಭಗೊಂಡಿತು. 'ಪಾರಸಿಕರು' ನಾಟಕವು ನೇರ ಅನುವಾದವಾದರೆ ಅಶ್ವತ್ಥಾಮನ್ ರೂಪಾಂತರವಾಗಿ ಮೂಡಿಬಂದಿತು. ಗ್ರೀಕ್ ದುರಂತ ನಾಟಕದ ಆಳವಾದ ಪರಿಚಯವಿದ್ದ ಹಾಗೂ ಗ್ರೀಕ್ ಪುರಾಣ ಕಥೆಗಳಿಗೂ ಭಾರತೀಯ ಪುರಾಣ ಕಥೆಗಳಿಗೂ ಇರುವ ಸಾಮ್ಯದ ಅರಿವಿದ್ದ ಬಿ.ಎಂ.ಶ್ರೀ.ಯವರಿಗೆ ಅಶ್ವತ್ಥಾಮನ್ ನಾಟಕವನು– ರೂಪಾಂತರವಾಗಿ ರಚಿಸುವುದು ಸಾಧ್ಯವಾಯಿತು. ಹಾಗೆ ರೂಪಾಂತರಗೊಳ್ಳುವಾಗ ಅಶ್ವತ್ಥಾಮನ ಮೂಲಕಥೆಯಲ್ಲಿ ಕೆಲವು ಬದಲಾವಣೆಗಳಾಗಿವೆ. ಉದಾಹರಣೆಗೆ ಮೂಲ ಕಥೆಯಲ್ಲಿ ಅಶ್ವತ್ಥಾಮ ಚಿರಂಜೀವಿ. ಅಶ್ವತ್ಥಾಮನ್ ನಾಟಕದಲ್ಲಿ ರುದ್ರಾಂಶಸಂಭೂತನಾದ ಆತನು ದುರಂತ ನಾಯಕನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ವಿಶೇಷವೆಂದರೆ ಇಂಗ್ಲೀಷಿನಿಂದ ಬಂದ ಹಲವು ನಾಟಕಗಳು ನೇರ ಅನುವಾದಗಳಾಗಿರದೆ ರೂಪಾಂತರಗೊಂಡವುಗಳು. ಉದಾಹರಣೆಗೆ, ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ನಾಟಕವು 'ಪ್ರತಾಪ ರುದ್ರದೇವ' ಎಂಬ ಹೆಸರಿನಲ್ಲೂ 'ಒಥೆಲೊ' ನಾಟಕವು ಶೂರಸೇನ ಚರಿತ್ರೆಯೆಂಬುದಾಗಿಯೂ ಕನ–ಡಿಗರಿಗೆ ದೊರೆತವು. ರೂಪಾಂತರಗೊಳ್ಳುವಾಗ ಮೂಲದ ಚೌಕಟ್ಟು ಹಾಗೆಯೇ ಇದ್ದು ವಸ್ತು ಮತ್ತು ಪಾತ್ರಗಳು ನಮ್ಮ ಸ್ಥಳೀಯ ಪರಿಸರಕ್ಕೆ ಹೊಂದಿಕೊಂಡಂತೆ ಇರುತ್ತವೆ. ಮುಂದೆ ಕನ–ಡದಲ್ಲಿ ಸ್ವತಂತ್ರ ನಾಟಕಗಳು ರಚನೆಗೊಳ್ಳುವಾಗ ನಾಟಕಕಾರರಿಗೆ ಈ ಅನುವಾದಗಳೇ ಮಾದರಿಯಾದವು.

ಕನ–ಡದ ಮೊದಲ ಸ್ವತಂತ್ರ ಸಾಮಾಜಿಕ ನಾಟಕವೆಂದು ಗುರುತಿಸಲ್ಪಟ್ಟ ಕರ್ಕಿ ವೆಂಕಟರಮಣ ಶಾಸ್ತ್ರಿಗಳಿಂದ ರಚಿತವಾದ ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನವು ಸಾಮಾಜಿಕ ಕಥಾವಸ್ತುಗಳುಳ್ಳ ನಾಟಕಗಳ ಪರಂಪರೆಯನು– ಸೃಷ್ಟಿಸಿತು. ಸಾಮಾಜಿಕ ಸಮಸ್ಯೆಗಳನು– ಎತ್ತಿಕೊಂಡು ಜನರನು– ತಿದ್ದುವ ಉದ್ದೇಶದಿಂದ ಗೇಲಿ, ವ್ಯಂಗ್ಯ, ಟೀಕೆ, ಹಾಸ್ಯ – ಇತ್ಯಾದಿಗಳನು– ಬಳಸಿಕೊಂಡು, ನಾಟಕಗಳನು– ಮಧ್ಯಮ ವರ್ಗದ ಪ್ರೇಕ್ಷಕರ ಸಮೀಪ ತಂದವರು ಟಿ.ಪಿ. ಕೈಲಾಸಂ. ಕನ–ಡಾಂಗ್ಲೋ ಶೈಲಿ (ಇಂಗ್ಲಿಷ್ ಮಿಶ್ರಿತ ಕನ–ಡ ಶೈಲಿ) ಯಲ್ಲಿ ಅವರು ರಚಿಸಿದ ಟೊಳ್ಳುಗಟ್ಟಿ, ಪೋಲಿ ಕಿಟ್ಟಿ, ಬಂಡ್ವಾಳಿಲ್ಲದ ಬಡಾಯಿ – ಮುಂತಾದ ನಾಟಕಗಳು ಜನಪ್ರಿಯವಾದವು. ಇನೊ–ಬ್ಬ ಪ್ರಮುಖ ನಾಟಕಕಾರ ಶ್ರೀರಂಗರು ಸಾಮಾಜಿಕ ಸಮಸ್ಯೆಗಳನು– ಎತ್ತಿಕೊಂಡರೂ ಹೆಚ್ಚು ಗಂಭೀರವಾದ ವೈಚಾರಿಕ ನಾಟಕಗಳನು– ಬರೆದರು.

ಪಾಶ್ಚಾತ್ಯ ಮತ್ತು ಭಾರತೀಯ ರಂಗಭೂಮಿಯ ಆಳವಾದ ತಿಳುವಳಿಕೆಯೊಂದಿಗೆ ಸ್ಪಷ್ಟವಾದ ರಂಗಪ್ರಜ್ಞೆಯಿಂದ ಅವರು ಕತ್ತಲೆ–ಬೆಳಕು, ಏನಬೇಡಲಿ ನಿನ– ಬಳಿಗೆ ಬಂದು ಮುಂತಾದ ನಾಟಕಗಳನು– ರಚಿಸಿದರು.

ಅತ್ತ ನಾಟಕ ಕಂಪೆನಿಗಳು ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಿಂದ ಸಾಮಾನ್ಯ ಪ್ರೇಕ್ಷಕರನು– ರಂಜಿಸುತ್ತಾ – ಅವರಲ್ಲಿ ಕಲಾಭಿರುಚಿಯನು– ಬೆಳೆಸಿದುವು. ಇತ್ತ ಹವ್ಯಾಸಿ ರಂಗಭೂಮಿ ನಾಟಕ ರಚನೆ ಹಾಗೂ ಪ್ರಯೋಗಗಳ ಮೂಲಕ ಮಧ್ಯಮ ವರ್ಗದ ಪ್ರೇಕ್ಷಕರನು– ಬೆಳೆಸಿತು. ಹವ್ಯಾಸಿ ನಾಟಕ ಪರಂಪರೆಯಲ್ಲೂ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ರಚನೆಯಾದವು. ಅವುಗಳಲ್ಲಿ ಕೆಲವು ಓದು ನಾಟಕಗಳಾಗಿ ಯಶಸ್ವಿಯಾದರೂ ರಂಗಪ್ರಯೋಗಕ್ಕೆ ಒಡ್ಡಲಿಲ್ಲ. ಇನು– ಕೆಲವು ಓದು ನಾಟಕವಾಗಿಯೂ ರಂಗಪ್ರಯೋಗದ ದೃಷ್ಟಿಯಿಂದಲೂ ಯಶಸ್ವಿಯೆನಿಸಿದವು. (ಉದಾ : ಕಾಕನಕೋಟೆ – ಮಾಸ್ತಿ, ಬೆರಳ್ಗೆ ಕೊರಳ್, ಕುವೆಂಪು, ಸ್ಮಶಾನ ಕುರುಕ್ಷೇತ್ರ – ಕುವೆಂಪು). ನವೋದಯ ಕಾಲಘಟ್ಟದ ಬೇಂದ್ರೆ, ಕಾರಂತ, ವೀ.ಸೀ, ಮಾಸ್ತಿ – ಮುಂತಾದ ಮಹತ್ವದ ಲೇಖಕರು ಬಹುಮಟ್ಟಿಗೆ ನಾಟಕ ರಚಯಿತರೂ ಆಗಿದ್ದಾರೆ.

ಗೋವಿಂದ ಪೈಯವರ ಹೆಬ್ಬೆರಳು ಮತ್ತು ಚಿತ್ರಭಾನು ಅಥವಾ ೧೯೪೨ ಎಂಬ ನಾಟಕಗಳು ಅನುಕ್ರಮವಾಗಿ ಪೌರಾಣಿಕ ಮತ್ತು ಸಾಮಾಜಿಕ ವಸ್ತುಗಳನೊ–ಳಗೊಂಡಿವೆ.

ಕನ–ಡ ಸಾಹಿತ್ಯದಲ್ಲಿ ನವ್ಯತೆ ಕಾಣಿಸಿಕೊಂಡ ಕಾಲಘಟ್ಟದಲ್ಲಿ ನಾಟಕ ಸಾಹಿತ್ಯದಲ್ಲೂ ಹೊಸ ಅಲೆ ಕಾಣಿಸಿಕೊಂಡಿತು. ಜೀವನದ ಅರ್ಥಶೂನ್ಯತೆಯನು–, ಅಸಾಂಗತ್ಯವನು– ಪ್ರತಿಬಿಂಬಿಸುವ ಅಸಂಗತ ನಾಟಕಗಳು ಕನ–ಡದಲ್ಲಿ ರಚನೆಯಾದವು. ಪಿ. ಲಂಕೇಶ, ಚಂದ್ರಶೇಖರ ಪಾಟೀಲ, ಚಂದ್ರಕಾಂತ ಕುಸನೂರ, ಎಂ.ಎಸ್.ಕೆ. ಪ್ರಭು ಮುಂತಾದವರು ಈ ಬಗೆಯ ನಾಟಕಗಳನು– ರಚಿಸಿದರು. ಗಿರೀಶ್ ಕಾರ್ನಾಡರು ಪೌರಾಣಿಕ, ಐತಿಹಾಸಿಕ ಮತ್ತು ಜಾನಪದೀಯ ವಸ್ತುಗಳಿಗೆ ಆಧುನಿಕ ವ್ಯಾಖ್ಯಾನ ನೀಡಿ ಹೊಸ ಬಗೆಯ ನಾಟಕಗಳನು– ರಚಿಸಿದರು. ಕಥಾವಸ್ತು, ಪಾತ್ರಗಳು, ಪೌರಾಣಿಕ ಅಥವಾ ಐತಿಹಾಸಿಕವೇ ಆದರೂ ಸನಿ–ವೇಶ ನಿರ್ಮಾಣದಲ್ಲಿ, ಪಾತ್ರಗಳ ಚಿಂತನೆಯಲ್ಲಿ ಆಧುನಿಕ ಸಂವೇದನೆಯನು– ಪ್ರತಿಪಾದಿಸಿದ ಅವರ ಯಯಾತಿ, ಹಯವದನ, ಅಗಿ– ಮತ್ತು ಮಳೆ, ತುಘ್ಲಕ್, ಮುಂತಾದ ನಾಟಕಗಳು ಅನನ್ಯವಾಗಿ ಗುರುತಿಸಲ್ಪಟ್ಟಿವೆ. ಈ ಕಾಲಘಟ್ಟದಲ್ಲಿ ಮರಾಠಿ, ಬಂಗಾಳಿ ಹಾಗೂ ಹಿಂದಿ ಭಾಷೆಗಳಿಂದ ಹೊಸ ಸಂವೇದನೆಯ ನಾಟಕಗಳು ಅನುವಾದಗೊಂಡಿವೆ. ಬಂಗಾಳಿಯ ಬಾದಲ್ ಸರ್ಕಾರ್ ಅವರ ಏವಂ ಇಂದ್ರಜಿತ್, ಬಾಕಿ ಇತಿಹಾಸ್, ಹಿಂದಿಯ ಮೋಹನ್ ರಾಕೇಶ್ ಅವರ ಆಷಾಢ್ ಕ ಏಕ್ ದಿನ್ ಮುಂತಾದ ನಾಟಕಗಳು ಅನುವಾದಗೊಂಡು ಕನ–ಡಿಗರಲ್ಲಿ ಹೊಸ ಅಭಿರುಚಿಯನು– ಮೂಡಿಸಿದವು. ಜಾನಪದ ರಂಗಭೂಮಿಯ ನಿಕಟ ಪರಿಚಯವಿದ್ದ ಚಂದ್ರಶೇಖರ ಕಂಬಾರರು ಜಾನಪದೀಯ ಅಂಶಗಳನು– ಅಳವಡಿಸಿಕೊಂಡು ಜೋಕುಮಾರ ಸ್ವಾಮಿ, ಸಿರಿಸಂಪಿಗೆಯಂತಹ ನಾಟಕಗಳನೂ– ಬರೆದಿದ್ದಾರೆ.

ಆರಂಭದಲ್ಲಿ ಸಂಸ್ಕೃತ ನಾಟಕ ರಂಗದಿಂದ ಪ್ರಭಾವಿತವಾದ ಕನ–ಡ ನಾಟಕ ಮುಂದೆ

ಪಾಶ್ಚಾತ್ಯ ಪ್ರೇರಣೆಯಿಂದ ಪುಷ್ಟಿಗೊಂಡು, ದೇಸೀಯ ಅಂಶಗಳನು– ಬಿಡದೆ ಬೆಳವಣಿಗೆಯನು– ಹೊಂದಿದೆ. ನಾಟಕ ಕಂಪೆನಿಗಳ ಮೂಲಕ ನಾಡಿದುದ್ದಕ್ಕೂ ನಾಟಕ ಪ್ರದರ್ಶನಗಳನು– ನೀಡಿದ ಕನ–ಡ ವೃತ್ತಿ ರಂಗಭೂಮಿ ನಾಟಕ ಸಾಹಿತ್ಯ ರಚನೆಗೆ ಚಾಲನೆ ನೀಡಿದೆ. ಹವ್ಯಾಸ ರಂಗಭೂಮಿಯು ನಾಟಕ ಸಾಹಿತ್ಯ ರಚನೆ ಹಾಗೂ ಪ್ರಯೋಗದ ದೃಷ್ಟಿಯಿಂದ ಗಮನಾರ್ಹವಾಗಿದೆ. ಮೂಲತಃ ಕಾವ್ಯ, ಕಥೆ, ಕಾದಂಬರಿ ಮುಂತಾದ ಪ್ರಕಾರಗಳನು– ಮುಖ್ಯ ಮಾಧ್ಯಮವಾಗಿ ಆಯ್ದುಕೊಂಡ ಅನೇಕ ಬರಹಗಾರರು ನಾಟಕ ರಚನೆಯನು– ಗಂಭೀರವಾಗಿ ಸ್ವೀಕರಿಸಿ ಉತ್ತಮ ನಾಟಕಗಳನು– ನೀಡಿದ್ದಾರೆ. ಮುಖ್ಯವಾಗಿ ಕವಿಯೆಂದೇ ಗುರುತಿಸಿಕೊಂಡ ಎಚ್.ಎಸ್. ವೆಂಕಟೇಶ್ ಮೂರ್ತಿಯವರು ಈ ಸಾಲಿಗೆ ಸೇರುತ್ತಾರೆ. ಮಂಥರಾ ನಾಟಕವು ಅವರ ಪ್ರಯೋಗಶೀಲತೆಗೆ ಅತ್ಯುತ್ತಮ ಉದಾಹರಣೆ. ಪೌರಾಣಿಕ ಕಥಾವಸ್ತುವನು– ಆಧುನಿಕ ಸಂವೇದನೆಯಿಂದ ಪುನಃಸೃಷ್ಟಿಮಾಡುವ ಗಂಭೀರವಾದ ಪ್ರಯತ–ವನು– ಇದರಲ್ಲಿ ಕಾಣಬಹುದು.

(ಸಂಗ್ರಹ)

## ಸಂಕ್ಷಿಪ್ತವಾಗಿ ಉತ್ತರಿಸಿರಿ

- ಬಿ.ಎಂ. ಶ್ರೀ. ಅವರ ಮೂಲಕ ಕನ–ಡ ನಾಟಕ ಸಾಹಿತ್ಯದಲ್ಲಿ ಹೊಸಶಕೆಯೊಂದು ಆರಂಭಗೊಂಡದ್ದು ಹೇಗೆ?
- ಕನ–ಡ ನಾಟಕ ಸಾಹಿತ್ಯಕ್ಕೆ ಕೈಲಾಸಂ ಅವರ ಕೊಡುಗೆಯ ವಿಶೇಷತೆಯೇನು?
- ಗಿರೀಶ್ ಕಾರ್ನಾಡರಿಂದ ಕನ–ಡ ನಾಟಕರಂಗದಲ್ಲಿ ನವಚೈತನ್ಯವು ಹೇಗೆ ಕಾಣಿಸಿಕೊಂಡಿತು?
- ಕನ–ಡ ನಾಟಕ ಸಾಹಿತ್ಯದ ಬೆಳವಣಿಗೆಯ ಸ್ಥೂಲವಾದ ಪರಿಚಯವನು– ನಿಮ್ಮ ಮಾತುಗಳಲ್ಲಿ ನೀಡಿರಿ.

## ಚಟುವಟಿಕೆಗಳು

- ಕನ–ಡ ನಾಟಕರಂಗಕ್ಕೆ ಕಾಸರಗೋಡಿನ ಹವ್ಯಾಸಿ ರಂಗಭೂಮಿಯ ಕೊಡುಗೆಯ ಕುರಿತು ಸಂಗ್ರಹಿಸಿ ಬರೆಯಿರಿ.
- ಮಲಯಾಳ ಭಾಷೆಯಿಂದಲೂ ನಾಟಕಗಳು ಕನ–ಡಕ್ಕೆ ಭಾಷಾಂತರಗೊಂಡು ಪ್ರಕಟವಾಗಿವೆ. ಈ ಕುರಿತಾದ ಮಾಹಿತಿಯನು– ಸಂಗ್ರಹಿಸಿ ಲೇಖನವನು– ಬರೆಯಿರಿ.
- 'ಅಶ್ವತ್ಥಾಮನ್' ನಾಟಕದ ಯಾವುದಾದರೂ ಒಂದು ದೃಶ್ಯವನು– ಹೊಸಗನ–ಡ ಗದ್ಯಕ್ಕೆ ಪರಿವರ್ತಿಸಿ ಬರೆಯಿರಿ.

## ಹೆಚ್ಚಿನ ಓದಿಗೆ

- ಕನ–ಡ ಸಾಹಿತ್ಯ ಚರಿತ್ರೆ (ನಾಟಕ ವಿಭಾಗ) – ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ



# ಮಂಥರಾ

**ಎಚ್.ಎಸ್. ವೆಂಕಟೇಶ ಮೂರ್ತಿ**

ರಾಮಾಯಣ ಕಥೆಯ ಬೆಳವಣಿಗೆಗೆ ತಿರುವು ನೀಡಿದವಳು ಮಂಥರೆ. ವಾಲ್ಮೀಕಿ ರಾಮಾಯಣದಲ್ಲಿ ಇವಳು ಕೇವಲ ದುಷ್ಟ ಪಾತ್ರವಾಗಿ ಗೋಚರಿಸಿದರೆ ಇಲ್ಲಿ ನಾಟಕಕಾರರು ಆ ಪಾತ್ರಕ್ಕೆ ಹೊಸ ಆಯಾಮವನ್ನು ನೀಡಿದ್ದಾರೆ. 'ಮಂಥರಾ' ಹೆಣ್ಣಿನ ಅಂತರಂಗದ ಇನ್ನೊಂದು ಬಗೆಯ ಚಿತ್ರ. ಮಂಥರೆಯ ಬೋಧನೆಯಿಂದಾಗಿ ಕೈಕಯಿ ಬೇರೆಯವರ ಹಕ್ಕು ಮತ್ತು ಯೋಗ್ಯತೆಯನ್ನು ಅಲಕ್ಷಿಸಿ, ಅಧಿಕಾರ ಗದ್ದುಗೆಯನ್ನು ತನ್ನ ಪುತ್ರನಿಗೆ ಲಭಿಸುವಂತೆ ಯತ್ನಿಸುತ್ತಾಳೆ. ಸಾತ್ವಿಕತೆಯು ತಾಮಸಕ್ಕೆ ಕ್ರಮೇಣ ಬದಲಾಗುವುದನ್ನು ಮಂಥರೆಯ ಮಾತಿಗೆ ಒಲಿಯುವ ಕೈಕಯಿಯ ನಿಲುವು ಸಾದರಪಡಿಸುತ್ತದೆ. ಭರತನು ಅಧಿಕಾರ ವ್ಯಾಮೋಹಕ್ಕೆ ಸಿಲುಕದೆ ನಿಜವಾದ ಪ್ರಜಾಪ್ರಭುತ್ವವಾದಿಯಾಗಿ ಕಾಣಿಸುತ್ತಾನೆ. ಅಧಿಕಾರದ ಹಂಗಿಲ್ಲದೆ ಪ್ರಜಾಸೇವೆ ಮಾಡಲು ಸಾಧ್ಯ ಎಂದು ನಂಬುತ್ತಾನೆ. ರಾಜನಾಗಿ ಅಲ್ಲದಿದ್ದರೂ ರಾಜ ಪ್ರತಿನಿಧಿಯಾಗಿ ಭರತನು ಅಯೋಧ್ಯೆಯಲ್ಲಿ ಉಳಿಯುವಂತಾದುದು ಮಂಥರೆ ಮತ್ತು ಕೈಕಯಿಯ ರಾಜಕೀಯ ಮುತ್ಸದ್ದಿತನವನ್ನು ತೋರಿಸುತ್ತದೆ. ರಾಜಕೀಯ ಚದುರಂಗದಾಟದ ಒಳಸುಳಿಗಳನ್ನು ಹಿಡಿಯಲು ಯತ್ನಿಸುವ ಕಾರಣ 'ಮಂಥರಾ' ನಿಜಾರ್ಥದಲ್ಲಿ ಒಂದು ರಾಜಕೀಯ ನಾಟಕವೂ ಆಗಿದೆ.

(ರಂಗದ ಮೇಲೆ ಬೆಳಕಾದಾಗ, ಶಿಷ್ಟ ಮತ್ತು ಗ್ರಾಮ್ಯ ಪರಿವೇಷಗಳಿಂದ ಇಬ್ಬರು ಸ್ತ್ರೀಯರು ಗಣಪತಿಯನ್ನು ವಂದಿಸುತ್ತಾರೆ. ಅವರ ಭಾಷೆ, ಹಾಡು, ಅಭಿನಯ ಆಯಾ ಸಂಪ್ರದಾಯವನ್ನು ಖಚಿತವಾಗಿ ಸೂಚಿಸುವಂತಿರುತ್ತದೆ.)

**ಹಾಡು – ೧**

ಶ್ವೇತ ವಸ್ತ್ರಾನ್ವಿತ । ನವರತ್ನ ಭೂಷಿತ।
ಕಾಮಿತಾರ್ಥ ಪ್ರದಾತ – ಶರಣು।।
ಕೈಲಾಸ ಸುಸ್ಥಿತಾ। ಶರಣಜನ ಸಂಸ್ತುತ।
ಪಾರ್ವತೀಪ್ರಿಯಸುತ–ಶರಣು।।

ಇಲಿಯ ಮೇಲೇರಿದವನೇ–ಶರಣು।
ನಗೆಮೊಗವ ತೋರಿದವನೆ।।
ಕಡುಬುಕೊಡು ಎನ್ನುವವನೆ–ಶರಣು।
ಗುಡ್ಯಾಣದುದರದವನೇ।।

**ಪಾತ್ರಗಳು :**

ಮಂಥರಾ
ಕೈಕಯಿ
ದಶರಥ
ಭರತ
ಮತ್ತು ಮೇಳದವರು

ಸರ್ವ ಶುಭದಾಯಕ। ಭಕ್ತಿ ಪ್ರದಾಯಕ।
ಸಿದ್ಧಗಣನಾಯಕ–ಶರಣು ॥
ವಿಘ್ನ ಪರಿಹಾರಕ। ಆನಂದಕಾರಕ।
ಸದ್ಬುದ್ಧಿ ಪ್ರೇರಕ–ಶರಣು॥

ಮನೆ ಮನೆಯ ಮುದ್ದು ಗಣಪ – ಶರಣು।
ಕೇಳಿದ್ದು ನಿನಗೆ ಕೊಡುವೆ॥
ಕಾಡದಿರು ಖೋಡಿ ಗಣಪ–ಶರಣು।
ಅಂಗಳದಲಾಡ ಬಿಡುವೆ॥

**ನಾಂದಿ**

**ಹಾಡು – ೨**

ದೀಪಲಕ್ಷ್ಮಿಗ್ಯಾಕೊ ಹಿಂದೆ ನೆಳಲಿನ ಸೆರಗೂ
ಅದಾ ಲೋಕಕೆ ಬೆರಗು॥
ಜೀವ ನದೀ ಹೊಕ್ಕಳಲ್ಲಿ ಸಾವಿನ ಸುಳಿಯು
ಮ್ಯಾಲೆ ತಣ್ಣನೆ ಹೊಳೆಯು॥

ನೀರಿನ ಕೊಡಪಾನ ಮೋಡ ಮಿಂಚಿನ ಖಡುಗ
ಒಳಗ–ಮಿಂಚಿನ ಖಡುಗ॥
ತೆಂಕಣ ತಂಗಾಳಿಯೊಳಗ ಜಂಝಾವಾತ
ತಿಳಕ–ಒಳಗಿನ ಮಾತ॥
ಒಳಗಿನೊಳಗಿನ ಮಾತಾ॥



## ದೃಶ್ಯ – ೧

(ರಂಗದ ಮೇಲೆ ಉತ್ಸಾಹದಿಂದ ಕೈಕಯಿಯ ಪ್ರವೇಶ. ಮಂಥರೆಯ ಕೈಹಿಡಿದು, ಅಪ್ಪಾಲೆ ತಿಪ್ಪಾಲೆ ತಿರುಗಿ, ಏದುಸಿರು ಬಿಡುತ್ತಾ)

ಕೈಕಯಿ : ಮಂಥರಾ... ನನಗೆ ಈವತ್ತು ಸಂತೋಷ ಅಂದರೆ ಸಂತೋಷ... ಅದಕ್ಕೇ
ಈ ಕುಣಿತ ಈ ಭಣಿತ
ಸಂಭ್ರಮ ಉಕ್ಕುಕ್ಕಿ ಬರುತ್ತಿರೋ ಈ ಹಾಡು!

ನನ್ನ ಮಗ ಯುವರಾಜ ಆಗ್ತಿದಾನೆ...
ಯುವರಾಜ ಆಗ್ತಿದಾನೆ ನನ್ನ ಮಗ...
ಏ... ಜೋಲು ಮೂತಿ ಮುದುಕೀ...!
ಇವತ್ತಾದರೂ ಹೊಟ್ಟೆ ತುಂಬ ನಗು...!!

ಮಂಥರಾ : ಅವ್ವಯ್ಯಾ...!!! ಯುವರಾಜ ಆಗ್ತಾನೆ ನಿನ್ನ ಮಗ?
ಹಂಡೆ ಹಾಲು ಕುಡಿದಹಂಗೆ ಆಯ್ತು ನೋಡು
ಚೋಟುದ್ದ ಇದ್ದ... ಅಜ್ಜೀ ಎತ್ತಿಕೋ ಅನತಾ ಇದ್ದ...
ಈಗ ಅವ ಯುವರಾಜ ಆಗ್ತಾನಂದ್ರೆ ನಂಬಂಗೇ ಇಲ್ಲ ಬಿಡು....

ನೀನ್ ಕುಣಿಯೋದೇನೇ ಹೆಚ್ಚೇ... ಹರೇದ ಹುಡುಗಿ !?
ಮುದಿಗೊರಡು! ನಂಗೇ ಕುಣೀಬೇಕು ಅನ್ನಿಸ್ತದ....!
ಹಾಡಿ ಹಾಡಿ ನೀನು ಕುಣಿಯಬೇಕು
ನೋಡಿ ನೋಡಿ ನಾನು ಕುಣೀಬೇಕು!!!

### ಹಾಡು – ೩

ಕುಣಿ ಕುಣಿ ಕೈಕಾ! ದಣಿ ದಣಿ ಕೈಕಾ!
ಮಣಿ ಮಣಿ ಕೈಕಾ – ನಾಗಮಣೀ||
ತಾ ಧಿನ್ನ ತೈಥಾ! ತಕ ಧಿನ್ನ ತೈಥಾ!
ಮಂಥರಿ ಸೈತಾ ಕುಣೀ ಕುಣೀ||

ಮುಡಿ ಗಿಡಿ ಹರವೀ! ಕೈ ಮೈ ತಿರವೀ!
ಹಾಡಿನ ನೆರವೀ–ಕುಣೀ ಕುಣೀ||
ತೀರಿತ ಕೊರತೀ! ಕಣ್ಣಾಗೊರತೀ!
ಎದಿ ಎದಿ ಭರತೀ – ಕುಣೀ ಕುಣೀ||

ಯಾವುದ ಗೊಡವೀ! ವಸ್ತಾವಡವೀ!
ಎಲ್ಲಾ ಕೊಡವೀ– ಕುಣೀ ಕುಣೀ||
ಹೇ! ಮೈಮರತಾ! ಚಂದಿರ ಬರತಾ!
ಕಡಲಿಗೆ ಭರತಾ! ಕುಣೀ ಕುಣೀ||

ಕೈಕಯಿ : ಬೆಳಗಾಗ್ತಾ ಬೆಳಗಾಗ್ತಾ
ಬಂಗಾರದಂಥ ಸುದ್ದಿ ತಿಳೀತು!

ಪೂರ್ವ ದಿಕ್ಕಿನಲ್ಲಿ ಹೊನ್ನಿನ ಕಿರೀಟದ ಹಾಗೆ ಥಳ ಥಳ ಥಳ
ಹೊಳೀತಾ ಇದ್ದ ಸೂರ್ಯ!
ಸುದ್ದಿ ತಂದ ರತ್ನಾವಳಿಗೆ ರತ್ನಾಹಾರ ಕೊಟ್ಟೆ!
ಬಕುಳಾವಳಿಗೆ ಮುತ್ತಿನ ಏಕಾವಳಿ ಕೊಟ್ಟೆ!
ಮಂದಾಕಿನಿಗೆ ಮುಂಗೈ ಕಡಗ ಕೊಟ್ಟೆ!
ನಿನಗೇನು ಕೊಡಲೇ ಮಂಥರಾ?
*(ನಕ್ಕು)*
ಒಡ್ಯಾಣ ಕೊಡೋಣ ಅಂದ್ರೆ ನಿನಗೆ ಸೊಂಟ ಅನ್ನೋ ವಸ್ತುವೇ ಇಲ್ಲ!
ನಾಗರ ಹೆಡೆ ಕೊಡೋಣ ಅಂದ್ರೆ ಮುಡಿಮೇಲೆ ಶಾಸ್ತ್ರಕ್ಕೆ ಒಂದು ಜಡೆ ಇಲ್ಲ!
ಓಲೆ ಕೊಡೋಣ ಅಂದ್ರೆ ಆಲೆ ಹರಿದು ಹೋಗಿದೆ!
*(ಕೆನ್ನೆ ಹಿಂಡಿ)*
ನನ್ನ ಮುದ್ದಿನ ಮುದುಕೀ!
ಅಚ್ಚೆಯ ಬೊಚ್ಚೀ!
ಮನ್ಮಥನ ಬಿಂಕದ ಡೊಂಕು ಬಿಲ್ಲೇ!
ನಿನಗೇನು ಕೊಡಲೇ ಮಂಥರಾ?

ಮಂಥರಾ : *(ಕುಲು ಕುಲು ನಕ್ಕು)*
ಬರಾಬ್ಬರಿ ಒಂದು ಬಳ್ಳ ಕಾಳು ತುಂಬೋವಂಥಾ
ಹಳ್ಳ ಐತಲ್ಲವ್ವಾ ನನ್ನ ಕೆನ್ನೀ ಒಳಗ?
ಕೆನ್ನೀ ತುಂಬಾ ಮುತ್ತು ಕೊಡು ಸಾಕು!
ಅವನ್ನೇ ಒನೀತಾ ಕೇರತಾ
ಕೇರಿ ಕೇರಿ ಪೇರಿ ಹೊಡಕಂಡು
ಮುತ್ತು ಮಾರ್ಕಂಡು
ಹೊಟ್ಟೇ ಹೊರ್ಕಂತೀನಿ!!!

**ಹಾಡು – ೪**

ಮುತ್ತು ಬೇಕೇನ್ರವ್ವಾ ಮುತ್ತೂ?
ಐನಾತಿ ಮುತ್ತೂ
ಕೊಳ್ಳೀನ ಸುತ್ತೂ
ಹುಣ್ಣೀವಿ ಬಿತ್ತೂ
ಮುತ್ತು ಬೇಕೇನ್ರವ್ವಾ ಮುತ್ತೂ?

ರಾಜಾಧಿ ರಾಜರಿಗು ಸಿಗದಾ ಮುತ್ತೂ!
ಆಣೀ ಮುತ್ತು
ರಾಣೀ ಮುತ್ತು
ಕ್ವಾಣೀ ಮುತ್ತು
ಮುತ್ತು ಬೇಕೆನ್ರವ್ವಾ ಮುತ್ತೂ?
ಬೇಕೆಂಬ ಬಾಲ್ಯಾರ ಬಾಯಿ ಮುತ್ತು!
ಪ್ಯಾಟ್ಯಾಗ ಸಿಕ್ಕದ
ಕ್ವಾಟ್ಯಾಗ ದಕ್ಕದ
ಬಾಯೊಳಗ ನಕ್ಕದ
ಅಕ್ಕರೆಗುಕ್ಕುವ ಪುಕ್ಕಟ್ಟೆ ಮುತ್ತು

ಕೈಕಯಿ : ಹೋಗೇ ಹೋಗು...
ಯಾರಿಗೆ ಬೇಕು ನಿನ್ನ ಮುದಿ ಮುತ್ತು...?

ಮಂಥರಾ : ಮರಕ್ಕೆ ಮುಪ್ಪಾದ್ರೆ
ಹರೇ ಮ್ಯಾಲಿರೋ ಅರಗಿಳಿಗೆ ಮುಪ್ಪೇನೇ ನನ್ನವ್ವಾ....?
ನಿನ್ನ ತಾವ ನಗೆಸಾಟಿಕೆ ಮಾಡ್ಕಂತ ಕುಂತರೆ ಮುಗೀತು...
ನಂಗಿನ್ನಾ ಮಾಡಬೇಕಾದ ಕೈಮಿ ಭಾಳ ಭಾಳ ಅದಾವು....

ಕೈಕಯಿ : ಮಹಾ ರಾಜಕಾರ್ಯ ನಿಂದು...?

ಮಂಥರಾ : ಹಂಗೇ ಅಂದುಕೋ...
ನಾನೀಗ ದೊಡ್ಡ ಮನೀಗೆ ಹೋಗ್ಬೇಕು....
ದೋ...ಡ್ಡ ರಾಣೀ ನೋಡ್ಬೇಕು....

ಕೈಕಯಿ : ದೊಡ್ಡ ರಾಣೀ ಮನೆಗಾ....?
ಅಲ್ಲಿಗೆ ಯಾಕ ಹೋಗ್ತಿ?

ಮಂಥರಾ : ನಮ್ಮ ಭರತಕುಮಾರ ಯುವರಾಜ ಆಗ್ತಾನು...
ಅದ ತಿಳಿಸೋದು ಬ್ಯಾಡಾ ಆಕಿಗೆ?

ಕೈಕಯಿ : ಏನಂದೆ? ಏನಂದೆ?
ಭರತ ಯುವರಾಜ ಆಗ್ತಾನ???
ಯಾರು ಹೇಳಿದ್ರು ನಿನಗೆ ಭರತ ಯುವರಾಜ ಆಗ್ತಾನೆ ಅಂತ?

*(ಇದ್ದಕ್ಕಿದ್ದಂತೆ ಗಂಭೀರ ಧ್ವನಿಯಲ್ಲಿ)*

ಯುವರಾಜ ಆಗೋದು ಭರತ ಅಲ್ಲ...
ರಾಮಚಂದ್ರ!
ಭರತ ಅಲ್ಲ– ರಾಮ ಯುವರಾಜ ಆಗೋದು....!

ಮಂಥರಾ : ಕೈಕಾ... ಏನ ಹೇಳ್ತಿದಿ ನೀನು...?
ರಾಮ ಯುವರಾಜ ಆಗ್ತಾನು?
ಕೌಸಲ್ಯೆಯ ಮಗ ರಾಮ ಯುವರಾಜ ಆಗ್ತಾನು?
ಭರತನ ದಾಯಾದಿ ರಾಮ?

ಕೈಕಯಿ : ಅವನೂ ನನ್ನ ಮಗನೇ ಅಲ್ಲವಾ ಮಂಥರಾ?
*(ಒಮ್ಮೆಲೇ ಉಲ್ಲಸಿತಳಾಗಿ)*
ನಾನು ಅಂದರೆ ಜೀವ ಅವನಿಗೆ...

ಮಹಾರಾಣಿ ಕೌಸಲ್ಯೆಯ ಮನೆಯಲ್ಲಿ ಎಲ್ಲರೂ ಅಕೇನ ಮಹಾರಾಣೀ...
ಮಹಾರಾಣೀ ಅನ್ನುತ್ತಾರೆ....

ರಾಮ ಕೂಡಾ ಅಮ್ಮನನ್ನ ಮಹಾರಾಣೀ ...ಅಂತಲೇ ಕರೀತಾನೆ..

ನಮ್ಮ ಮನೇಲಿ ಭರತ ನನ್ನ ಅಮ್ಮಾ... ಅಮ್ಮಾ...ಅನ್ನೋನು....
ಅದನ್ನ ನೋಡಿ ರಾಮನೂ ನನ್ನೇ ಅಮ್ಮಾ ಅನ್ನೋನು...!

ರಾಮಾ...ನಿಮ್ಮ ಅಮ್ಮ ಯಾರು ಕಂದಾ....?
ಈಕೇನೇ ಅಂತ ನನ್ನ ಕಡೆಗೆ ಬೆರಳು ತೋರಿಸೋನು....!!!

ಅವನಿಗೆ ನಾನೇ ಹಾಲು ಕುಡಿಸಬೇಕು...
ನಾನೇ ಆನೆ ಬಂತಾನೆ ಆಡಿಸ್ಬೇಕು...
ನಾನೇ ಜೋಗುಳಾ ಹಾಡಿ ಮಲಗಿಸ್ಬೇಕು..

ನಿಂಗೆ ನೆನಪಿದೆಯಾ ಮಂಥರಾ?
ಇನ್ನೂ ಚಿಕ್ಕೋನು ರಾಮ...
ಹುಣ್ಣಿಮೆ ರಾತ್ರಿ ಆಕಾಶದಲ್ಲಿ ಇಷ್ಟಗಲ ಹೊಳಿತಾ ಇದ್ದ ಪೂರ್ಣ ಚಂದ್ರನನ್ನು
ನೋಡಿ ನನಗೆ ಆ ಚಂದ್ರ ಬೇಕು ಅಂತ ಚಂಡಿ ಹಿಡಿದ...

ಆಕಾಶದ ಚಂದ್ರನ್ನ ಭೂಮಿಗೆ ತರೋರು ಯಾರು?
ನನಗೆ ಚಂದ್ರ ಬೇಕೇ ಬೇಕು ಅಂತ ರಾಮ...

ಕೈಕಾ...ಇವನನ್ನ ನೀನೇ ರಮಿಸಬೇಕು ಅಂತ ಮಹಾರಾಣಿ ನಮ್ಮ
ಮನೆಗೇ ಬಂದಳು....

ನಾನು ಒಂದು ಕನ್ನಡಿ ತಂದು ಮಗುವಿನ ಕೈಗೆ ಕೊಟ್ಟೆ..

“ನೋಡು...ಇಲ್ಲಿದ್ದಾನೆ ಚಂದ್ರ....!”
ಕನ್ನಡೀ ಚಂದ್ರನ್ನ ನೋಡಿ ಮಗು ಕಿಲಿ ಕಿಲಿ ನಗತಾ ಇದೆ....!

ಮಂಥರಾ : *(ಹಿಂದಿನಿಂದ ಬಂದು ಕೈಕಯಿಯ ಹೆಗಲನ್ನು ಕಕ್ಕುಲಾತಿಯಿಂದ ಒತ್ತಿ)*
ಇದ್ದೊಬ್ಬ ಚಂದ್ರನ್ನ ನೀನು ರಾಮಂಗೆ ಕೊಟ್ಟೆ
ಭರತಂಗೆ ಬರೀ ಕನ್ನಡಿ ಮಾತ್ರ ಬಿಟ್ಟೆ...

ಕೈಕಯಿ : ರಾಮ–ಭರತರಲ್ಲಿ ಭೇದ ಎಣಿಸಬೇಡ ಮಂಥರಾ...
ಬೇರೆ ಬೇರೆ ಪರ್ವತದಲ್ಲಿ ಹುಟ್ಟಿದರೂ ಒಂದೇ ಸಮುದ್ರದಲ್ಲಿ ಸಮರಸ
ಬೆರಿಯೋ ಜೋಡಿ ಹೊಳೆಗಳ ಹಾಗೆ ರಾಮ–ಭರತ ನನ್ನ ಮಡಿಲಲ್ಲಿ
ಒಂದಾಗಿ ಹೋಗಿದಾರೆ.....

ಎರಡು ಕಣ್ಣಲ್ಲಿ ಯಾವ ಕಣ್ಣು ನನ್ನದು?

ಮಂಥರಾ : ಕೈಕಾ ..... ಬಣ್ಣದ ಮಾತಾಡಿ ನಿನ್ನೇ ನೀನು ವಂಚಿಸಿಕೋಬ್ಯಾಡ.....
ರಾಮ ಭರತ ಇಬ್ಬರೂ ಮಕ್ಕಳೇ ಖರೇ
ಆದರೆ ರಾಮ ಕೌಸಲ್ಯೆಯ ಮಗ
ಭರತ ಕೈಕಯಿ ಮಗ....

ಇಬ್ಬರೂ ದಶರಥನ ಮಕ್ಕಳೇ ಖರೇ...
ಆದರೆ ರಾಮನ್ನ ದಾಶರಥಿ ಅಂತಾರೆ
ಭರತನ್ನ ಬರೀ ಭರತ ಅಂತಾರೆ....

ಯಾಕೆ?
ನಿನ್ನೇ ನೀ ಕೇಳಕಾ ಕೈಕಾ!

ಅರಮನಿ ಯಾರನ್ನ ಏನಂತ ಕರೀತತಿ ಅನ್ನೋದ್ರಲ್ಲಿ ದೊಡ್ಡ ಹಿಕಮತ್
ಇರ್ತತಿ...
ನೀನೋ ಬೆಳ್ಳಗಿರೋದೆಲ್ಲ ಬೆಳ್ದಿಂಗಳಾ ಅಂದುಕೋತಿ
ರಾಮನ್ನ ಮಾತ್ರ ಯಾಕ ದಾಶರಥೀ ಅಂತ ಕೂಗುತಾರ? ದಶರಥನ
ಗದ್ದಗಿ ದಾಶರಥಿಗೆ...

ಕೈಕಯಿ : ತಪ್ಪೇನು ಅದರಲ್ಲಿ?
ಆಗಲಿ ಬಿಡು ರಾಮ ಯುವರಾಜ...
ಭರತ ನನ್ನ ಮಗನಾಗೇ ಉಳೀಲಿ...!

ಮಂಥರಾ : ಏನು ಮಾತು ಅಂತ ಆಡತೀ ಕೈಕಾ?
ಭರತ ಯುವರಾಜ ಆದ್ರೆ ಮಗನಾಗಿ ಉಳಿಯೋದಿಲ್ಲೇನು?

ಕೈಕಯಿ : ಅಧಿಕಾರ ಅಂತಸ್ತು ತರತ್ತೆ
ಅಂತಸ್ತು ಅಂತರ ತರತ್ತೆ
ಯುವರಾಜನಾದ ಮಗ, ಮಗನಾಗಿ ಉಳಿಯೋದಿಲ್ಲ ಮಂಥರಾ....
ರಾಮನೇ ಯುವರಾಜ ಆಗಲಿ
ಭರತ ನನ್ನ ಮುದ್ದಿನ ಮಗನಾಗೇ ಉಳೀಲಿ...

ಮಂಥರಾ : ನಮ್ಮ ಮಗ ನಮ್ಮ ಕಂಕುಳಾಗೇ ಇರಲಿ ಅಂತ ಅದರ ಕಾಲು
ಮುರಿಯೋದು ತಪ್ಪಾಕತಿ ಕೈಕಾ
ನಮ್ಮ ಹಿತ ನೋಡಿಕೋತ ನಾವು ನಮ್ಮ ಮಗನ ಹಿತಾ ಮರಿಯೋದು
ಬ್ಯಾಡ....

ಕೈಕಯಿ : ನಮಗೆ ಹಿತ ಯಾವುದು?
ಮಗನಿಗೆ ಹಿತ ಯಾವುದು?
ನಾವು ಹಿತಾ ಅನ್ನೋದು ಅವನಿಗೆ ಅಹಿತ ಆದ್ರೆ?

ಶಾಂತವಾಗಿ ನಿರ್ಮಲವಾಗಿ ಇರೋ ಸರೋವರಾನ ಯಾವ
ಬಿರುಗಾಳೀನೂ ಕಲಕಬಾರದು ಮಂಥರಾ....

*(ತಲೆಯನ್ನು ಒತ್ತಿಕೊಂಡು)*

ನಾನು ಸ್ವಲ್ಪ ಮಲಗಬೇಕು

ಬಾಗಿಲ ಬಳಿ ಕಾವಲು ನಿಲ್ಲು ನೀನು ....

ಯಾರನೂ ಒಳಗೆ ಬಿಡಬೇಡ – ಕನಸನ್ನೂ ಕೂಡಾ!
*(ನಿರ್ಗಮಿಸುತ್ತಾಳೆ)*

## ದೃಶ್ಯ – ೨

*(ಕುಟ್ಟಣಿಯಲ್ಲಿ ಎಲೆ ಅಡಿಕೆ ಜಜ್ಜುತ್ತಾ ಇರುವ ಮಂಥರಾ – ಮುರುಕು ಕುರ್ಚಿಯ ಮೇಲೆ)*

ಮಂಥರಾ : ಅವನೂ ನನ್ನ ಮಗನಾ ಅದಾನು
ಇವನೂ ನನ್ನ ಮಗಾನಾ ಅದಾನು
ಎಲ್ಲ ನನ್ನ ಮಕ್ಕಳೇ ಅದಾರು
ನಾ–ಲೋಕಕ್ಕೆ ಹಡದವ್ವ!
ಮಗನೂ ಮಗನಾ
ಲಕ್ಷ್ಮಣನೂ ಮಗನಾ
ಭರತನೂ ಮಗನಾ
ಶತ್ರುಘ್ನನೂ ಮಗನಾ

ಆದರ ಪಟ್ಟಗಟ್ಟೊದು ಮಾತ್ರ ರಾಮಂಗಾ.... ರಾಮಂಗಾ....

ಭರತ ನನಗೆ ಪಟ್ಟ ಬ್ಯಾಡ ಅಂತಾನು ಅಂತಾಳೆ ಹಡದವ್ವ

ಮಗ ಬ್ಯಾಡ ಅಂದರೆ ನಾವು ಕೊಡೋದು ಬ್ಯಾಡಾ?
ನನಗೆ ಅನ್ನ ಬ್ಯಾಡ – ಮಣ್ಣ ತಿನ್ನತೀನಿ ಅಂತದ ಮಗ!
ಮಗಂಗ ನೀ ಮಣ್ಣ ತಿನ್ನಿಸಿತಿ?
ಮಣ್ಣ ತಿಂದರ ನಾಳೆ ಹೊಟ್ಟೆ ಹಿಡಕಂಡು ಕಣ್ಣು ಕಣ್ಣು ಬಿಡತೀತು ಕೂಸು...!
ಮಗ ಮಣ್ಣ ತಿನ್ನತೀನಿ ಅಂದರ ಬಾಯಿಗೆ ಒಂದು ಹಾಕಬೇಕು...
ಕಣ್ಣಿಗೆ ಗುಬ್ಬಿ ಕಾಗಿ ತೋರಿಸುತಾ ಬಾಯಿಗೆ ಅನ್ನದ ಮಿಟಗಿ ತುರಕಬೇಕು –
ಮಕ್ಕಳ ಹಿತಾ ಬಯಸೊ ಮಂದಿ!
ಈವತ್ತಿನ ಮಾತಲ್ಲ! ಇನ್ನು ಹತ್ತು ವರ್ಷಕ್ಕ ಯಾವದು ಬೇಕಾದೀತು ಬೆಳೆಯೋ
ಕೂಸಿಗೆ ಅಂತ ಲೆಖ್ಖ ಹಾಕಿ ನೋಡಬೇಕಾಗ್ತದ....
ಈವತ್ತು ಒಂದು ಚಿನ್ನಿ, ಒಂದು ದಾಂಡು, ಸಾಕು ನಮ್ಮ ಹುಡುಗಂಗೆ....!
ಹತ್ತು ವರ್ಷ ಕಳದರ ಚಿನ್ನಿ ದಾಂಡು ಯಾತಕ್ಕ ಬಂದೀತು?
ಆಗ ಅವಗ ಮಾಡಲಿಕ್ಕ ಒಂದು ಕೆಲಸ ಬೊಗಸಿ ಬೇಕಾದೀತು...
ಕೂಡಲಿಕ್ಕೆ ಒಂದು ಕುರ್ಚಿ ಮೇಜು ಬೇಕಾದೀತು.......!
ಇರಲಿಕ್ಕ ಒಂದು ಮನಿ ಗಿನಿ ಬೇಕಾದೀತು....!
ನಮ್ಮ ಮಗನ ಹಿತ ನಾವು ನೋಡಬೇಕ್ರೀ....
ಕೈಕಾ ಹೇಳ್ತಾಳ: ರಾಮನೂ ಮಗನಾ... ಲಕ್ಷ್ಮಣನೂ ಮಗನಾ.... ಭರತನೂ
ಮಗನಾ .... ಶತ್ರುಘ್ನನೂ ಮಗನಾ...
ಇದೇ ಮಾತ ಆಕೀ ಸವತೀರೂ ಹೇಳಲಿ ನೋಡೋಣು.....
ಕುರ್ಚಿಗೆ ಕಾಲು ನಾಕು ಇರತಾವು – ಆದ್ರ ಪೀಠಾ ಒಂದಾ ಇರ್ತದ
ನಾಕು ಕಾಲು ಹೊರಲಿಕ್ಕೆ – ಒಂದು ತೆಲೀ ಮೆರೀಲಿಕ್ಕೆ!
ಒಂದು ಪೀಠದ ಮ್ಯಾಲೆ ಒಬ್ಬ ಮಾತ್ರ ಕೂಡಲಿಕ್ಕೆ ಶಕ್ಯ
ನಾಕೂ ಮಂದಿ ಮಕ್ಕಳಾ ಅಂತ ನಾಕೂ ಮಂದೀನೂ ಬಂಗಾರದ ಗದ್ದಿಗೀ
ಮ್ಯಾಲೆ ಕೂಡ್ರಿಸೋ ಹಂಗಿಲ್ಲ...!

ಬರೀ ಒಬ್ಬ ಮಾತ್ರ ಅಲ್ಲಿ ಕೂಡ್ರೋದು ಶಕ್ಯ....
ಯಾರಪ್ಪಾ ಅವಾ ಅಂದ್ರ – ರಾಮಾ ಅಂತಾನು ಮುದಿ ಮಹಾರಾಜ....
ನಾವೇನು ಬರೀಗೈಲಿಲ್ರೀ ... ನಾವೂ ಬಳೀ ತೊಟ್ಟೇ ಕುಂತೀವಿ...!
ಅದು ಹೆಂಗೆ ಮುದುಕ ರಾಮನ್ನ ಪಟ್ಟದ ಮ್ಯಾಲೆ ಕುಂಡರ್ಸ್ತನ ನೋಡೇ
ಬಿಡ್ತೀವಿ....!
ರಾಮನ್ನ ಯುವರಾಜ ಮಾಡ್ತಾರಂತೆ ರಾಮನ್ನ!!!
ಮಕ್ಕಳಿಲ್ಲದ ಈ ಮುದುಕಂಗೆ ಎಳೇ ಹುಡುಗೀನ ಬಲೀ ಕೊಟ್ಟರು...!

ಆಯಪ್ಪಂಗೆ ಐವತ್ತರ ಆಜೂ ಬಾಜು...
ಈ ಹುಡುಗಿ ಇನ್ನಾ ಹದಿನಾರರ ಎಳೀ ಚಿಗರು...
ಯಪ್ಪಾ... ಮಕ್ಕಳಾದರ ಸಾಕು!
ಜೀವಶಕ್ತಿ ಉಕ್ಕಿ ಉಕ್ಕಿ ಚಿಮ್ಮತಾ ಐತಿ ಈಕೀ ಕಣ್ಣೊಳಗ...!
ಉಗುರ ಕೊನೀ ತಾಕಿದರ ಜೀವಸೆಲೀ ಉಕ್ಕತಾವು ಈಕಿ ಮೈಯೊಳಗಾ...!
ಇಂಥಾ ಮಣ್ಣಲ್ಲಿ ಎಂಥಾ ಪೀಚಲು ಪೀಕು ಬೀಜಾನೂ ರಬ್ಬಡ ಮೊಳಕಿ ಒಡದೀತು...
ಈಕಿ ಹೊಟ್ಯಾಗ ಒಂದು ಗಂಡಸು ಮಗ ಹುಟ್ಟಿತು ಅಂದರ ಅವನಾ ಸಾಕೇತಪುರದ ಆಳರಸ ಆಗತಾನು....!

ಕೈಮ್ಯಾಲೆ ಕೈಯಿಟ್ಟು ಆಣೆ ಹಾಕತೀವಿ...

ಪಟ್ಟದ ರಾಣೀಗೆ ಮುಟ್ಟು ನಿಲ್ಲೋ ವಯಸ್ಸು...
ಎರಡನೇದು ಬಂಜರು ಬೇಚರಾಕು...
ಈಕೀನಾದ್ರೂ ಕುಡೀ ಒಡದರ ಸಾಕು...

ಈ ಮುದುಕನ ಗೋಳು ನೋಡಲಾರದ ಮುಟ್ಟಿದರ ಮಾಸೋ ಈ ಎಳೀ ಬಾಲೀನ ಮಾಲೀ ಮಾಡಿ ಈ ಗೂರು ಮುದುಕನ ಗೋಣಿಗೆ ನೇಣು ಹಾಕಿದ ನಮ್ಮ ರಾಜ – ಅವನ ಮನೀ ಕಾಯ್ವಾಗ..........

ಎಂಥಾ ಸುಕುಮಾರಿ ನಮ್ಮ ಕೈಕಾ...!
ಉಗುಳು ನುಂಗಿದರ ನುಂಗೋದು ಗಂಟಲದಾಗ ಕಾಣತಿತ್ರಿ...!

ಕೂಸಿನ ಆಸಿ ಕಣ್ಣಾಗ ತುಂಬಿಕಂಡು ಈ ಹುಡುಗಿ ಗಂಡನ ಮನಿಗೆ ಬಂತು...

ತವರಮನೀಂದ ಮಗಳ ಕಳಿಸಿ ಕೊಡೋ ಸಮಯ ನಮ್ಮ ರಾಣಿ ನನಗ ತಾಕೀತು ಮಾಡಿದಳು. “ಯವ್ವಾ... ಮಂಥರಾ ... ನಾನು ಬರೀ ಹಡದವ್ವ!.... ನೀನಾಕಿಗೆ ಪಡದವ್ವ...! ನೀನಾಕಿ ಜೋಡೀನಾ ಇದ್ದು ಆಕೀ ದೇಖರೇಖಿ ನೋಡಕಾ...”

ಮದವಿ ಆಗಿ ಬಂದ ಮ್ಯಾಲೆ ಈ ಮುದಿರಾಯ ಇಲ್ಲಾ ತಳಾ ಊರಿ ಕುಂತಬಿಟ್ಟ...
ಅವಾ ಉಳಿಕೀ ಹೆಂಡಿರ ಮಾರೀ ನೋಡಿದ್ದರ ಕೇಳ್ರೀ...!
ಪರಊರಿಗೆ ಹೋದರೂ ನಮ್ಮ ಕೈಕಾ ಅವನ ಹಿಂದಾ ಹೋಗಬೇಕು....
ಪರದೇಶಕ್ಕ ಹೋದರೂ ಅವನ ಹಿಂದಾ ಹೋಗಬೇಕು....!
ಲಡಾಯೀ ಮೈದಾನಕ್ಕ ಸಯಿತಾ ಅವನ ಜೋಡಿ ಕೈಕಾ ಹೋಗತಿದ್ದಳು....
ಹುಂ... ಆಕಿ ದೀಪದ ಬಾಲಿ... ನಾನಾಕಿ ಬೆನ್ನ ಹಿಂದಿನ ನೆಳ್ಳು...
ಒಂದು ದಿನ ನನ್ನ ತಾವು ಓಡೋಡಿ ಬಂದಳು ಕೈಕಾ...

## ಹಾಡು ೫

ಒಂದೆಂಬ ಕಾಲಕ್ಕ ಚಂದಿರ ಮೂಡಿತ್ತ ।
ಎರಡೆಂಬ ಕಾಲಕ್ಕ ತಂಗಾಳೀ ಬೀಸಿತ್ತ ।
ಮೂರೆಂಬ ಕಾಲಕ್ಕ ಮುಂಗೋಳಿ ಕೂಗಿತ್ತ ।
ನಾಕೆಂಬ ಕಾಲಕ್ಕ ಸಾಕು ಸಾಕೆನಿಸಿತ್ತ ।
ಐದೆಂಬ ಕಾಲಕ್ಕ ಐದೇರ ಕರೆದಿತ್ತ ।
ಏಳೆಂಬ ಕಾಲಕ್ಕ ಕಾಲ ಕುಣಿಸ್ಯಾಡಿತ್ತ ।
ಎಂಟೆಂಬ ಕಾಲಕ್ಕ ಕಂಟಕ ಹರಿದಿತ್ತ ।
ಒಂಭತ್ತು ಮಾಸಕ್ಕ ತುಂಬಿತುಳುಕಾಡಿತ್ತ ।

ದ್ಯಾವರು ಕಣ್ಣುಬಿಟ್ಟ
ಈ ಮುದಿಯ ಏನು ಕಿಸಿದಾನು?
ಕೈಕ ಬಿಮ್ಮನಸಿ ಆದ್ಲು

ಗಾಸಾರ ಅಂಬದು ಬರೋ ವ್ಯಾಳ್ಯಕ್ಯ ಗುದ್ದಿಕಂಡು ಬತ್ತದೆ ನೋಡ್ರಿ....
ಇವಳು ನೀರು ಹೊಯ್ಕೊಂಡಳೋ – ಒಂದನೋಳು, ಎರಡ್ನೋಳು, ಎಲ್ಲ
ಹೊಟ್ಟೆ ಹಿಡಕಂಡು ಕುಂತೇ ಬಿಟ್ರು...!!
ನಂಗೆ ಗೀಟು ಹೊಡದ ಹಂಗೆ ಗ್ಯಪ್ತಿ ಐತೆ–ನವಮೀ ದಿನ ನಮ್ಮ ಭರತ
ಹುಟ್ಟಿದ್ದು.... ಮೊದಲು ವರ್ ಅಂದದ್ದು ನಮ್ಮ ಮಗಾನೇ...!!

ಢಮ ಢಮ ಢಮ ನಗಾರಿ ಬಡದು ಬಜಾಯ್ಸಿ ಅದರ ಅಬ್ಬರದಾಗ ನಮ್ಮ ಮಗೂನ ಅಳು ಮುಣಗಿಸಿ – ಪಟ್ಟದ ರಾಣಿ ಗಂಡು ಕೂಸು ಹಡದಳು ಕಾಣ್ರಪ್ಪೋ ಅಂತ ಸಾರಿ ಬಿಟ್ರು ಊರ್ತುಂಬಾ...!!!

ನಾನೂ ಅಕ್ಷರ ಕಳ್ತೋಳೇ ಕಣ್ರೀ... ಅ... ಆ... ಇ... ಈ... ನೀವೇ ಹೇಳಿ ನೋಡ್ರಿ...

ಮೊದಲು ಭ ಬರ್ತದ!
ಆಮ್ಯಾಲ ರಾ ಬರ್ತದ!
ಆಮ್ಯಾಲ ಲ
ಕೊನೀಕೆ ಶ
ಭ–ಭರತ...! ರಾ–ರಾಮ...!! ಲ–ಲಕ್ಷ್ಮಣ...!!! ಶ–ಶತ್ರುಘ್ನ...!!!!

ಭಾಳ ಚಾಲೂಕೀ ಕಣ್ರೀ ಈ ಅರಮನೀ ಮಂದಿ...
ಅಕ್ಷರ ಮಾಲೀನೇ ಉಲ್ಟಾ ಪಲ್ಟಾ ಮಾಡಿಬಿಡ್ತಾರು...!
ರೆಂಬೆ ಮಣ್ಣಾಗೂರಿ

ಬೇರು ಮ್ಯಾಲೆ ಮಾಡಿ
ತಲೀ ಬಾಚಿ, ಬೈತಲಿ ತಗದು, ಜಡೀ ಹೆಣದು ಬಿಡ್ತಾರು...!
ಭೋ ಚಾಲೂಕೀ ಮಂದಿ...
ನಾ ಬದುಕಿರೋ ಗಂಟಾ ಇದು ನಡೀಲಿಕ್ಕೆ ಬಿಡೋಣಿಲ್ಲ...
ನನ್ನ ಕರದಾಗ ತಾಖತ್ತು ಇಲ್ಲದಿದ್ರೂ ಕರವಾಳದಾಗ ತಾಖತ್ ಐತಿ...
ಕೈಕಾ ಎಂಬ ಖಡುಗಾ ಕೈಯಾಗ ಹಿಡಿದು ಕಾಯಿ ನಡಸೋ ಮಾಯೀ ಅಂತ ತಿಳೀರಿ ನನ್ನ ....

ನೀರಿನ ಕೊಡಪಾನ ಮೋಡ–ಮಿಂಚನ ಖಡುಗಾ
ಒಳಗ–ಮಿಂಚನ ಖಡುಗಾ!
ತೆಂಕಣ ತಂಗಾಳಿಯೊಳಗ–ಜಂಝಾವಾತ
ತಿಳಕ–ಒಳಗಣ ಮಾತ

*(ಎಂದು ಮಂಥರೆ ಸೀರೆ ಝಾಡಿಸುವಾಗ ನಿಧಾನ ಕತ್ತಲು)*

## ದೃಶ್ಯ – ೩

*(ಕೈಕಯಿ ಆಭರಣ ಹಾಕಿಕೊಳ್ಳುತ್ತಾ ಇದ್ದಾಳೆ. ಹಿಂದೆ ಹಿಂದೇ ಮಂಥರಾ ನಡೆಯುತ್ತಾ ಮಾತಾಡುತ್ತಾಳೆ)*

ಮಂಥರಾ : ಮಗಳಾ... ಆಗ ನೀನಿನ್ನೂ ಹಾಲುಗಂದಮ್ಮ... ಒಂದು ಕೆನ್ನಿ ಹಾಲು .... ಒಂದು ಕೆನ್ನಿ ನೀರು... ಕಥೀ ಹೇಳಾ ... ಕಥೀ ಹೇಳಾ ಅಂತ ನನ್ನ ಕಾಡ್ತಾ ಇದ್ದೆ...
ದಿನಾ ಒಂದು ಕಥಿ ಏನು ಹೇಳ್ಳಿ ನನ್ನ ತಲೀ....?
ಕಥಿ ಏನೋ ಹುಟ್ಟುತಾವು.... ಹುಟ್ಟಿದ ಕಥಿ ಬಗಲಿಗ ಹಾಕಿಕೊಂಡು ಬೆಳಿಸೋದೈತಲ್ಲ ಅದಾ ಭಾಳ ಕಠಿಣ ಆಕತಿ...
ನಾನೂ ಹಿಂಗಾ ಅಂಗೈಯಾಗೆ ಒಂದು ಅಂಗಳ ಮಾಡಿ ಗೊಂಬೀ ಕುಣಿಸುತಾ ಇದ್ದೆ
ಒಂದಾನೊಂದು ಊರು
ಆ ಊರಿಗೆ ಒಬ್ಬ ರಾಜ
ಕೇಳ್ತಿದೀ ಕೈಕಾ?
ಒಂದಾನೊಂದು ಊರು... ಆ ಊರಿಗೆ ನೂರೊಂದು ಮಂದಿ ಅರಸರು – ಅಂತ ಯಾವ ಕಥೀನೂ ಹುಟ್ಟಂಗಿಲ್ಲ... ತಿಳ್ಕಾ...
ಒಂದು ಊರು.... ಆ... ಊರಿಗೆ ಒಬ್ಬಾನೊಬ್ಬ ಅರಸ...!

ನಿಂಗೆ ಇಬ್ಬರು ಅರಸರು ಬೇಕು ಅಂದರ ಎರಡು ಊರು ಬೇಕಾಗ್ತವು....!
ತಿಳಿತೇನಾ?
ಒಂದೂರಿಗೆ ಒಬ್ಬ ರಾಜ ಒಬ್ಬ ಯುವರಾಜ... ರಾಣೀಮಂದಿ ಏಟು ಇದ್ದರೂ ನಡದೀತು.... ರಾಜ ಮಾತ್ರ ಒಬ್ಬ ಅಂದರ ಒಬ್ಬನಾ ಮತ್ತ... ಆ ಒಬ್ಬ ರಾಜ ಶಿವಾ ಅಂದರ ಯುವರಾಜ ರಾಜ ಆಕಾನು....

ಕೈಕಯಿ : ಮಂಥರಾ... ಯಾಕ ಹೀಗೆ ಒಗಟಿನ ಮಾತಾಡ್ತೀ... ಮೈ ಸೊಟ್ಟ ಇದ್ದರ ಮಾತೂ ಸೊಟ್ಟ ಆಗಬೇಕೇನು?

ಮಂಥರಾ : ಇರಬಹುದೇ ಬಿಲ್ಲು ಡೊಂಕಾ!
ಅದರ ಅದಕ್ಕ ಹೂಡಿದ ಬಾಣ ನೆಟ್ಟಗೇ ಇರ್ತಾವು...!
ರಾಮಚಂದ್ರ ಚಲೋ ಹುಡುಗ... ಒಪ್ಪಿದೆ!
ಅವನೂ ನಿನ್ನ ಮಗನಾ... ಒಪ್ಪಿದೆ
ಅವ ಯುವರಾಜ ಆಗ್ತಾನು... ಆಗಲಿ
ನಮ್ಮ ಭರತ ಚಲೋ ಹುಡುಗ ಅಲ್ಲೇನು?
ಅವಾ ನಿನ್ನ ಮಗ ಅಲ್ಲೇನು?
ಅವಾ ಯುವರಾಜ ಆಗಬಾರದೇನು?
ಕುಂಡೀ ಅಳತೀ ನೋಡಿ ಯಾರೂ ಕುರ್ಚಿ ಮಾಡಿಸೋಣಿಲ್ಲ... ಹಾ....
ಇಬ್ರೂ ದಶರಥ ರಾಜನ ಮಕ್ಕಳಾ!
ಇವ ಕೈಕಾ ಹೊಟ್ಟೇಲಿ ಹುಟ್ಟಿದ
ಅವ ಕೌಸಲ್ಯ ಹೊಟ್ಟೇಲಿ ಹುಟ್ಟಿದ
ಕೌಸಲ್ಯ ಮಗ ಅಂದ ಮಾತ್ರಕ್ಕ ರಾಮನ ತೆಲೀ ಮ್ಯಾಲೆ ಎಲ್ಡು ಕೊಂಬು ಮೂಡ್ಯಾವೇನಾ?

ಕೈಕಯಿ : ಮಂಥರಾ... ಸೂರ್ಯವಂಶದ ಸಂಪ್ರದಾಯ ನಿನಗೆ ತಿಳೀದು...
ಯಾರು ಹಿರೀ ಮಗನೋ ಅವನಿಗೇ ಇಲ್ಲಿ ಯುವರಾಜ ಪಟ್ಟ...!

ಮಂಥರಾ : ಹಿರೀಕ... ಕಿರೀಕ...
ಒಂದು ಘಳಿಗಿ ಮುಂಚಾದಾರ ಹಿರೀಕ
ಒಂದು ಘಳಿಗಿ ಹಿಂಚಾದರ ಕಿರೀಕ
ಹಿಂಚು ಮುಂಚು ಮಾಡೋರು ಯಾರು?
ಪಂಚಾಂಗ ಹಿಡಿದ ಪಂಡಿತ ಮಂದಿ!

ಅವರು ಭೋ ಘನಂದಾರಿಗಳು! ಅಳದು ಕೊಟ್ರೆ ಅಕ್ಕನ ಕಡೆ... ಬಳದು ಕೊಟ್ರೆ ಭಾವನ ಕಡೆ!

ಹುಡ್ಗೀ ನನ್ನ ಮಾತ ನಂಬು ನೀ
ರಾಮಂಗಿಂತ ಮೂರೆಣಿಕಿ ಮೊದಲಾ ಹುಟ್ಟಿದವ ಭರತ!
ರಾಮ ರಾಮ ಅಂತ ಎಲ್ಲ ಜಪ ಮಾಡತಾರು
ನೀನು ಮಾಡತಿ...!

ಕೈಕಯಿ : ಮೊದಲೇ ಹುಟ್ಟಿದ್ದು ನಿಜ ಅಂತ ಅಂದುಕೊಂಡರೂ – ಭರತ ಕಿರೀ
ರಾಣಿ ಕೈಕಯಿ ಮಗ... ರಾಮ ಪಟ್ಟದ ರಾಣಿ ಕೌಸಲ್ಯಾದೇವಿ ಮಗ...

ಮಂಥರಾ : ಪಟ್ಟದ ರಾಣೀ... ಪಟ್ಟದ ರಾಣೀ.... ಪಟ್ಟದ ರಾಣೀ
ಕೇಳೀ ಕೇಳೀ ತೆಲಿ ಚಿಟ್ಟು ಹಿಡಿದು ಹೋಗ್ಯೈತಿ ನನಗ... ಪಟ್ಟದ ರಾಣೀ
ಮಗನಿಗಾ ರಾಜ್ಯಪಟ್ಟ ಅಂತ ಕಟ್ಟು ಕರಾರು ಆಗ್ಯೈತೇನು?

ಒಂದು ಮಾತು ತಿಳಕೋ; ಗಟ್ಟಿ ಇದ್ದರೆ ಪಟ್ಟ

ನನ್ನ ಮಗ ವಂಶಕ್ಕ ಹಿರೀಕ... ಪಟ್ಟ ಅವಂಗಾ ಸಿಗಬೇಕು ಅಂತ ನೀನು
ಗಟ್ಟಿಸಿ ಕೇಳು ನಿನ್ನ ಗಂಡನ್ನ... ಭರತನಾ ವಂಶದ ಹಿರೀಮಗ ಅಂತ
ಮಹಾರಾಜಂಗೇನು ಗೊತ್ತಿಲ್ಲೇನು?
ಗೊತ್ತೈತಿ... ಖರೇ ಖಬರೇನು ಅಂತ ಗೊತ್ತೈತಿ

ಅದಕ್ಕಾ ನಮ್ಮ ಮಗನ್ನ ಅಜ್ಜನೂರಿಗೆ ಸಾಗುಹಾಕಿರದು
ಅವ ಇಲ್ಲದ ವ್ಯಾಳ್ಯಾಗ ಜಟ್ ಪಟ್ಟಂತ ಪಟ್ಟದ ತಯಾರಿ ನಡಸಿರದು...
ಯಾರು ಹಿರೀಕ ಯಾರು ಕಿರೀಕ – ಶಿರದ ಮ್ಯಾಗೆ ಕರಾ ಊರಿ ಹೇಳಲಿಕ್ಕೇ
ಬೇಕು ಅಂತ ಭರತ ಜಪ್ಪಿಸಿ ಕೇಳಿಗೀಳಿದ್ರೆ....

ಕೈಕಯಿ : ತಾನೇ ಹಿರೀಮಗ ಅಂತ ಆದ್ರೂ ರಾಮನ ಕೈ ತಪ್ಪಿಸಿ ತಾನು ಯುವರಾಜ
ಆಗೋದಕ್ಕೆ ಖಂಡಿತ ಭರತ ಒಪ್ಪತಾ ಇರಲಿಲ್ಲ.......

ನನಗೆ ಗೊತ್ತು ಅವನ ಮನಸ್ಸು...
ರಾಮ ಅಂದರೆ ಜೀವ ಅವನಿಗೆ!

ನನಗಿಂತ ರಾಮಚಂದ್ರ ವೀರ
ನನಗಿಂತ ರಾಮಚಂದ್ರ ಧೀರ
ನನಗಿಂತ ರಾಮಚಂದ್ರ ಧರ್ಮಾತ್ಮ

ಈ ಮಾತು ಅದೆಷ್ಟು ಸಾರಿ ಹೇಳಿದಾನೋ..........
ರಾಮನೇ ಯುವರಾಜ ಆಗಲಿ ಅಂತ ತಂದೆಗೆ ಹೇಳಿಬಿಡೋನು...

ಮಂಥರಾ : ಅವ ಬ್ಯಾಡ ಅಂತಾನೋ ಬೇಕು ಅಂತಾನೋ....
ಈ ಮಂದಿ ಕೇಳಿದರಾ ಅವನ್ನ....?

ಕೊಡೋದು ನಾವು ಕೊಡಲಿಕ್ಕೇ ಬೇಕು
ಹಿಡಿಯೋದು ಬಿಡೋದು ಪಡೆಯೋರ ಮರ್ಜಿ!
ಭರತನ್ನ ಒಂದು ಮಾತು ಕೇಳಿ – ಅವ ಬ್ಯಾಡಾ ಅಂದರ – ಹಾದೀಲಿ
ಹೋಗೋ ದಾಸಯ್ಯನಿಗೆ ಕೊಡಲಿ.... ಯಾರು ಬ್ಯಾಡ ಅಂತಾರು?
ಅವ ಊರಲ್ಲೇ ಇಲ್ಲದ ಕಾಲಕ್ಕ ಗುಟ್ಟು ಗುಟ್ಟಾಗಿ ಯಾಕ ಈ ಪಟ್ಟದ
ಏರ್ಪಾಡು?
ಯಾಕ???

ಯಾಕ ಅಂದರ – ಯುವರಾಜ ಪಟ್ಟಕ್ಕ ಭರತನೇ ನಿಜವಾದ ಬಾಧ್ಯಸ್ಥ...
ಅವನಿಗೆ ಯಾಮಾರಿಸಿ ರಾಮಂಗೆ ಯುವರಾಜ ಪಟ್ಟ ಕಟ್ಟುತಾ ಅವರೆ....
ಇವತ್ತು ಯಾರು ಯುವರಾಜ ಆಕಾರೆ ಅವರಾ ನಾಳೆ ಮಾರಾಜ ಆಕಾರು!
ಇವತ್ತಿಲ್ಲ ಅಂದರ ನಿನ್ನ ಮಗಂಗ ಯಾವತ್ತೂ ಇಲ್ಲ ತಿಳಕೋ...
ಇದೆಲ್ಲಾ ಕೌಸಲ್ಯಾ ಕಡೀ ಮಂದಿ ಹುನ್ನಾರ ಐತಿ....

ಕೈಕಯಿ : ಅವರು ಏನೇ ಮಾಡಿದರೂ ಮಹಾರಾಜ ನನ್ನವನೇ....
ನಾನು ಹಾಕಿದ ಗೆರೆ ದಾಟೋದಿಲ್ಲ – ಮಹಾರಾಜ!

ಮಂಥರಾ : ಹಾಕಿದ ಗೆರಿ ದಾಟೋಣಿಲ್ಲ ಅವ
*(ನಕ್ಕು)*
ಅದಕ್ಕಾ.... ಅದಕ್ಕಾ ಮತ್ತ
ನೀ ಗೆರೀ ಹಾಕೋ ಮದಲಾ ದಾಟಿ ಹೋಗ್ಯಾನವ....

ಈಟೊಂದು ಹೇಳತಿ .... ರಾಮಂಗೆ ಯುವರಾಜ ಪಟ್ಟಾ ಅಂಬೋದು
ಹ್ಯಂಗೆ ಗೊತ್ತಾತು ನಿಂಗೆ?
ಮಾರಾಜ ಹೇಳಿದನಾ?
ಮಾರಾಣಿ ಹೇಳಿದ್ಲಾ?
ಎಲ್ಲಾ ನನ ಮಕ್ಕಳಾ ಅಂತೀ.... ರಾಮ ಲಕ್ಷ್ಮಣ ಶತ್ರುಘ್ನ ಹೇಳಿದ್ರಾ?
ಒಬ್ಬ ಪುಡಗೋಸಿ ದಾಸಿ – ದಾಸಿ ಹೇಳಬೇಕಾ ನಿನಗೀ ಮಾತು?
ಥೇ... ಥೇ... ಥೇ...! ಮಗಳಾ... ನಾನೇ ಏನಾರ ಕೈಕಾ ಆಗಿದ್ರೆ ಪಟಕ್ಕಂತ
ಕತ್ತ ಮುರದು ಶಿವಾ ಅಂದುಬಿಡತಾ ಇದ್ದೆ... ಹಾ...

ಕೈಕಯಿ : *(ಬೆರಳು ಮುರಿದುಕೊಳ್ಳುತ್ತಾ)*
ಮಹಾರಾಣಿ ಅರಮನೆಯಿಂದ ಬರೋವಾಗ ಖೋಕ್ ಅಂತ ಯಾರೋ
ನಕ್ಕ ಸದ್ದು ಕೇಳಿಸಿತು... ಲೆಕ್ಕಿಸದೆ ನಾನು ಬಂದುಬಿಟ್ಟೆ... ಎದುರಿಗೆ
ರಾಮಚಂದ್ರ ಬಂದ... ಅವನಾದರೂ ಹೇಳಬಹುದಾಗಿತ್ತು ನನಗೆ.

ಮಂಥರಾ : ಹೇಳಲಿಲ್ಲ...

| | | |
|---|---|---|
| ಕೈಕಯಿ | : | ನೀನು ನನ್ನ ಚಿಕ್ಕಮ್ಮ ಅಲ್ಲ... ಅಮ್ಮ ಅನ್ನುತ್ತಿದ್ದ ರಾಮಚಂದ್ರ... |
| ಮಂಥರಾ | : | ಹೇಳಲಿಲ್ಲ...! |
| ಕೈಕಯಿ | : | ಅವನಿಗೆ ವಿಷಯ ತಿಳಿದಿತ್ತೋ ಇಲ್ಲವೋ .... ತಿಳಿದಿದ್ದರೆ ಖಂಡಿತಾ ಅವನು ಹೇಳ್ತಾ ಇದ್ದ... ನಾನು ಎತ್ತಿ ಆಡಿಸಿದ ಕೂಸು ಅವನು...<br>ಭರತ ಅಂದರೆ ಅವನಿಗೆ ಜೀವ!<br>ಕುದುರೆ ಕಂಡರೆ ಭರತಾ ನೀನು ಕುತುಕೋ...<br>ಆನೆ ಕಂಡರೆ ಭರತಾ ನೀನು ಕೂತುಕೋ...<br>ರಥಾ ಕಂಡರೆ ಭರತಾ ನೀನು ಕೂತುಕೋ... |
| ಮಂಥರಾ | : | (ಥಟ್ಟನೆ)<br>ಸಿಂಹಾಸನ ಕಂಡರೆ ಭರತಾ ನಾನು ಕೂಡ್ತೀನಿ!!! |
| ಕೈಕಯಿ | : | (ಥಟ್ಟನೆ ತಿರುಗಿ ಮಂಥರೆಯ ಕೈಹಿಡಿದು)<br>ಮಂಥರಾ! ಇವರೆಲ್ಲಾ ಯಾಕೆ ಹೀಗೆ ಮಾಡಿದರು? |
| ಮಂಥರಾ | : | ನಿನ್ನ ಗಂಡನೇ ಹೇಳಬಹುದಿತ್ತು: "ಕೈಕಾ... ರಾಮಂಗೆ ಯುವರಾಜ ಪಟ್ಟ ಕಟ್ಟಬೇಕು ಅಂತ ಎಲ್ಲಾ ಹೇಳ್ತಾ ಅವ್ರೆ, ನೀನೇನು ಹೇಳ್ತೀ...? ಕಟ್ಟೋಣೇನು....?"<br>ಮಾರಾಯ್ರಂಗೆ ಕಟ್ರಿ... ಯಾರು ಬ್ಯಾಡಾ ಅಂತಾರು ... ಅನ್ನತಾ ಇದ್ದಿ ನೀನು... |
| ಕೈಕಯಿ | : | ನಿಜ... ಕಟ್ರಿ ಅನ್ತಾ ಇದ್ದೆ ನಾನು.... ಮಹಾರಾಜ ಒಂದ್ ಮಾತು ಹೇಳಿದ್ರೆ ಸಾಕಾಗಿತ್ತು... |
| ಮಂಥರಾ | : | ಯಾಕೆ ಹೇಳಲಿಲ್ಲ ಅವಾ?<br>ಯಾಕೆ ವಾರದಿಂದ ಮಾರಿ ತಪ್ಪಿಸಿ ಓಡಾಡತಾ ಇದ್ದ?<br>ಕೈಕಾ... ನಾನು ಹೇಳತೀನಿ ಕೇಳು: ನಿನ್ನ ಒಂದು ಹುಲ್ಲಕಡ್ಡಿಗಿಂತ ಅತ್ತತ್ತ ಮಾಡವ್ರೆ ಅವ್ರು...<br>ರಾಮ ಸಿಂಹಾಸನದಾಗ ಕುಂತಾ ಅಂದರ, ಕೌಸಲ್ಯಾ ರಾಜಮಾತ ಆಕಾಳು...<br>ಆಳುಕಾಳು ಎಲ್ಲಾ ಆಕೀ ಮಾತಾ ಕೇಳತಾರು...<br>ಕೌಸಲ್ಯಾ ಕಡೀ ಮಂದಿ ಹಗಲ ದೊಂದೀ ಹಿಡಿಸಿ ಮೆರೀತಾರು.<br>ಆಕೀ ದಾಸಿಗೋಳು ಸುತಾ ನಮ್ಮ ಸ್ವಾಟೀ ತಿವಿತಾರು... ನೀನ ಮುಂದ ಬಂದರ ಒಂದು ನಮೂನಿ ಹುಳ್ಳಗ ನಕ್ಕು ಹಿಂದಾಗಡಿಯಿಂದ ಕುಂಡೀ ತಿರವಿಕೋತ ಹೋಕಾರು. |

ನಿನ್ನ ಮುದೀ ಗಂಡ ಹಿರೀರಾಣೀ ಕೈಗೊಂಬಿ ಆಕಾನು... *(ಅಭಿನಯಿಸಿ ತೋರಿಸುತ್ತಾ)* ಬಸವಣ್ಣಾ... ಈಕೀನ ಮದವೀ ಆಗತೀ... *(ತಲೆಹಾಕಿ ಒಪ್ಪಿಗೆ)* ... ಆಗೋಣಿಲ್ಲಾ...? *(ತಲೆ ಕೊಡವಿ ಅಸಮ್ಮತಿ)*...
ಮಂಡೀ ಕಸವು ತೀರಿದಮ್ಯಾಗ ನೀನಾರ ಯಾಕ ಬೇಕು ಆವಂಗಾ...?
ಕೌಸಲ್ಯಾ ಮಹಾರಾಣಿ ಸಿಂಹಾಸನದ ಮ್ಯಾಲ ಕಾಲು ಚಾಚಿ ಕುಂತಿರ್ತಾಳು...
ನೀನ ಬಂದು ತಲೀಮ್ಯಾಲ ಸೆರಗಹಾಕಿಕೋತ, ತಲೀ ಆಕೀ ಕಾಲಿಗ ಹಚ್ಚಿ,
ಕಣ್ಣಿಗೆ ಆಕಿ ಕಾಲಧೂಳ ಹಚ್ಚಿಕೋತ, "ಯವ್ವಾ... ಕತ್ತೂ ನಿನ್ನದಾ –
ಕಿರಪಾಣೀನೂ ನಿನ್ನದಾ... ಹೆಂಗಬೇಕೋ ಹಂಗ ಕುಯ್ಕೋ" ಅಂತ...
ಕೆನ್ನೆ ಕೆನ್ನೆ ಬಡಕೋತ –

ಕೈಕಯಿ : ಸಾಕು ಮಂಥರಾ... ಸಾಕು ನಿಲ್ಲಿಸು ನಿನ್ನ ಮಾತು
ಕಾಸಿದ ಸಾಸಿವೇ ಎಣ್ಣೆ ಕಿವಿಯಲ್ಲಿ ಸುರಿದಹಾಗೆ ಆಯ್ತು

ನನ್ನ ಕನ್ನಡೀನೇ ನನ್ನ ನೋಡಿ ನಗ್ತಾ ಇದೆ
ನನ್ನ ಕೈಯೇ ನನ್ನ ಮುಖಕ್ಕೆ ತಿವಿತಾ ಇದೆ
ಹೆಂಚ ಮೇಲಿನ ಹೋಳಿಗೇ ಹಾಗೆ ನನ್ನ ಹೊಟ್ಟೆ ಸೀಯ್ತಾ ಇದೆ
ನುಲಿದು ನುಲಿದು ತಿರುಚಿದ ಹಾಗೆ ನನ್ನ ಕರುಳು ನೋಯ್ತಾ ಇದೆ

ಸಾಕು ಮಂಥರಾ ಸಾಕು ನಿಲ್ಲಿಸು ನಿನ್ನ ಮಾತು
ಕಾಸಿದ ಸಾಸಿವೆ ಎಣ್ಣೆ ಕಿವಿಯಲ್ಲಿ ಸುರಿದ ಹಾಗಾಯ್ತು

ಮಂಥರಾ : *(ಕರುಣೆಯಿಂದ ಕೈಕಯಿಯನ್ನು ಸಮೀಪಿಸಿ)*
ಸತ್ಯ ಅಂಬೋದು ಅಗದೀ ಕಠೋರ ಇರ್ತತಿ ಮಗಳಾ
ಮಾಯದ ಫರದಿ ಸೀಳಿ ನೋಡಿದರಾ ಕಾಣಬಾರದ್ದೆಲ್ಲ ಕಾಣ್ತಾವು...
(ದೃಢ ಸ್ವರದಿಂದ)
ಚಿಂತಿ ಮಾಡಬ್ಯಾಡ... ಕತ್ತಲ ತೆಲೀ ಸೀಳಿದರ ಬೆಳಕಿನ ಬೈತಲಿ ಒಂದು
ಕಂಡೇ ಕಾಣ್ತದ....

ಕೈಕಯಿ : *(ದೀನಳಾಗಿ)*
ಹಿಂದೆ... ಮುಂದೆ
ಅಕ್ಕ... ಪಕ್ಕ
ಮೇಲೆ... ಕೆಳಗೆ
ಒಳಗೆ... ಹೊರಗೆ
ಬರೀ ಕತ್ತಲೆ ...
ಕಾಲುದಾರಿ ಎಲ್ಲೂ ಕಾಣ್ತಾ ಇಲ್ಲ ಮಂಥರಾ...

ಮಂಥರಾ : *(ಅಂಗೈ ಕುಡತೆ ಮಾಡಿ ತೋರಿಸುತ್ತಾ)*
ಇದಾ... ಮಣ್ಣಪಣತಿ...!
*(ಬೆರಳು ತೋರಿಸಿ)* ಇದಾ... ಹೊಸದ ಬತ್ತಿ
ನಾನು ದೀಪ ಹಚ್ಚತೀನಿ
ಆ ಬೆಳಕಿನಾಗ ಕಾಲು ಹಾದಿ ಹುಡಕತೀನಿ...
*(ಕರಿಯ ಮುಸುಕು ಹಾಕಿಕೊಂಡು, ಅಪ್ರದಕ್ಷಿಣ ತಿರುಗತೊಡಗುತ್ತಾಳೆ. ಅವಳ ಸುತ್ತಾ ಒಂದು ಕಪ್ಪು ವರ್ತುಲ ಕಾಣಿಸುತ್ತಾ ಇದೆ)*

**ಹಾಡು ೭**

ತಿರಗತಾವ ತಿರಗತಾವ ಕಾಲ ಚಕ್ರ ಹಿಂದಾ
ಅಳ್ಳು ಸಿಡಿಯತಾವ ಎಣ್ಣಿ ಕುದಿವ ಬಾನಿನಿಂದಾ
ಮುಗಿಲ ಕುಕ್ಕುತಾವ ಹದ್ದ, ಮಿಂಚಿನ ಕೊಕ್ಕಿಂದಾ
ಕೋಡಗಲ್ಲ ಗುಡ್ಡ ಗುಮ್ಮತಾವ ಒಂದಕ್ಕೊಂದಾ

ಚಕ್ರ ಕಳಚತೈತೆ ಮುಗಿಲ ರಥದ ಅಚ್ಚಿನಿಂದಾ
ಕೈಯ ಇಕ್ಕತವಳೆ ಭೂಮಿತಾಯಿ ಅಚ್ಚೆಯಿಂದಾ

“ಏನಬೇಕ ಕೇಳು” ವದರತೈತೆ ಆಕಾಶಾ
ಕೇಳಿದಾಗ ಎರಡು ವರಾ! ಬ್ಯಾಡ ಮೀನ ಮೇಷಾ...!!!

*(ಈ ಕ್ರಿಯೆ ಮುಗಿಯುವ ವೇಳೆಗೆ ಕೈಕಯಿ ಎದ್ದು ನಿಂತಿದ್ದಾಳೆ. ಮಂಥರೆಯ ಕೊನೆಯ ಮಾತನ್ನು ತನಗೆ ತಾನೆ ಹೇಳಿಕೊಳ್ಳುತ್ತಾಳೆ)*

ಕೈಕಯಿ : ಬೇಡಿದಾಗ ಎರಡು ವರ ಬೇಡ ಮೀನ ಮೇಷ
ಬೇಡಿದಾಗ ಎರಡು ವರ ಬೇಡ ಮೀನ ಮೇಷ

ಮಹಾರಾಜ ಕೊಟ್ಟಮಾತು ನೆನಪಾಗ್ತಾ ಇದೆ
“ಬೇಕಾದಾಗ ಬೇಕಾದ್ದು ಕೇಳು... ಕೊಡ್ತೀನಿ”
ಈಗ ಕೇಳ್ತೀನೆ...!
ರಘುವಂಶದ ರಾಜರು ನಾಲಿಗೆ ಮೇಲೆ ನಡೀತಾರಂತೆ...!
“ಬೇಕಾದಾಗ ಬೇಕಾದ್ದು ಕೇಳು ಕೊಡ್ತೀನಿ....”
ಮಂಥರಾ... ಕಾಲು ದಾರಿ ಈಗ ರಾಜಮಾರ್ಗದ ಹಾಗೆ ಕಾಣ್ತಾ ಇದೆ...!
ನನ್ನ ಕರುಳ ಕುಡೀನ ಸಾಕೇತದ ಸುವರ್ಣ ಸಿಂಹಾಸನದ ಕಡೆ
ಕರೆದೊಯ್ಯೋ ರಾಜರಸ್ತೆ ಕಾಣ್ತಾ ಇದೆ.

ಮಂಥರಾ : ಐದುಬೆಳ್ಳಾಗೆ ಐದು ಬತ್ತಿ
ಅಬ್ಬಬ್ಬ...
ಭಗ ಭಗ ಭಗ ಉರೀತಾ ಅದಾವು ನನ್ನ ಬೆಳ್ಳು...!

ಕೈಕಯಿ : (ಬೆರಳನ್ನು ಉಫ್ ಎಂದು ಊದಿ)
ಈ ಡೊಂಕು ಬೆರಳಿಗೆ
ನನ್ನ ವಂಕೀ ಉಂಗುರ...!

ಮಂಥರಾ : (ಕೈಕಯಿಯ ಗಲ್ಲ ಹಿಡಿದು ಅಲುಗಿಸುತ್ತಾ)
ಏಟು ಚಂದಕಾಣತೀಯೇ ನನ್ನ ಕಣ್ಣಾಗಿನ ಬಣ್ಣದ ಗೊಂಬೀ

ಕೈಕಯಿ : ಮಂಥರಾ... ಯಾವ ವರ ಕೇಳಲೇ ನನ್ನ ಮಹಾರಾಜನನ್ನ?

ಮಂಥರಾ : ಈಗ ನಾನಾ ಮಹಾರಾಜ.. (ರಾಜನ ದನಿಯಲ್ಲಿ) ಕೇಳು... ಕೇಳು ಕೈಕಾ...
ಬೇಕಾದ್ದು ಕೇಳು....

ಕೈಕಯಿ : (ತನ್ನಲ್ಲೇ)
ಯಾಕೋ ನಾಲಗೆ ಹಿಡೀತಾ ಇದೆ.

ಮಂಥರಾ : ಕೈಕಾ... ನಿನ್ನ ಮಗನಿಗೆ ಯುವರಾಜ ಪಟ್ಟ ಬ್ಯಾಡೇನು...?

ಕೈಕಯಿ : ನನ್ನ ಮಗನಿಗೆ ಯುವರಾಜ ಪಟ್ಟ...

ಮಂಥರಾ : (ಗಟ್ಟಿಯಾಗಿ ನಕ್ಕು) ಕೊಟ್ಟೆ... ಕೊಟ್ಟೆ ತಗೋ ನೀನು...
ಭರತನಿಗೆ ಯುವರಾಜ ಪಟ್ಟ ಕೊಟ್ಟೆ....
ಒಂದು ವರ ಆತು
ಇನ್ನೂ ಒಂದೂ ವರಾ ಐತಿ

ಕೈಕಯಿ : ಒಂದು ಸಾಕು... ಎರಡನೇ ವರ ಕೇಳೂ ಅಗತ್ಯಾನೆ ಇಲ್ಲ...

ಮಂಥರಾ : ಕೊಡೋ ಕೈ ಕೊಡ್ತಾ ಇರ್ವಾಂಗ ಕೇಳೋರ್ದೇನ್ ಕೊಳ್ಳೇ ಹೋಗದು...?
ಕೇಳು... ಕೇಳು...

ಕೈಕಯಿ : ಕೇಳತಕ್ಕ ಕೇಳಿಕೆ ಇರಬೇಕಲ್ಲ ಮಂಥರಾ?

ಮಂಥರಾ : ಭರತಂಗೆ ಯುವರಾಜ ಪಟ್ಟ ಕೇಳತಿ
ರಾಮನೂ ನಿನ್ನ ಮಗನಾ ಆದಾನ...
ಅವಂಗೂ ಏನಾರ ಕೇಳದು ಬ್ಯಾಡ ಅಂತೀ....?

ಕೈಕಯಿ : ಅಂದ್ರೆ?

ಮಂಥರಾ : ಅಂದರಾ... ಭರತಂಗೆ ನಾಡು ಕೇಳತೀ .... ರಾಮಂಗೆ ಕಾಡಾದ್ರೂ
ಕೇಳೋದು ಬ್ಯಾಡ?

ಕೈಕಯಿ : 'ಗಿರಿವನಪ್ರಿಯ ರಾಮ' ಅಂತ ಹಾಡಿ ಹಾಡಿ ಹೊಗಳತಾ ಅವ್ರೆ

ದೊಂಬೀದಾಸರು!
ಭರತನಿಗೆ ಯುವರಾಜಪಟ್ಟ
ರಾಮಂಗೆ ಹದಿನಾಕು ವರ್ಷ ಅಟ್ಟಂಬರಣ್ಯ ವಾಸ

ಕೈಕಯಿ : ತಪ್ಪೇ ಮಾಡಿಲ್ಲ ರಾಮ
ಶಿಕ್ಷೆ ಯಾವ ಬಾಯಿಂದ ಕೇಳಲಿ?

ಮಂಥರಾ : ನಮಗ ಭರತ ರಾಜನಾಗೋದು ಮುಖ್ಯ
ಭರತ ರಾಜನಾಗಬೇಕು ಅಂದರ
ರಾಮ ಕಾಡಿಗೆ ಹೊಗಲಿಕ್ಕೇ ಬೇಕು.....
ಬಿಲ್ಲು ಬಗ್ಗದೆ ಬಾಣ ಹಾರೋಣಿಲ್ಲ.....
ಈವತ್ತೇನೋ ಭರತನಾ ಯುವರಾಜ ಆಗಲಿ ಅಂದಾನು ರಾಮ....ರಾಜ
ಕಾರ್ಯದಾಗ ಇವತ್ತ ಅಂದದ್ದಾ ನಾಳೀಕೂ ನಾಯಕರು ಅಂತಾರ
ಅಂಬೋದು ಯಾವ ನಚ್ಚಗೀ...?ಕಾಲ ಉರುಳಿದ ಹಾಂಗ ನಾಲಗೀನೂ
ಉರಳತಾ ಇರ್ತಾವು– ಬಂಡೀ ಜೋಡಿ ಉರಳೋ ಚಕ್ರದ ಹಾಂಗ....
ಕಿವಿ ಕಚ್ಚೋ ಮಂದೀನೂ ಇರ್ತಾರು–ಕೌಸಲ್ಯಾ ಕಡೀ ಮಂದಿ ಬಾಯಿನಾಗ
ಬೆಳ್ಳ ಚೀಪತಾ ಕೂಡೋಣಿಲ್ಲ
ನಾಳೆ ರಾಮ ತಿರುಗಿ ಬಿದ್ದರ...?
ತಮ್ಮಗೋಳೂ ಅವನ ಜೋಡಿ ಕೂಡಿದರ...?
ಅರಮನಿ ಹಿರೀಕರೂ ಗುರುಜನ ಮಂತ್ರಿಗಳು ಪ್ರಜಾಮಂದಿ–ಎಲ್ಲ
ರಾಮನ ಹಿಂದ ನಿಂತರ?
ನಿಂತರ–ಭರತಂಗ ಯುವರಾಜಪಟ್ಟ ಉಳ್ದೀತು ಅಂತೀ?
ರಾಮ ಕಣ್ಣ ಮುಂದ ಸುಳಿತಾ ಇದ್ದರ ಭರತಂಗಾ ಪಿಚ್ಚನಿಸಿ ರಾಮಂಗ
ಅವ ರಾಜ್ಯ ಪಟ್ಟ ಒಪ್ಪಿಸಿದರ ಏನ ಮಾಡತಿ?
ಹಂಗೇನಾರ ಆದ್ರ ನಾವು ಮಾಡಿದ್ದು–ಕನ್ನಡೀ ತಿರವಿ ಹಿಡಿದು ತುರಬು
ನೋಡಿಕೊಂಡಂಗಾದೀತು...!

ಕೈಕಯಿ : ರಾಮ ಅಂದರೆ ಮಹಾರಾಜನಿಗೆ ಜೀವ...... ರಾಮ ಕಾಡಿಗೆ ಹೋಗಿ
ಇಲ್ಲೇನಾದರೂ ಆಗಬಾರದ್ದು ಆದ್ರೆ–

ಮಂಥರಾ : ಸಾವು ಬದಕೂ ಯಾರ ಕೈಯಾಗೈತೇ ಹುಚ್ಚವ್ವಾ...?
ಎಳೀಗಿಡಕ್ಕ ನಮ್ಮ ಆಸರ ಬೇಕು
ಮುದೀ ಮರಕ್ಕ ಆನು ಕೊಟ್ಟು ಏನಾಗೋದೈತಿ?
ಬದುಕು ಅಂಬೋದು ಮುದೀ ಮಂದಿ ಹಿಂದ ಬಿದ್ದಿರ್ತದ
ಎಳೀ ಮಂದಿ ಮುಂದ ಬಿದ್ದಿರ್ತದ

ಮುಂದ ನೋಡಾದಾ?
ಹಿಂದ ನೋಡದ?

ತೂಗಿ ತೂಗಿ ವಿಚಾರ ಮಾಡು.... ಹಾ....

ಕೈಕಯಿ : ಆದರೂ ಹದಿನಾಲ್ಕು ವರ್ಷ....?

ಮಂಥರಾ : ಮಗಳಾ....ಹದಿನಾಕು ಒಂದು ದಿವನಾದ ಸಂಖ್ಯಾ ಐತಿ...
ಲೋಕ ಅಂಬೋವು ಏಟದಾವು?
ಹದಿನಾಕೂ
ಮನು ಅಂಬೋರು ಏಟು ಮಂದಿ ಅದಾರು?
ಹದಿನಾಕು
ರಾಮಚಂದ್ರ ಏಟು ವರ್ಷಾ ವನವಾಸ ಹೋಕಾನು?
ಹದಿನಾಕು ವರ್ಷಾ
ಹದಿನಾಕು ವರ್ಷ ಏನ್ ಮಗಾ....ಇಕಾ ಇಕಾ ಅನ್ನದ್ರಾಗ ಕಳ್ದೀ ಹೋಕಾವು......
ಹದಿನಾಕು ವರ್ಷ ಕಳ್ದು ರಾಮ ಉಳಿದು ಊರಿಗ ಬಂದರ ಹಳೀ ತೆಲಿ ಇರೋಣಿಲ್ಲ
ಹೊಸ ತೆಲಿ ಅವನ ಮುಂದ ಬರೋಣಿಲ್ಲ!

ಎರಡೂ ದಂಡಿ ಸವರಿಕೋತ ಸರಯೂ ತಾಯಿ ಹರೀತಾ ಹರೀತಾ
ಹಳೇದೆಲ್ಲಾ ಮಳ್ಳಲ್ಲಿ ಮುಣಗಿ ಹೊಸ ಭರತ ದೇಶ ದಂಡೀಮ್ಯಾಲ ದಳ
ದಳ ದಳ ಅಳ್ಳಿಕೋತದ

ಕೈಕಯಿ : ಮಂಥರಾ ಹೀಗೆ ನೀನು ಯಾವತ್ತೂ ಮಾತಾಡಿರಲಿಲ್ಲ... ಕಾಲದ ವಿರುದ್ಧ
ಹೋಗು ಅನ್ನುತಾ ಇದಿ.... ಯಾಕೋ ನನ್ನ ಎದೆ ನಡುಗುತಾ ಇದೆ.....

ಮಂಥರಾ : ಮೋಡ ಒಡೀದೆ ಮಳೀ ಹೆಂಗ ಬಂದಾವು?
ಮೊಟ್ಟಿ ಒಡೀದೆ ಮರಿ ಹೆಂಗ ಬಂದಾವು?
ಎದೀ ಹರೀದೆ ನದಿ ಹೆಂಗ ಹರಿದಾವು?
ತಾವ ಸೀಯದೆ ಬತ್ತಿ ಹೆಂಗ ಉರಿದಾವು?

ಉಳೀ ಹೊಡತಾ ತಿನದೆ ಕಲ್ಲಿಗೆ ಕುಸುರು ಬಂದೀತಾ?
ತಾಯಿ ರಗುತಾ ಬಸೀದೇ ಕೂಸಿಗೆ ಉಸುರು ಬಂದೀತಾ?

ನೀರಿನ ಕೊಡಪಾನ ಮೋಡ ಮಿಂಚಿನ ಖಡುಗಾ
ಒಳಗ ಮಿಂಚಿನ ಖಡುಗ!

ತೆಂಕಣ ತಂಗಾಳಿಯೊಳಗ ಜಂಝೂವಾತ
ತಿಳಕ ಒಳಗಿನ ಮಾತ!
(ಹಾಡುತಾ ಮಂಥರಾ ಕೈಕಯಿ ಕಡೆ ಕೈ ಚಾಚುತ್ತಾ ಇರುವಾಗ ನಿಧಾನ
ರಂಗದ ಮೇಲೆ ಕತ್ತಲು)

## ದೃಶ್ಯ ೪

(ಒಂದು ಮುರುಕು ಕುರ್ಚಿಯ ಮೇಲೆ ಕಾಲು ಚಾಚಿ ಮಂಥರೆ ಕುಳಿತಿದ್ದಾಳೆ. ಅಂಗೈಯಲ್ಲಿ ಎಲೆ ಸುಣ್ಣ ನೊರೆಯುತ್ತಾ, ನೊರೆಯುತ್ತಾ ಮಾತಾಡತೊಡಗುತ್ತಾಳೆ.)

ಮಂಥರಾ : ನೂರಕ್ಕ ನೂರಾ ನಾ ಅಂದುಕೊಂಡಂಗೇ ಆತು....
ಕೈಕಾ ಹಿಂದ ನೋಡಬ್ಯಾಡ. ಮುಂದು ನೋಡೂ–ಅಂದೆ!
ಆಕಿ ಮುಂದಾ ನೋಡಿದಳು....
ಭೇಷ್...!
ಹಿಂದ ನೋಡ್ರಿ....ಇಲ್ಲ, ಮುಂದ ನೋಡ್ರಿ....
ಹಿಂದಾ ಮುಂದಾ ನೋಡೋರಂದ್ರೆ ನಂಗ ಮೈ ಚಿಲಿ ಚಿಲಿ ಅಂತಾವು.....

ವಯಸ್ಸಾದ ಕಾಲಕ್ಕ ಗಂಡಂದಿರ ಕಟ್ಟಿಕಂಡು ಏನ್
ಸುಕ್ರೋಳೋದೈತ್ರೀ...?
ಸುಮ್ಮಕ ರಿಪಿ ರಿಪಿ ಮಾಡತಾವು.... ದುಡಿಯೋ ಮಕ್ಕಳ ಹಿತಾ
ನೋಡಬೇಕಾಕತಿ ತಾಯಿಗೋಳು....
ನಾನಾ ಈ ಕೈಯಾರ ಆಕಿ ಕೂದಲ ಕೆದರಿ
ಮುಡದ ಮಲ್ಲಿಗೀ ಮಾಲಿ ಹರದು
ಮೊಣಕೈಮಟ್ಟಾ ತೊಟ್ಟ ಬಳೀ ಒಡದು
ಮಿಂಚಿನಂಥಾ ಹೆಣ್ಣಿಗೆ ಮುಗಿಲಿನಂಥಾ ಕರೀ ಕವುದಿ ಮುಸುಕು ಹಾಕಿ
ಆ ಕವ್ವೆಂಬೋ ಕತ್ತಲ ಕ್ವಾಣಿಗ ನೂಕಿ ಬಂದೀನ್ರೀ
ಹತ್ತಂಬತ್ತು ಇಪ್ಪತ್ತು ವರ್ಷದ ಹಿಂದ ಆಕೀನ ಶೋಬನದ ಕ್ವಾಣೀಗ
ಬಿಡುವಾಗ
ಏನೇನ ಮಾಡಿದೆನೋ ಅದಕ್ಕ ತದ್ವಿರುದ್ಧ ಮತ್ತ...!

ದಸ ಬಸ ಅಂತ ಓಡಿಕೋತ ಬಂದ ದಶರಥ..!
ಹತ್ತು ರಥ ಅದಾವು ಅವನವು...!
ಈ ದೇಶದವು–ಪರದೇಶದಿಂದ ತಂದವು.....ಸ್ವರ್ಗದ ದೊರೀನೇ

ಕೊಟ್ಟದ್ದೂ ಒಂದೈತಿ...!
ಇಟ್ಕಂಡು ಏನ ಮಾಡತೀರಿ? ಅಚ್ಚು ಸವೀತಾವು ಅಂತ ಈವಯ್ಯ ರಥ ಓಡಿಸೋದೇ ಇಲ್ಲರೀ....ಸಾರಥೀ ಸುಮಂತ್ರಾ ಕೆಲಸ ಬೋಗಸಿ ಇಲ್ಲದಕ್ಕೆ ಮಂತ್ರಿ ಆಗಿ ಕುಂತಾನು...!

*(ಎಲಿ ಉಂಡೆ ಮಾಡಿ ಬಾಯಿಗೆ ಒಗೆದು)*

ದಸ ಬಸ ಬಂದನಾ?
"ರಾಣಿವಾಸ ಕ್ರೋಧಾಗಾರ ಯಾಕ ಹೊಕ್ಕಿತು?" ಅಂದ....
ನೀವೇ ಕೇಳ್ರಿ ಸಾಹೇಬ್ರಾ ಅಂದಿನ್ರೀ.....
ರಾಮ ರಾಮಾ ಅಂತ ತಲೆ ಚೆಚ್ಚಿಕೋತ ಮುದಿರಾಜ ಕತ್ತಲ ಕೋಣೀ ಒಳಗ ಹೋದ....
ಎಡವಿಕೋತ ಬಿದ್ದಕೋತ ಈಯಪ್ಪ ರಾಣೀ ತಾವ್ ಹೊಗಿ ಮಾತು ಸುರೂ ಹಚ್ಚಿದ. ಮಾತು ಸುರು ಹಚ್ಚಿದನಾ?..... ನಾನು ಭೋ ಮಂಡೆ ಮಾಸಿದೋಳ್ರೀ...! ಗೋಡಿಗಾ ಕಿವಿ ಆನಿಸಿ ಕೇಳತಾ ನಿಂತೀನಿ ಮೊದಲಾ ಬರೀ ಪಿಸ ಪಿಸ–ಗುಸ ಗುಸ.... ನಿಧಾನ ಈಯಪ್ಪ ಗಂಟಲು ಏರಿಸಿ ಕೂಗತಾ ಅವ್ನೆ ....ಆಕೀನೂ ಗಂಟೀ ಹೊಡದ ಹಂಗೆ ಮಾತಾಡಲಿಕ್ಕೆ ಹತ್ಯಾಳ.....

*(ಮುಂದೆ ದಶರಥ ಮತ್ತು ಕೈಕಯಿಯ ಧ್ವನಿಗಳು ಕೇಳುತ್ತವೆ)*

ದಶರಥ : ನಾನು ನಿನ್ನ ದೇವತೆ ಅಂತ ತಿಳಿದಿದ್ದೆ...
ದೇವತೆ ಅಲ್ಲ ನೀನು
ಅಪ್ಸರೀ ಆಕಾರದ ರಕ್ಕಸಿ

ಕೈಕಯಿ : ಬೇಕಾದಾಗ ಅಪ್ಸರೀ....ಬೇಡವಾದಾಗ ರಾಕ್ಷಸಿ....ಹೆಂಗಸರನ್ನ ಗಂಡಸರು ನೋಡೋದೇ ಹಾಗೆ.... ನಾನು ಕೇಳಿರಲಿಲ್ಲ. ನೀವಾಗೆ ಬೇಕಾದಾಗ ಬೇಕಾದ್ದು ಕೇಳು ಕೊಡ್ತೀನಿ ಅಂತ ಮಾತು ಕೊಟ್ಟರಿ...ಈಗ ಕೇಳಿದೆ..... ಮಾತು ಉಳಿಸಿಕೋಳ್ಳೊದು ಬಿಡೋದು ನಿಮಗೆ ಬಿಟ್ಟದ್ದು.....

ದಶರಥ : ಭರತನಿಗೆ ಯುವರಾಜ ಪಟ್ಟ ಕೇಳು, ನಾನು ಬೇಡಾ ಅನ್ನೋಲ್ಲ... ಆದರೆ ರಾಮ ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕೂ ಅಂತೀಯಲ್ಲ....ಕಾಡು ಅಂದರೆ ಏನು ಅಂತ ತಿಳಿದಿದ್ದೀ ನೀನು .....ನೀನು ಒಪ್ಪೊತ್ತು ಕಾಡಿನಲ್ಲಿ ಇರಲಾರೆ....ಅಲ್ಲಿ ನಡಿಯೋಕೆ ರಸ್ತೆ ಇರೋಲ್ಲ....ಮಲಗೋಕೆ ಹಾಸಿಗೆ ಇರೋಲ್ಲ...ತಿನ್ನೋಕೆ ಅನ್ನ ಇರೋಲ್ಲ....ಕ್ರೂರ ಮೃಗಗಳು ....ಕ್ಷುದ್ರ ಕೀಟಗಳು ...ನರಹಂತಕ ರಕ್ಕಸರು... ಮಳೆ ಗಾಳಿ ಬಿಸಲು ಬೆಂಕಿ ... ಕಾಡು ಅಂದರೆ ಕೈದೋಟ ಅಂತ ತಿಳಿದಿದೀಯಾ...? ನಾಗರೀಕರು ಅಲ್ಲಿ

ಜೀವ ಸಹಿತ ಒಂದು ದಿನ ಬದುಕೋದು ಕಷ್ಟ....ಇನ್ನು ಸುಕುಮಾರ ರಾಮ ಹದಿನಾಲ್ಕು ವರ್ಷ....!? ನಿನ್ನ ಕರುಳು ಕರುಳಲ್ಲ– ಕರಿನಾಗರದ ಸಿಂಬಿ....! ನಿನ್ನ ಹೃದಯ ಹೃದಯ ಅಲ್ಲ–ಪಾಷಾಣದ ಗಡ್ಡೆ... ನಿನ್ನ ನಾಲಗೆ ನಾಲಗೆಯಲ್ಲ–ನರಕದ ಕದ...

ಕೈಕಯಿ : ಬೇಕಾದ್ದು ಬೈಯಿರಿ...ಬೈಗಳು ಎಲ್ಲಾ ಮುಗಿದ ಮೇಲೂ ಕೊನೇ ಶಬ್ದ ಒಂದು ನಿಮ್ಮ ಬಾಯಲ್ಲಿ ಬರಲೇ ಬೇಕು... ಹೌದು...ಅಥವಾ...ಇಲ್ಲ "ನಾನು ಕೊಟ್ಟ ಮಾತು ನಡಸ್ತೀನಿ ಅಥವಾ ಇಲ್ಲ..."
ಈ ಎರಡರಲ್ಲಿ ಒಂದು ಹೇಳಿ ... ಬರೀ ಬೈದರೆ ಬೈದ ಬಾಯಿ ಹೊಲಸು... ಅಷ್ಟೇ...!

ದಶರಥ : ಎಂಥಾ ಸಂದಿಗ್ಧ ತಂದಿಟ್ಟೆ...! ಆಡಿದ ಮಾತ ಮುರೀಬಾರ್ದು.... ನಾನು ಹೋಗ್ತೀನಿ ಬೇಕಾದರೆ ಕಾಡಿಗೆ ...ರಾಮ ಕಾಡಿಗೆ ಹೋಗಲಿ ಅನ್ನ ಬೇಡ...ಅದೂ ಹದಿನಾಲ್ಕು ವರ್ಷ ... ಒಂದು ಅರೆಕ್ಷಣ ನಾನು ರಾಮನನ್ನ ಬಿಟ್ಟಿರಲಾರೆ... ರಾಮ ಕಾಡಿಗೆ ಹೋದರೆ ನನ್ನ ಎದೆ ಒಡೆದು ಹೋಗತ್ತೆ.... ನಿನ್ನ ಮಗ ಯುವರಾಜ ಪಟ್ಟ ಏರಿದರೆ ನೀನು ವೈಧವ್ಯದ ಪಟ್ಟ ಏರಬೇಕಾಗುತ್ತೆ... ದರಿದ್ರ ದಾಮೋದರೀ...!

ಕೈಕಯಿ : *(ಒಂದು ಕ್ಷಣ ಗಂಡನನ್ನು ತೀವ್ರವಾಗಿ ನೋಡಿ)*
ಮುದಿ ಗಂಡಸರಿಗೆ ಹೆಂಡಿರಾಗಿ ಬರೋ ಹುಡುಗಿಯರ ಹಣೇಲಿ ಬ್ರಹ್ಮ ಹುಟ್ಟೋ ಮೊದಲೇ ವೈಧವ್ಯಪಟ್ಟದ ಕರಾರು ಪತ್ರ ಬರೆದಿರ್ತಾನೆ....!

ಐವತ್ತು ತುಂಬಿದ್ದ ನಿಮಗೆ ಹದಿನಾರು ತುಂಬದ ನನ್ನ ಧಾರೆ ಎರದು ಕೊಟ್ಟರು...ನಾನು ಸುಮಂಗಲೀ ಸಾವು ಪಡೀಬೇಕು ಅಂತ ಅರ್ಧ ವಯಸ್ಸಿಗೆ ಸತ್ತರೂ ನೀವು ನೂರು ವರ್ಷ ಜೀವ ಹಿಡಿದಿರಬೇಕಾಗುತ್ತೆ...!

ದಶರಥ : ನಿನ್ನ ಜೋಡಿ ಅಷ್ಟು ದಿನ ಕೂಡಿ ಬಾಳೋದಕ್ಕಿಂತ ಬೇಗ ಹೋಗಿಬಿಟ್ಟರೆ ಮೇಲು....
ನಿನ್ನ ಕೈ ಹಿಡಿದ ತಪ್ಪಿಗೆ ನಿನ್ನ ಕಾಲು ಹಿಡೀತೀನಿ ಕೈಕಾ...ಹಠ ಮಾಡಬೇಡ ....ಭರತ ಯುವರಾಜ ಆಗಲಿ....ಆದರೆ ರಾಮ ನನ್ನ ಕಣ್ಣ ಮುಂದೇ ಉಳೀಲಿ.... ಆಳ ನೋಡಬೇಕೂ ಅಂತ ಕಂಡವರ ಮಕ್ಕಳ ಹಳ್ಳಕ್ಕೆ ತಳ್ಳಬೇಡ.....

ಕೈಕಯಿ : ನೀವು ಯಾವುದನ್ನು ಹಳ್ಳಾ ಅಂತೀರೋ ಅದನ್ನೇ ನಾನು ಕಾಶ್ಮೀರದ ಕೊಳ್ಳ ಅಂತೀನಿ...
ರಾಮ ಯಾಕೆ ಅಲ್ಲಿಗೆ ಹೋಗಬೇಕು ಗೊತ್ತಾ?
ನಿಜ ಹೇಳ್ತೀನಿ ಕೇಳಿ...ನೀವು ನಂಬೋದಿಲ್ಲ.... ಗೊತ್ತು. ಆದರೂ

ಹೇಳ್ತೀನಿ....ಭರತನಷ್ಟೇ ನನಗೆ ರಾಮನೂ ಪ್ರಿಯ ....ಶೌರ್ಯ ವೀರ್ಯಗಳಲ್ಲಿ ಭರತನಿಗಿಂತ ರಾಮ ಮಿಗಿಲು...ಅದಕ್ಕೇ ರಾಮ ಕಾಡಿಗೆ ಹೋಗಬೇಕು...ದಕ್ಷಿಣದಿಂದ ದಸ್ಯುಗಳು ಒತ್ತರಿಸಿಕೊಂಡು ಬರುತ್ತಾ ಇದ್ದಾರೆ....ಅಯೋಧ್ಯೆ ಅವರ ಆಕ್ರಮಣಕ್ಕೆ ಒಳಗಾಗೋ ಕಾಲ ದೂರ ಇಲ್ಲ. ನನಗೆ ರಾಮ, ಭರತ ಇಬ್ಬರ ಹಿತಾನೂ ಮುಖ್ಯ.... ಅದಕ್ಕಿಂತ ಮುಖ್ಯ ಅಯೋಧ್ಯೆಯ ಹಿತ... ರಾಮ ರಾಜಪ್ರತಿನಿಧಿಯಾಗಿ ದಕ್ಷಿಣದ ದಂಡಯಾತ್ರೆ ಮಾಡುತ್ತಾನೆ. ಅಲ್ಲಿ ನೆಲೆಯೂರಿರೋ ದೈತ್ಯರನ್ನ ದಮನ ಮಾಡುತ್ತಾನೆ. ವಿಶ್ವಾಮಿತ್ರರ ಆಶ್ರಮದವರೆಗೆ ತಾಟಕಿ ತನ್ನ ಮಕ್ಕಳ ಜೊತೆಗೆ ಬಂದು ಯಾಗಕರ್ಮಗಳನ್ನು ಧ್ವಂಸ ಮಾಡುತ್ತಾಳೆ ಅಂದರೆ ಆ ಜನ ಇಲ್ಲಿಗೂ ಬರೋ ಕಾಲ ದೂರ ಇಲ್ಲ. ಹದಿನಾಲ್ಕು ವರ್ಷ ರಾಮ ದಂಡಕಾರಣ್ಯ ದಲ್ಲಿ ಸಂಚರಿಸಿ ದಕ್ಷಿಣ ಭಾರತವನ್ನು ನಾಗರಿಕಗೊಳಿಸಿ ಮತ್ತೆ ತಿರುಗಿ ಅಯೋಧ್ಯೆಗೆ ಬಂದು ರಾಜಸೂತ್ರ ಕೈಗೆತ್ತಿಕೊಳ್ಳುತ್ತಾನೆ....

ದಶರಥ : 'ಅಮಂಗಲ' ನಿನ್ನ ಬಾಯಲ್ಲಿ 'ಮಂಗಳ'... ಹಣ್ಣಿನ ರುಚಿ ನೋಡತೀನಿ ಅಂತ ಅದರ ಹೊಟ್ಟೆ ಬಗಿಯೋ ಚೂರಿ ನೀನು......

(ಕುಸಿದು ಕೂತು)

ಕಣ್ಣಿಲ್ಲದ ಮುದುಕ ಕಣ್ಣೀರು ಕರೀತಾ ಇದ್ದೀನಿ...

ರಾಮನನ್ನ ನನ್ನಿಂದ ದೂರ ಮಾಡಬೇಡ ಕೈಕಯಿ....

**ಹಾಡು**

ಕೆಸರಾಗೆ ಬಿದ್ದೈತೆ! ಮಂಡಿ ಊರೆದ್ದೈತೆ!
ತಿರು ತಿರುಗಾ ಬಿದ್ದೈತೆ ಪಟ್ಟಾದಾನಿ!
ತಾವರೇ ಬಳ್ಳಿ ಮೈಪೂರ ಸುತ್ತೈತೆ
ಹಿಡ್ತಾ ಸೆಡವಾಗಿರಲೇ ನನ್ನ ರಾಣೀ ॥

ಕಳ್ಳೂ ಚುರ್ರಂದಾವು ಎದಿ ನೀರು ಬೆಂದಾವು
ಕೆಸರೊಳಗೆ ಸಿಕ್ಕೈತೆ ಪಟ್ಟದಾನಿ
ಕಳ್ಳು ಕರಗದ ಇರಲಿ ಕಣ್ಣೀರ ಬರದಿರಲಿ
ಕಲ್ಲಾಗೆ ಕಲ್ಲಾಗೆ ನನ್ನ ರಾಣೀ

ಮಂಥರಾ : ದಶರಥ ಕಣ್ಣೀರು ಕರದದ್ದೇ ಬಂತು...
ಶಿವ ದೊಡ್ಡಾವ ! ಕರಗಲಿಲ್ಲ ನನ್ನ ಕೈಕಾ!

ಮಂಥರಾ ಹೇಳಿಕೊಟ್ಟ ಮಾತಾಡೋ ಮೊದ್ದು ಗಿಣೀ ಅಲ್ಲ ಆಕಿ...!
ರಾಜಕೀಯದ ಬಣ್ಣದ ಬಗರಿ ಹ್ಯಂಗ ಆಡಿಸಿಬಿಟ್ಟಳು ರಾಜನ ಮಂದ!!!
ನನಗಾ ಆ ಮುದುಕನ ಗೋಳಾಟ ನೋಡಿ ಕಳ್ಳು ಚುರು ಚುರು
ಅನ್ನುತ್ತಿದ್ದವು
*(ನಿಟ್ಟುಸಿರು ಬಿಟ್ಟು)*
ಯುವರಾಜ ಆಗಬೇಕಾದೋನು ಹೋದ
ಮಹಾರಾಜ ಆಗಿದ್ದೋನು ಹೋದ
ಒಂದೇ ಏಟಿಗೆ ಹಕ್ಕೀನೂ ಬಿತ್ತು....ಹಣ್ಣೂ ಬಿತ್ತು...
ಎಲ್ಲ ಹೋದ ಮ್ಯಾಲೆ ಬತ್ತಾ ಅವನೆ ನಮ್ಮ ಭರತ

ನಾವು ರಾಮ ಹೋಗಲಿ ಅಂದಿವಿ... ದೀಪದ ಹಿಂದ ನೆಳ್ಳೂ ಹೋಗೋ ಹಾಂಗ ಸೀತಾನೂ ಹೋದಳು...ರಾಮ ಸೀತಾ ಹೋದರೂ ಅಂದರ ಅವರ ಜೋಡಿ ಶಿವಪೂಜೀ ಕರಡೀ ಹಂಗ ಲಕ್ಷ್ಮಣನೂ ಹೋಗೋದಾ...? ನಮ್ಮ ಹುಡುಗ ಇದನ್ನೆಲ್ಲ ಹೆಂಗ ತಗೋತಾನೋ ತಿಳೀವಲ್ದು...ಅಜ್ಜನ ಊರಿಂದ ಹೊಂಟಿದಾನವ...ಶಿವನೇ ... ಅವ ಬಂದ ಕಾಲಕ್ಕ ಅರಮನೀ ಕಳಸ ಥಳ ಥಳ ಹೋಳೀಲಿ; ಒಡ್ಡೋಲಗದಾಗ ಗದ್ದಗೀಪೀಠ ನವರತ್ನಗೋಳ ಬಣ್ಣದ ಬಾಸಿಂಗ ತೊಟ್ಟ ಮದುಮಗಳ ಹಾಂಗ ಮಿರಿ ಮಿರಿ ಮಿರುಗಲಿ; ರಾಜಗದ್ದಿಗೀ ಮ್ಯಾಲ ವಿರಾಜಮಾನ ಆಗಿರೋ ಬಂಗಾರ ಕಿರೀಟ ಮೂಡಲದೊರೀ ಮಾರೀ ಹಾಂಗ ಮೆಲುನಗೀ ನಗಲೀ.....

ಟುವ್ವೀ ಟುವ್ವೀ ಹಕ್ಕೀ–ನೀ
ಸುವ್ವೀ ಸುವ್ವೀ ಹೇಳೂ
ನೀಳೀ ಬೋದಗಿ ಮ್ಯಾಲಾ– ನ
ಕ್ಷತ್ರದ ಅಕ್ಷತಿ ಕಾಳು
ಸುವ್ವೀ ಸುವ್ವೀ ಹಕ್ಕೀ ॥
ಬಾ...ಬಾ...ಭರತಾ ಬಾ....
ನೀ ಯುವರಾಜ ಆಗತಿ
ನೀ ಮಾರಾಜಾ ಸುತಾ ಆಗತಿ
ಬಾಗಿಲತಾವು ಬಾಲೇರು ನಿನಗ ಆರತ್ ಎತ್ತತಾರು
ಮುತ್ತೈದೇರು ಮುತ್ತಿನ ಸೇಸೆ ಎರೀತಾರು....
ಅಕಾ–ಅಲ್ಲಿ ನೋಡ–ರಾಜಮಾತ ಕೈಕಾ
ಇಕಾ–ಇಲ್ಲಿ ನೋಡಾ–ರಾಜದಾಸಿ ಮಂಥರಾ !
ವಾರವ್ವಾ.... !!!

ಅಜ್ಜೀ ಅಜ್ಜೀ ಅಂತ ನನ್ನ ಅಕ್ಕರೆಯ ಸಕ್ಕರೀ ಬೊಂಬಿ
ಓಡೋಡಿ ಬರತಾನು
ಮಗಾ! ನೀನು ಕೂಸಿದ್ದಾಗ ನಿಂಗ ಆಡಲಿಕ್ಕ
ಆನೀ ಗೊಂಬೀ ಕೊಡತಿದ್ದೆ
ಕುದರೀ ಗೊಂಬೀ ಕೊಡತಿದ್ದೆ

ಈಗ ಜೀವಂತ ಆನೀ ಕೊಡತೀನಿ
ಜೀವಂತ ಕುದರೀ ಕೊಡತೀನಿ
ಆನೀ ಆಗೇ ಅಜ್ಜೀ...ನಾ ಸವಾರಿ ಮಾಡತೀನಿ ಅಂತ ಇನ್ನ
ಕಾಡಂಗಿಲ್ಲಪ್ಪಾ ನನ್ನಾ....!!!
ಸೊಂಟ ಬಿದ್ದೋತು... ಬೆನ್ನು ಬಾಗಿ ಬಿಲ್ಲಾತು
ವಂಟಿ ಆಗತೀನಿ ನೋಡು ಬೇಕಾದ್ರ...
ಸವಾರಿ ಮಾಡತಿ?

ಆನೀ ಕುದರೀ ಎಲ್ಲಾ ರಾಮಣ್ಣಂಗೇ ಕೊಡೂ
ಅಂತ ರೊಚ್ಚು ಹಿಡಿದೀ ಮತ್ತಾ !

ಹಂಗೇನಾರಾ ರೊಚ್ಚು ಹಿಡಿದರ ಆ ರಾಮನ್ನ ಮಾತ್ರ ನಾವು ಗದ್ದಗೀ ಮ್ಯಾಲ ಕೂಡಿಸೋಣಿಲ್ಲ... ಹ್ಞಾ ... ನೀ ಹುಂ ಅನ್ನೋ ತನಕ ನಾನಾ ಗದ್ದಗೀ ಮ್ಯಾಲ–ಮೊಟ್ಟೀ ಮ್ಯಾಲ ಜಪ್ಪಿಸಿ ಕೂಡೋ ಕೋಳಿ ಹಾಂಗ ಕಾವಲು ಕುಂತೇನು...ಹಹ್ಹಾ...!

ಹಠ ಮಾಡಬ್ಯಾಡೋ ....ನಿಂಗೊಂದು ಹೊಸ ಕತೀ ಹೇಳತೀನಿ ....

**ಹಾಡು**

ಒಂದಾನೊಂದು ಊರು–ಆ
ಊರಿಗೊಬ್ಬ ರಾಜಾ
ರಾಜಂಗೊಬ್ಬ ರಾಣೀ
ರಾಣಿಗೊಬ್ಬ ದಾಸಿ

ದಾಸಿಗೊಬ್ಬ ರಾಣಿ
ರಾಣಿಗೊಬ್ಬ ರಾಜಾ
ರಾಜಂಗೊಂದು ಊರು
ಊರಿಗೊಂದು ತ್ವಾಟ

ತ್ವಾಟಕ್ಕೊಂದು ಬಳ್ಳಿ
ಬಳ್ಳಿಗೊಂದು ಎಲೀ
ಎಲೀಗೊಂದು ಅಡಕಿ
ಅಡಕಿಗೊಂದು ಮುದುಕೀ

*(ಹೇಳಿಕೊಳ್ಳುತ್ತಾ ನಿರ್ಗಮಿಸುವಾಗ ಕತ್ತಲು)*

**ದೃಶ್ಯ–೫**

*(ರಂಗದ ಮೇಲೆ ಒಂದು ಪಾರ್ಶ್ವದಲ್ಲಿ ಮಂಥರಾ, ಇನ್ನೊಂದು ಪಾರ್ಶ್ವದಲ್ಲಿ ಕೈಕಯಿ. ಒಬ್ಬರ ಮಾತಿಗೆ ಮತ್ತೊಬ್ಬರ ಮಾತು ಮೀಟುಗೋಲಾಗುತ್ತಾ ದೃಶ್ಯ ಪ್ರಾರಂಭವಾಗುತ್ತದೆ)*

**ಹಾಡು**

ಮಂಥರಾ : ತೆಂಕಣದ ತಂಗಾಳೀ ಬೀಸುತೈತೇ ಅಂತ
ಎದಿ ತೆರೆದು ಕುಂತಿದೀವಿ ।
ಸಾಕೇತ ಸಾಗರಕ ಭರತ ಬರತಾದಂತ
ಬಾಗಿಲಕ ನಿಂತಿದೀವಿ ।।

ಕೈಕಯಿ : ಗಂಧಮಾದನ ಗಿರಿಯ । ಗಂಧರ್ವ ಬರತಾನ ।
ಗಂಧ ಗಾಳಿಯ ಹೀರುತಾ ।
ಮಿಂಚಬಳ್ಳಿಯ ತೊಡವ । ತೊಟ್ಟ
ಮೇಘಕುಮಾರ
ಬಂದಾನ ಗಿರಿಯೇರುತಾ ।।

ಮಂಥರಾ : ಸಾಕೇತ ಸಾಗರಕ್ಕ ಭರತ ಬರೂಹಂಗ
ಭರತಕುಮಾರ ಬರತಾನಂತ
ಕಣ್ಣಾಗ ಎಣ್ಣೀ ಬಿಟ್ಟಕಂಡು ಕಾಯುತ ಕುಂತೀವಿ ನಾವು....

ಕೈಕಯಿ : ನಾವು ಮಾತ್ರ ಅಲ್ಲ–ಇಡೀ ಅಯೋಧ್ಯೆ ಭರತನಿಗಾಗಿ ಕಾಯ್ತಾ ಇದೆ... ಭರತ ಬಂದು ಅರಾಜಕ ಆಗಿರೋ ಅಯೋಧ್ಯೆಯಲ್ಲಿ ಮತ್ತೆ ರಾಜವ್ಯವಸ್ಥೆ ತರ್ತಾನೆ ಅಂತ... ಜನ ಕಾಯ್ತಾ ಇದಾರೆ...

ಮಂಥರಾ : ಕಡಲಿಗೆ ಭರತ ಬಂದರ ಹುಣ್ಣಿಮೀ ಚಂದ್ರಾಮ ಮತ್ತ ಸಾಕೇತದ ಆಕಾಶಕ್ಕ ಬರತಾನು ಅಂತ ಅನ್ನತಾ ಅವ್ರೆ ಹಣ್ಣು ಹಣ್ಣು ಮುದುಕಪ್ಪಗೋಳು.....

ಕೈಕಯಿ : ರಾಮಚಂದ್ರ ದೃಢ ಮನಸ್ಸಿನೋನು...ತಂದೆಯ ಮಾತು ಎಷ್ಟು ಮಾತ್ರಕ್ಕೂ ಅವನು ಮೀರೋನಲ್ಲ........
ಭರತ ಕರೆದರೂ– "ರಾಮನಿಗೆ ವನವಾಸ; ಭರತನಿಗೆ ರಾಜಪಟ್ಟ
ಅನ್ನೋದು ತಂದೆಯ ಮಾತು... ಅದನ್ನು ಮೀರೋ ಹಾಗಿಲ್ಲ ತಮ್ಮಾ....
ನನ್ನ ಕರ್ತವ್ಯ ನಾನು ಮಾಡುತ್ತೀನಿ .... ನಿನ್ನ ಕರ್ತವ್ಯ ನೀನು ಮಾಡು"–
ಅಂತಲೇ ಭರತನಿಗೆ ಅವನು ಹೇಳುತ್ತಾನೆ... ತಾಯಿಯ ಮಾತು
ಮೀರಿದರೂ, ಅಣ್ಣನ ಮಾತು ಭರತ ಮೀರೋದಿಲ್ಲ....

ಮಂಥರಾ : ಅಣ್ಣನ ಗದ್ದಗಿಮ್ಯಾಲೆ ತಮ್ಮ ಕುಂತ ಅಂತ ಜನ ಅಂದರಾ ಅನ್ನೋ ಗುಂಗೀಹುಳ ಈ ಹುಡುಗನ ತೆಲಿ ಹೊಕ್ಕಿದರೇ ಅನ್ನೋದಾ ನನ್ನ ಚಿಂತೀ.....

ಕೈಕಯಿ : ಮಹಾ ಪುರುಷ ಭರತ....!

*(ಸ್ವಲ್ಪ ತಡೆದು)*

ಎಲ್ಲರ ಹಾಗೆ ಈ ಭರತನೂ ಸಾಮಾನ್ಯ ಪುರುಷನೇ ಆಗಿದ್ರೆ ಈ ತಲೆ ನೋವೇ ಇರ್ತಿರಲಿಲ್ಲ. ಯಾಕಾದ್ರೂ ಹುಟ್ಟಿದನೋ ಈ ಮಹಾಪುರುಷ ನನ್ನ ಹೊಟ್ಟೇಲಿ?

ಮಂಥರಾ : ಇದಾ...ಇದಾ ಮತ್ತ ಬದುಕಿನ ಹಿಕಮತ್ತು....

ನಮ್ಮ ಮಕ್ಕಳು ನಮಗ ತಗಾ ಅನ್ನಬೇಕು: ಅನ್ಯರಿಗ ಹೋಗಾ ಅನ್ನಬೇಕು ಒಂದಾ ಮರದಾಗ ಬೇವು ಮಾವು ಎಲ್ಡೂ ಬರಬೇಕು ಅಂತೀವಿ ನಾವು...ಅದರ ಬನದಮ್ಮ ಅಂತಾಳು: ಮಾವು ಮಾವಿನ ಹಣ್ಣಾ ಬಿಡಬೇಕು: ಬೇವು ಬೇವಿನ ಹಣ್ಣಾ ಬಿಡಬೇಕು...ಇದಕ್ಕ ಏನು ಮಾಡಾದು ಅಂದ್ರ ಮಾವು ಬೇವೂ ಎಲ್ಡೂ ಕಸೀ ಮಾಡಬೇಕಾಗ್ತತಿ...ಲೋಕದಾಗ ಹಿಂಗ ಅರಬೆರಕಿ ಆದ್ರಾ ಮಕ್ಕಳು ಮುಂದ ಬರ್ತಾವು.....

ನಮ್ಮ ಭರತಕುಮಾರನೋ ಮಹಾವೃಕ್ಷ.... ಹತ್ತು ದಿಕ್ಕಿಗೆ ಹರೀ ಚಾಚಿ "ಎಲೀ ತಗೋರಿ... ಹೂ ತಗೋರಿ... ಹಣ್ಣ ತಗೋರಿ... ಬೇಕಾದ್ದು ತಗೋರಿ..." ಅಂತ ತೋಳು ಬೀಸುತಾ ನಿಲ್ಲೋ ಅಂಥಾ ನಿಸ್ಸೀಮ....

ಮಹಾಪುರುಷ ಅಂದ್ರಾ ಸಮುದ್ರ ಇದ್ದ ಹಾಂಗ ಕೈಕಾ... ಅದು ಗಡೀ ದಾಟೋಣಿಲ್ಲ... ಮರ್ಯಾದ ಮೀರೋಣಿಲ್ಲ...

ಕೈಕಯಿ : ಉಕ್ಕು ಬಂದ ಕಾಲಕ್ಕೂ ಸಮುದ್ರ ಶಾಂತವಾಗೇ ಇರಬೇಕಲ್ಲಾ...?

ಮಂಥರಾ : ಏನಾದರೂ ಸಮುದ್ರ ಅಂದರ ಸಮುದ್ರಾ... ಬಾವೀ ನೀರ ಕಲಕಲಿಕ್ಕೆ ಸಣ್ಣದೊಂದು ಕಲ್ಲು ಸಾಕಾದೀತು... ಕಡಲ ಕಲಕೋದಕ್ಕ ಕಲ್ಲು ಗುಡ್ಡಾನಾ ಬೇಕಾದೀತು....



ತಂದೀ ಮಾತ ನಡೆಸಬೇಕು ಅಂತ ರಾಮ ಹೆಂಗ ಕಾಡಿಗ ಹ್ವಾದ ನೋಡು, ಹಂಗ ಭರತಾ ಸುತಾ ತಂದೀಮಾತು ನಡಸೋ ಸಲುವಾಗಿ ನಾಡಿನಾಗ ನಿಂದ ನಿಂದರ್ತನು....

*(ಕೈಕಯಿ ಥಟ್ಟನೆ ಮಂಥರಾ ಕಡೆ ತಿರುಗಿ)*

ಕೈಕಯಿ : ಜನ ಭರತನನ್ನ ತಮ್ಮ ಪ್ರಭೂ ಅಂತ ಒಪ್ಪಿಕೊಳ್ತಾರಲ್ವಾ...?

ಮಂಥರಾ : ದಶರಥ ಇಲ್ಲಾ
ದಾಶರಥಿ ಇಲ್ಲ
ಭರತನಂಥ ದೊರಿ ಅವರಿಗ ಇನ್ನೆಲ್ಲಿ ಸಿಗತಾನು?

ಕೈಕಯಿ : ಆದ್ರೂ ಈ ಜನ ರಾಮನಿಗೆ ಜಯಕಾರ ಹೇಳಿಕೊಳ್ತಾ ಅವನ ಜತೆ ಕಾಡಿಗೆ ಹೊರಟವರು....

ಮಂಥರಾ : ಮುದುಕರು ತದಕರು–ಬಸರೇರು ಬಾಣಂತೇರು–ಮಕ್ಕಳು ಮರೀ ಎಲ್ಲಾ ತೊಟ್ಟಲುಬಟ್ಟಲು ಹೊತ್ತಕಂಡು ಹಸಾ ಕರಾ ಮುಂದ ಬಿಟ್ಟಕಂಡು, ಗುಳೇ ಹೊಂಟರ ಭರತ ಏನು ಸುಡಗಾಡ್ ಸಾಮ್ರಾಜ್ಯ ಆಳಬೇಕಾ...? ಡಣಾಯಕನಿಗೆ ಹೇಳಿ ಕೋಟೇ ಬಾಗಿಲು ಬಂದ ಮಾಡಿಸಿದ್ದು ಶಾನೇ ಒಳ್ಳೆದಾತು... ತನ್ನ ಹಿಂದ ಬಂದ ಮಂದೀನಾ ರಾಮನೂ ಹಿಂದಕ್ಕೆ ಕಳಿಸಿದ....(ನಕ್ಕು) ಯಾಕ ಗೊತ್ತೇನು? ಈಟೊಂದು ಮಂದಿ ಕಾಡಿಗೆ ಹೋಗಿದ್ರೆ ಕಾಡು ಕಾಡಾಗೇ ಉಳೀತಿದಿಲ್ಲ....ಇವರು ಅಲ್ಲೊಂದು ಹಟ್ಟಿ ಮಾಡತಿದ್ದರು.... ಹೊಲಾ ಮಾಡತಿದ್ದರು...ಭಟ್ಟರು ಗುಡೀ ಮಾಡತಿದ್ದರು.... ಭಕ್ತ ಮಂದೀ ಗುಡೀ ಮುಂದ ಭಜನಾ ಮಾಡತಿದ್ದರು....

ಕೈಕಯಿ : ನೀನು ಬಿಡು...ಚುಂಗು ಸಿಕ್ಕರೆ ಹಚಡಾನೇ ನುಂಗಿಬಿಡತಿ
ಜನ ನನ್ನ ಬಗ್ಗೆ ಏನು ಮಾತಾಡ್ತಾರೆ–ಅದನ್ನ ಹೇಳು ಮೊದಲು....

ಮಂಥರಾ : ನಿನ್ನ ಹೆಸರೆತ್ತಿ ಆಡೋ ಎದಿ ಯಾರಿಗುಂಟು? ಬಿಚ್ಚುಗತ್ತಿ ಭಂಟರು ಕೇರಿ ಕೇರಿ ಪೇರಿ ಹೊಡಿತಾ ಅವ್ರೆ....!

*(ಈ ವೇಳೆಗೆ ನೇಪಥ್ಯದಲ್ಲಿ ನಗಾರಿ ಸದ್ದು)*

ಕೈಕಯಿ : ನೋಡೇ... ನೋಡೇ ಮಂಥರಾ...ನಗಾರಿ ಸದ್ದು ಕೇಳ್ತಾ ಇದೆ... ಭರತ ಬಂದಾ ಅಂತ ಕಾಣುತ್ತೆ... ಮಂಥರಾ ದೀಪ ಸ್ವಲ್ಪ ಸಣ್ಣದು ಮಾಡೇ.... ಕಿಟಕಿಯ ತೆರೆ ಎಳೀ..... ನೀನು ಸ್ವಲ್ಪ ಹಿಂದ ನಿಂತುಕೋ... ಇದು ಹುಣ್ಣಿಮೇ ಭರತ ಅಲ್ಲ; ಅಮವಾಸ್ಯೆಯ ಭರತ... ಚೌಕ ಕೊಡು... ನಾನು ಸ್ವಲ್ಪ ಮುಖ ಒರೆಸಿಕೊಳ್ತೀನಿ.... ಬಾಗಿಲ ಹತ್ತಿರ ಸದ್ದಾಗತಾ ಇದೆ.... ಭರತ ಬಂದೇ ಬಿಟ್ಟ....

**ಹಾಡು**

ಬಿರುಗಾಳಿ ಬಂದ್ಹಂಗ ಬಂದ ಭರತ।
ಎದುರ ಯಾರಿರಲಿಲ್ಲ ತಾಯ ಹೊರತಾ ।

ಮೋಡ ಉರಳಾಡಿತ್ತ । ಮಿಂಚ ಹೊರಾಳಡಿತ್ತ ।
ಕೋಲ್ಮಿಂಚ ಝುಳಪಲ್ಲಿ । ಕಣ್ಣು ಕುರುಡಾಡಿತ್ತ ।

ಸಿಡಿಲ ಝುಡಿ ಸಿಡಿದಿತ್ತ । ಬ್ರಹ್ಮಾಂಡ ಒಡದಿತ್ತ ।
ಜಡಿಮಳೀ ಹಿಡಿದಿತ್ತ । ಸರಿಯವ್ವ ನೀನತ್ತ ॥

ಭರತ : (ಭರತ ಅಸಾಧ್ಯ ಕೋಪವನ್ನು ಸಂಯಮಿಸುವ ಕಂಪಿತ ಸ್ವರದಲ್ಲಿ) ಮಾಡಬೇಕು ಅಂದುಕೊಂಡಿದ್ದೆಲ್ಲ ಮಾಡಿ ಮುಗಿಸಿದ್ದಾಯಿತಾ? ಅಥವಾ ಹಾಳುಮಾಡಲಿಕ್ಕೆ ಇನ್ನೂ ಏನಾದರೂ ಉಳಿದಿದೆಯಾ? ನೀವು ಹೀಗೆ ಮಾಡಬಹುದು ಅಂತ ಕನಸು ಮನಸಿನಲ್ಲೂ ಎಣಿಸಿದ್ದಿಲ್ಲ ನಾನು ....!

ಕೈಕಯಿ : ಸಮಾಧಾನ ತಂದುಕೋ.... ನಾವು ಏನೋ ಮಾಡಲಿಕ್ಕೆ ಹೋದಿವಿ....ಅದು ಇನ್ನೇನೋ ಆಯಿತು....ಮೊದಲು ನನ್ನ ಮಾತು ಕೇಳು.... ನಾನು ಮಾಡಿದ್ದು ತಪ್ಪು ಅನ್ನಿಸಿದರೆ ಆಮೇಲೆ ಬೇಕಾದ್ದು ಹೇಳು....

ಭರತ : ಹೇಳೋದಕ್ಕಾಗಲೀ ಕೇಳೋದಕ್ಕಾಗಲೀ ಇನ್ನೇನಮ್ಮಾ ಉಳಿದಿದೆ? ನಂದನವನ ಸುಡುಗಾಡಾಗಿ ಹೋಗಿದೆ.... ಸಿಂಹಾಸನದ ಬಗ್ಗೆ ಇಷ್ಟು ಹುಚ್ಚಾ ನಿಮಗೆ...?

ಅಧಿಕಾರ ಅಂತಸ್ತಿಗಾಗಿ ಕೈಹಿಡಿದ ಗಂಡನನ್ನ ಬಲಿ ಕೊಡೋದಕ್ಕೂ ನೀವು ತಯಾರಾದಿರಿ......! ಎಂಥಾ ಧರ್ಮಾತ್ಮ ನಮ್ಮ ತಂದೆ..........! ಇಷ್ಟು ವರ್ಷ ಅವರ ಜೋಡಿ ಬಾಳುವೆ ಮಾಡಿದ್ದು ವ್ಯರ್ಥ ವ್ಯರ್ಥ... ! ನಿರ್ಮಲವಾಗಿ ಹರಿಯೋ ಸರಯೂ ಪಕ್ಕದ ಕೆಸರಗುಂಡಿ ಆಗಿಬಿಟ್ರೆ ನೀವು........ ಛೀ......! ಹೇಸಿಗೆ ಆಗತ್ತೆ ನಂಗೆ......!

ತಾಯಿ ಅನ್ನೋ ಕಾರಣ, ಅನ್ನೋ ಹಾಗೂ ಇಲ್ಲ ಅನುಭವಿಸೋ ಹಾಗೂ ಇಲ್ಲ.................

ಕರುಣಾಮೂರ್ತಿ ರಾಮ ಏನು ಮಾಡಿದ್ದ ನಿಮಗೆ? ಅವನ್ಯಾಕೆ ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕು? ರಾಮ – ಲಕ್ಷ್ಮಣ – ಶತ್ರುಘ್ನ – ಕೌಸಲ್ಯಾದೇವಿ – ಸುಮಿತ್ರಾದೇವಿ – ಎಲ್ಲಾ ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕು ಅಂತ ಕೇಳಿದ್ರೆ ಇನ್ನೂ ಚೆನ್ನಾಗಿರ್ತಿತ್ತು...... ಆಗ ನೀವೊಬ್ರೆ ನಿಮ್ಮ ಈ ಆಪ್ತಸಖಿಯ ಜೋಡಿ ಅರಮನೆಯ ಉದ್ದಕ್ಕೂ ಉರುಳಾಡಿಕೊಂಡು ಇರಬಹುದಾಗಿತ್ತು......!

ಕೈಕಯಿ : ಭರತಾ........ ನಾನು–

ಭರತ : ನಾನು ಹೇಳಬೇಕಾದ್ದು ಇನ್ನೂ ಇದೆ....
ರಾಮನ ಜೋಡಿ ಲಕ್ಷ್ಮಣ ಹೋದ – ಪುಣ್ಯವಂತ ಅವನು...... ಎಷ್ಟೇ ಆಗಲಿ ಸುಮಿತ್ರಾದೇವಿಯ ಹೊಟ್ಟೆಯಲ್ಲಿ ಹುಟ್ಟಿದವ..... ಇಂಥ ಮಗು, ಇಂಥ ಮುಹೂರ್ತದಲ್ಲಿ, ಇಂಥ ತಾಯಿಯ ಪುಣ್ಯಗರ್ಭದಲ್ಲಿ ಹುಟ್ಟಿತು ಅಂತ ಅನೂಚೀನವಾಗಿ ಪುರೋಹಿತರು ಬರೆದುಕೊಂಡು ಬರುತ್ತಾ ಇದ್ದಾರೆ. ನನ್ನ ಜಾತಕದಲ್ಲು ಹಾಗೇ ಬರೆದಿರಬೇಕು....... ಹ.ಕುಂ. ಸೌ. ಕೈಕಯೀ ದೇವಿಯ ಪರಮ ಪವಿತ್ರ ಪುಣ್ಯಗರ್ಭದಲ್ಲಿ –
ಪುಣ್ಯಗರ್ಭ.....!
ಪುಣ್ಯಗರ್ಭ ಅಲ್ಲ ಅದು.....! ಪುಣ್ಯಗರ್ಭ ಅಲ್ಲ!
ಅದು ಎಂಥಾ ಗರ್ಭ ಅಂತ ಯಾವ ಬಾಯಲ್ಲಿ ಹೇಳಲಿ.....? ಇದೇ ತಾಯಿಯ ಹಾಲು ಹೀರಿದ ನಾಲಗೆ..... ಇದೇ ತಾಯ ಕಳ್ಳುಬಳ್ಳಿಗೆ ಕಚ್ಚಿಕೊಂಡು ಅರಳಿದ ತುಟಿ.....!ತಾಯ್ತನಕ್ಕೇ ಅವಮಾನ ಮಾಡಿದೆಯಲ್ಲಮ್ಮ ಮಹಾತಾಯೀ......!

ಕೈಕಯಿ : ನಾನು ಮಾತಾಡೋದಕ್ಕೇ ನೀನು ಅವಕಾಶ ಕೊಡತಾ ಇಲ್ಲ...... ಮಾತೃನಿಂದನೆ ಮಹಾಪಾಪ ಅನ್ನೋದನ್ನ ಮಹಾತ್ಮ ಅನ್ನಿಸಿಕೊಂಡ ನೀನು ಮರೆತುಬಿಟ್ಟೆ......!

ಭರತ : ಮಾತೃನಿಂದನೆ......! ಬರೀ ನಿಂದನೆ ನನ್ನದು......!
ನಿಮ್ಮದು?
ಅಮಾನುಷ ಹತ್ಯಾಕಂಡ......!!!
ಗಂಡನಿಗೆ ಸುಡುಗಾಡು
ಮಕ್ಕಳಿಗೆ ಕಗ್ಗಾಡು
ದೇಶಕ್ಕೆ ಅಳಿಗೇಡು
ಅಯೋಧ್ಯೆಯ ಮಂದಿ ಮುಖಕ್ಕೆ ಯಾವ ಮಡಕೆ ಮುಚ್ಚಿಕೊಂಡು
ಬೇರೆಯವರ ಎದುರು ನಿಲ್ಲಬೇಕು ಈಗ?
“ನಮ್ಮ ರಾಣಿ ಮಗನಿಗೆ ಅಧಿಕಾರ ಸಿಗಬೇಕೂ ಅಂತ ಗಂಡನ್ನ
ಕೊಂದಳು
ಮಲಮಗನ್ನ ಕಾಡುಗುಡ್ಡಕ್ಕಟ್ಟಿದಳು”
ಜನ ಆಡದೆ ಇರ್ತಾರ.....?

ಮಂಥರಾ : ಬಂದಾಗಿನಿಂದ ನಾನೂ ನೋಡತಲೇ ಅವ್ನಿ...... ಸುಮ್ಮಕ ಕೆಂಡದ ಮಳೀ ಮಂಡೇ ಮ್ಯಾಲ ಸುರುವುತಾ ಇದಿ....... ನಿನ್ನ ಒಳ್ಳೇದಕ್ಕ ತಾನೆ ಆಕಿ ಈಟೊಂದೆಲ್ಲ ಮಾಡಿದ್ದು.....?

ತಾನು ಮಾಡಿ ಲೋಕಕ್ಕ ಕೆಟ್ಟಾಕಿ ಅನಿಸಿದಳು
ನಿನಗ ಆ ದೋಷದ ಕರಿ ತಾಗದ ಹಂಗ ನಿನ್ನ ನಿಚ್ಚಳ ಇಟ್ಟಳು.......
ಇದಾ.... ಇದಾಮತ್ತ ತಾಯಿಯ ಕಳ್ಳು ಅಂದರ......
ನಿನಗ ಅ.......ಆ....... ಕಲಿಸಿದ ಆಕಿಗೆ ನೀನು ಆಡಬಾರದ್ದ ಆಡಲಿಕ್ಕ
ಹತ್ತಿದೀ ಇನ್ನ ಲೋಕ ಆದರೂ ಯಾಕ ಸುಮ್ಮಕಿರಬೇಕು ನೀನಾ
ಹೇಳಪಾ......
ಮಗನಿಗೆ ಬಿಸಲ ತಾಕಬಾರದು : ಮಳೀ ಸೋಕಬಾರದು
ತೊಟ್ಟಲದಾಗಿರೋ ಮೆತ್ತಿ ಮೈಗೆ ಒತ್ತೀತು ಅಂತ ತೋಳಾ ತೊಟ್ಟಿಲ
ಮಾಡಿ ಜೋಲಿ ತೂಗಿದಳು ನಿನ್ನವ್ವ......!
ಅಂಥಾ ಅವ್ವಂಗ ಮಕಾ ಮಾರೀ ನೋಡದ ಚೀಮಾರಿ ಮಾಡತಾ
ಇದೀ.......
ಇದು ಚಲೋದಲ್ಲ
ಚಲೋದಲ್ಲ ತಿಳಿ ಇದು......

ಭರತ : ತಿಳಿದವ ನಾನು
ತಿಳಿದೋಳು ನೀನು!
ಅದು ಕಾಗೆ..... ಇದು ಗುಬ್ಬಿ..... ಇದು ನಾಯಿ..... ಅದು ಬೆಕ್ಕು......
ಅದು ಗುಡ್ಡ...... ಇದು ನದಿ..... ಅದು ಆಕಾಶ....... ಅದು
ನಕ್ಷತ್ರ.......
ಕೂಸಿದ್ದಾಗ ತೋರಿಸಿ ತೋರಿಸಿ ತಿಳಿಹೇಳತಾ ಇದ್ದೆ.....!
ಇದು ತಪ್ಪು..... ಇದು ಪಾಪ.....
ಇದು ಅನ್ಯಾಯ..... ಇದು ಅಧರ್ಮ
ಇದು ಅನಾಚಾರ ...... ಇದು ಅತ್ಯಾಚಾರ
ಅಜ್ಜೀ....
ಇದನ್ನ ನೀನು ತಿಳಿಸಲೇ ಇಲ್ಲ ನನ್ನ ಅಮ್ಮನಿಗೆ.....!
ಜಾರಿ ಬೀಳೋಳನ್ನ ಆಳಕ್ಕೆ ನೂಕಿದೆ! ಕೈ ಹಿಡಿದು ದಂಡೆಗೆ
ಎಳೀಲಿಲ್ಲ......!
ಅವಳನ್ನ ನೂಕಿದ್ದೂ ಅಲ್ಲದೆ ನೀನೂ ಆಕೆ ಜೋಡಿ ಪ್ರಪಾತಕ್ಕೆ ಜಾರಿ
ಬಿದ್ದೆ.....!
ನಿನ್ನ ಎಷ್ಟು ಹಚ್ಚಿಕೊಂಡಿದ್ದೆ ನಾನು.....?!
ಅಜ್ಜೀ..... ಅಜ್ಜೀ..... ಅಂತ ಮೂರು ಹೊತ್ತು ನಿನ್ನ ಕಾಲ ಹಿಂದೆ ಸುಳೀತಾ
ಇದ್ದೆ..
ಅವತ್ತು ನಾನು ಹಳ್ಳು ಅಂದುಕೊಂಡಿದ್ದು
ಈವತ್ತು ಬರೀ ಬೆಣಚು ಕಲ್ಲು!

ಅಯ್ಯೋ...... ಮನಸ್ಸು ಮಾಗದ, ಹಣ್ಣು ಹಣ್ಣು ಮುದುಕೀ.....
ಮುಟ್ಟಿದರೆ ಮುರಿದು ಹೋಗ್ತಿ..... ಏನು ಮಾಡಲಿ ನಿನ್ನ.....?

ಕೈಕಯಿ : ಆಕಿಗೆ ಅಂದು ಏನು ಪ್ರಯೋಜನ.... ಭರತ?
ನೇರ ಹೇಳ್ತೀನಿ ಕೇಳು:
ನಾನೇ
ನಾನೇ
ನಾನೇ ಎಲ್ಲದಕ್ಕೂ ಕಾರಣ.....!
ಯಾಕೆ ಅಂತ ಕೇಳು
ನನ್ನ ಮಗ ಮಹಾರಾಜ ಆಗಿ ಮೆರೆಯೋದು ನಾನು
ನೋಡಬೇಕು.....!!!
ಇದೊಂದೇ ......... ಇದೊಂದೇ ಆಶೆ ನನಗೆ...!
ತಾಯಿಯ ಹೃದಯ ಅರ್ಥ ಮಾಡಿಕೋ
ಆಕೆ ನೊಂದು ನಿಟ್ಟುಸಿರಿಟ್ಟರೆ
ನಿಂತ ನೆಲವೇ ಸೀದು ಹೋಗತ್ತೆ......

ಭರತ : (ವಿಷಾದದ ನಗೆ ನಕ್ಕು)
ನಿಜ
ತಾಯಿ
ನೋಯಬಾರದು
ಆದರೆ ನೀವು ಯಾವಾಗ ಮನೇ ಮಕ್ಕಳನ್ನ ಕಾಡಿಗೆ ಅಟ್ಟಿದಿರೋ
ಆಗಲೇ
ತಾಯ್ತನಾನೂ ಕಾಡಿಗೆ ಅಟ್ಟಿದಿರಿ
ಈಗ ನನ್ನೆದುರು ಇರೋದು ತಾಯಿ ಅಲ್ಲ.....
ತಾಯಿಯ ವೇಷದ
ನಿಸ್ಸೀಮ ಸ್ವಾರ್ಥ!
ದುರ್ದಮ್ಯ ದುರಾಶೆ!
ತಾಯಿ ಇರಲಿ – ಒಂದು ಹೆಣ್ಣು – ಹೆಣ್ಣು – ಕೂಡ ಅಲ್ಲ ನೀವು.....
ರಾಮ ತಿರುಗಿ ಬರೋವರೆಗೆ ಅಯೋಧ್ಯೆಯಲ್ಲಿ ನನ್ನ ಕಾಲು
ಇಡೋದಿಲ್ಲ ನಾನು.....
ಅನುಭವಿಸಿ ನೀವೇ ಅಧಿಕಾರದ ವೈಭವ!
ಅನುಭವಿಸಿ....
ಅನುಭವಿಸಿ...

| | | |
|---|---|---|
| | | ನಾನೂ ರಾಮ ಇರೋ ಕಾಡಿಗೆ ಹೋಗಿ |
| | | ಬರಿಗಾಲು ಬರಿದಲೆಯಲ್ಲಿ ಭಿಕಾರಿಯ ಹಾಗೆ ಬದುಕ್ತೀನಿ. |
| | | ನಮಸ್ಕಾರ ನಿಮಗೆ! |
| | | ದೊ–ಡ್ಡ–ನ–ಮ–ಸ್ಕಾ–ರ ನಿಮಗೆ |
| | | *(ಸಶಬ್ದವಾಗಿ ಕೈಜೋಡಿಸಿ ನಿರ್ಗಮಿಸುತ್ತಾನೆ)* |
| ಕೈಕಯಿ | : | ನಿಲ್ಲು ಭರತ ನಿಲ್ಲು...... |
| | | ಹೊಣೆಗಾರಿಕೆಗೆ ಬೆನ್ನು ಹಾಕಿ ಓಡಿಹೋಗಬೇಡ..... |
| | | ರಾಮ ಬರೋಹಾಗಿಲ್ಲ |
| | | ನೀನು ಇರೋಹಾಗಿಲ್ಲ |
| | | ಅನಾಥ ಅಯೋಧ್ಯೇನ ಕಾಪಾಡೋರು ಯಾರು.....? |
| | | *(ಕೈಕಯಿ ಕಣ್ಣಲ್ಲಿ ಹೊಳೆಯುವ ಕಣ್ಣೀರು)* |
| ಮಂಥರಾ | : | ತಾಯೀಮಮತಾ ಅಂಬೋದು ನೆರೆ ಏರಿದ ಕೆನ್ನೀರ ತೊರೀ..... ಇದರ ಸೆಳವಿಗೆ ಸಿಕ್ಕ ತಾಯಿ ಅನ್ನೋ ಜೀವ ತನ್ನ ಪಾತಾಳದಾಗ ತಾನಾ ಮುಣಗಿ ಹೋಗೋದು ಬಿಟ್ಟು ಇನ್ನೇನೈತಿ? |
| | | *(ಕಲ್ಲಾಗಿರುವ ಕೈಕಯಿ ಬಳಿ ಬಂದು)* |
| ಮಂಥರಾ | : | ಯವ್ವಾ.....! ಯಾಕ ಹಿಂಗ ಕಡಿದಿಟ್ಟ ಕಲ್ಲಿನ ಹಾಂಗ ಕುಂತೀ....? |
| ಕೈಕಯಿ | : | ನೀನು ತಾಯೀನೇ ಅಲ್ಲ ಅಂತ |
| | | ಮಗನಾದೋನು ಅಂದ ಮೇಲೆ |
| | | ಕಲ್ಲಾಗದೆ ಇನ್ನೇನಾಗಲಿ ಹೇಳು? |
| | | ರಾಮ ಬರೋಹಾಗಿಲ್ಲ |
| | | ಭರತ ಇರೋ ಹಾಗಿಲ್ಲ |
| | | ಅಯೋಧ್ಯೆ ಅನಾಥವಾದೀತು ಎಂಬ ನದರು ಅವನಿಗೂ ಇಲ್ಲ. |
| | | ಇವನಿಗೂ ಇಲ್ಲ. |
| ಮಂಥರಾ | : | ರಾಮ ಭರತ ಇಬ್ಬರೇ ಅಲ್ಲ ನಿನ್ನ ಮಕ್ಕಳು.... |
| | | ಅಳತಾ ಇರೋ ಅಯೋಧ್ಯಾನ ಎತ್ತಿಕೋ ಮೊದಲು.... |
| | | ಸಿಂಹಾಸನ ಅಂಬೋದು ಅಧಿಕಾರದ ಅಟ್ಟ ಅಲ್ಲ. ಪ್ರಜಾಮಂದೀನ ಪೊರೆಯೋ ತೊಟ್ಟಿಲು |
| | | ಅಳತಾ ಐತೆ ಮಗು. ... ತೊಟ್ಟಿಲ ಒಪ್ಪಿಸಿಕೋ ಕೈಕಾ.... ತೊಟ್ಟಿಲ ಒಪ್ಪಿಸಿಕೋ.... |
| | | *(ಮಂಥರಾ ತೊಟ್ಟಿಲ ಹಗ್ಗವನ್ನು ಕೈಕಯಿ ಕಡೆ ಚಾಚಿದಾಗ .... ರಂಗದ ಮೇಲೆ ಕತ್ತಲು)* |

## ದೃಶ್ಯ – ೬

*(ಭರತ ತನ್ನ ವಸ್ತ್ರಾಭರಣಗಳನ್ನು ಕಳಚಿ, ನಾರು ಮಡಿಯುಟ್ಟು, ಅಯೋಧ್ಯಾ ನಿರ್ಗಮನಕ್ಕೆ ಸಿದ್ಧನಾಗುತ್ತಿದ್ದಾನೆ)*

ಭರತ : ಹಿರಿಯಣ್ಣ ರಾಮಚಂದ್ರ ಇರುವಾಗ ಭರತ ಹ್ಯಾಗೆ ತಾನೆ
ಅಯೋಧ್ಯಾದ ಚಕ್ರವರ್ತಿಯಾಗೋದು ಶಕ್ಯ....?
ತಾಯಿಯ ಕುರುಡು ಪ್ರೀತಿ ಏನೋ ಮಾಡಿತು ಅಂತ ಮಗನೂ
ಅದಕ್ಕೆ ಅಸ್ತು ಅಂದರೆ ಭರತ ಭರತನಾಗಿ ಉಳೀಲಿಕ್ಕಿಲ್ಲ....
ಭರತ ಚಕ್ರವರ್ತಿಯಾಗೋದಲ್ಲ ಮುಖ್ಯ.....
ಭರತ ಭರತನಾಗಿ ಉಳಿಯೋದು ಮುಖ್ಯ....!
*(ತಕ್ಷಣ ಪ್ರೇಕ್ಷಕರನ್ನು ನೋಡುತ್ತಾ)*
ಲೋಕದಲ್ಲಿ ಅತ್ಯಂತ ಕಷ್ಟಕರವಾದ ಕೆಲಸ ಯಾವುದು ಗೊತ್ತಾ?
"ನಾವು ನಾವಾಗೇ ಉಳಿಯೋದು"
*(ನೇಪಥ್ಯದಲ್ಲಿ ಯಾರೋ ಏನನ್ನೋ ಎಡವಿದ ಸದ್ದು)*
ಯಾರು.....? ಯಾರವರು......?
(ಮಂಥರೆ ಬರುತ್ತಾಳೆ)
ಓ....! ನೀನು.....!?

ಮಂಥರಾ : ನಾನೇ..... ನಾನೇ.....
ಯಾಕ ಮಗನಾ....?
ಬರಬಾರದಿತ್ತು ಅಂತೀ.....?
ನಿಂಗಂತು ನಾವು ಬ್ಯಾಡ
ಹೆತ್ತ ತಾಯಿ ಅಂಬೋಳು ಕಾಲ ಕಸಕ್ಕಿಂತ ಕಡೀ ಆಗ್ಯಾಳಾ....!
ತೊರೀ ದಾಟಿದ ಮ್ಯಾಲೆ ತೆಪ್ಪ ಯಾಕ ಬೇಕು ಹೇಳು...?
ನಿನಗ ನಾವು ಬ್ಯಾಡ
ಆದರ
ನಮಗ ನೀನು ಬೇಕಲ್ಲಪ್ಪಾ.... ಏನು ಮಾಡೋದೈತೀ....?
ಬೇರಿನ ಕಾಳಜಿ ಬೀಜಕ್ಕೆ ಇರೋಣಿಲ್ಲ – ಲೋಕಧರ್ಮನಾ
ಹಂಗಾ.....

ಭರತ : ಆಗಿಹೋದದ್ದು ಮತ್ತೆ ಯಾಕೆ ಆಡ್ತೀ ಅಜ್ಜೀ....
ನಿಮಗ ಸರೀ ಅನ್ನಿಸಿದ್ದ ನೀವು ಮಾಡಿದಿರಿ....
ನನಗೆ ಸರಿ ಅನ್ನಿಸಿದ್ದ ನಾನು ಮಾಡಬೇಕು....!

ಮಂಥರಾ : ನಮಗೊಂದು ಸರಿ..... ನಿನಗೊಂದು ಸರಿ.... ಇನ್ನೊಬ್ಬರಿಗ
ಇನ್ನೊಂದು ಸರೀ.....
ಹುಚ್ಚಪ್ಪಾ....!
ಲೋಕದಾಗ ಸರೀ ಅಂಬೋದು ಒಂದೇ ಒಂದು.....!
ತಪ್ಪು ಸಾವಿರ ಇರ್ತಾವು....
ಸರಿ ಒಂದೇ....!
ನಾವು ನಾವು ನಮ್ಮ ನಮ್ಮ ಮೂಗಿನ ನ್ಯಾರಕ್ಕ ನೋಡತಾ ನಾವು
ನೋಡಿದ್ದಾ ಸರೀ ಅನ್ನತೀವಿ....!
ರಾಜಧರ್ಮ ನಿನಗ ಹೇಳಿಕೊಡೋದೈತೇನು...?
ರಾಜ ನೋಡಬೇಕಾದ್ದು ಪ್ರಜಾಮಂದಿಗೆ ಯಾವುದು ಸರಿ....
ಪ್ರಜಾಮಂದಿಗೆ ಯಾವುದು ಸರಿ ಅದಾ ರಾಜಧರ್ಮಕ್ಕೆ ಸರಿ....

ಭರತ : ಪ್ರಜಾಮಂದಿಗೆ ಯಾವುದು ಸರೀ ಅನ್ನೋದನ್ನ
ನಾನು
ನಿನ್ನಿಂದ
ತಿಳೀಬೇಕು.....?!

ಮಂಥರಾ : ತಿಳೀಬೇಕಾದ್ದ ಯಾರು ಯಾರಿಂದ ಬೇಕಾರಾ ತಿಳೀಬೋದು
ನಿನಗೆ ನಿನ್ನ ಮಂತ್ರಿ ಹೇಳದ್ದ ದಾರ್ಯಾಗಿನ ದಾಸಯ್ಯ
ಹೇಳಬೋದು....! ರಾಜನ ವಿರುದ್ಧ ಮಾತಾಡಿದರ ಮಂತ್ರೀಗೆ
ಮಂತ್ರೀ ಪದವಿ ಹೋದೀತು...... ದಾಸಯ್ಯಂಗೆ ಝಾಡಿಸಿದ್ರೆ
ಧೋತ್ರದ ಮ್ಯಾಗಿನ ಧೂಳು ಹೋದೀತು..... ನಂಗ ಏನು
ಮಾಡೀನೀನು....?
ಊರು ಉತ್ತರ – ಕಾಡು ಹತ್ತರ

ಭರತ : ಛೆ – ಛೆ – ಛೆ!
ಅಯೋಧ್ಯದ ಸುವರ್ಣ ಸಿಂಹಾಸನದ ಸುತ್ತಾ ಗಿರಕೀ ಹೊಡೀತಿರೋ
ಮುಳ್ಳು ದುಂಬಿ ನೀವು...! (ನಕ್ಕು) ನಿಮಗೆ ಕಾಡು ಹ್ಯಾಗಜ್ಜೀ ಹತ್ತಿರ
ಆಗತ್ತೆ? ಇರಲಿ
ಬೇಗ ಏನು ಹೇಳಬೇಕೋ ಅದನ್ನ ಹೇಳಿ ಮುಗಿಸು.... ಸುಮ್ಮನೆ
ಯಾಕೆ ಕೊಂಕಣ ಸುತ್ತುತೀ?

ಮಂಥರಾ : ಏನು ಹೇಳ್ಳಿ ಹೇಳು....
ರಾಮಚಂದ್ರನ್ನ ಮತ್ತ ನಾಡಿಗ ಕರೆಯೋಕಾ ಅಂತ ಕಾಡಿಗೆ ನೀನು
ಹೊಂಟೀ ಅಂತ ಊರ ಮಂದಿ ಎಲ್ಲ ಮಾತಾಡತಾ ಅವರೆ.....

ಭರತ : ಹಾ.. ಹೋಗ್ತಾ ಇದೀನಿ... ಬಂದ್ರೆ ರಾಮನ ಜೋಡಿ ಊರಿಗೆ ತಿರುಗಿ
ಬರ್ತೀನಿ... ಇಲ್ಲಾ ನಾನೂ ಕಾಡಿನಲ್ಲೇ ವನವಾಸಮಾಡುತೀನಿ...!

ಮಂಥರಾ : ಹದಿನಾಕು ವರ್ಷ ವನವಾಸ ಮಾಡ್ತೀನಿ ಅಂತ ನಿಮ್ಮಣ್ಣ ರಾಮ ತನ್ನ
ತಂದೆ ಮುಂದೆ ಆಣೆ ಪ್ರತಿಜ್ಞೆ ಮಾಡಿ ಕಾಡಿಗೆ ಹೋಗವ್ನೆ...
ರಾಮಂಗೆ ಒಂದೇ ಮಾತು ಒಂದೇ ಬಾಣಾ ಅಂತಾರು... ಕೊಟ್ಟ ಮಾತಿಗೆ
ಎಂದೂ ತಪ್ಪೋನಲ್ಲ ಅವನು... ಧರ್ಮದ ಹಾದಿ ಬಿಟ್ಟು ಅಧರ್ಮದ
ಹಾದಿ ಎಂದೂ ಹಿಡಿಯೋನಲ್ಲ...
(ನಿಟ್ಟುಸಿರು ಬಿಟ್ಟು)
ಗಂಡ ಹೆಂಡಿರ ಜಗಳದಾಗ ಕೂಸು ಬಡವಾತು ಅಂತಾರು...
ಅವಾ ಬರೋಣಿಲ್ಲ... ನೀನು ಇರೋಣಿಲ್ಲ....
ಇಲ್ಲಿ ಪ್ರಜಾಮಂದೀನ ಕಾಯೋದು ಯಾರು...?

ಭರತ : ರಾಮಚಂದ್ರನ್ನ ಕಾಡಿಗೆ ಅಟ್ಟೋ ಮುನ್ನ ಅದನ್ನ ನೀವು-ನೀವು-
ಯೋಚಿಸಬೇಕಾಗಿತ್ತು...!

ಮಂಥರಾ : ನಾಡ ಮಂದಿ ನೀನು ನೋಡತಿ
ಕಾಡ ಮಂದೀನ ಅವಾ ನೋಡುತಾನೆ ಅಂದಿಕೊಂಡಿವಿ.

ಒಂದು ಮಾತು ನೆಪ್ಪಿರಲಿ ಮಗಾ
ರಾಮನ ವನವಾಸ ಹೆಂಗೋ ಹಂಗಾ
ಭರತನ ರಾಜ್ಯ ವಾಸಾನೂ ದಶರಥನ ವಚನ ಐತಿ...

ರಾಮ ಪಿತೃವಾಕ್ಯ ಪರಿಪಾಲಕನಾಗ್ತಾನು
ಅವ್ನ ತಮ್ಮ ನೀನು ಪಿತೃವಾಕ್ಯ ಭಂಜಕನಾಗತಿ...

ರಾಜ ದಶರಥ ಆಣತಿ ಮಾಡ್ಯಾನು
ಅದನ್ನ ಮುರೀಲಿಕ್ಕೆ ಹೊಂಟಿದಿ
ರಾಜಕುಮಾರನಾ ರಾಜನ ಮಾತು ಮುರೀತಾನ ಅಂದರ ಊರಮಂದಿ
ದೊರೇ ಮಾತು ನಡಸ್ತಾರು?
ರಾಜ ಧರ್ಮಾನೂ ಹೋತು
ಪ್ರಜಾ ಧರ್ಮಾನೂ ಹೋತು

ಹೆಂಗ ಹೋತಪ್ಪ ಅಂದರ
ಭರತನ ಕೊಂಕಳು ಸಂದ್ಯಾಗಾಸಿ ಹೋತು....!!!

ಧರ್ಮಾತ್ಮ... ಧರ್ಮಾತ್ಮ... ಧರ್ಮಾತ್ಮ... ಅಂತಾರು ಮಂದಿ ನಿನ್ನ...!!!

ಭರತ : ಮಾತಿನ ಕುಣಿಕೆ ಹಾಕಿ ನನ್ನ ಹಿಡೀಬೇಕು ಅಂತ ಇದೀಯಾ ಅಜ್ಜೀ....?
ಪ್ರಜೆಗಳ ಹಿತಾ ಕಾಯೋದು ರಾಜಧರ್ಮ ಅನ್ನೋದು ನಂಗೆ ತಿಳಿದಿಲ್ಲ
ಅಂತ ತಿಳಿದಿದ್ದೀ?

ಮಂಥರಾ : ಅಳ್ಳೂ ಮಳ್ಳೂ ಮುದಕಿ... ನಂಗೇನು ತಿಳಿದೀತು ಹೇಳು...

*(ಒಂದು ಕ್ಷಣದ ಮೌನದ ನಂತರ)*

ಯಾರು

ತಿಳಿಸಿದರ

ತಿಳಿದೀತೋ

ಅವರಾ

ತಿಳಿಸಲಿಕ್ಕೆ

ಹತ್ಯಾರು....

ಕೇಳಕೋ.... ಕಿವಿಗೊಟ್ಟು ಕೇಳಕೋ ನನ್ನ ಕಂದಾ...

*(ಹೊರಗೆ ರಣಭೇರಿಯ ನಿನಾದ)*

ರಾಜನಿಲ್ಲದ ರಾಜ್ಯ ಅಂತ ಶತ್ರು ಮಂದಿ ಸುತ್ತು ಮುತ್ತಿಂದ ಒತ್ತಿಕೊಂಡು ಬರಲಿಕ್ಕೆ ಹತ್ಯಾರು...

ಗೂಢಾಚಾರಿ ಮಂದಿ ನಟ್ಟ ನಡೂರಾತ್ರಿ ನಿಮ್ಮವ್ವನತಾವ ಬಂದು ವರದಿ ಮಾಡ್ಯಾರು...

*(ಹೆಚ್ಚುತ್ತಿರುವ ರಣಭೇರಿಯ ಸದ್ದು)*

ಮಂಥರಾ : ನೀನು ನಾರುಮಾಡಿ ಉಡುತಾ ಇದಿ

ನಿಮ್ಮವ್ವ ಉಕ್ಕಿನ ಕವಚ ಹಾಕತಾ ಅವ್ಳೆ

ರಾಜಧರ್ಮ ಯಾವುದು ಅಂಬೋದ ಯಾರಿಗೆ ಯಾರು ಹೇಳೋದೈತಿ?

ಕತ್ತಿ ಕಠಾರಿ ಗುರಾಣಿ ತೋಮರಾ ಗದೀ

ಬಾಣ ಬಿಲ್ಲು ಮುದ್ಗರ ಭಲ್ಲೆ ಚೂರಿ ತ್ರಿಶೂಲಾ

ದೊಂದಿ ಪಂಜು ದೊಣ್ಣಿ ಹಾರೆ ಗುದ್ದಲಿ ಪಿಕಾಸಿ

ಹಿಡೀಬಾರದ್ದೆಲ್ಲ ಹಿಡಕೊಂಡು ಬಡೀಬಾರದ್ದೆಲ್ಲ ಬಡಕೊಂಡು

ಹಿಂಡು ಹಿಂಡು ಮಂದಿ ದಂಡುಗಟ್ಟಿ ಬರತಾ ಐತಿ

ರಗತಾ ಹೀರಿ ರಗತ ತೂರೋ ರಾಣಾ ರಕ್ಕಸ ಮಂದಿ

ಬರ್ಯೋ ಬರ್‍ರಿ

ನಿರುಮ್ಮಳ ನೀರಿನ ಸರಯೂ ಕೆಂಪಗಾಗಿ ಹೋಗಲಿ

ತಳ ಕಾಣೋ ತಮಸಾ ಮಡು ಕದಡಿ ಬಗ್ಗಡ ಆಗಲಿ

ಗುಡಿ ಗ್ವಾಪರ ಗುಮ್ಮಟ ಕುಕ್ಕರ ಕುಸದು ಧೂಳಗುಡ್ಡೀ ಆಗಲಿ

ಬರ್ಯೋ ಬರ್‍ರಿ...

ಬಸರಿ ಬಾಣಂತಿ ಅರಚತಾ ಅದಾರು ಕೂಸು ಕುನ್ನಿ ಒದರತಾ ಅದಾವು

ಊರಿಗೂರೇ ಧಗ ಧಗ ಧಗ ಉರೀಲಿಕ್ಕೆ ಹತ್ತೈತಿ!

*(ಮಂಥರಾ ಅಳುತ್ತಾ ನಗುತ್ತಾ ನೆಲಕ್ಕೆ ಕುಸಿಯುತ್ತಾಳೆ)*

ಭರತ : *(ವ್ಯಗ್ರನಾಗಿ)* ಸದ್ದು!
*(ಮಂಥರಾ ಬೆಚ್ಚಿ ಮುದುಡಿಕೊಳ್ಳುತ್ತಾಳೆ)*

ನಾನು ರಾಜನಾಗೋದಿಲ್ಲ
ಆದರೆ ರಾಜಪ್ರತಿನಿಧಿಯಾಗಿ
ಅಯೋಧ್ಯೆಯನ್ನ ಕಾಪಾಡ್ತೀನಿ...!

*(ರಾಜದಂಡ ಕೈಗೆತ್ತಿಕೊಂಡು)*
ಅಯೋಧ್ಯೆ ಅನಾಥವಾಗೋದನ್ನ
ಭರತ
ಸಹಿಸೋದಿಲ್ಲ...

ಅಯೋಧ್ಯೆ ಅನಾಥವಾಗೋದನ್ನ ಭರತ ಸಹಿಸೋದಿಲ್ಲ...
*(ಕೈಕಯಿಯ ಪ್ರವೇಶ. ನಿಧಾನವಾಗಿ ಅವಳ ಮುಖದಲ್ಲಿ ಕಿರುನಗು. ಮಂಥರೆಯ ಕಣ್ಣಿನಲ್ಲಿ ಮಿಂಚುತ್ತಿರುವ ಸಂತಸದ ಕಂಬನಿ. ಬೆಳಕು ನಿಧಾನ ಕರಗಿ ಆವರಿಸುವ ಕತ್ತಲು)*

## ಎಚ್.ಎಸ್. ವೆಂಕಟೇಶಮೂರ್ತಿ (೧೯೪೪-)



ಎಚ್.ಎಸ್. ವೆಂಕಟೇಶಮೂರ್ತಿಯವರು ಕನ್ನಡ ಕಾವ್ಯ ಪರಂಪರೆಯ ಅತ್ಯುತ್ತಮವೆನಿಸುವ ಗುಣಗಳನ್ನು ಮೈಗೂಡಿಸಿಕೊಂಡು ಬರೆಯುವ ಮಹತ್ವದ ಕವಿ. ಕನ್ನಡ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿದ್ದಾರೆ. ಕವಿತೆ, ಮಕ್ಕಳ ಗೀತೆ, ನಾಟಕ, ವಿಮರ್ಶೆ, ಸಂಶೋಧನೆ, ಸಣ್ಣಕಥೆ, ಕಾದಂಬರಿ, ಅಂಕಣ ಬರಹ, ಸಂಪಾದನೆ, ಖಂಡ ಕಾವ್ಯ ಹೀಗೆ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಇವರು ಕೋಲಾರ ಜಿಲ್ಲೆಯ ಚಿಂತಾಮಣಿಯವರು. ಪರಿವೃತ್ತ, ಬಾಗಿಲು ಬಡಿವ ಜನ, ಕ್ರಿಯಾಪರ್ವ, ಒಣಮರದ ಗಿಳಿಗಳು, ಇಂದುಮುಖಿ, ಅಗ್ನಿಸ್ತಂಭ ಮೊದಲಾದವು ಇವರ ಕವನ ಸಂಕಲನಗಳಾಗಿವೆ. ಒಂದು ಸೈನಿಕ ವೃತ್ತಾಂತ, ಹೂವಿ ಮತ್ತೆ ಸುಧಾನ, ಮೇಘಮಾನಸ, ಉರಿಯ ಉಯ್ಯಾಲೆ, ಕುಣಿ ಕುಣಿ ನವಿಲೆ, ಕತ್ತಲೆಗೆ ಎಷ್ಟು ಮುಖ, ಕಂಸಾಯಣ, ಊರ್ಮಿಳಾ, ಮಂಥರಾ ಮೊದಲಾದ ನಾಟಕಗಳನ್ನು ಬರೆದ ಇವರು ಕನ್ನಡ ಸಾಹಿತ್ಯಕ್ಕೆ ನಿರಂತರವಾದ ಸೇವೆ ಸಲ್ಲಿಸುತ್ತಿದ್ದಾರೆ.

## ಪದಗಳ ಅರ್ಥ

ನಾಂದಿ – ಶುಭಕಾರ್ಯದ ಆರಂಭ, ನಾಟಕ–ಕಾವ್ಯ ಮೊದಲಾದವುಗಳು ಪ್ರಾರಂಭದಲ್ಲಿ ಬರುವ ಮಂಗಳ ಪದ್ಯ. ಹರೇದ – ಹರೆಯದ. ಸೈತ – ಸಹಿತ. ಮುತ್ತಿನ ಏಕಾವಳಿ – ಮುತ್ತಿನ ಒಂದೆಳೆಯ ಹಾರ. ಒಡ್ಯಾಣ – ಸೊಂಟಕ್ಕೆ ಧರಿಸುವ ಆಭರಣ. ನಾಗರ ಹೆಡೆ – ತಲೆಯಲ್ಲಿ ಧರಿಸುವ ಆಭರಣ. ಅಚ್ಚೆ – ಅತಿಯಾದ ಪ್ರೀತಿ, ಸಲುಗೆ. ಬೊಚ್ಚಿ – ಬೊಚ್ಚು ಬಾಯಿಯವಳು. ಬಳ್ಳ – ಅಳತೆಯ ಮಾನ. ಅನ್ನತಾವ – ಹೇಳುತ್ತವೆ. ಆದಾವು – ಆಗುವುವು. ದಾಯಾದಿಗಳು – ಅಣ್ಣ ತಮ್ಮಂದಿರ ಮಕ್ಕಳು. ಕಕ್ಕುಲಾತಿ – ಅಕ್ಕರೆ. ಖರೇ – ನಿಜ. ಹಿಕಮತ – ತಂತ್ರ. ಗದ್ದಗಿ – ಗದ್ದುಗೆ. ಕುಟ್ಟಣಿ – ಎಲೆ ಅಡಿಕೆಯನ್ನು ಕುಟ್ಟುವ ಒರಳು. ಚಿನ್ನಿದಾಂಡು – ಮಕ್ಕಳ ಒಂದು ಬಗೆಯ ಕ್ರೀಡೆ. ಮನಿಗಿನಿ – ಮನೆಗಿನೆ. ಸವತಿ – ಗಂಡನ ಮತ್ತೊಬ್ಬ ಪತ್ನಿ. ಬೊಗಸಿ –ಬೊಗಸೆ. ಕುಂಡರ್ಸ್ತನ – ಕುಳ್ಳಿರಿಸುತ್ತಾನೆ. ಆಜೂ ಬಾಜೂ – ಅಕ್ಕ ಪಕ್ಕ. ಆಯಪ್ಪಂಗೆ – ಅವನಿಗೆ. ಜೀವಸೆಲಿ – ಜೀವಸೆಲೆ. ಪೀಚಲು – ತೆಳ್ಳಗಿನ. ದೇಖರೇಖಿ – ಉಸ್ತುವಾರಿ. ನೆಳ್ಳು – ನೆರಳು. ಲಡಾಯೀ – ಯುದ್ಧ, ಜಗಳ. ಕಂಟಕ – ಮುಳ್ಳು, ತೊಂದರೆ. ಬಿಮ್ಮನಸಿ – ಗರ್ಭಿಣಿ. ಗಾಸಾರ – ಗ್ರಹಚಾರ. ಮುಣಗಿಸಿ – ಮಳುಗಿಸಿ. ಕರವಾಳ – ಖಡ್ಗ. ಜಂಝೂವಾತ – ಬಿರುಗಾಳಿ. ಎಲ್ಡು – ಎರಡು. ಹಿರೀಕ–ಕಿರೀಕ – ಹಿರಿಯ ಕಿರಿಯ. ಹುನ್ನಾರ – ಸಂಚು. ಈಟೊಂದು – ಇಷ್ಟೊಂದು. ಪುಡಗೋಸಿ – ಕ್ಷುಲ್ಲಕ. ಯಾಮಾರಿಸಿ – ವಂಚನೆಮಾಡಿ. ಕಿರಪಾಣಿ – ಖಡ್ಗ. ಮಳ್ಳಲ್ಲಿ ಮುಣಗಿ – ಮರಳಲ್ಲಿ ಮುಳುಗಿ. ಅಳ್ಳಿಕೋತ – ಅರಳಿಕೊಂಡು. ಏಟಾದಾವು – ಎಷ್ಟು ಆಗುವುವು. ಬಸೀದೆ – ಸಾಗದೆ, ಹರಿಯದೆ. ಕವುದಿ – ಹಳೆಯ ತುಂಡು ತುಂಡು ವಸ್ತ್ರಗಳನ್ನು ಹೊಲಿದು ಮಾಡಿದ ಹೊದಿಕೆ (ಚಾದರ). ಕವ್ವೆಂಬೋ – ಗವ್ವೆಂಬ. ತಿಳಿವಲ್ದು – ತಿಳಿಯದು. ದಣಾಯಕ – ಸೇನೆಯ ಮುಖಂಡ. ಶಾನೆ – ಚೆನ್ನಾಗಿ. ಚಂಗು – ಜುಟ್ಟು ತುದಿ. ಕಳ್ಳುಬಳ್ಳಿ – ಕರುಳು ಬಳ್ಳಿ. ನಿಚ್ಚಳ – ಸ್ಪಷ್ಟ. ಮೆತ್ತಿ – ಮೆತ್ತೆ, ಹಾಸಿಗೆ. ಚೀಮಾರಿ – ಛೀಮಾರಿ. ಪ್ರಪಾತ – ಆಳದ ಕಣಿವೆ. ಇರೋಣಿಲ್ಲ – ಇರುವ ಹಾಗಿಲ್ಲ. ಧೋತ್ರ – ಪಂಚೆ. ಭಂಜಕ – ಧ್ವಂಸ ಮಾಡುವವ. ಅಳ್ಳುಮಳ್ಳು – ಅರಳು ಮರಳು. ತೋಮರ– ಒಂದು ಬಗೆಯ ಆಯುಧ. ನಿರುಮ್ಮಳ – ನಿರಾಳ. ರಗತ – ರಕ್ತ. ಅಪ್ಪಾಲೆ ತಿಪ್ಪಾಲೆ – ಒಂದು ಬಗೆಯ ಆಟ. ಒನೀತಾ – ಒಲೆಯುತ್ತಾ. ಕೇರತಾ – ಗೇರುತ್ತಾ. ಪೇರಿ – ಭೇರಿ, ಪ್ರಭಾತಭೇರಿ. ಹೊಟ್ಟೆ ಹೊರ್ಕಂತೀನಿ – ಹೊಟ್ಟೆ ಹೊರೆಯುತ್ತೇನೆ. ಕೊಳ್ಳಿನ ಸುತ್ತು – ಕೊರಳಿನ ಸುತ್ತು. ಹುಣ್ಣೀವಿ ಬಿತ್ತು – ಹುಣ್ಣಿಮೆ. ನಗೆ ಸಾಟಿಕೆ – ನಗೆಚಾಟಿಕೆ, ತಮಾಷೆ. ಮಿಟಗಿ – ತುತ್ತು. ಪೀಕು – ಜೊಳ್ಳು, ಸತ್ವಹೀನ. ರಬ್ಬಡ – ಥಕ್ಕನೆ. ಕಿಸಿದಾನು –

ಸಾಧಿಸಿಯಾನು. ಗೃಪ್ತಿ –ನೆನಪು. ಬಜಾಯ್ಸಿ – ಬಾರಿಸಿ. ದೀಪದ ಬಾಲಿ – ದೀಪ ಹಿಡಿದ ಬಾಲೆ. ಬೈತಲೆ – ಬೊಕ್ಕತಲೆ. ಮೂರೆಣಿಕೆ – ಮೂರು ಎಣಿಸುವಷ್ಟರಲ್ಲಿ. ಬೋಡಿಗೆ – ಕಂಬದ ಮೇಲಿನ ಭಾಗ. ಜಪ್ಪಿಸಿ – ಗಟ್ಟಿಯಾಗಿ, ದೃಢವಾಗಿ. ಮರ್ಜಿ – ಇಷ್ಟ. ಸ್ವಾಟಿ ತಿವಿತಾರು – ಮುಸುಡಿಗೆ ತಿವಿಯು. ಹುಳ್ಳಗೆ ನಕ್ಕು – ಹುಳಿನಗು, ತೋರಿಕೆಯ ನಗು. ಲಬ್ಬಾಗು – ನಂಬಿಕೆ. ಕೋಡಗಲ್ಲು – ಕೋಡುಕಲ್ಲು, ಪರ್ವತ. ಅನೂಚೀನ – ಹಿಂದಿನಿಂದಲೇ ಬಂದ. ನದರು – ಎಚ್ಚರ. ಪಿಚ್ಚನಾಸಿ – ಬಿಕನಾಸಿ. ಗುಮ್ಮತಾವ – ತಿಕ್ಕುತ್ತಾನೆ. ತಾವಾಸೀಯದೆ – ತಾವೇ ಉರಿಯದೆ. ಪಟ್ಟದಾನಿ – ಪಟ್ಟದಆನೆ. ಕೆಲಸ ಬೊಗಸಿ – ಕೆಲಸವಿಲ್ಲದೆ. ಸಿಂಬಿ – ಚೆರಿಗೆ (ಪಾತ್ರೆಯಿಡುವ ವಸ್ತು). ದಾಮೋದರಿ – ದಪ್ಪಗಿನವಳು, ಡೊಳ್ಳುಹೊಟ್ಟೆಯವಳು. ದೊಂಬಿದಾಸರು – ವೃತ್ತಿಗಾಯಕರು.

### ಒಂದು ವಾಕ್ಯದಲ್ಲಿ ಉತ್ತರಿಸಿರಿ

- ಕೈಕಯಿ ಸಂಭ್ರಮದಿಂದ ಕುಣಿದಾಡಲು ಕಾರಣವೇನು?
- ಮಂಥರೆ ಯಾರು ಯುವರಾಜನಾಗಬೇಕೆಂದು ಬಯಸಿದಳು?
- ಕೈಕಯಿ ಕ್ರೋಧಾಗಾರವನ್ನು ಪ್ರವೇಶಿಸಲು ಕಾರಣವೇನು?
- ಕೈಕಯಿ ದಶರಥನಲ್ಲಿ ಕೇಳಿದ ವರಗಳು ಯಾವುವು?
- ರಾಮನ ಅನುಪಸ್ಥಿತಿಯಲ್ಲಿ ಭರತನು ವಹಿಸಿದ ಹುದ್ದೆಯಾವುದು?

### ಸಂಕ್ಷಿಪ್ತವಾಗಿ ಉತ್ತರಿಸಿರಿ

- ಯುವರಾಜ ಪಟ್ಟವನ್ನು ರಾಮನಿಂದ ತಪ್ಪಿಸುವ ಒಳಸಂಚಿನಲ್ಲಿ ಮಂಥರೆಯ ಕೌಶಲ್ಯವು ಹೇಗೆ ಪ್ರಕಟವಾಗಿದೆ ಎಂಬುದನ್ನು ಸಂಗ್ರಹವಾಗಿ ಬರೆಯಿರಿ.
- ಮಂಥರೆಯ ಸಂಚನ್ನು ಆರಂಭದಲ್ಲಿ ಒಪ್ಪಿಕೊಳ್ಳದ ಕೈಕಯಿಯು ಬಳಿಕ ಹೇಗೆ ಅದರಲ್ಲಿ ಕ್ರಿಯಾಶೀಲಳಾದಳು? ವಿವರಿಸಿರಿ.
- ಮಂಥರೆಯ ಉಪದೇಶಕ್ಕೆ ಮಾರುಹೋದ ಕೈಕಯಿಂದಾಗಿ ಅಯೋಧ್ಯೆಯಲ್ಲಿ ಉಂಟಾದ ಅನಾಹುತಗಳ ಕುರಿತು ವಿವರಿಸಿರಿ.
- ತಾಯಿಯು ಹೇಳಿದ ವರಗಳ ಬಗ್ಗೆ ಭರತನ ಪ್ರತಿಕ್ರಿಯೆಗಳನ್ನು ಸಂಗ್ರಹಿಸಿ ಬರೆಯಿರಿ.

### ಚಟುವಟಿಕೆಗಳು

- ಆಕಾಶವಾಣಿಯಲ್ಲಿ ಪ್ರಸಾರ ಮಾಡುವುದಕ್ಕಾಗಿ ಧ್ವನಿಮುದ್ರಿಸುತ್ತಿರುವರೆಂದು ಭಾವಿಸಿ ಸ್ವರಭಾರದೊಂದಿಗೆ ಈ ನಾಟಕವನ್ನು ಓದಿರಿ.

- ಕಥೆಯೊಂದನ್ನು ಆಯ್ಕೆ ಮಾಡಿ ಅದನ್ನು ನಾಟಕ ರೂಪಕ್ಕೆ ಪರಿವರ್ತಿಸಿರಿ.
- ನಿಮ್ಮ ಪರಿಸರದಲ್ಲಿ ಪ್ರದರ್ಶನಗೊಂಡ ನಾಟಕವೊಂದನ್ನು ವೀಕ್ಷಿಸಿ ಅದರ ಕುರಿತಾದ ವಿಮರ್ಶಾ ಲೇಖನವೊಂದನ್ನು ಬರೆಯಿರಿ.
- ನಾಟಕದ ವಿವಿಧ ಪ್ರಕಾರಗಳ ಕುರಿತು 'ಸ್ಟೋರಿ ಬೋರ್ಡ್' ತಯಾರಿಸಿ ಪ್ರದರ್ಶಿಸಿರಿ.
- ಈ ನಾಟಕವನ್ನು ರಂಗ ಪ್ರಯೋಗಕ್ಕೆ ಅಳವಡಿಸಲು ಬೇಕಾದ ಸಿದ್ಧತೆಯ ಕುರಿತು ಬರೆಯಿರಿ.
- ಈ ನಾಟಕವನ್ನು ಕಥೆಯ ರೂಪದಲ್ಲಿ ಸಂಕ್ಷೇಪಿಸಿರಿ.
- ನಾಟಕದಲ್ಲಿ ಬಂದಿರುವ ಗಾದೆಮಾತುಗಳನ್ನು ಸಂಗ್ರಹಿಸಿ ವಿಸ್ತರಿಸಿ ಬರೆಯಿರಿ.
- ಈ ನಾಟಕವನ್ನು ನಿಮ್ಮ ಸಂಸ್ಥೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಅಭಿನಯಿಸಿರಿ.
- ಈ ನಾಟಕವನ್ನು ಶಿಷ್ಟಭಾಷೆಗೆ ಪರಿವರ್ತಿಸಿರಿ. (ಒಂದು ದೃಶ್ಯಕ್ಕೆ ಸೀಮಿತಗೊಳಿಸಿ)

## ಸ್ವಾರಸ್ಯ ಬರೆಯಿರಿ

- ಮೋಡ ಒಡೀದೆ ಮಳೀ ಹೆಂಗ ಬಂದಾವು?
  ಮೊಟ್ಟೆ ಒಡೀದೆ ಮರಿ ಹೆಂಗ ಬಂದಾವು?

- ಉಳಿ ಹೊಡತಾ ತಿನದೆ ಕಲ್ಲಿಗೆ ಕುಸುರು ಬಂದೀತಾ?
  ತಾಯಿ ರಗುತಾ ಬಸೀದೆ ಕೂಸಿಗೆ ಉಸುರು ಬಂದೀತಾ?

## ಹೆಚ್ಚಿನ ಓದಿಗೆ

ಊರ್ವಶಿ – ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಶ್ರೀ ರಾಮಾಯಣ ದರ್ಶನಂ ವಚನ ಚಂದ್ರಿಕೆ – ದೇಜಗೌ
(ಮಮತೆಯ ಸುಳಿಮಂಥರೆ – ಭಾಗ)
ಶತಮಾನದ ನಾಟಕ – (ಸಂ.) ಡಾ. ಕೆ. ಮರುಳಸಿದ್ದಪ್ಪ
ನಾಟಕ ಸಂಪುಟ – ಕೆ.ವಿ. ಐಯ್ಯರ್
ಆಧುನಿಕ ಕನ್ನಡ ನಾಟಕ – ಡಾ. ಕೆ. ಮರುಳಸಿದ್ದಪ್ಪ
ರಂಗ ಪ್ರಯೋಗ – ಅಕ್ಷರ ಕೆ.ವಿ.

## ಘಟಕ ಮೌಲ್ಯಮಾಪನ

1. ಕನ್ನಡ ಮೊದಲ ಅನುವಾದಿತ ನಾಟಕ ಯಾವುದು?
2. ನಾಂದಿ ಎಂದರೇನು?
3. ಮಂಥರೆ ಯಾರು ಯುವರಾಜನಾಗಬೇಕೆಂದು ಬಯಸಿದಳು?
4. ಕನ್ನಡ ನಾಟಕರಂಗದಲ್ಲಿ ಗಿರೀಶ್ ಕಾರ್ನಾಡರ ನಾಟಕಗಳು ಅನನ್ಯವಾಗಿ ಯಾಕೆ ಗುರುತಿಸಲ್ಪಟ್ಟಿವೆ?
5. ಅಧಿಕಾರ ಅಂತಸ್ತು ತರತ್ತೆ
   ಅಂತಸ್ತು ಅಂತರ ತರತ್ತೆ
   – ಮಂಥರೆಯ ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ.
6. ಸಂದರ್ಭ ಸಹಿತ ವಿವರಿಸಿರಿ.
   ತನ್ನ ತೋಳೊಳಗೆ ತಾನೇ ಬಂಧಿಸಿಕೊಂಡ
   ಬಿರುಗಾಳಿ ಹಾಂಗಿದ್ದ ಭರತ
7. ಕನ್ನಡ ನಾಟಕ ಪರಂಪರೆಯು ಬೆಳೆದು ಬರುವಲ್ಲಿ ಅನುವಾದಿತ ನಾಟಕಗಳ ಕೊಡುಗೆಯನ್ನು ವಿಶದಪಡಿಸಿರಿ.
8. ಮಂಥರೆಯ ಸಂಚನ್ನು ಆರಂಭದಲ್ಲಿ ಒಪ್ಪಿಕೊಳ್ಳದ ಕೈಕಯಿಯು ಬಳಿಕ ಹೇಗೆ ಅದರಲ್ಲಿ ಕ್ರಿಯಾಶೀಲಳಾದಳು? ವಿವರಿಸಿರಿ.
9. ನಿಮ್ಮ ಊರಲ್ಲಿ ಕುವೆಂಪುರವರ ರಕ್ತಾಕ್ಷಿ ನಾಟಕವು ಪ್ರದರ್ಶನಗೊಳ್ಳಲಿದೆ ಎಂದು ಭಾವಿಸಿಕೊಂಡು ಅದಕ್ಕೆ ಅಗತ್ಯವಾದ ಕರಪತ್ರವೊಂದನ್ನು ಸಿದ್ಧಪಡಿಸಿರಿ.
10. ಮಂಥರೆಯ ಉಪದೇಶದಿಂದಾಗಿ ಅಯೋಧ್ಯೆಯಲ್ಲಿ ನಡೆದ ವಿದ್ಯಮಾನಗಳ ಕುರಿತು ಬರೆಯಿರಿ.